
ಉತ್ತರ ಕನ್ನಡ ಕರಾವಳಿಯ ಜನಪದ ಕತೆಗಳು

ಸಂಪಾದಕರು: ಶಾಂತಿ ನಾಯಕ



BVP-1223- 1|3/17
1316- 7|38

ಉತ್ತರ ಕನ್ನಡ ಕರಾವಳಿಯ ಜನಪದ ಕತೆಗಳು

ಸಂಪಾದಕರು

ಶಾಂತಿ ನಾಯಕ

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ - ೫೮೧ ೧೯೭
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

UTTARA KANNADA KARAVALIYA
JANAPADA KATEGALU
(A Collection Stories of Karavali Uttara Kannada)
Edited by
Shanthi Nayaka
Suhas, Udayagiri
Honnavar - 581 334
Uttara Kannada (Dist)
Cell: 94824 38577
Published by
Prof. S.C. Ramesh
Director
Centre for Extension and Consultancy
Karantaka Janapada University
Gotagodi - 581 197
Shiggavi Taluk, Haveri Dist., Karnataka
Phone: 0836 - 2255180
Pages: xxxii + 156   Price: ₹ **120/-**
www.janapadauni.in
First Impression: 2014
ISBN 978-93-83149-18-6

ಬೆಲೆ : ₹ ೧೨೦/-
ಮುಖಪುಟ: ಕೆ.ಕೆ. ಮಕಾಳಿ
ಅಕ್ಷರ ಸಂಯೋಜನೆ: ವಿಶ್ವ ಗುಜ್ಜರ್
ಪುಟವಿನ್ಯಾಸ: ಸವಿತ ಗ್ರಾಫಿಕ್ಸ್, ಕಮಲಾಪುರ
Cell No.: 94802 57392
ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭
ಶಿಗ್ಗಾವಿ ತಾಲೂಕು ಹಾವೇರಿ ಜಿಲ್ಲೆ
ಮುದ್ರಣ
ರಾಜಾ ಪ್ರಿಂಟರ್ಸ್, ಬೆಂಗಳೂರು

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ-ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು,

ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳ ಬೇಕಾದುದು ಇಂದಿನ ಅಗತ್ಯವಾಗಿದೆ. ಜಾನಪದವು ಭೂಮಿತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು–ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕ ವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ–ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿ ಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದ ರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು

ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಕನ್ನಡ ನಾಡು ಜನಪದ ಸಂಸ್ಕೃತಿಯ ತವರೂರು. ಪ್ರತಿಯೊಂದು ಪ್ರದೇಶಕ್ಕೂ ತನ್ನದೇ ಆದ ಪ್ರಾದೇಶಿಕ ಅನನ್ಯತೆ, ಅಸ್ಮಿತೆಗಳು ಇದ್ದೇ ಇರುತ್ತವೆ. ಅಲ್ಲಿ ವಾಸಿಸುವ ಪ್ರತಿಯೊಂದು ಸಮುದಾಯವು ವಿಶಿಷ್ಟ ಜೀವನ ಕ್ರಮಗಳನ್ನು ರೂಢಿಸಿಕೊಂಡಿರುತ್ತದೆ. ವಿವಿಧ ಬಗೆಯ ಆಹಾರ-ಪಾನೀಯ, ಉಡುಗೆ-ತೊಡುಗೆ, ಕ್ರೀಡೆ, ನಂಬಿಕೆ, ರೂಢಿ-ಆಚರಣೆ, ಸಂಪ್ರದಾಯಗಳು ಅಸ್ತಿತ್ವದಲ್ಲಿರುತ್ತವೆ. ಜೊತೆಗೆ ಆ ಸಮುದಾಯಜ್ಞಾನ ಪರಂಪರೆಯು ಕ್ರಿಯಾ ರೂಪದಲ್ಲಿ ಮತ್ತು ಮೌಖಿಕ ರೂಪದಲ್ಲಿ ಜಾರಿಯಲ್ಲಿರುತ್ತವೆ. ಅವುಗಳನ್ನು ಶೋಧಿಸುವ ಕಾರ್ಯ ನಡೆಯಬೇಕಾಗುತ್ತದೆ. ಅಲ್ಲದೆ, ಪರಂಪರಾಜ್ಞಾನಗಳಲ್ಲಿ ಇಂದಿನ ವರ್ತಮಾನಕ್ಕೆ ಬೇಕಾದ ಮೂಲ ಆಕರಗಳು ಅಡಕವಾಗಿರುತ್ತವೆ. ಅವನ್ನು ಗುರುತಿಸುವುದು ಮತ್ತು ಸಂವರ್ಧಿಸುವುದು ಮುಖ್ಯವಾಗಿ ಆಗಬೇಕಾದ ಕೆಲಸವೇ ಆಗಿದೆ. ಈ ಹಿನ್ನೆಲೆಯಲ್ಲಿ ಜನಪದ ಕತೆಗಳು ಬದುಕಿನ ಮೌಲ್ಯಗಳನ್ನು, ಆದರ್ಶಗಳನ್ನು ಸ್ಥಳೀಯ ಸಂಸ್ಕೃತಿಯ ಮೂಲಕ ವ್ಯಕ್ತಗೊಳ್ಳುವ ಅಮೂಲ್ಯ ಸರಕೇ ಎನಿಸುತ್ತವೆ. ಈ ನಿಟ್ಟಿನಲ್ಲಿ ಅಪರೂಪವೆನಿಸುವ 'ಉತ್ತರ ಕನ್ನಡ ಕರಾವಳಿ ಜನಪದ ಕತೆಗಳು' ಕೃತಿಯಲ್ಲಿ ಹೊನ್ನಾವರ ಪರಿಸರದಲ್ಲಿರುವ ಹವ್ಯಕರ ಮಕ್ಕಳಿಂದ ಕತೆಗಳು ಸಂಗ್ರಹಗೊಂಡಿದ್ದು ಗಮನಾರ್ಹ. ಸಾಮಾಜಿಕ ಉಪಭಾಷೆಯೊಂದರಲ್ಲಿ ಅಭಿವ್ಯಕ್ತಗೊಂಡ

ಇಲ್ಲಿನ ಬಹುತೇಕ ಕತೆಗಳು ಭಾಷಿಕ ಅಧ್ಯಯನಕ್ಕೆ ಆಕರವಾಗಬಲ್ಲವು. ಇಂಥ ಅಮೂಲ್ಯವಾದ ಕೃತಿಯನ್ನು ರೂಪಿಸಿಕೊಟ್ಟ ಶಾಂತಿ ನಾಯಕ ಅವರಿಗೆ ವಿಶ್ವವಿದ್ಯಾಲಯದ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು

ಪ್ರೊ. ಅಂಬಳಿಕೆ ಹಿರಿಯಣ್ಣ

ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂಥ ಶೈಕ್ಷಣಿಕ ಕಾರ್ಯ ಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ'ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯ ನೂತನವಾದ ಜನಪದ ಸಂಸ್ಕೃತಿಯನ್ನು ಪುನರ್ ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು, ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯ ಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು, ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ-ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟ ಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ

ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಜಾನಪದ ವಾಙ್ಮಯದಲ್ಲಿ ಜನಪದ ಕಥಾಸಾಹಿತ್ಯಕ್ಕೆ ವಿಶಿಷ್ಟ ಸ್ಥಾನವಿದೆ. ವೈವಿಧ್ಯತೆಯಿಂದ ಕೂಡಿರುವ ಜನಪದ ಕತೆಗಳು ಸಾಂಸ್ಕೃತಿಕವಾಗಿ ಮಹತ್ವದ ಆಕರಗಳಾಗಿ ತೋರುತ್ತವೆ. ಪ್ರತಿಯೊಂದು ಪ್ರದೇಶದಲ್ಲೂ ಇದ್ದಿರಬಹುದಾದ ಜನಪದ ಕತೆಗಳನ್ನು ಸಂಗ್ರಹಿಸುವ ಪ್ರಯತ್ನಗಳು ಹೇರಳವಾಗಿ ನಡೆದಿವೆ. ಈ ನಡುವೆ ಉತ್ತರ ಕನ್ನಡ ಕರಾವಳಿ ಪ್ರದೇಶದಲ್ಲಿನ ಮೌಖಿಕ ಸಾಹಿತ್ಯವನ್ನು ಅಕ್ಷರರೂಪಕ್ಕಿಳಿಸುವ ಕಾರ್ಯ ನಡೆದಿದೆಯಾದರೂ, ವಿರಳವೆಂದೇ ಹೇಳಬಹುದಾಗಿದೆ. ಹೊನ್ನಾವರ ಪ್ರದೇಶದಲ್ಲಿನ ಹವ್ಯಕ ಮಕ್ಕಳು ಹೇಳಿದ ಕತೆಗಳು ಆ ಸಮುದಾಯದ ಸಾಂಸ್ಕೃತಿಕ ಸಂಗತಿಗಳನ್ನು ತಿಳಿಯಲು ಇರುವ ಮುಖ್ಯ ಆಕರಗಳೆಂದು ಪರಿಭಾವಿಸಬಹುದು. ಈ ಹಿನ್ನೆಲೆಯಲ್ಲಿ ಶಾಂತಿ ನಾಯಕ ಅವರು ಸಂಗ್ರಹಿಸಿದ 'ಉತ್ತರ ಕನ್ನಡ ಕರಾವಳಿಯ ಜನಪದ ಕತೆಗಳು' ಕೃತಿ ಮಹತ್ವದ್ದು ಎನಿಸುತ್ತದೆ. ಇಲ್ಲಿನ ಕತೆಗಳು ಮೇಲ್ನೋಟಕ್ಕೆ ಮಕ್ಕಳ ಕತೆಗಳು ಎಂದೆನಿಸಿದರೂ ಮನೋರಂಜನೆ, ಹಾಸ್ಯ, ಹೋರಾಟ, ಪರೋಪಕಾರ ಬುದ್ಧಿ, ದುರ್ಜನರ ಸಂಘದಿಂದಾಗುವ ಹಾನಿ ಹೀಗೆ ಮುಖ್ಯವಾಗಿ ಜೀವನಾದರ್ಶನಗಳಂಥ ಅನೇಕ ಮೌಲ್ಯಗಳನ್ನು ತಮ್ಮ ಒಡಲೊಳಗೆ ಇರಿಸಿಕೊಂಡಿರುವ ಈ ಕತೆಗಳು ಅಧ್ಯಯನಯೋಗ್ಯವಾಗಿವೆ. ಭಾಷಿಕ ನೆಲೆಯಿಂದಲೂ ಅಧ್ಯಯನಕ್ಕೆ ಆಕರವಾಗಬಲ್ಲ ಪ್ರಕೃತ ಕೃತಿಯನ್ನು ರೂಪಿಸಿದ ಶಾಂತಿ ನಾಯಕ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಈ ಗ್ರಂಥವು ಅಚ್ಚುಕಟ್ಟಾಗಿ ಪ್ರಕಟಗೊಳ್ಳಲು ಸರ್ವರೀತಿಯಲ್ಲೂ ಸಹಕಾರ ನೀಡಿದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ, ಆಡಳಿತಾತ್ಮಕ ಬೆಂಬಲ ನೀಡಿದ ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ ಅವರಿಗೆ, ನಮ್ಮೆಲ್ಲ ಕೆಲಸಗಳಿಗೆ ಬೆಂಬಲವಾಗಿ ನಿಂತಿರುವ ಹಿರಿಯ ಸಂಶೋಧನಾ ಅಧಿಕಾರಿ ಡಾ. ಕೆ. ಪ್ರೇಮಕುಮಾರ ಅವರಿಗೆ, ವಿಶ್ವವಿದ್ಯಾಲಯದ ಡೀನ್‌ರಾದ ಪ್ರೊ. ಎಂ. ಚಂದ್ರ ಪೂಜಾರಿ ಅವರಿಗೆ, ಕರಡು ತಿದ್ದಲು ನೆರವಾದ ಡಾ. ಎಸ್. ಮೋಹನ್ ಅವರಿಗೆ, ಅಂದವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಕೆ.ಕೆ. ಮಕಾಳಿ ಅವರಿಗೆ, ಪುಟವಿನ್ಯಾಸಗೊಳಿಸಿದ ಕಮಲಾಪುರದ ಶ್ರೀ ಜೆ. ಬಸವರಾಜ, ಕಚೇರಿ ಸಹಾಯಕ ಶ್ರೀ ಕೆ.ಎಲ್. ಲಕ್ಷ್ಮಣ ಹಾಗೂ ಗ್ರಂಥವು ಪ್ರಕಟಗೊಳ್ಳುವಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

ಪ್ರೊ. ಸ.ಚಿ. ರಮೇಶ
ನಿರ್ದೇಶಕರು
ವಿಸ್ತರಣೆ ಹಾಗೂ ಸಲಹಾ ಕೇಂದ್ರ

ನೆನೆಕೆ

ಇದರಲ್ಲಿಯ ಕತೆಗಳು ಮೂಲತಃ ಹೊನ್ನಾವರದ ಪಂಚಗ್ರಾಮ ಪರಿಸರದಲ್ಲಿಯ ಹವ್ಯಕ ಮಕ್ಕಳಿಂದ ಸಂಗ್ರಹಿಸಿದವುಗಳಾಗಿದ್ದು ಅವು ಹವ್ಯಕ ಸಾಮಾಜಿಕ ಉಪ ಭಾಷೆಯಲ್ಲಿವೆ. ಬಹುಜನರು ಓದಲು ಸಾಧ್ಯವಾಗಲಿ ಎಂಬ ಕಾರಣದಿಂದ ಅವುಗಳನ್ನು ಪುಸ್ತಕ ಭಾಷೆಗೆ ಪರಿವರ್ತಿಸಲಾಗಿದೆ. ಆದರೂ ಕೆಲವು ಮೂಲ ಶಬ್ದಗಳನ್ನು ಇಲ್ಲಿ ಉಳಿಸಿಕೊಳ್ಳಲಾಗಿದೆ. ಉದಾಹರಣೆಗೆ ಅಚ್, ಮುತ್ತಯ್ಯೆ, ಕೂಸು, ಹೆಣ್ಣು, ಅಬ್ಬೆ, ಬಟ್ಟ, ಬಡತಿ ಇತ್ಯಾದಿ. ಈ ಶಬ್ದಗಳು ಮೂಲದಂತೆ ಉಳಿದುಕೊಂಡಿವೆ. ಪುಸ್ತಕದ ಭಾಷೆ ನಿಂತ ನೀರಲ್ಲ. ಅದು ಕೂಡ ಪರಿವರ್ತನಾಶೀಲವಾಗಿದೆ. ಆದ್ದರಿಂದ ಪುಸ್ತಕದ ಭಾಷೆ ಕೂಡ ಪ್ರಾದೇಶಿಕ ಭಾಷೆಯ ಕೆಲವು ಲಕ್ಷಣಗಳನ್ನು ತನ್ನದಾಗಿಸಿಕೊಳ್ಳುವುದುಂಟು. ಈ ಪ್ರಕ್ರಿಯೆ ಪ್ರಸ್ತುತ ಗ್ರಂಥದಲ್ಲಿಯೂ ನಡೆದಿದೆ. ಆದರೂ ಈ ಗ್ರಂಥವು ಸುಲಭ ಭಾಷೆಯಲ್ಲಿದ್ದು ಮಕ್ಕಳು ಓದಿ ತಿಳಿಯಲು ಅನುಕೂಲಕರವಾಗಿದೆ. ಪ್ರಸ್ತಾವನೆಯಲ್ಲಿಯ ಕಥಾವಿಮರ್ಶೆ ಮತ್ತು ಟಿಪ್ಪಣೆಗಳು ಜನಪದ ಸಾಹಿತ್ಯ ಅಧ್ಯಯನಕಾರರಿಗೆ ಉಪಯುಕ್ತವಾಗಿವೆ. ಪುಸ್ತಕ ಪರಿಶೀಲಕರ ಸಲಹೆಯ ಮೇರೆಗೆ ಅನುಬಂಧದಲ್ಲಿ ಮೂಲದ ನಾಲ್ಕು ಕತೆಗಳ ಭಾಷಾ ಸ್ವರೂಪವನ್ನು ತೋರಿಸಿಕೊಡಲಾಗಿದೆ. ಈ ಪುಸ್ತಕವನ್ನು ಪ್ರಕಟಿಸುತ್ತಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಅಂಬಳಿಕೆ ಹಿರಿಯಣ್ಣ, ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ, ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರು, ಕುಲಸಚಿವರೂ(ಮೌಲ್ಯಮಾಪನ) ಆದ ಪ್ರೊ. ಸ.ಚಿ. ರಮೇಶ ಇವರಿಗೆ ಕೃತಜ್ಞತೆಗಳು.

ಶಾಂತಿ ನಾಯಕ

ಪ್ರಸ್ತಾವನೆ

ಜನಪದ ಕತೆ

ಹಿರಿಯರು ಮಕ್ಕಳಿಗಾಗಿ ಹೇಳುವ ಚಿಕ್ಕ ಕಾಯದ ಜನಪದ ಕತೆಗಳನ್ನು ಮಕ್ಕಳ ಕತೆಗಳೆಂದೂ, ಅಜ್ಜಿ ಮೊಮ್ಮಕ್ಕಳ ನಡುವೆ ಹುಟ್ಟಿ ಬೆಳೆದು, ಇವು ಪ್ರಸಾರಗೊಳ್ಳುವ ಕಾರಣ ಇವುಗಳನ್ನು ಅಜ್ಜಿಕತೆಗಳೆಂದೂ ಹೇಳುವದುಂಟು.

ಆದರೆ ಎಲ್ಲ ಜನಪದ ಕತೆಗಳು ಅಜ್ಜಿ ಕತೆಗಳಲ್ಲ. ಅಂದರೆ ಈ ಎಲ್ಲವೂ ಅಜ್ಜಿಯರು ಮಾತ್ರ ಹೇಳಿದ ಕತೆಗಳಲ್ಲ. ಮನೆಯಲ್ಲಿ ತಾಯಿ, ಅಕ್ಕ, ಅಣ್ಣ, ತಂದೆ, ಅಜ್ಜ, ಕೃಷಿಸಹಾಯಕರು, ಮನೆಯಂಗಳದಲ್ಲಿ ಹಲವಾರು ದಿನ ಹಗಲು-ರಾತ್ರಿ ಅಡಕೆ ಸುಲಿಯುವ ಗಂಡಾಳು ಹೆಣ್ಣಾಳುಗಳು, ಊರಿಂದೂರಿಗೆ ತಿರುಗಿ ವ್ಯಾಪಾರ ಮಾಡುವ ಹಳ್ಳಿಯ ಪಟ್ಟಣ ಶೆಟ್ಟಿಗಳು ಪರಂಪರಾಗತವಾಗಿ ಕತೆ ಹೇಳುತ್ತ ಬಂದಿದ್ದಾರೆ.

ಅಜ್ಜಿಯಂದಿರು. ಹಾಗೂ ಈ ಮೇಲಿನ ಕತೆಗಾರರು. ಕತೆಯ ಜನಕರಲ್ಲ, ಇವರು ಈ ಕಥೆಗಳ ಪ್ರಸಾರಕರು.

ಎಲ್ಲ ಅವಿಭಕ್ತ ಕುಟುಂಬ ಪದ್ಧತಿಯ ಸಮಾಜದಲ್ಲಿ ಹೆಚ್ಚಿನ ಅಜ್ಜಿಯಂದಿರು ಮಕ್ಕಳ ಕಥೆಗಳ ಹೆಚ್ಚಿನ ಪ್ರಸಾರಕರು ಎಂಬ ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆ. ತಂದೆ ತಾಯಿ ಮನೆಯ ಇತರ ದೊಡ್ಡವರೆಲ್ಲ ತಂತಮ್ಮ ಕೆಲಸಗಳಿಗೆ ಹೋದಾಗ, ಚಿಕ್ಕ ಮಕ್ಕಳು ಅಜ್ಜಿಯಂದಿರ ಆಶ್ರಯದಲ್ಲಿ ಬೆಳೆಯುತ್ತಾರೆ. ಅಜ್ಜಿ ತನ್ನ ಅಶಕ್ತತೆಯ ಕಾರಣದಿಂದ ಮೊಮ್ಮಕ್ಕಳನ್ನು ಎತ್ತಿ ತಿರುಗಾಡಿಸಿ ಆಡಿಸಲಾರಳು. ಹೀಗಾಗಿ ಮಕ್ಕಳನ್ನು ಸುಮ್ಮನಿರಿಸಲು ಅವಳು ಕಂಡುಕೊಂಡ ಸುಲಭೋಪಾಯವು ಕತೆ ಹೇಳುವದು. ಕತೆ ಹೇಳುವಾಗ ಇವರಿಂದ ಪರಂಪರಾಗತ ಕತೆಗಳ ಮಾರ್ಪಾಟುಗಳಾಗಿವೆ. ಇವರ ಮರವೆಯಿಂದ ವಿರಳವಾಗಿ ಒಂದು ಕತೆ ಇನ್ನೊಂದು ಕತೆಯೊಂದಿಗೆ ಕೂಡಿಕೊಂಡು ಹೊಸ ಕತೆಯಾಗಿರುವದುಂಟು. ವಿರಳವಾಗಿ ಹೊಸ ಕತೆಗಳು ಹುಟ್ಟಿರಬಹುದು.

ಚಿಕ್ಕ ಕಾಯದ ಜನಪದ ಕತೆಗಳನ್ನು ಮಕ್ಕಳ ಜನಪದ ಕತೆಗಳು ಎನ್ನುವದುಂಟಷ್ಟೇ. ಆದರೆ ಇಲ್ಲಿಯೂ ಇಂತಹ ಕತೆಗಳ ಜನಕರು ಮಕ್ಕಳು, ಎಂದು ಎನ್ನಲಾಗದು. ಆದರೆ ಮಕ್ಕಳು ಉತ್ತಮ ಕೇಳುಗರು, ಅಷ್ಟೇ ಅಲ್ಲ, ಇವರು ಅಜ್ಜಿಯರಂತೆ ಜನಪದ ಕತೆಗಳ ಪ್ರಸಾರಕರೂ ಆಗಿದ್ದಾರೆ.

ಕೃಷಿಕ ಸಮಾಜದಲ್ಲಿ ಮಕ್ಕಳು ಎಂಟರಿಂದ ಹತ್ತು ವರ್ಷದವರಾಗುತ್ತಲೇ, ತಮ್ಮ ಸರೀಕರೊಂದಿಗೆ ಗದ್ದೆ ಕಾಯುವದು, ದನ ಕಾಯುವುದು ಇತ್ಯಾದಿ ಕೆಲಸಕ್ಕೆ ತೊಡಗುತ್ತಾರೆ.

ಈಗ ಇವರಿಗೆ ಆಟ ಬಿಟ್ಟರೆ ಕತೆಯು ಮನರಂಜನೆಯ ಮಾಧ್ಯಮವಾಗುತ್ತದೆ. ದನ ಕಾಯುವ, ಹಕ್ಕಿ ಕಾಯ್ಯುವ, ಮಕ್ಕಳು ಹಗಲಿನಲ್ಲಿ ಈ ಕೆಲಸದ ನಡುವೆ ಸಿಕ್ಕ ವೇಳೆಯನ್ನು ಕಳೆಯಲು ಕತೆ ಹೇಳುವ ಮತ್ತು ಕೇಳುವ ಕಾಯಕವನ್ನು ನಡೆಸುತ್ತಾರೆ. ದನಕಾಯುವ, ಗದ್ದೆ ಕಾಯುವ ಮಕ್ಕಳಿಗೆ ಬಹಳಷ್ಟು ಸಂದರ್ಭಗಳಲ್ಲಿ ಒಂದೇ ಕಡೆ ಕುಳಿತು ಸಮಯ ಕಳೆಯಬೇಕಾಗುತ್ತದೆ. ಆಗ ನಾಲ್ಕಾರು ಮಕ್ಕಳು ಒಂದೆಡೆ ಕುಳಿತು ಕತೆ ಹೇಳುತ್ತಾರೆ. ತಂತಮ್ಮ ಅಜ್ಜಿಯರಿಂದ ಸರೀಕರಿಂದ ಕೇಳಿದ ಕತೆಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಎಲ್ಲ ಮಕ್ಕಳು ಉತ್ತಮ ಕೇಳುಗರಾದರೂ ಎಲ್ಲರೂ ಉತ್ತಮ ಹೇಳುಗರಲ್ಲ. ಕೆಲವರು ಮಾತ್ರ ಕೇಳಿದ ಕತೆಯನ್ನು ಅಜ್ಜಿಯಿಂದ ಕೇಳಿದ ರೀತಿಯಲ್ಲಿ ಅಥವಾ ಅದಕ್ಕಿಂತ ಹೆಚ್ಚು ವಿಸ್ತಾರಗೊಳಿಸಿ ತಮ್ಮ ಕಲ್ಪನೆಯ ಘಟನೆ ಮತ್ತು ಪ್ರತಿಭೆಯ ಮಾತನ್ನು ಜೋಡಿಸಿ ಸ್ವಾರಸ್ಯವಾಗಿ ಹೇಳುತ್ತಾರೆ. ಕೆಲವರು ಕತೆಯನ್ನು ಸಂಕ್ಷಿಪ್ತವಾಗಿ ಹೇಳುವದುಂಟು. ಸಮಯಾಭಾವದಿಂದ, ಆಲಸ್ಯದಿಂದ ಕೆಲವು ಅಜ್ಜಿಯರು, ಹಿರಿಯರು ಹೀಗೆ ಮಾಡುವದುಂಟು. ಆದ್ದರಿಂದ ಜನಪದ ಕತೆಯಲ್ಲಿ ಪಾಠಾಂತರಗಳು ಬಹಳ.

ಸಮಾಜದಲ್ಲಿ ಅಜ್ಜಿಯರಲ್ಲದೆ ಇತರ ಗಂಡಸರು ಹೆಂಗಸರು ಉತ್ತಮ ಜನಪದ ಕಥನಕಾರರಾಗಿರುತ್ತಾರೆ. ಕತೆ ಕೇಳುವ ಮೋಹ ಹೆಚ್ಚಾದ ಕೆಲವರು ತಮ್ಮ ಕೇರಿಯಲ್ಲಿ ಉತ್ತಮ ಕತೆಗಾರನನ್ನು ಒಲಿಸಿಕೊಂಡು ಅವರಿಂದ ಕತೆ ಹೇಳಿಸಿ ಕೇಳುತ್ತಾರೆ. ಹೀಗೆ ಮಕ್ಕಳ ಕತೆ ಕೇಳುವ ಪ್ರವೃತ್ತಿಯಿಂದಾಗಿ ಜನಪದ ಕತೆ ಬೆಳೆದು ವಿಸ್ತಾರವಾಗಿ ಹರಡಿ ಉಳಿದು ಬರಲು ಒಂದು ಪ್ರಮುಖ ಕಾರಣವಾಗಿದೆ.

ಕರಾವಳಿಯ ಜನಪದ ಕತೆಗಳು ಈ ಸಂಗ್ರಹದಲ್ಲಿ ಪಕ್ಷಿಗಳಲ್ಲದೆ ಕೀಟ, ಸಸ್ಯ, ಸೂಜಿಯಂತಹ ನಿರ್ಜೀವ ವಸ್ತುಗಳೂ ಮುಖ್ಯ ಪಾತ್ರದಲ್ಲಿರುವ ಕತೆಗಳಿವೆ. ಪ್ರಾಣಿಗಳು ಮಾನವರು, ಅತಿ ಮಾನವರನ್ನು ಇಲ್ಲಿ ಕಾಣಬಹುದಾಗಿದೆ.

□□

ಕಥಾ ವಿಮರ್ಶೆ ಮತ್ತು ಶಬ್ದ ಟಿಪ್ಪಣಿ

೧. 'ಹಿಟ್ಟುಂಬೆ'

ಹಿಟ್ಟುಂಬೆಯು ಕೊಯ್ಲಾದ ಬಳಿಕ ಬತ್ತದ ಗದ್ದೆಯಲ್ಲಿ ಬೆಳೆಯುವ ಒಂದು ಕಳೆಸಸ್ಯ. ಸಜೀವಿ ಆದರೆ ಅಚರ. ಆಕಾರ ಮತ್ತು ಬಣ್ಣದಲ್ಲಿ ಮುತ್ತನ್ನು ಹೋಲುವ ಈ ಗಿಡಗಳ ಗುಂಪು ಮಕ್ಕಳ ಗಮನ ಸೆಳೆಯುತ್ತದೆ. ಈ ಗಿಡವೇ ಇಲ್ಲಿ ಪ್ರಧಾನ ಪಾತ್ರದಲ್ಲಿದೆ. ಇಲ್ಲಿ ಇದು ಮತ್ತೆ ಮತ್ತೆ ನೋವು ಸಹಿಸಿಕೊಂಡು ಎದ್ದು ಬರುತ್ತದೆ. ಇಂತಹ ಗುಣವು ಬೇರೊಂದು ಜನಪದ ಕತೆಯಲ್ಲಿ ಒಂದು ಪಕ್ಷಿಗಿದೆ. ಇಲ್ಲಿ ಒಂದು ಸಸ್ಯಕ್ಕಿದೆ. ಇದು ಜನಪದ ಕಥಾ ಪ್ರಪಂಚಕ್ಕೆ ಹೊಸ ಸೇರ್ಪಡೆಯಾಗಿದೆ[ಶಬ್ದ ಟಿಪ್ಪಣಿ: ಬೊಂಡುಹೊಯಗೆ–ಮೊಂಡುರೇವೆ. ಹಿಟ್ಟುಂಬೆ–ಒಂದು ಕಳೆಗಿಡ, ಗೊಡಗುಡು ನೀರು ಕುದಿಯುವ ಶಬ್ದ, ಅಬ್ಬೆ–ತಾಯಿ].

೨. ಸೂಜ್ಯಯಕ್ಕ

ಸೂಜ್ಯಕ್ಕ ಇದೊಂದು ಅಚರ ಪಾತ್ರ. ನಿರ್ಜೀವಿ. ಈ ಕತೆಯಲ್ಲಿ ಸೂಜ್ಯಕ್ಕ ನಾಯಕ ಪಾತ್ರದಲ್ಲಿದ್ದು, ಇದು ಮತ್ತು ಇತರ ಪಾತ್ರಗಳು, ಈ ಕತೆಯಲ್ಲಿಯ ಇತರ ಜೀವಿ ಮತ್ತು ಅಜೀವಿ, ಚರ ಮತ್ತು ಅಚರ ಪಾತ್ರಗಳೊಂದಿಗೆ ಪರಸ್ಪರ ಮಾತಾಡುತ್ತವೆ. ಇತರ ಅನೇಕ ಕತೆಗಳಿಗೂ ಈ ಮಾತು ಅನ್ವಯಿಸುತ್ತದೆ. ಇಲ್ಲಿ ಸೂಜ್ಯಕ್ಕ ತನ್ನ ಪಂಗಡದವರಾದ ವಟಾಣಿಕಾಳು, ಕಂಬಳಿಹುಳ, ಸಗಣಿ, ದೊಣ್ಣೆಗಳ ಸಹಾಯದಿಂದ ರಾಕ್ಷಸನನ್ನು ಕೊಲ್ಲುವ ಸಾಹಸವನ್ನು ಮೆರೆಯುತ್ತದೆ. ಇಲ್ಲಿಯ ಎಲ್ಲ ಪಾತ್ರಗಳೂ ವಾಸ್ತವ ಪ್ರಪಂಚದವು. ಚಿಕ್ಕ ಚಿಕ್ಕ ಮಕ್ಕಳಿಗೂ ಇವುಗಳ ಪರಿಚಯವಿದೆ. ಆದರೆ ಇವು ಮಾತಾಡುವುದನ್ನು ಮಕ್ಕಳ ಕತೆಯಲ್ಲಿ ಮಾತ್ರ ಅನುಭವಿಸುತ್ತವೆ, ಕುತೂಹಲ ಗೊಳ್ಳುತ್ತವೆ.

ಅದೇ ತಾನೆ ಮಾತು ಕಲಿಯುತ್ತಿರುವ, ಸಣ್ಣ ಸಣ್ಣ ವಾಕ್ಯಗಳನ್ನು ಅರ್ಥ ಮಾಡಿಕೊಳ್ಳುವ ಮಕ್ಕಳಿಗಾಗಿ ಸಿದ್ಧಗೊಂಡ ಕತೆಗಳಿವು. ಸರಪಳಿಯಂತೆ ಹೆಣೆದ ಶಬ್ದಗಳು, ವಾಕ್ಯಗಳು ಅವುಗಳ ಪುನರುಕ್ತಿ. ವಾಕ್ಯಗಳು ಪರಿಚಿತ ವಸ್ತು ಮತ್ತು ಜೀವಿಗಳ ವ್ಯಕ್ತೀಕರಣ ಮಕ್ಕಳನ್ನು ಕತೆಯತ್ತ ಸೆಳೆಯುವ ಕಥಾತಂತ್ರಗಳು ಈ ಕತೆಗಳಲ್ಲಿವೆ ವಾಕ್ಯಗಳ ಸರಪಳಿಯ ಕೊಂಡಿಗಳು ಅಂಟಿಕೊಳ್ಳುವ ಬಗೆಯನ್ನು ಗಮನಿಸಿರಿ.

೩. ಚಿತ್ರಾಟೆ ಕಾಳಣ್ಣ

ಚಿತ್ರಾಟೆ ಕಾಳು ಒಂದು ಕೀಟ. ವಾಸ್ತವವಾಗಿ ಇದು ಮಕ್ಕಳಿಗೆ ಹೆಚ್ಚು ಪ್ರಿಯವಾದ ಬೆಲ್ಲವನ್ನು ಮೆಚ್ಚುವ ಇರುವೆಯ ಒಂದು ಪ್ರಭೇದವಾಗಿದೆ. ಬೆಲ್ಲದ ಕೊಡದ ಸುತ್ತ ಸುಳಿದಾಡುವ ಇದು ಮಕ್ಕಳಿಗೆ ಪರಿಚಿತ. ಇದರ ಹೆಸರಿಗೆ ಅಣ್ಣ ಸೇರಿಸಿ ಕೀಟಕ್ಕೆ ಮನುಷ್ಯತ್ವವನ್ನು ನೀಡಿ ಇದನ್ನು ಇಲ್ಲಿಯ ಕಥಾ ಪ್ರಪಂಚಕ್ಕೆ ತರಲಾಗಿದೆ. ತನ್ನ ಪಂಗಡಗಳಾದ ಕಪ್ಪೆ, ದೊಣ್ಣೆ, ಹಾಂತೆ,ಹಾವು ಇವು ಇಲ್ಲಿ ಅಣ್ಣಗಳಾಗಿವೆ. ಚಿತ್ರಾಟೆ ಕಾಳು ತನ್ನ ಪಂಗಡಗಳಾದ ಹಾವಣ್ಣ. ಕಪ್ಪೆಯಣ್ಣ. ದೊಣ್ಣೆಯಣ್ಣ, ಹಾಂತೆಯಣ್ಣ ಇವುಗಳ ಸಹಾಯದಿಂದ ರೈತನ ಎತ್ತುಗಳನ್ನು ಒಯ್ದು ಅರಸನನ್ನು ಸೋಲಿಸುತ್ತದೆ. ರೈತನ ಎತ್ತುಗಳನ್ನು ಹಿಂದಕ್ಕೆ ಪಡೆಯುತ್ತದೆ. ಈ ಹಿಂದಿನ ಕತೆಯಲ್ಲಿಯ ಸೂಜಿಯಕ್ಕ ಮತ್ತು ಇಲ್ಲಿಯ ಚಿತ್ರಾಟೆ ಕಾಳಣ್ಣ ಸಮೂಹಶಕ್ತಿಯಲ್ಲಿ ನಂಬಿಕೆಯುಳ್ಳವರು. ಮಕ್ಕಳಿಗೆ ಇದು ಪಾಠ.

[ಶಬ್ದ ಟಿಪ್ಪಣಿ: ಹೊಕ್ಕೊಂಡಿದ್ದನು–ಸೇರಿ ಕೊಂಡಿದ್ದನು. ನಾಡದು–ನಾಳಿದ್ದು, ನಾಳೆಯ ಮರುದಿನ. ಕಟ್ಟಿರುವೆ–ಇರುವೆಯ ಒಂದು ಪ್ರಬೇಧ. ಈ ಇರುವೆಯ ಬಣ್ಣ ಕಪ್ಪು. ಗುಣ ಕ್ರೂರ. ಹಾಂತೆ–ಹಾರುವ ಚಿಕ್ಕ ಕೀಟ, ಮಕ್ಕಳು ರಾತ್ರಿಯಲ್ಲಿ ದೀಪದ ಬಳಿ ಹಾರಾಡುವ ಇದನ್ನು ನೋಡಿ ಪರಿಚಿತರಾಗಿರುತ್ತಾರೆ. ದೀಪದ ಗುಡ್ಡಣ–ಹಣತೆ ಚಿಮ್ಮಣಿ ದೀಪಗಳನ್ನು ಇಡುವ ತುಸು ಎತ್ತರದ ಮರದ ಕಂಬ. ತೋಕು–ಸೋಕು. ಬೀಸಿ ಒಗೆ, ನೀರನ್ನು ತೋಕು. ಮೆಣಸಿನ ಪುಡಿಯನ್ನು ಕಣ್ಣಿಗೆ ತೋಕು ಹಲಬು–ಗೋಳಿಡು.

ಇಂತಹ ಕೀಟಾದಿ ಪ್ರಾಣಿ ಪಕ್ಷಿಗಳಿಗೆ ಅಣ್ಣ ಅಕ್ಕ ಹಚ್ಚಿ ಮನುಷ್ಯರನ್ನಾಗಿ ಮಾಡಿದರೂ ಕ್ರಿಯಾಪದದಲ್ಲಿ ಇವು ನಪುಂಸಕ ಲಿಂಗದ ಪ್ರತ್ಯಯ ಹೊಂದಿರುವದನ್ನು ಗಮನಿಸಿ. ಉದಾ:– ಕಪ್ಪೆಯಣ್ಣ ತೋಕಿತು.]

೪. ಹೇನು

ಇದು ಕೀಟ. ಹಲವರಿಂದ ತಪ್ಪಿಸಿಕೊಂಡು ಬಂದ ಹೇನಕ್ಕ ದುಷ್ಟರನ್ನು ಎದುರಿಸಿ ನಾಶವಾಗುತ್ತದೆ. ಇಲ್ಲಿ ಮತ್ತೆ ಮತ್ತೆ ಬರುವ ಚಿಕ್ಕಚಿಕ್ಕ ವಾಕ್ಯಗಳು ಚಿಕ್ಕ ಮಕ್ಕಳ ನೆನಪಿನಲ್ಲುಳಿಯುತ್ತವೆ. ಪ್ರತಿಬಾರಿ ಹಿಂದೆ ನಡೆದ ಘಟನೆಯನ್ನು ಜೋಡಿಸುತ್ತ ಸಾಗುವ ವಾಕ್ಯಗಳ ಸರಪಳಿ ವಿಧಾನವು ಮಕ್ಕಳ ನೆನಪಿನ ಶಕ್ತಿಗೆ ಪ್ರಚೋದನೆ ನೀಡುತ್ತವೆ. ವಾಕ್ಯಗಳ ಪುನರುಕ್ತಿ ಸಹಜವಾತಾವರಣದಲ್ಲಿ ನಡೆಯುತ್ತದೆ ಮಕ್ಕಳ ನೆನಪಿನ ಶಕ್ತಿಯನ್ನು ಕುದುರಿಸುತ್ತದೆ[ಶಬ್ದ ಟಿಪ್ಪಣಿ: ವರೆ–ಉಗುರಿನಿಂದ ಜಜ್ಜು. ಪ್ರಸ್ತಾ–ಶ್ರಾದ್ಧ].

ಮಕ್ಕಳು ತಮ್ಮ ಸುತ್ತ ಮುತ್ತಲಿನ ಅನೇಕ ಪಕ್ಷಿಗಳನ್ನು ಬಲ್ಲರು. ಅಂತಹ ಪಕ್ಷಿಗಳು ಈ ಸಂಗ್ರಹದ ಕತೆಗಳಲ್ಲಿ ಸ್ಥಾನ ಪಡೆದಿವೆ. ಅಶಕ್ತರಾದರೂ ಜಾಣತನದಿಂದ ತಮ್ಮ

ಕೆಲಸ ಸಾಧಿಸಿಕೊಳ್ಳುವ ಪಕ್ಷಿಗಳು ಇಲ್ಲಿವೆ. ಇವುಗಳಲ್ಲಿ ಕಾಕಣ್ಣ ಗುಬ್ಬಣ್ಣದಲ್ಲಿಯ ಕಾಗೆ, ಗುಬ್ಬಿ, ಅಪ್ಪನ ಪ್ರಸ್ತದಲ್ಲಿಯ ಕಾಗೆ ಅವಲಕ್ಕಿ ಹೆಟ್ಟೆಯ ಗುಬ್ಬಕ್ಕ ಮತ್ತು ಬಾಳೆಹಣ್ಣಿನ ಹಕ್ಕಿ ಇವುಗಳನ್ನು ಹೆಸರಿಸಬಹುದು.

೫. ಕಾಕಣ್ಣ ಗುಬ್ಬಣ್ಣ – ೧

ಪಕ್ಷಿಗಳನ್ನು ಪ್ರಧಾನ ಪಾತ್ರವಾಗಿ ಪಡೆದಿರುವ ಈ ಕತೆ ಹಲವು ಪಾಠಾಂತರ ಗಳೊಂದಿಗೆ ನಮ್ಮನಾಡಿನ ಬಹುಭಾಗದಲ್ಲಿ ಪ್ರಚಾರದಲ್ಲಿದೆ. ಮಕ್ಕಳು ತಿನ್ನಲೆಂದು ಕೈಯಲ್ಲಿ ತಿಂಡಿ ಹಿಡಿದು ಹೊರಬಂದರೆ ಸಾಕು, ಅವರ ಕೈಯಿಂದ ಆ ತಿಂಡಿಯನ್ನು ಲಪಟಾಯಿಸಿ ಅವರನ್ನು ಅಳಿಸುವ ಕೆಲಸ ಅದರದ್ದು.

ಆದ್ದರಿಂದ ಇದು ಮಕ್ಕಳಿಗೆ ತೀರ ಪರಿಚಿತ. ಈ ಕತೆಯಲ್ಲಿ ಇದು ಕೃತಘ್ನ ಕಾಕಣ್ಣ. ಈ ಕಾಕಣ್ಣ ಆಶ್ರಯ ಕೊಟ್ಟ ಗುಬ್ಬಣ್ಣನ ಸಂತಾನವನ್ನೇ ನಾಶ ಮಾಡಿದಳ/ ನಲ್ಲದೆ ಆ ಕಾರಣಕ್ಕಾಗಿ ಗುಬ್ಬಣ್ಣನಿಂದ ಶಿಕ್ಷೆಗೊಳಗಾಗಿ ತಾನು ನಾಶಗೊಳ್ಳುತ್ತದೆ. ಕಾಗೆ, ಗುಬ್ಬಿ ಈ ಎರಡು ಪಕ್ಷಿಗಳ್ನು ಇಲ್ಲಿ ಪುಲ್ಲಿಂಗದಂತೆ ಬಳಸಲಾಗಿದೆ. ಹವ್ಯಕ ಭಾಷೆಯಲ್ಲಿ ಸ್ತ್ರೀ ಲಿಂಗವನ್ನು ಪುಲ್ಲಿಂಗದಂತೆ ಮತ್ತು ನಪುಂಸಕ ಲಿಂಗದಂತೆ ಬಳಸುವದನ್ನು ಗಮನಿಸಬೇಕು. ಇತರ ಪ್ರದೇಶಗಳ ಸಾಮಾಜಿಕ ಉಪಭಾಷೆಯಲ್ಲಿ ಇವನ್ನು ಕಾಕಕ್ಕ ಗುಬ್ಬಕ್ಕ ಎಂದು ಸಂಬೋಧಿಸಲಾಗುತ್ತದೆ. ಗಮನಿಸಿರಿ ಹವ್ಯಕ ಭಾಷೆ ಯಲ್ಲಿ ಸ್ತ್ರೀ ಲಿಂಗವು ಪುಲ್ಲಿಂಗವಾಗಿ ಬಳಕೆಯಾಗುವುದುಂಟು. ಮಹಿಳೆಯೊಬ್ಬಳು ಇಾ(ನಾನು) ಬಪ್ಪವನೆ ಆಗಿದ್ದೆ ಎನ್ನುತ್ತಾಳೆ. ಇಲ್ಲಿ ಇದನ್ನು ಪುಸ್ತಕ ಭಾಷೆಗೆ ಪರಿವರ್ತಿಸಲಾಗಿದೆ.

೬. ಕಾಕಣ್ಣ ಗುಬ್ಬಣ – ೨

ಇದು ಕಾಕಣ್ಣಗುಬ್ಬಣ್ಣ–೧ರ ಪಾಠಾಂತರವುಳ್ಳ ಕತೆಯಾಗಿದೆ. ಪುನರಾವರ್ತನೆ ತಂತ್ರವನ್ನು ಹೆಚ್ಚು ಬಳಸಿಕೊಂಡು ಕತೆಯನ್ನು ಹಿಗ್ಗಿಸಿರುವುದನ್ನು ಇಲ್ಲಿ ಕಾಣಬಹುದು.

೭. ಕಾಗೆಯ ಅಪ್ಪನ ಪ್ರಸ್ತಾ

ಅಶಕ್ತವಾದರೂ ಜಾಣತನದಿಂದ ತನ್ನ ಕೆಲಸ ಸಾಧಿಸಿಕೊಳ್ಳುವ ಪಕ್ಷಿ ಇದು. ಸರಪಳಿ ತಂತ್ರದಿಂದ ಹೆಣೆಯಲ್ಪಟ್ಟ ಈ ಕತೆಯಲ್ಲಿ ವಿನೋದವಿದೆ. ಇಲ್ಲಿಯ ಹವ್ಯಕ ಸಂಸ್ಕೃತಿಯಲ್ಲಿ ಹಿರಿಯರ ಶ್ರಾದ್ಧಾದಿಗಳನ್ನು ಪ್ರಸ್ತವೆಂಬ ಹೆಸರಿನೊಂದಿಗೆ ನಡೆಸುವ ಪ್ರಕ್ರಿಯೆ ಪ್ರತಿ ಮನೆಯಲ್ಲಿ ವಿಶೇಷ ರೀತಿಯಲ್ಲಿ ಆಗಾಗ ನಡೆಯುತ್ತಿರುತ್ತದೆ. ಕಾಗೆಯೂ ತನ್ನ ಅಪ್ಪನ ಪ್ರಸ್ತಮಾಡಲು ಶ್ರಮಿಸುವ ವಿಷಯ ವಸ್ತು ಮಕ್ಕಳ ಬುದ್ಧಿ ಮಟ್ಟಕ್ಕೆ ನಿಲುಕುವಂತಿದೆ. ಹಕ್ಕಿಯ ಜಾಣತನವನ್ನು ಸಾಂಪ್ರದಾಯಿಕ ಸರಪಳಿ ತಂತ್ರದ ಮೂಲಕ ಕತೆ ಹೆಣೆದು ತಿಳಿಸಲಾಗಿದೆ.

[ಶಬ್ದ ಟಿಪ್ಪಣಿ:–ಗೋಳಿ ಮರ ಅತ್ತಿ ಕುಟುಂಬದ ಒಂದು ಮರ.]

೮. ಬಾಳೆಹಣ್ಣಿನ ಹಕ್ಕಿ

ಈ ಕತೆಯಲ್ಲಿ ಹಕ್ಕಿಯು ಕೈತಪ್ಪಿ ಬಿದ್ದು ಹೋದ ಬಾಳೆಹಣ್ಣನ್ನು ಪಡೆಯಲು ಪಟ್ಟ ಶ್ರಮವನ್ನು ಸರಪಳಿ ವಾಕ್ಯಗಳಲ್ಲಿ ವರ್ಣಿಸಲಾಗಿದೆ.

೯. ಅವಲಕ್ಕಿ ಹೆಟ್ಟೆ

ಇಲ್ಲಿಯ ಪ್ರಧಾನ ಪಾತ್ರವು ಗುಬ್ಬಕ್ಕಿಯಾಗಿದೆಯಾದರೂ ಕತೆ ಆ ಹೆಸರನ್ನು ಹೊಂದಿಲ್ಲ. ಇದು ಬಾಳೆಹಣ್ ಹಕ್ಕಿಯ ಕತೆಯ ಪಾಠಾಂತರ ಕತೆಯಾಗಿದೆ. ಈ ಎರಡೂ ಕತೆಗಳಲ್ಲಿ ಹಕ್ಕಿಗಳು ಪ್ರಧಾನ ಪಾತ್ರದಲ್ಲಿವೆ. ಪಾತ್ರಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆಯಿದೆ. ಈ ಕತೆಯ ಕೊನೆಯ ಸಾಲಿನಲ್ಲಿರುವ "ಮಾಣಿ ಗುಬ್ಬಿಯು ಅವಲಕ್ಕಿ ಹೆಟ್ಟೆಯನ್ನು ಕಚ್ಚಿ ಕೊಂಡಿದೆಯಾ ಹೊರಗೆ ಹೋಗಿ ನೋಡು". ಈ ಮಾತು ಗಮನಾರ್ಹವಾಗಿದೆ. ಇಂತಹ ಅನೇಕ ಜನಪದ ಕತೆಗಳಲ್ಲಿ ಕಥನಕಾರರು "ಕತೆ ಕಾಶಿಗೆ ಹೋಯಿತು ನಾನು ಮನೆಗೆ ಬಂದೆ" ಕತೆಯ ನಾಯಕ ಪಾತ್ರವನ್ನು ಉಲ್ಲೇಖಿಸುತ್ತ "ನಾನು ಅವರ ಮನೆಗೆ ಹೋಗಿದ್ದೆ" ಎಂಬ ಮಾತುಗಳನ್ನು ಸೇರಿಸಿ ಕತೆಗೆ ಜೀವಂತಿಕೆ ವಾಸ್ತವಿಕತೆಯನ್ನು ಕತೆ ತರುವದುಂಟು.

[ಶಬ್ದ ಟಿಪ್ಪಣಿ: ಅವಲಕ್ಕಿ–ಬತ್ತದಿಂದ ಮಾಡಿದ ಒಂದು ಖಾದ್ಯ. ಹೆಟ್ಟೆ– ಪೆಂಟೆ, ಮೋರು–ಹೀರು, ಒಟ್ಟೆ–ಪೊದರು, ಜಜ್ಜು–ಗುದ್ದು]

ಮಕ್ಕಳಿಗಾಗಿ ಹೇಳಲಾಗುವ ಕತೆಗಳಲ್ಲಿ ಅವರ ಸುತ್ತ ಮುತ್ತಲಿನ ಪ್ರಾಣಿಗಳು ಪ್ರಧಾನ ಪಾತ್ರದಲ್ಲಿರುವದು ಹೆಚ್ಚು. ಈ ಕೆಳಗಿನವು ಪ್ರಾಣಿ ಕತೆಗಳು.

೧೦. ಯಮನ ಶಾಪ

ಈ ಕತೆಯಲ್ಲಿ ಕವಿಲೆಯು ಮಾತು ಕಳೆದುಕೊಂಡ ಐತಿಹ್ಯವಿದೆ. ಭಾರತೀಯ ಸಂಸ್ಕೃತಿಯ ದರ್ಶನವಿದೆ. ಅತಿಥಿಗಳನ್ನು ಸತ್ಕರಿಸುವದು ಸತ್ಕಾರಗೊಂಡವರು ಉಂಡ ಮನೆಗೆ ಎರಡು ಬಗೆಯದಿರುವದು. ಈ ಕತೆಯ ಜೀವಾಳ ಆದರೆ ಯಜಮಾನನ ಮೇಲಿನ ಅತಿ ಮೋಹದಿಂದ ಗೋವು ಯಮನಿಂದ ಕರ್ತವ್ಯ ಚ್ಯುತಿಯನ್ನು ಮಾಡಿಸಿದೆ. ಇತರರ ಕರ್ತವ್ಯ ಭಂಗ ಪಡಿಸಲು ಮೋಹ ಅಡ್ಡಬರಬಾರದಲ್ಲವೆ? ಒಂದು ಗೋವಿನಿಂದ ಸೃಷ್ಟಿಯ ನಿಯಮಗಳ ಉಲ್ಲಂಘನೆಯಾಗಿ ಅದು ಮಾಡಿದ ತಪ್ಪಿಗಾಗಿ ಗೋವಿನ ಕುಲವೆ ಮೂಕವಾಯಿತು ಎಂಬ ವಿಷಯ ಈ ಕತೆಯಲ್ಲಿದೆ.

[ಶಬ್ದ ಟಿಪ್ಪಣಿ: ಗೋಗ್ರಾಸ–ದನಗಳ ವಿಶೇಷ ಆಹಾರ. ತಟ್ಟೆ–ಲೋಟ ಹೊಳ್ಳಿ–ಮನೆಯ ಮುಂಭಾಗದ ನೆಲ]

೧೧. ಇಣಚಿ

ಈ ಕತೆಯ ಹಲವು ಭಿನ್ನ ಪಾಠಗಳು ದೊರಕುತ್ತವೆ. ಬೇರೆ ಕೆಲವು ಪಾಠಗಳಲ್ಲಿ ಇಣಚಿಯ ಬದಲಿಗೆ ನರಿ ಮುಖ್ಯ ಪಾತ್ರದಲ್ಲಿರುತ್ತವೆ. ಇಲ್ಲಿ ಇಣಚಿಯ ಸಾಹಸದ ವರ್ಣನೆಯಿದೆ. ಸರಪಳಿ ತಂತ್ರವಿದೆ[ಶಬ್ದ ಟಿಪ್ಪಣಿ: ಕೆರೆಸು–ಕೆರೆ].

೧೨. ನೂರಾ ಒಂದು ದನ

ಈ ಕತೆಯಲ್ಲಿ ಪ್ರಾಣಿಗಳ ಕೃತಜ್ಞತೆ ವ್ಯಕ್ತವಾಗಿದೆ. ಮೂಕ ಪ್ರಾಣಿಗಳು ತಮ್ಮ ಒಡೆಯನನ್ನು ನೆಚ್ಚಿನ ಗೆಳೆಯನಂತೆ ರಕ್ಷಿಸಿಕೊಂಡ ಕತೆಯಿದು. ಇದು ಮಕ್ಕಳಿಗೆ ಪ್ರಾಣಿ ದಯೆಯ ಪಾಠ, ನೀಡುತ್ತದೆ.

[ಶಬ್ದ ಟಿಪ್ಪಣಿ: ಮಾಣಿ–ಹುಡುಗ,ಮಣ್ಣುಪಾತ್ರೆ–ಗಡಿಗೆ,ಪಾಗಾರ–ಕಲ್ಲಿನಬೇಲಿ, ಮೀಯು–ಸ್ನಾನಮಾಡು,ಸದೆ–ಕಸ, ಸಂಗಡ–ಜೊತೆ]

೧೩. ಕೊಕ್ರಮೀಸೆಯ ಕೊರ್ಲಿಗೌಡ

ಇದು ಪ್ರಾಣಿ ಕತೆ. ಕುಂಟ ಕುರಿಮರಿಯ ದಿಟ್ಟತನವು ಇಲ್ಲಿಯ ಮುಖ್ಯ ವಸ್ತುವಾದರೂ ಇಲ್ಲಿ ಕುಂಟ ಕುರಿಮರಿ ಎಂಬ ಹೆಸರು ಕತೆಯ ತಲೆಬರೆಹವಾಗಿ ಬಂದಿಲ್ಲ. 'ಕೊಕ್ರಮೀಸೆ ಕೊರ್ಲಿಗೌಡ' ಎಂಬ ಮಾತು ಮತ್ತೆ ಮತ್ತೆ ಬಂದು ಮಕ್ಕಳ ಕತೆಗಳ ಉದ್ದೇಶವನ್ನು ಪೂರೈಸಲು ಪ್ರಯತ್ನಿಸಿದೆ[ಶಬ್ದ ಟಿಪ್ಪಣಿ: ಕವಳ–ಎಲೆ ಅಡಿಕೆ].

೧೪. ಬೊದ್ ನರಿ

ಇದು ಕೂಡ ಪ್ರಾಣಿಕತೆಯಾಗಿದೆ. ಈ ಕತೆಯಲ್ಲಿ ಜೋಯ್ಸನರಿಯು ಬೊದ್ ನರಿಯನ್ನು ವಂಚಿಸಿ ಕೋಳಿ ಬಲಿಯನ್ನು ಚವ್ಡಿ ಗುತ್ತಿಗೆ ಕೊಡಿಸಿ ಅದನ್ನು ತಾನು ಭಕ್ಷಿಸುತ್ತದೆ. ಜೋಯ್ಸನರಿ, ಬೊದ್ ನರಿ ಎರಡೂ ಮಕ್ಕಳಿಗೆ ಪ್ರಿಯ.

[ಶಬ್ದ ಟಿಪ್ಪಣಿ: ಬೊದ್–ಬುದ್ಧಿಯಿಲ್ಲದ]

೧೫. ಹುಲಿಯು ಮುಕಳಿಯನ್ನು ಸುಟ್ಟುಕೊಂಡದ್ದು

ಟಕ್ಕ ನರಿಯೊಂದು ಹುಲಿಯನ್ನುವಂಚಿಸಿದ ಕತೆಯಿದು. ಹುಲಿ, ನರಿಗಳು ರೈತನು ಸಾಕಿದ ನಾಯಿ ದನಕರುಗಳನ್ನು, ಮತ್ತು ಕೋಳಿಗಳನ್ನು ತಿನ್ನಲು ರೈತನ ಮನೆಬಾಗಿಲಿಗೆ ಬರುತ್ತಿರುತ್ತವೆ, ಅವುಗಳನ್ನು ಹೊತ್ತೊಯ್ಯುತ್ತಿರುತ್ತವೆ, ಈ ಮಾಹಿತಿಗಳು ಈ ಹಿಂದಿನ ಹಳ್ಳಿ ಮಕ್ಕಳ ಕಿವಿಗೆ ಆಗಾಗ ಬೀಳುತ್ತಿದ್ದವು. ಆದ್ದರಿಂದ ಇಲ್ಲಿಯ ಪ್ರಾಣಿಕತೆಗಳು ಮಕ್ಕಳ ಪ್ರಾಣಿ ಪ್ರಪಂಚಕ್ಕೆ ಹತ್ತಿರವಾಗಿವೆ. ಆದ್ದರಿಂದ ಇಲ್ಲಿಯ ಅನೇಕ ಪ್ರಾಣಿ ಕತೆಗಳಲ್ಲಿ ಹುಲಿ ನರಿಗಳು ಪ್ರಧಾನ ಪಾತ್ರದಲ್ಲಿವೆ. ಇಲ್ಲಿ ನರಿಗೆ ಶಿಕ್ಷೆಯಾಗಬೇಕು ನಿಜ. ಆದರೆ ತಾವು ಸಾಕಿದ ನಾಯಿ ದನಕರುಗಳನ್ನು ತಿನ್ನುವ ಹುಲಿಗೆ ಹೆಚ್ಚಿನ ಶಿಕ್ಷೆಯಾಗುವುದನ್ನು ಕೇಳಲು ಮಕ್ಕಳಿಗೆ ಇಷ್ಟ, ಜೊತೆಗೆ ಹುಲಿ, ಬೊದ್ದ ಸ್ವಭಾವದ ಪ್ರಾಣಿ ಎಂಬ ಜನಪದ ತಿಳುವಳಿಕೆಗೆ ಇಲ್ಲಿ ಅವಕಾಶ ನೀಡಲಾಗಿದೆ.

[ಶಬ್ದ ಟಿಪ್ಪಣಿ: ಚಿರತೆಯನ್ನು ಸ್ಥಳೀಯರು ಹುಲಿಯೆನ್ನುತ್ತಾರೆ. ಕತ್ತೆ ಕಿರುಬ ಎಂಬ ಚಿಕ್ಕ ಕಾಯದ ಹುಲಿಗಳು ಇವರಿಗೆ ಪರಿಚಿತ, ಮುಕ್ಳಿ–ಕುಂಡೆ ಹೊತಾಕು–ಚಲ್ಲು, ಬೀಸಾಡು]

೧೬. ಕುನ್ನಿಯ ಮಕ್ಕಳು – ೧

ಇದರಲ್ಲಿ ತಾಯಿಮಕ್ಕಳ ಪ್ರೇಮವನ್ನು ತೌಲನಿಕವಾಗಿ ತಿಳಿಸಲಾಗಿದೆ. "ನಾಯಿಯಾದರೂ ತಾಯಿ, ನೀರಾದರೂ ಮಜ್ಜಿಗೆ" ಎಂಬ ಗಾದೆ ಬಹುಶಃ ಈ ಕತೆಯಿಂದಲೇ ಹುಟ್ಟಿರಬೇಕು. ಈ ಕತೆಯಲ್ಲಿ ನಾಯಿಯ ಮಕ್ಕಳು ಮಾನವರು.

[ಶಬ್ದ ಟಿಪ್ಪಣಿ: ಕುನ್ನಿ–ನಾಯಿ]

೧೭. ಕುನ್ನಿಯ ಮಕ್ಕಳು – ೨

ಮೇಲಿನ ಈ ಎರಡು ಕತೆಗಳು ಒಂದೇ ಮೂಲದವು. ಪಾಠಾಂತರಗಳಿವೆ.

ಕತೆಯ ತುಂಬ ಮಾನವರೇ ಪ್ರಮುಖ ಪಾತ್ರಗಳಾಗಿರುವ ಕಥೆಗಳು ಇಲ್ಲಿ ಬಹುಸಂಖ್ಯೆಯಲ್ಲಿ ದೊರಕುತ್ತವೆ. ಅವರ ಜಾಣತನ, ಪೆದ್ದತನ, ಲೋಭ, ಕ್ರೌರ್ಯ, ಮೋಸ, ಅಸೂಯೆ, ಸೇಡು, ಸಾಹಸ, ಸದಾಚಾರ, ದುರಾಚಾರಗಳು ಅವುಗಳ ಪರಿಣಾಮಗಳು ಈ ಕತೆಗಳಲ್ಲಿ ಎದ್ದು ಕಾಣುತ್ತವೆ.

ಈ ಕತೆಗಳಲ್ಲಿ ಕೆಲವು ಪೂರ್ಣ ಮಾನವೀಯ ನೆಲೆಯಲ್ಲಿಯೇ ನಡೆಯುತ್ತವೆ. ಇನ್ನು ಕೆಲವು ಅದ್ಭುತ ಲೋಕದಲ್ಲಿ ಆದರೂ ಕೊನೆಗೂ ಮರಳುವದು ಮಾನವ ಲೋಕಕ್ಕೆ. ಇಲ್ಲಿ ಸ್ವಂತ ಬುದ್ಧಿ ಸಾಮರ್ಥ್ಯದಿಂದ ಮೆರೆಯುವವರಿದ್ದಾರೆ. ಪ್ರಾಣಿ, ದೈವ ಮತ್ತು ಅತಿಮಾನವ ಸಹಾಯಿತರಿದ್ದಾರೆ.

ಈ ವಿಭಾಗದ ಕತೆಗಳಲ್ಲಿ ಕುಟುಂಬದ ಅಸಹಾಯಕ ಸದಸ್ಯರನ್ನೇ ಗುರಿಯಾಗಿಟ್ಟುಕೊಂಡು ರಚಿತವಾದವುಗಳ ಸಂಖ್ಯೆ ಹೆಚ್ಚು. ಅತ್ತೆಯಿಂದ ಕಿರುಕುಳಕ್ಕೊಳಗಾಗುವ ಸೊಸೆಯಂದಿರು, ಮಲತಾಯಿಯಿಂದ ಮಲಮಕ್ಕಳು, ಸ್ವತಃ ತಂದೆಯಿಂದ ಹೆಣ್ಣುಮಕ್ಕಳು, ಅಣ್ಣಂದರಿಂದ ಅಬಲ ತಮ್ಮಂದಿರು, ಗಂಡನಿಂದ ಹಿರಿ/ಕಿರಿ ಹೆಂಡತಿಯರು, ಸವತಿಯರು, ದಡ್ಡರು ಮುಂತಾದವರನ್ನು ದೈವಾದಿಗಳ ಸಹಾಯದಿಂದ ಸಬಲರನ್ನಾಗಿ ಮಾಡಲಾಗಿದೆ. ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಉತ್ತಮ ಗುಣದವರನ್ನು ಎತ್ತಿ ಹಿಡಿಯಲಾಗಿದೆ. ಆಸೆ ಬುರುಕರನ್ನು ಕೆಳತಳ್ಳಲಾಗಿದೆ. ಈ ಮುಂತಾದ ವಿಶೇಷ ಅಂಶಗಳನ್ನು ಆಯಾ ಕತೆಯ ವಿಶ್ಲೇಷಣೆಯ ಸಂದರ್ಭದಲ್ಲಿ ಸಂಕ್ಷಿಪ್ತವಾಗಿ ತಿಳಿಸಲಾಗಿದೆ. ಆದರೂ ಇದಿಷ್ಟು ಸಾಲದೆಂಬ ಅರಿವು ನನ್ನಲ್ಲಿದೆ. ಪ್ರತಿ ಗುಂಪುಗಳ ವಿವರವಾದ ಅಧ್ಯಯನವು ಪ್ರತ್ಯೇಕವಾಗಿ ನಡೆದು ಕತೆಗಳ ಉದ್ದೇಶಾದಿಗಳನ್ನು ಅರಿಯಬೇಕಾಗಿದೆ. ಈ ಮಾತು ಉಳಿದ ವಿಭಾಗಗಳಿಗೂ ಅನ್ವಯಿಸುತ್ತದೆ. ಈ ಕೆಳಗಿನ ಕತೆಗಳು ಮಾನವ ವಿಭಾಗಕ್ಕೆ ಸೇರುತ್ತವೆ.

೧೮. ಸಣ್ಣ ಮೊಽಳಾ ದೊಡ್ಡ ಮೊಽಳಾ

ಮೊಽಳಾ ಎಂದರೆ ಗಂಡು ಬೆಕ್ಕು. ಆದರೆ ಇಲ್ಲಿ ಗದ್ದೆ ಕಾಯಲು ಹೋದವರು ಅಣ್ಣ ತಮ್ಮ. ಇವರು ಮನುಷ್ಯರು, ಪ್ರಾಣಿಗಳಲ್ಲ. ನರಿಯ ಜೊತೆ ಮಾತಾಡಬಲ್ಲವರು.

ಪ್ರಾಯದ ಗಂಡು ಮಕ್ಕಳನ್ನು ಮೋಃಳಾ ಮೋಃಳಬೆಕ್ಕು ಎಂದು ವಾಸ್ತವಿಕ ಪ್ರಪಂಚದಲ್ಲಿ ಕರೆಯುವುದುಂಟು. ಕತೆಯ್ಲಲ್ಲಿ ಠಕ್ಕನರಿಯ ಠಕ್ಕತನ ದೊಡ್ಡಮೊಳನ ಅಂದರೆ ಅಣ್ಣನ ಮುಂದೆ ನಡೆಯುವದಿಲ್ಲ. ನರಿಯು ಸೋಲುತ್ತದೆ. ಮನೆಯ ಬಳಿ ನಿಂತು ರಾತ್ರಿಯಲ್ಲಿ ಹುಕ್ಕಿ ಹೂಽಽ ಎಂದು ಕೂಗುವ ನರಿಗೆ ಶಿಕ್ಷೆಯಾಗುವ ವಿಷಯವನ್ನು ಕೇಳುವುದು ಮಕ್ಕಳಿಗೆ ಖುಷಿ[ಶಬ್ದ ಟಿಪ್ಪಣಿ: ಸುಮಾರು–ಸಾಕಷ್ಟು].

೧೯. ಸುಕ್ಕಿನುಂಡೆ

ಇದರ ತಲೆ ಬರೆಹದ ಮೇಲಿಂದ ಇದರ ಪ್ರಧಾನ ಪಾತ್ರವನ್ನು ಕಂಡು ಹಿಡಿಯ ಲಾಗುವುದಿಲ್ಲ. ಆದರೆ ಕತೆಯನ್ನು ಕೇಳುತ್ತ ಸಾಗಿದಂತೆ ಬೇರೆಯವರ ಸಹಾಯದಿಂದ ತನ್ನ ಕೆಲಸವನ್ನು ಪೂರೈಸಿಕೊಳ್ಳುವ ಬುದ್ಧಿವಂತ ಹುಡುಗನೊಬ್ಬನ ಕತೆ ಇಲ್ಲಿ ತೆರೆದುಕೊಳ್ಳುತ್ತದೆ. ಬೇರೆಯವರ ಸಹಾಯದಿಂದ ತನ್ನ ಕೆಲಸ ಸಾಧಿಸಿಕೊಳ್ಳುವ ಹಕ್ಕಿಗಳು ಪ್ರಧಾನ ಪಾತ್ರದಲ್ಲಿರುವ ಅನೇಕ ಕತೆಗಳಲ್ಲಿ ಸುಕ್ಕಿನುಂಡೆಯ ಕತೆಯ ಹಲವು ಆಶಯಗಳು ದೊರಕುತ್ತವೆ. ಈ ಸಂಗ್ರಹದ ಬಾಳೆ ಹಣ್ಣಿನ ಹಕ್ಕಿ ಅವಲಕ್ಕಿ ಹೆಟ್ಟೆ ಕತೆಗಳಲ್ಲಿ ಇಂತಹ ಆಶಯಗಳು ಇರುವುದನ್ನು ಗಮನಿಸಬಹುದು.

೨೦. ಜಾಣಭಟ್ಟನ ಕತೆ

ಈ ಕತೆಯ ನಾಯಕ ತನ್ನ ಬುದ್ಧಿಶಕ್ತಿಯಿಂದ ಜಾರೆಯಾದ ಹೆಂಡತಿಯನ್ನೂ ಅವಳ ವಿಟನನ್ನೂ ನಾಶಮಾಡುತ್ತಾನೆ. ಮಕ್ಕಳಿಗೆ ಹೇಳಬಹುದಾದ, ತಿಳಿಸಬಹುದಾದ ವಿಷಯ ಈ ಕತೆಗಳಲ್ಲಿಲ್ಲ. ಆದರೆ ಇಂತಹ ಕತೆಗಳನ್ನು ಹಿಂದೆ ಮಕ್ಕಳಿಗೆ ಹೇಳುತ್ತಿದ್ದರು. ನಾನು ಚಿಕ್ಕವಳಿದ್ದಾಗ ಇದನ್ನು ಕೇಳಿದ್ದ. ಆದರೆ ಕತೆಯಲ್ಲಿಯ ಜಾರೆ ವಿಟನಂತಹ ಪಾತ್ರಗಳು ಪೂರ್ಣ ಪ್ರಮಾಣದಲ್ಲಿ ಆಗ ಅರ್ಥವಾಗುತ್ತಿರಲಿಲ್ಲವಾದರೂ ಕತೆಗಳಲ್ಲಿನ ಇತರ ಅಂಶಗಳು ಕುತೂಹಲವನ್ನು ತರುತ್ತಿದ್ದವು. ನೆನಪಿನಲ್ಲಿ ಉಳಿಯುತ್ತಿದ್ದವು.

೨೧. ಗೊವೆ ರಾಮಭಟ್ಟನ ಕತೆ

ಈ ಕತೆಯ ಭಟ್ಟನ ಜಿಪುಣತನ ಅವನ ಗೆಳೆಯನ ಮುಂದೆ ಸೋತಿತು[ಶಬ್ದ ಟಿಪ್ಪಣಿ: ಸುಡು–ಎಣ್ಣೆಯಲ್ಲಿ ಕರಿ].

೨೨. ಏಕಾದಶಿ ಭಟ್ಟ

ಈ ಕತೆಯಲ್ಲಿ ಏಕಾದಶಿ ಭಟ್ಟನಿಂದ ಮೋಸಹೋದ ಹುಲಿಯ ಪ್ರವೇಶವಿದೆ ಯಾದರೂ ಇಲ್ಲಿ ಭಟ್ಟನದೇ ಪ್ರಮುಖ ಪಾತ್ರ.

೨೩. ಬೋಳು ಕೆತ್ತಿ ವಡೆ ಮಾಡಿದ್ದು

ಇದು ಒಂದು ಹಾಸ್ಯಕತೆ. ನಾಯಕಿ ದಡ್ಡ ಹೆಂಗಸು. ಗಂಡ ಅವಳ ದಡ್ಡತನವನ್ನು ಕ್ಷಮಿಸುವುದಿಲ್ಲ. ಅವಳನ್ನು ಹೊಡೆದು ಹೊರಗೆ ಹಾಕುವದು ಆಗಿನ ದಿನಮಾನದ ಪುರುಷಪ್ರಧಾನ ಸಮಾಜದ ಇಲ್ಲಿಯ ಈ ಹಾಸ್ಯ ಕಥಾ ನಿರೂಪಕರಿಗೆ ಸಹಜ

ಸಂಗತಿ. ಇಲ್ಲಿಯ ಮಕ್ಕಳೂ ಕೂಡ ಈ ವಿಷಯವನ್ನು ಸಹಜವೆಂಬಂತೆ ಸ್ವೀಕರಿಸುತ್ತಾರೆ. ನಗುತ್ತಾರೆ[ಶಬ್ದ ಟಿಪ್ಪಣಿ: ಬ್ಳೋಳು ಕೆತ್ತು-ತಲೆ ಬೋಳಾಗುವಂತೆ ತಲೆ ಕೂದಲನ್ನು ತೆಗೆ].

೨೪. ಕುಂಟ ತಮ್ಮನ ಕತೆ

ಒಳ್ಳೆಯ ಆಚರಣೆಗೆ ಒಳ್ಳೆಯ ಫಲ ಕೆಟ್ಟದಕ್ಕೆ ಕೆಟ್ಟದ್ದಾಗುತ್ತದೆ ಎಂಬುದು ಇಲ್ಲಿಯ ಹೆಣ್ಣು ಮಕ್ಕಳೇ ಪ್ರಧಾನ ಪಾತ್ರದಲ್ಲಿರುವ ಕತೆಗಳಲ್ಲಿಯಲ್ಲದೆ ಗಂಡು ಮಕ್ಕಳೇ ಪ್ರಧಾನ ಪಾತ್ರದಲ್ಲಿರುವ ಕತೆಗಳಲ್ಲಿಯೂ ಕಂಡು ಬರುತ್ತದೆ. ಸದಾಚಾರ ಹೆಣ್ಣು ಮಕ್ಕಳಿಗೆ ಮಾತ್ರ ಮುಡಿಪಾಗಿಟ್ಟದ್ದಲ್ಲ. ಗಂಡು ಮಕ್ಕಳಿಗೂ ಅದು ಅವಶ್ಯವೆಂಬುದನ್ನು 'ಕುಂಟ ತಮ್ಮನ ಕತೆ' ತಿಳಿಸುತ್ತದೆ. ಕುಂಟ ತಮ್ಮನ ಕತೆಯಲ್ಲಿ ತಮ್ಮನು ಪಾರ್ವತಿಯ ಕೃಪೆಯಿಂದ ಮೂರು ಹರಳುಗಳನ್ನು ಪಡೆಯುತ್ತಾನೆ. ಅಣ್ಣನೂ, ತಮ್ಮನಂತೆ ಕಾಲು ಕುಂಟು ಮಾಡಿಕೊಂಡು ಮೂರು ಹರಳುಗಳನ್ನು ಪಡೆದರೂ ಅದನ್ನು ಸರಿಯಾಗಿ ಬಳಸಲಾಗದ ಪರಿಸ್ಥಿತಿಯನ್ನು ಹೊಂದುತ್ತಾನೆ. ಇವನು ಆಶೆ ಬುರುಕುತನಕ್ಕೆ ತಮ್ಮನನ್ನು ಹೊರಹಾಕಿದ ಕ್ರೌರ್ಯಕ್ಕೆ ತಕ್ಕ ಶಿಕ್ಷೆ ಹೊಂದುತ್ತಾನೆ.

೨೫. ಕುಂಟಣ್ಣನ ಕತೆ

ಇದರಲ್ಲಿ ಹೆಸರು 'ಕುಂಟಣ್ಣನ ಕತೆ'ಯೆಂದಿದ್ದರೂ ಇದು ಕುಂಟು ತಮ್ಮನ ಕತೆಯಾಗಿದೆ. ಕುಂಟು ತಮ್ಮನನ್ನು ಇಲ್ಲಿ ಕುಂಟಣ್ಣ ಎಂದು ಪ್ರೀತಿಯಿಂದ ಕರೆಯು ವುದುಂಟು. ಕುಂಟಣ್ಣನ ಕತೆಯಲ್ಲಿ ಅಸಹಾಯಕನಾದ ಕುಂಟಣ್ಣನಿಗೆ ದೈವೀ ಕೃಪೆ ನೇರವಾಗಿ ಬರದೆ ಸೊರೆಕಾಯಿಯಲ್ಲಿ ಸಣ್ಣಕ್ಕಿ ರಾಶಿ ಬೀಳುವ ಮೂಲಕ ಒಳ್ಳೆಯ ದಾಗುತ್ತದೆ. 'ಕುಂಟ ತಮ್ಮನ ಕತೆ' ಮತ್ತು 'ಕುಂಟಣ್ಣನ ಕತೆ'ಗಳಲ್ಲಿ ತಮ್ಮನಿಗೆ ಬಂದ ಅದೃಷ್ಟವನ್ನು ತಾನೂ ಪಡೆಯಬೇಕೆಂದು ಒಳ್ಳೆಯವನಲ್ಲದ ಅಣ್ಣನು ಬಯಸಿ ತಾನೇ ಹಾನಿಗೀಡಾಗುತ್ತಾನೆ. 'ಕುಂಟ ತಮ್ಮನ ಕತೆ' 'ಕುಂಟಣ್ಣನ ಕತೆ'ಗಳಲ್ಲಿಯಲ್ಲದೆ 'ಗೊಂಡೆಯ ಗಿಡ', 'ಸಿರಿಯಕ್ಕನ ಕತೆ' ಹತ್ತುಂಡೆ ಬಿತ್ತುಂಡೆಕತೆಗಳಲ್ಲಿ ಬರುವ ಪ್ರಧಾನ ಪಾತ್ರಗಳು ದೈವ ಸಹಾಯಿತರು

೨೬. ಗೊಂಡೆಯ ಗಿಡ

ಅಣ್ಣನು ತಂಗಿಯನ್ನು ಮದುವೆಯಾಗುವದು ತಪ್ಪು. ಎಂಬ ಪಾಠವನ್ನು ಹೇಳುವ ಕತೆಯಿದು. ಅಣ್ಣ-ತಂಗಿ ಏಗಿನಿ ಇತ್ಯಾದಿ ಹೆಸರಿನೊಂದಿಗೆ ಇತರ ಸಾಮಾಜಿಕ ಉಪಭಾಷೆಯಲ್ಲಿ ಇದು ಬಹುಪ್ರಚಾರದಲ್ಲಿದೆ.

೨೭. ಸಿರಿಯಕ್ಕನ ಕತೆ

ಇದು ಗೊಂಡೆಯ ಗಿಡ. ಕತೆಯ ಪಾಠಾಂತರ. ಸಮಾಜದ ಕಟ್ಟುಪಾಡುಗಳು ಮುರಿಯಲ್ಪಡದೆ ಉಳಿಯ ಬೇಕೆಂಬುದನ್ನು ಸಿರಿಯಕ್ಕನ ಕತೆ ತಿಳಿಸುತ್ತದೆ.

೨೮. ಕುಡಕೆ

ಬಡ ಭಟ್ಟನೊಬ್ಬನು ಪಾರ್ವತಿ-ಪರಮೇಶ್ವರರ ಸಹಾಯದಿಂದ ಪಡೆದ ಕುಡಕೆಯ (ಚಿಕ್ಕ ಮಡಕೆ) ಸುತ್ತ ಹೆಣೆದ ಕತೆಯಿದು. ಬಡ ಭಟ್ಟನು ಕುಂಟು ತಮ್ಮನಂತೆ ದೈವ ಸಹಾಯಿತನು.

೨೯. ಕಟ್ಟಗ್ಗ ಹೊಯ್ದೊಣ್ಣೆ ಕೋಲು

ಓದು ಬರೆಹ ಬಾರದ ಮಾಣಿಯು ತಾನು ತಿನ್ನಲು ತಂದ ರೊಟ್ಟಿಯನ್ನು ದಾನ ಮಾಡುತ್ತಾನೆ. ಈ ಒಳ್ಳೆಯ ಕೆಲಸ ಮಾಡಿದ್ದಕ್ಕಾಗಿ ಮಾಣಿಗೆ ಕಟ್ಟಗ್ಗಾ ಹೊಯ್ದೊಣ್ಣೆ ಕೋಲು ದೊರೆಯುತ್ತದೆ.

೩೦. ಸುಟ್ಟೇವಿನ ಮರ – ೧

ಸುಟ್ಟೇವು ಎಂಬುದೊಂದು ತಿಂಡಿ. ಸುಟ್ಟೇವನ್ನು ಬೆಳೆದು ಸುಟ್ಟೇವಿನ ಮರದಿಂದ ಸುಟ್ಟೇವುಗಳ ಬೆಳೆಯನ್ನು ಪಡೆಯಲು ಶಕ್ತನಾದ ದೈವ ಸಹಾಯಿತನ ಕತೆಯಿದು. ಬಡವನಿಗೂ ಸುಖದ ಕಾಲ ಬರುತ್ತದೆ. ಎಂಬುದನ್ನು ಇದು ಸೂಚಿಸುತ್ತದೆ. ಶಬ್ದ ಟಿಪ್ಪಣೆ-ಗುಡ್ಡೆಗೆ ಹೋಗಬೇಕೆನಿಸಿತು-ಮಲವಿಸರ್ಜಿಸಬೇಕೆನಿಸಿತು.

೩೧. ಸುಟ್ಟೇವಿನಮರ – ೨

ಇದುಸುಟ್ಟೇವಿನ ಮರ-೧ರ ಪಾಠಾಂತರ

೩೨. ನಡೆ ಕುಂಬಳವೆ ಟರ್‍ರಾ ಪುರ್‍ರಾ

ಇದರಲ್ಲಿ ಮುಖ್ಯಪಾತ್ರವು ಪಿಳ್ಳಾರಿ ಗಣಪತಿಯ ಪೂಜೆ ಮಾಡುವ ಒಬ್ಬ ಅಜ್ಜಿ. ಈ ಅಜ್ಜಿ ಗಣಪತಿಯ ಕೃಪೆಯಿಂದ ಪಡೆದ ದೊಡ್ಡ ಕುಂಬಳ ಕಾಯಿಯೊಳಗೆ ಕುಳಿತು ಹುಲಿ ನರಿ ಕರಡಿಗಳಿಂದ ತಪ್ಪಿಸಿಕೊಂಡು ಕಾಡಿನ ದಾರಿಯಲ್ಲಿರುವ ಮಗಳ ಮನೆಗೆ ಹೋಗಿ ಬರುತ್ತದೆ. ತಮಿಳಿನ ಪಿಳ್ಳೆಯಾರ್ ಹವ್ಯಕ ಕನ್ನಡದಲ್ಲಿ ಪಿಳ್ಳಾರಿಯಾಗಿ ಮೂಲ ಅರ್ಥವನ್ನು ಮರೆತ ಕಾರಣ ಮತ್ತೆ ಗಣಪತಿ ಎಂಬ ಶಬ್ದವನ್ನು ಸೇರಿಸಿ ದ್ವಿರುಕ್ತಿಗೊಂಡಿದೆ. ಹವ್ಯಕ ಭಾಷೆಯು ಒಂದು ಕಾಲಕ್ಕೆ ತಮಿಳಿನಿಂದ ಹೊರಬಂದ ತಮಿಳಿನ ಒಂದು ಶಾಖೆಗೆ ಸೇರಿತ್ತೆಂದು ಹೇಳಬಹುದು. ಈಗ ಅದು ತಮಿಳಿನ ಕೆಲವೇ ಕುರುಹುಗಳನ್ನು ಉಳಿಸಿಕೊಂಡ ಕನ್ನಡವಾಗಿದೆ.

೩೩. ಅತಿ ಆಸೆ

ಇದು ಆಸೆಬುರುಕನೊಬ್ಬನ ಸುತ್ತ ಇರುವ ಹಾಸ್ಯ ಕತೆ.

೩೪. ಹಿರಿರಾಣಿ ಕತೆ

ಈ ಕತೆಯ ಹಿರಿರಾಣಿಯು ಕುಟುಂಬದಲ್ಲಿ ಗಂಡನಿಂದ ತಿರಸ್ಕೃತಳು. ಆದರೆ ಒಳ್ಳೆಯ ಕೆಲಸ ಮಾಡಿ ಇವಳು ದೈವಾನುಗ್ರಹ ಪಡೆಯುತ್ತಾಳೆ. ಉಳಿದವರಿಗೆ ಕೆಡಕುಂಟಾಗುತ್ತದೆ

೩೫. ನುಚ್ಚಕ್ಕಿ ನುರಿಯಕ್ಕಿ ಕತೆ

ಈ ಕತೆಯ ಮಲಮಗಳು ಕುಟುಂಬದಲ್ಲಿ ತಿರಸ್ಕೃತಳು. ಇವಳು ಒಳ್ಳೆಯ ಕೆಲಸ ಮಾಡಿ ದೈವಾನುಗ್ರಹ ಪಡೆಯುತ್ತಾಳೆ.

೩೬. ಕೆಸುವಿನ ಸೊಪ್ಪಿನ ಕೂಸು

ಒಳ್ಳೆಯ ಆಚರಣೆಗೆ ಒಳ್ಳೆಯ ಫಲ ಕೆಟ್ಟದಕ್ಕೆ ಕೆಟ್ಟದ್ದು ಎಂಬುದನ್ನು ತಿಳಿಸುವ ನೂರಾರು ಜನಪದ ಕತೆಗಳು ದೊರೆಯುತ್ತವೆ. ಅವುಗಳಲ್ಲಿ ಇದೂ ಒಂದು. ಜಗತ್ತಿನ ಜನಪದ ಕತೆಗಳ ಸಾಲಿನಲ್ಲಿ ನಿಲ್ಲುವ ಈ ಕೆಳಗಿನ ಆರೆಂಟು ಜನಪದ ಕತೆಗಳ ತೌಲನಿಕ ಅಧ್ಯಯನ ನಡೆಸಿದಾಗ ಈ ಕೆಳಗಿನ ಸಂಗತಿ ತಿಳಿದು ಬರುತ್ತದೆ. ಆಯಾ ಕಥಾ ಭಾಗದಲ್ಲಿ ಇನ್ನಷ್ಟು ವಿವರಿಸಲಾಗಿದೆ[ಶಬ್ದ ಟಿಪ್ಪಣಿ–ಕೂಸು–ಹುಡುಗಿ, ಕೆಸು–ಅಡುಗೆಗೆ ಬಳಸುವ ಒಂದು ಬಗೆಯ ಕಳೆ.].

೩೭. ಕೆಸುವಿನ ಸೊಪ್ಪು

ಮೇಲಿನಂತೆ ಇದ್ದು ಪಾಠಾಂತರಗಳಿವೆ.

೩೮. ಮಲಮಗಳು

ಇದರಲ್ಲಿ ಮೇಲಿನ ಕತೆಯ ಪಾಠಾಂತರಗಳಿವೆ. ಮಲಮಗಳು, ಹಿರಿ ಹೆಂಡತಿಯ ಕೂಸು. ದನ ಕಾಯುವವಳು ಮುಂತಾದವುಗಳಲ್ಲಿಯ ಮಲಮಕ್ಕಳು ಮಲತಾಯಿಯಿಂದ ಕಿರುಕುಳಕ್ಕೊಳಗಾಗುತ್ತಾರೆ. ಆದರೆ ಅವರು ದೈವಾನುಗ್ರಹ ಪಡೆಯುತ್ತಾರೆ. ಕಿರುಕುಳ ಕೊಟ್ಟವರ ಮಕ್ಕಳಿಗೆ ಕೆಡಕುಂಟಾಗುತ್ತದೆ.

೩೯. ಹಿರಿಯ ಹೆಂಡತಿಯ ಮಗಳು

ಮೇಲಿನ ಕತೆಯ ಪಾಠಾಂತರ.

೪೦. ಚಿನ್ನದ ಕುಂಕುಮದ ಕೂಸು

ಮೇಲಿನ ಕತೆಯ ಪಾಠಾಂತರ. ಹೆಚ್ಚಿನ ಆಶಯಗಳೊಂದಿಗೆ ಇದು ಬೇರೆ ಕತೆಯಾಗಿ ರಚಿತವಾಗಿದೆ.

೪೧. ದನ ಕಾಯುವವಳ ಕತೆ

ಇದು ಮಲಮಗಳ ಕತೆಯಾಗಿದೆ. ಇಲ್ಲಿ ಮಲಮಗಳು ಪ್ರಮುಖ ಪಾತ್ರದಲ್ಲಿ ಇದ್ದಾಳೆ. ಅವಳು ತೆಂಗಿನ ಮರದ ಕೃಪೆಯಿಂದ ಸಮಾರಾಧನೆಗೆ ಹೋಗಲು ಬೇಕಾದ ಸೀರೆ, ಮತ್ತು ಬಂಗಾರವನ್ನು ಪಡೆಯುತ್ತಾಳೆ. ಅವಳು ಕೈ ತೊಳೆಯುವಾಗ ಜಾರಿ ಬಿದ್ದ ಅವಳ ಕೈ ಬಳೆ ರಾಜಕುಮಾರನ ಕೈಸೇರುತ್ತದೆ. ಅವನು ಅದರ ಸಹಾಯದಿಂದ ಅದನ್ನು ಧರಿಸಿದವಳನ್ನು ಕಂಡುಹಿಡಿದು ಅವಳನ್ನು ಮದುವೆಯಾಗುತ್ತಾನೆ. ಇಲ್ಲಿಯೂ ಶೇಕ್ಸಪಿಯರನ 'ಕಿಂಗ ಲಿಯರ್' ನಾಟಕದ ವಸ್ತುವಿದೆ. ಈ ನಾಟಕಕ್ಕೆ ಅಲ್ಲಿಯ ಜನಪದ ಕತೆ ಮೂಲವಾಗಿದೆ ಎನ್ನಬಹುದಾಗಿದೆ. ಅಷ್ಟೇ

ಅಲ್ಲ ಕನ್ನಡ ನಾಡಿನ ಹಳ್ಳಿಗಳಲ್ಲಿ ವ್ಯಾಪಕವಾಗಿ ಪ್ರಸಾರದಲ್ಲಿರುವ ವೈವಿಧ್ಯತೆಯಿಂದ ಕೂಡಿರುವ ಈ ಕತೆಯ ವಿಷಯ ವಸ್ತು ಗಮನಾರ್ಹವಾಗಿದೆ.

[ಶಬ್ದ ಟಿಪ್ಪಣಿ–ಸಮಾರಾಧನೆ–ಸಮಾರಂಭ]

೪೨. ಏಳು ಜನ ಹೆಣ್ಣು ಮಕ್ಕಳು

ಇದು ಕಿರಿಮಗಳ ಕತೆ. ಕಿರಿಮಗಳು ಪ್ರಮುಖ ಪಾತ್ರದಲ್ಲಿರುವ ಇಲ್ಲಿಯ ಕತೆಗಳಲ್ಲಿ ನಾಯಕರು ವೇಷಾಂತರದಲ್ಲಿ ಇರುತ್ತಾರೆಂಬುದನ್ನು ಗಮನಿಸಬೇಕು. ಇದರಲ್ಲಿಯೂ ಕಿಂಗ್ ಲಿಯರ್ ನಾಟಕದ ವಸ್ತುವಿದೆ.

೪೩. ಸುಂಟಿ ಕೊಂಬಿನ ಆಟ

ಇಲ್ಲಿಯ ಕಿರಿ ತಂಗಿ ಏಳು ಜನ ಅಕ್ಕಂದಿರಿಂದ ತಿರಸ್ಕಾರಕ್ಕೆ ಒಳಗಾದವಳು. ಕತೆಯ ವಸ್ತು ಕಿಂಗ್ ಲಿಯರ್ ನಾಟಕದ ವಸ್ತುವನ್ನು ಹೊಂದಿದೆಯಾದರೂ ತಂದೆ ಕಿರಿ ಮಗಳನ್ನು ಬಡ ಭಟ್ಟನಿಗೆ ಮದುವೆ ಮಾಡಿಕೊಡುವ ಕಾರಣ ಮಾತ್ರ ಕ್ಷುಲ್ಲಕ ವಾದದ್ದು. ಆಡುವಾಗ ಸುಂಟಿಕೊಂಬೊದನ್ನು ಕಳೆದು ಹಾಕಿರುವದು ಇದಕ್ಕೆ ಕಾರಣ. ಗಂಡನನ್ನು ಪಡೆದ ಮೇಲೆ ಅವಳು ಸುಖವಾಗಿರುತ್ತಾಳೆ[ಶಬ್ದ ಟಿಪ್ಪಣಿ–ಕೊಂಬು–ಗಡ್ಡೆಯ ತುಂಡು].

೪೪. ಆಮೆ

ಇದು ಆಮೆಯ ಚಿಪ್ಪನ್ನು ಹೊದ್ದ ಮನುಷ್ಯನ ಕತೆ. ನಾಯಕನು ರುಷಿಯ ಶಾಪದಿಂದ ಆಮೆಯ ಚಿಪ್ಪು ಧರಿಸುವಂತಾಗುತ್ತದೆ. ಬಳಿಕ ಈತ ಋಷಿ ಕೃಪೆ, ಕಟ್ಟಿಗ್ಗ ಹೊಯ್ದೊಣ್ಣೆ, ಗೆಜ್ಜೆ ಇತ್ಯಾದಿಗಳ ಸಹಾಯದಿಂದ ಇತರರಿಂದ ಆಗದ ಕೆಲಸವನ್ನು ಮಾಡಿ. ಅರಸುತನವನ್ನು ಪಡೆಯುತ್ತಾನೆ.

೪೫. ನೂರಾ ಒಂದು ತಲೆ ಬೊಂಡಾ

ಕತೆಯಲ್ಲಿಯ ನಾಯಕನು ಮಾನವರ ಗುಂಪಿಗೆ ಸೇರಿದವನು. ಈತನು ಅತಿಮಾನವ ಶಕ್ತಿಯನ್ನು ಪಡೆದುಕೊಂಡ ಸನ್ಯಾಸಿಯನ್ನು ಮಂತ್ರದ ನೀರು, ನೂರಾಒಂದು ತಲೆಬೊಂಡಗಳ ಸಹಾಯದಿಂದ ಕೊಂದು ಬಳಿಕ ನೂರಾ ಒಂದು ತಲೆಬೊಂಡಗಳನ್ನು ಜೀವಂತಗೊಳಿಸಿ ಹಲವಾರು ಗಂಡಾಂತರಗಳನ್ನು ದಾಟಿ, ರಾಜನ ಕಿರಿಮಗಳನ್ನು ಮದುವೆಯಾಗಿ ಅರಸುತನವನ್ನು ಪಡೆಯುತ್ತಾನೆ. ನೂರಾ ಒಂದು ತಲೆಬೊಂಡ' ಕತೆಯಲ್ಲಿ ನಾಯಕನು ಹಾವಿನ ಚರ್ಮವನ್ನು ಧರಿಸಿದ್ದರೂ ಹೆಂಡತಿಗೆ ಗಂಡನ ಪುಣ್ಯವೇ ದೊಡ್ಡದು" ಎಂದು ಸಾರುವ ಹೆಣ್ಣಿನ ಸುತ್ತ ಹೆಣೆಯಲ್ಪಡುವ ಅನೇಕ ಕತೆಗಳಿಗಿಂತ ಇದು ತುಸು ಬೇರೆಯಾಗಿ ನಿಂತುಕೊಳ್ಳುತ್ತದೆ. ಏಕೆಂದರೆ ಹೆಂಡತಿಗೆ ಗಂಡನ ಪುಣ್ಯವೇ ದೊಡ್ಡದು" ಎಂದು ಸಾರುವ ಹೆಣ್ಣಿನ ಸುತ್ತ ಹೆಣೆಯಲ್ಪಡುವ ಕಿರಿಮಗಳ ಕತೆಗಳಂತೆ ಇಲ್ಲಿಯ ಮೊದಲ ಭಾಗವು ಆ ಸಂಗತಿಯನ್ನು ಸಾರಲು

ಮರೆತು ನಾಯಕನು ಹಾವಿನ ಚರ್ಮವನ್ನು ಧರಿಸಿದ್ದರೂ ಅದರ ನಾಯಕನು ಹಾವಿನ ಚರ್ಮವನ್ನು ಧರಿಸುವಂತೆ ಹೆಣೆದ ಕತೆಯ ಉದ್ದೇಶವನ್ನು ಈಡೇರಿಸಿ ಕೊಳ್ಳಲಾಗದೆ ನಾಯಕನು ಪಡೆದ ಅತಿ ಮಾನುಷ ಶಕ್ತಿಯ ವೈಭವೀಕರಣದಲ್ಲಿ ತೊಡಗಿಕೊಳ್ಳುತ್ತದೆ. ಹೀಗಾಗಿ ಇದು ಪ್ರತ್ಯೇಕ ಕತೆಯೆಂಬತಾಗುತ್ತದೆ. ಆದರೂ ಕಿರಿಮಗಳು ಇಲ್ಲಿ ನುಸುಳಿರುತ್ತಾಳೆ. ಇದು ಜಗತ್ತಿನ ಜನಪದ ಕತೆಗಳಲ್ಲಿ ಕಂಡು ಬರುವ ಕಿರಿಮಗಳ ಆಶಯದ ಮೇಲಿನ ಕತೆಗಳ ಗುಂಪಿಗೆ ಸೇರುತ್ತದೆ.

೪೬. ಮಾತನಾಡುವ ಗಿಳಿ ಚಿನ್ನದ ಬಾವಿ

ಇದರ ಪ್ರಧಾನ ಪಾತ್ರ ತಂಗಿ. ಇವಳು ಅಣ್ಣಂದಿರನ್ನು ಬಿಡಿಸಿದ್ದಲ್ಲದೆ ತಾಯಿಯ ಸೆರೆ ಬಿಡಿಸಲು ಕಾರಣದಳು. ಹೆಣ್ಣಾಗಲಿ ಗಂಡಾಗಲಿ ಈ ಕತೆಗಳಲ್ಲಿನ ನಾಯಕರೆಲ್ಲ ದೈವ ಸಹಾಯಿತರು

೪೭. ಅತ್ತೆ ಸೊಸೆ – ೧

ದುರ್ಗಸಿಂಹನ ಪಂಚತಂತ್ರದ "ಸೊಸೆಯಮಾತಂ ಕೇಳದತ್ತೆ"ಯ ಕತೆಯನ್ನು ಈ ಸಂಗ್ರಹದ "ಅತ್ತೆ ಸೊಸೆ" ಈ ಕತೆಯೊಂದಿಗೆ ಹೋಲಿಸಿದಾಗ ಮುಂದಿನ ಸಂಗತಿಗಳು ತಿಳಿದು ಬರುತ್ತದೆ.

೧. ಎರಡರಲ್ಲಿಯೂ ಅತ್ತೆಯು ಸೊಸೆಯನ್ನು ಹೊರಗೆ ಹಾಕುತ್ತಾಳೆ. ಹಾಗೂ ಈ ಎರಡರಲ್ಲಿಯೂ ಮಗನ ಪ್ರಸ್ತಾಪವಿಲ್ಲ.
೨. ಜನಪದ ಕತೆಯಲ್ಲಿ ಅತ್ತೆಯು ಸೊಸೆಯ ಮನೆಗೆಲಸ ಸೇರಲಿಲ್ಲವೆಂಬ ಕಾರಣದಿಂದ ಅವಳನ್ನು ಹೊರಗೆ ಹಾಕುತ್ತಾಳೆ. ಪಂಚತಂತ್ರದಲ್ಲಿ ಸೊಸೆಯು ಬ್ರಾಹ್ಮಣ ಭೋಜನವಿಕ್ಕಿದ್ದು ತನಗೆ ಸೇರದ ಕಾರಣ ಅವಳನ್ನು ಹೊರಗೆ ಹಾಕುತ್ತಾಳೆ.
೩. ಜನಪದ ಕತೆಯಲ್ಲಿ ದೆವ್ವಗಳು ಬಂಗಾರ ತುಂಬಿದ ಬುಟ್ಟಿಯನ್ನು ತರುತ್ತವೆ. ಪಂಚತಂತ್ರದಲ್ಲಿ ಮಾಯಾರೂಪಿಗಳಾದ ಶಾಕಿನಿಯರು ಸುವರ್ಣದ್ವೀಪಕ್ಕೆ ಹೋಗುತ್ತಾರೆ.
೪. ಎರಡರಲ್ಲಿಯೂ ಸೊಸೆ ಬಂಗಾರವನ್ನು ತಂದು ಅತ್ತೆಗೆ ತೋರಿಸುತ್ತಾಳೆ.
೫. ಜನಪದ ಕತೆಯಲ್ಲಿ ದೆವ್ವಗಳು ಸಮುದ್ರ ಸ್ನಾನಕ್ಕೆ ಹೋದಾಗ ಅತ್ತೆ ಬಂಗಾರವನ್ನು ತುಂಬಿಕೊಳ್ಳುತ್ತಿರುತ್ತಾಳೆ. ಪಂಚತಂತ್ರದ ಕತೆಯಲ್ಲಿ, ಅತ್ತೆ ಬಂದಾಗ ಶಾಕಿನಿಯರು ಕಡಾರ ದ್ವೀಪಕ್ಕೆ ಹೋಗುವ ಆಶೆಯನ್ನು ವ್ಯಕ್ತಪಡಿಸುತ್ತಾರೆ.
೬. ಜನಪದ ಕತೆಯಲ್ಲಿ ದೆವ್ವಗಳು ಪಂಚತಂತ್ರದ ಕತೆಯಲ್ಲಿ ರಕ್ಕಸಿಯರು ಮಾಯಾರೂಪಿ ಶಾಕಿನಿಯರು ಅತ್ತೆಯನ್ನು ಕೊಂದು ತಿನ್ನುತ್ತವೆ.
೭. ಜನಪದ ಕತೆಯ ಕೊನೆಯಲ್ಲಿ ಅತ್ತೆ ನಾಶವಾದ ಮೇಲೆ ಗಂಡ ಹೆಂಡಿರು ಸುಖವಾಗಿ ಉಳಿದಿರು ಎಂದಿದೆ. ಪಂಚತಂತ್ರದಲ್ಲಿ ಅತ್ತೆಯ ಸಾವಿನೊಂದಿಗೆ ಕತೆ ಮುಗಿಯುತ್ತದೆ.

ಬಹುಸಂಖ್ಯೆಯ ಭಿನ್ನಪಾಠಗಳೊಂದಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ದೊರೆಯುವ ಈ ಕತೆ ದುರ್ಗಸಿಂಹನ ಪಂಚತಂತ್ರದಲ್ಲಿ ಮಾತ್ರ ಇರುವುದು ಗಮನಾರ್ಹವಾಗಿದೆ. ದುರ್ಗಸಿಂಹನು ತನ್ನ ಕೃತಿಗೆ ಜನಪದ ಕತೆಯನ್ನು ಆಧರಿಸಿದ್ದಾನೆಂದು ತಿಳಿದರೆ ಈ ಜನಪದ ಕತೆಗಳ ಕಾಲ ಪಂಚತಂತ್ರದ ಕಾಲಕ್ಕಿಂತ ಹಿಂದಕ್ಕೆ ಹೋಗುತ್ತದೆ.

೪೮. ಅತ್ತೆ ಸೊಸೆ – ೨

ಇದು ಮೇಲಿನ ಕತೆಯ ಪಾಠಾಂತರ.

೪೯. ಉಪ್ಪಿನಕಾಯಿಯ ಕತೆ

ಮೇಲಿನ ಕತೆಯ ಪಾಠಾಂತರ.

೫೦. ಅತ್ತೆಯ ಕಾಟ

ಮೇಲಿನ ಕತೆಯ ಪಾಠಾಂತರ.

೫೧. ದಡ್ಡ ಪಂಡಿತ

ಪ್ರಾಣಿಗಳ ಚಲನವಲನವನ್ನು ನೋಡಿ ಇಲ್ಲವೆ ಅವು ಹೇಳಿಕೊಟ್ಟ ಮಂತ್ರವನ್ನು ಕಲಿತು ಅದೃಷ್ಟವಂತರಾಗುವ ದಡ್ಡರ ಕತೆಗಳು ಈ ಸಂಗ್ರಹದಲ್ಲಿವೆ. ಇವಲ್ಲದೆ ಪ್ರಾಣಿ ಸಹಾಯಿತರಾದ ಹೆಗ್ಗಣ, ಇಲಿ, ಕೊಕ್ಕನಕ್ಕಿಗಳು ಮಂತ್ರ ಹೇಳಿಕೊಡುವ ರೀತಿ ವಿನೋದವನ್ನು ತರುತ್ತದೆ. ಈ ಕತೆಗಳಲ್ಲಿ ದಡ್ಡರು ಮಂತ್ರ ಕಲಿಯುವ ಪರಿಯನ್ನು ವಿಡಂಬಿಸಲಾಗಿದೆ.

ದಡ್ಡ ಪಂಡಿತ ಈ ಕತೆಯಲ್ಲಿ ಪ್ರಾಣಿಯೊಂದರ ಚಲನವಲನವನ್ನು ತಾನು ಬಲ್ಲ ಅರೆಬರೆ ಸಂಸ್ಕೃತದಲ್ಲಿ ತಾನು ವರ್ಣಿಸಿದ ಶಬ್ದಗಳೇ ಅವನ ಪಾಲಿಗೆ ಮಂತ್ರಗಳಾಗಿ ಸಂಪತ್ತನ್ನು ತರುತ್ತವೆ

೫೨. ಮಂತ್ರ ಕಲಿಯುವ ಮಾಣಿ – ೧

ಹೆಗ್ಗಣ ಹುಲಿ ಕರಡಿಗಳ ಮೂಲಕ ಮಾಣಿಯು ಮಂತ್ರ ಕಲಿಯುತ್ತಾನೆ. ಚಿನ್ನ ದುಡ್ಡು ಪಡೆಯುತ್ತಾನೆ.

೫೩ ಮಂತ್ರ ಕಲಿಯುವ ಮಾಣಿ – ೨

ಮೇಲಿನ ಕತೆಯ ಪಾಠಾಂತರ. ಇಲಿ, ಕೊಕ್ಕನಕ್ಕಿ ಹೆಬ್ಬಾವು ಮೊಲಗಳ ಮೂಲಕ ಮಾಣಿಯು ಮಂತ್ರ ಕಲಿಯುತ್ತಾನೆ.

೫೪. ಜೋಳದ ಕಾಳಿನ ಕತೆ

ಇದು "ಅಣ್ಣ ತಮ್ಮಂದಿರ ಕತೆ" ಇಲ್ಲಿ ಸಹೋದರರು ತಾವು ದಾರಿಯಲ್ಲಿ ಕೊಂಡುಕೊಂಡ ಹಂಡೆ, ಹಗ್ಗ ಹಾಗೂ ಮೊಲದ ಸಹಾಯದಿಂದ ರಾಕ್ಷಸನನ್ನು ಕೊಲ್ಲುತ್ತಾರೆ, ನಿಧಿಯನ್ನು ಪಡೆಯುತ್ತಾರೆ

೩೫. ರಾಜನ ಮಗ ಮತ್ತು ಪ್ರಧಾನಿಯ ಮಗ

ಪಕ್ಷಿಗಳು ತಿಳಿಸುವ ಸಂಗತಿಗಳನ್ನು ಅರಿತು ನಾಯಕ ತನ್ನ ಗೆಳೆಯನನ್ನು ಕಾಪಾಡುತ್ತಾನೆ. ಈ ಕತೆ ಒಳ್ಳೆಯ ಗೆಳೆತನದ ಪ್ರತೀಕ.

೩೬. ಗಂಡು ಭೇರುಂಡ, ಹೆಣ್ಣು ಭೇರುಂಡ

ಭೇರುಂಡ ಎಂಬುದೊಂದು ಕಾಲ್ಪನಿಕ ಪಕ್ಷಿ. .ಇವುಗಳಲ್ಲಿ ಗಂಡು ಭೇರುಂಡ ಹೆಣ್ಣು ಭೇರುಂಡ ಈ ಎರಡೂ ಪಕ್ಷಿಗಳು ಇಲ್ಲಿಯ ಕತೆಗಳಲ್ಲಿ ಭಾಗವಹಿಸುತ್ತವೆ. ನಾಯಕನ ಒಳ್ಳೆಯ ಗೆಳೆತನವನ್ನು ಮೇಲಿನ ಈ ಕತೆ ಪ್ರಕಟಿಸುತ್ತದೆ. ರಾಜನ ಮಗ ಪ್ರಧಾನಿ ಮಗ ಈ ಕತೆಯ ಪಾಠಾಂತರವಿದು.

ಶಿಷ್ಟ ಸಾಹಿತ್ಯದಲ್ಲಿ ಕಂಡುಬರುವ ಗಂಡ ಭೇರುಂಡ ಎಂಬ ಶಬ್ದವು ಗಂಡು ಭೇರುಂಡ ಎಂಬ ಶಬ್ದದ ತಪ್ಪು ಗ್ರಹಿಕೆಯಿಂದ ಜಾರಿಗೆ ಬಂದಿದೆಯೆಂದು ಈ ಕತೆಯಲ್ಲಿಯ ಶಬ್ದಗಳಿಂದ ತಿಳಿಯಬಹುದಾಗಿದೆ.

೩೭. ಹತ್ತುಂಡೆ ಬಿತ್ತುಂಡೆ

ಇದರಲ್ಲಿ ಬರುವ ಪ್ರಧಾನ ಪಾತ್ರವಾದ ಸೂರ್ಯಶೇಖರನ ಮಗನು ದೈವ ಸಹಾಯಿತನು ಕ್ಷೌರಿಕನೊಬ್ಬನ ಮೋಸ. ಮತ್ತು ಈಶ್ವರನ ಅನುಗ್ರಹ ಇಲ್ಲಿಯ ಪ್ರಮುಖ ಅಂಶಗಳು.

೩೮. ಪಂಚವರ್ಣದ ಗಿಳಿ

ಈ ಕತೆಯ ನಾಯಕ ಮನುಷ್ಯ. ಕತೆಯಲ್ಲಿ ಅದ್ಭುತ ಘಟನೆಗಳು ನಡೆಯುತ್ತವೆ. ಮಾಂತ್ರಿಕ ಶಕ್ತಿಗಳು ನಾಯಕನ ನೆರವಿಗೆ ಬರುತ್ತವೆ. ಋಷಿಯ ಹರಳಿನ ಶಕ್ತಿಗೆ ನೂರಾವೊಂದು 'ದೈತ್ಯೆಯರು' ಮಣಿಯುತ್ತಾರೆ. ದೈತ್ಯೆಯರು ಮತ್ತು ಅಣ್ಣ ರಾಕ್ಷಸ ಮುಂದಿನ ಕಾರ್ಯಕ್ಕೆ ನೆರವಾಗುತ್ತಾನೆ. ಐದು ಜನ ದೈತ್ಯೆಯರು ತಾವೇ ಅವನ ಹೆಂಡಂದಿರಾಗಲು ಬಯಸುತ್ತಾರೆ. ಅವರ ಸಲಹೆಯಂತೆ ಒಬ್ಬರ ನಂತರ ಒಬ್ಬರ ತಲೆಯನ್ನು ನಾಯಕ ಕಡಿದಾಗ ಬೆಳ್ಳಿಕಟ್ಟೆ, ಚಿನ್ನದಗಿಡ, ನವರತ್ನದಕಾಯಿ, ಪಂಚವರ್ಣದ ಗಿಳಿಗಳಾಗುತ್ತವೆ. ಐದನೆಯವಳನ್ನು ಕಡಿದಾಗ ಎಲ್ಲರೂ ಜೀವಂತರಾಗುತ್ತಾರೆ. ನಾಯಕ ಎಪ್ಪತ್ತೇಳು ಹೆಡೆಯ ಮಹಾಶೇಷನಿಂದ ಪುಡಿ ಪುಡಿಯಾದಾಗ ರಸಸಿದ್ಧಿ ಬಲ್ಲ ಅವನ ಹೆಂಡಂದಿರು ಎಲವು ಒಟ್ಟುಗೂಡಿಸಿ, ಚರ್ಮ ಜೀವ ಕೂಡಿಸುತ್ತಾರೆ. ಹೀಗೆ ಒಂದರ ನಂತರ ಒಂದು ಅದ್ಭುತ ಘಟನೆಗಳು ನಡೆದು ಕಥೆಯನ್ನು ಅಲೌಕಿಕ ಲೋಕಕ್ಕೆ ಒಯ್ಯುತ್ತವೆ. ಕೊನೆಯಲ್ಲಿ ಅಣ್ಣಂದಿರ ಮೋಸ ಇತ್ಯಾದಿ ಲೌಕಿಕ ಘಟನೆಗಳು ನಡೆಯುತ್ತವೆ. ನಾಯಕ ಗೆಲ್ಲುತ್ತಾನೆ. ಕಥೆ ಮಾನವ ಲೋಕದಲ್ಲಿ ಮುಗಿಯುತ್ತದೆ. ಇಲ್ಲಿ ನಾಯಕ ಮಾನವನೇ ಆಗಿರುವ ಕಾರಣ ಈ ಕತೆಯನ್ನು ಮಾನವ ವಿಭಾಗದಲ್ಲಿ ಸೇರಿಸಲಾಗಿದೆ.

ಅತಿಮಾನವರು ಈ ವಿಭಾಗದ ಕತೆಯಲ್ಲಿಯ ನಾಯಕರಲ್ಲಿ ಕೆಲವರು ಅತಿಮಾನವಾಂಶವನ್ನು ಹೊಂದಿರುವವರು, ಮತ್ತೆ ಕೆಲವರು ಅತಿಮಾನವರು. ಅತಿಮಾನ ವಾಂಶವನ್ನು ಹೊಂದಿರುವವರು ಹಾಗೂ ಅತಿಮಾನವರು ಸಾಮಾನ್ಯ ಮಾನವರಿಗಿಂತ ಬೇರೆಯಾಗಿರುತ್ತಾರೆ. ಆದರೆ ಇವರು ರಾಕ್ಷಸರಲ್ಲ. ರಾಕ್ಷಸ ಮತ್ತು ದೆವ್ವಗಳಿಗಿಂಥ ಭಿನ್ನರು. ಅತಿ ಮಾನವರ ಗುಂಪಿನಲ್ಲಿ ಅಪ್ಸರೆಯರು,ರಾಕ್ಷಸರರು, ದೆವ್ವಗಳು ಸೇರುತ್ತವೆ.

ಈ ಸಂಗ್ರಹದ ಕತೆಗಳಲ್ಲಿ, ಅತಿಮಾನವರ ಎರಡು ವರ್ಗಗಳು ಕಂಡುಬರುತ್ತವೆ. ಒಂದು ಮೂಲತಃ ಅವರು ಮಾನವರೇ ಆಗಿದ್ದು ಮಾನವರ ಎಲ್ಲ ಗುಣಗಳನ್ನು ಹೊಂದಿದ್ದರೂ ಒಂದು ಅಥವಾ ಹೆಚ್ಚು ಅದ್ಭುತ ಶಕ್ತಿಯನ್ನು ಸ್ವಯಂ ಹೊಂದಿರುತ್ತಾರೆ. ಇವರು ಇತರ ಅದ್ಭುತ ಶಕ್ತಿ ಮಂತ್ರ ಮಾಟದ ವಸ್ತುಗಳ ಸಹಾಯಿತರಾಗಿದ್ದರೂ ಅದಕ್ಕಿಂತ ಹೆಚ್ಚಿನದಾಗಿ ಅತಿ ಮಾನವರ ಅಂಶವು ಸ್ವತಃ ಅವರಲ್ಲಿರುತ್ತದೆ. ಈ ಗುಂಪಿಗೆ ಈ ಕೆಳಗಿನ ಕತೆಗಳು ಸೇರುತ್ತವೆ.

೫೯. ಕೆಂಪು ಹರಿಗೆ ಸೊಪ್ಪು

ಈ ಕತೆಯಲ್ಲಿ ಮೊಮ್ಮಗಳು ಮಾತು ಬರದ ಮತ್ತು ಕೈಕಾಲು ಇಲ್ಲದವನಿಗೆ ಎಣ್ಣೆ ತಿಕ್ಕಿ ಅವನನ್ನು ಗುಣಪಡಿಸುತ್ತಾಳೆ. ಇದು ಅವಳಲ್ಲಿಯ ಅತಿಮಾನವ ಶಕ್ತಿಯಿಂದ ಸಾಧ್ಯವಾಗುತ್ತದೆ.

೬೦. ಅಚ್ಚ ಮುತ್ತೈದೆ

ಕೆಂಪು ಹರಿಗೆ ಸೊಪ್ಪು ಮತ್ತು ಅಚ್ಚ ಮುತ್ತಯ್ದೆ ಈ ಕತೆಗಳಲ್ಲಿಯ ಪ್ರಧಾನ ಸ್ತ್ರೀ ಪಾತ್ರಗಳು ಅತಿಮಾನವರಂತಹ ಶಕ್ತಿಯನ್ನು ಸ್ವತಃ ಹೊಂದಿರುತ್ತಾರೆ. ಕತೆಯ ತುಂಬ ಸಾಮಾನ್ಯ ಸ್ತ್ರೀಯಂತೆ ಇವರ ವರ್ತನೆ ಇದ್ದರೂ ಮಲಗಿದ ಕೂಸು, ಹೆಣ ಇವುಗಳನ್ನು ಮುಟ್ಟುತ್ತಲೇ ಅವು ತರುಣರಾಗುವ ಅಂಶ ಅವರಲ್ಲಿದ್ದ ಅತಿಮಾನವ ಗುಣವನ್ನು ತೋರಿಸುತ್ತದೆ. ಆದರೆ ಇವರು ಮಾಯಾವಿಗಳಲ್ಲ. ರಾಕ್ಷಸರಲ್ಲ ದೆವ್ವಗಳಲ್ಲ.

ಈ ಮೇಲಿನ ಎರಡೂ ಕತೆಗಳಲ್ಲಿಯ ಪ್ರಧಾನ ಪಾತ್ರಗಳಲ್ಲಿ ಕಂಡುಬರುವ ಅತಿಮಾನವ ಅಂಶ ಒಂದೇ ಬಗೆಯದು. ಇವೆರಡು ಕತೆಗಳು ಒಂದೇ ಮೂಲದ ಕತೆಗಳೆಂಬುದನ್ನು ಕಂಡುಕೊಳ್ಳಲು ಇದು ಸಹಾಯವಾಗುತ್ತದೆಯಲ್ಲದೆ ಈ ಎರಡು ಕತೆಗಳ ವಿಭಿನ್ನ ಕುತೂಹಲಕಾರಿಯಾದ ಬೆಳವಣಿಗೆಯ ಬಗೆಯನ್ನು ಪ್ರತ್ಯೇಕವಾಗಿ ಗಮನಿಸುವದು ಸಾಧ್ಯವಾಗುತ್ತದೆ.

೬೧. ಸನ್ಯಾಸಿಯ ಕತೆ

ಸಾಮಾನ್ಯವಾಗಿ ಜನಪದ ಕತೆಗಳಲ್ಲಿ ದಯ್ವ, ರಾಕ್ಷಸರ ಜೀವವು ಗಿಳಿಯಲ್ಲಿ ಮೀನದಲ್ಲಿ ಇರುತ್ತದೆ. ಆದರೆ ಇಲ್ಲಿ ಸಂನ್ಯಾಸಿಯ ಜೀವ ಗಿಳಿಯಲ್ಲಿರುತ್ತದೆ. ಓಗೆ ಮಾನವರಾಗಿದ್ದರೂ ಅತಿಮಾನವರ ಅಂಶಗಳು ಇವರಲ್ಲಿವೆ. ಇದಲ್ಲದೆ ಇಲ್ಲಿ ತನ್ನ ಚಿಕ್ಕ ತಾಯಿ ಮತ್ತು ತಂದೆಯಂದಿರನ್ನು ರಕ್ಷಿಸಿದ ನಾಯಕ ಸ್ವತಃ ದೇವರಾಗಿದ್ದಾನೆ.

೬.೨. ಬಿದಿರ ಚದುರೆ

ಅತಿ ಮಾನವರ ಎರಡನೆಯ ಗುಂಪಿನಲ್ಲಿ ಬಿದಿರ ಚದುರೆಯ ಕತೆಯನ್ನು ಸೇರಿಸಬಹುದಾಗಿದೆ. ಇವಳು ಮೂಲತಃ ಮಾನವಳಲ್ಲ. ರೂಪ ಬದಲಿಸ ಬಲ್ಲವಳು. ಒಂದು ಬಗೆಯ ಅಪ್ಸರೆ, ಮಾನವಳಂತೆ ಬಾಳಲು ಬಂದವಳು.

೬.೩. ರಾಕ್ಷಸನ ಕತೆ

ಇದು ಈ ಎರಡನೆಯ ಗುಂಪಿಗೆ ಸೇರುತ್ತದೆ. ಈ ಕತೆ ಏಳು ಜನ ಅಣ್ಣತಮ್ಮಂದಿರು ಎಂಬ ಹೆಸರಿನಲ್ಲಿಯೂ ಪರಿಚಿತವಾಗಿದೆ. ಆದರೆ ಈ ಕತೆಯ ನಾಯಕ ಪಾತ್ರವು ಒಬ್ಬ ರಾಕ್ಷಸ. ಅಣ್ಣ–ತಮ್ಮಂದಿರನ್ನು ತಂಗಿಯನ್ನು ಈತ ಪೀಡಿಸುತ್ತಾನೆ. ಪೀಡೆಗೊಳ ಗಾದವರು ಉಪನಾಯಕರ ಸ್ಥಾನದಲ್ಲಿರುತ್ತಾರೆ.

ಪರಿವಿಡಿ

೧

ಹಿಟ್ಟುಂಬೆ

ಒಂದು ಊರಿನಲ್ಲಿ ತಾಯಿ ಮಗ ಇದ್ದರು. ತಾಯಿಯ ತವರು ಮನೆಯವರು ಬಡವರಾಗಿದ್ದರು. ಅವರ ಮನೆಯಲ್ಲಿ ಹಾಲು ಕರೆಯುವ ದನಗಳು ಇದ್ದಿರಲಿಲ್ಲ, ಆದ್ದರಿಂದ ಅವರ ಮನೆಯಲ್ಲಿ ಹಾಲು ಮಜ್ಜಿಗೆಯಿದ್ದಿರಲಿಲ್ಲ. ಅಬ್ಬೆ ತನ್ನ ಮಗನನ್ನು ಕರೆದು "ಮಾಣೀ ನಿನ್ನ ಅಜ್ಜನ ಮನೆಯಲ್ಲಿ ಹಾಲು ಕೊಡುವ ದನಗಳಿಲ್ಲ. ಒಂದು ಹನಿ ಮಜ್ಜಿಗೆಯನ್ನು ಕೊಡುತ್ತೇನೆ. ಅಜ್ಜನ ಮನೆಗೆ ಕೊಟ್ಟು ಬಾ" ಎಂದಳು. ಮಾಣಿಯು ಮಜ್ಜಿಗೆಯನ್ನು ಒಯ್ದನು. ಮಾಣಿಯ ಅಜ್ಜನ ಮನೆಯು ಗದ್ದೆಯ ಬಯಲಿನ ತುದಿಯಲ್ಲಿತ್ತು. ಮಾಣಿಗೆ ಉಚ್ಚೆ ಬಂತು. ಆತನು ಮಜ್ಜಿಗೆಯ ಗಿಂಡಿಯನ್ನು ಗದ್ದೆಯ ಬಯಲಿನ ಒಂದು ಬದಿಯಲಿಟ್ಟು ತಾನು ಉಚ್ಚೆ ಹೊಯ್ಯಲು ಕುಳಿತನು. ಆಗ ಗದ್ದೆಯಲ್ಲಿದ್ದ ಹತ್ತಿಪ್ಪತ್ತು ಹಿಟ್ಟುಂಬೆಗಳು ಒಟ್ಟಾಗಿ ಮಜ್ಜಿಗೆ ಗಿಂಡಿಯ ಬಳಿ ಬಂದು ಅವನು ಒಯ್ದ ಗಿಂಡಿಯಲ್ಲಿಯ ಮಜ್ಜಿಗೆಯನ್ನೆಲ್ಲ ಕುಡಿದುಬಿಟ್ಟವು. ಮಾಣಿಯು ಬರೀ ಗಿಂಡಿಯನ್ನು ಹಿಂದಕ್ಕೆ ತಂದನು. ಮಾರನೇಯ ದಿನ ಇವನು ಅಜ್ಜನ ಮನೆಗೆ ಮಜ್ಜಿಗೆಯನ್ನು ಒಯ್ದನು. ಗದ್ದೆ ಬಯಲಿನಲ್ಲಿ ಅದನ್ನು ಇಟ್ಟುಕೊಂಡು ತಾನು ಉಚ್ಚೆ ಹೊಯ್ಯಲು ಹೋದನು. ಈ ದಿನವೂ ಗದ್ದೆಯಲ್ಲಿದ್ದ ಹಿಟ್ಟುಂಬೆಗಳು ಒಟ್ಟಾಗಿ ಬಂದು ಗಿಂಡಿಯಲ್ಲಿಯ ಮಜ್ಜಿಗೆಯನ್ನು ಕುಡಿದವು. ಮೂರನೆಯ ದಿನವೂ ಇವನು ಅಜ್ಜನ ಮನೆಗೆ ಮಜ್ಜಿಗೆಯನ್ನು ಒಯ್ದನು. ಆ ದಿನವೂ ಹಿಟ್ಟುಂಬೆಯು ಮಜ್ಜಿಗೆಯನ್ನು ಕುಡಿದವು. ನಾಲ್ಕನೆಯ ದಿನ ಅಬ್ಬೆಯು ಗಿಂಡಿ ತುಂಬ ಮಜ್ಜಿಗೆ ತುಂಬಿ ಮಾಣಿಯ ಕೈಗೆ ಕೊಟ್ಟಳು. ಆಗ ಮಾಣಿಯು "ಅಬ್ಬೆ ನಾನು ಗದ್ದೆಯಲ್ಲಿ ಮಜ್ಜಿಗೆ ಗಿಂಡಿ ಇಟ್ಟುಕೊಂಡು ಉಚ್ಚೆ ಹೊಯ್ಯಲು ಕುಳಿತುಕೊಳ್ಳುತ್ತೇನೆ. ಆಗ ಯಾರೋ ಬಂದು ಮಜ್ಜಿಗೆಯನ್ನು ಕುಡಿದು ಬಿಡುತ್ತಾರೆ. ನಾನು ಈ ಹೊತ್ತು ಮಜ್ಜಿಗೆಯನ್ನು ಒಯ್ಯುವುದಿಲ್ಲ" ಎಂದನು. ಆಗ ಅಬ್ಬೆ "ಅವರನ್ನು ಸುಮ್ಮನೆ ಬಿಡಬಾರದು ಈ ಹೊತ್ತು ಅಲ್ಲಿಗೆ ಯಾರು ಬರುತ್ತಾರೆ ನೋಡು"ಎಂದಳು. ಮಾಣಿಯು ಮಜ್ಜಿಗೆಯನ್ನೊಯ್ದು ಗದ್ದೆ ಬಯಲಲ್ಲಿಟ್ಟು ಉಚ್ಚೆ ಹೊಯ್ಯಲು ಬದಿಗೆ ಹೋದನು. ಅವನು ಅಲ್ಲಿಂದಲೇ

ಮಜ್ಜಿಗೆಯ ಗಿಂಡಿಯ ಕಡೆ ನೋಡುತ್ತಿದ್ದನು. ಆಗ ಒಂದು ಹಿಟ್ಟುಂಬೆ ಮಜ್ಜಿಗೆಯನ್ನು ಕುಡಿಯಲು ಗಿಂಡಿಯ ಬಳಿ ಬಂದಿತು. ಮಾಣಿ ಇದನ್ನು ನೋಡಿದನು. ತಡಮಾಡಲಿಲ್ಲ. ಓಡಿ ಹೋಗಿ ಹಿಟ್ಟುಂಬೆಯ ಬೆನ್ನಿಗೆ ಗುದ್ದಿದನು. "ಹಿಟ್ಟುಂಬೆ ಹಿಟ್ಟುಂಬೆ ಸತ್ತೆಯಾ?" ಎಂದು ಕೇಳಿದನು. ಆಗ ಹಿಟ್ಟುಂಬೆ "ಮಜ್ಜಿಗೆಯನ್ನು ಕುಡಿದೆ, ಬೆನ್ನಿಗೆ ಗುದ್ದಿಸಿಕೊಂಡೆ." ಎಂದಿತು. ಮಾಣಿಗೆ ಅದರ ಮಾತನ್ನು ಕೇಳಿ ಸಿಟ್ಟು ಬಂದಿತು. ಅವನು ಹಿಟ್ಟುಂಬೆಯನ್ನು ಮನೆಗೊಯ್ದು ಗೊಜಗುಡುವ ಬಿಸಿ ಎಣ್ಣೆಯಲ್ಲಿ ಹಾಕಿದನು "ಹಿಟ್ಟುಂಬೆ ಹಿಟ್ಟುಂಬೆ ಸತ್ತೆಯಾ?" ಎಂದು ಕೇಳಿದನು. ಆಗ ಹಿಟ್ಟುಂಬೆಯು "ಮಜ್ಜಿಗೆಯನ್ನು ಕುಡಿದೆ, ಬೆನ್ನಿಗೆ ಗುದ್ದಿಸಿಕೊಂಡೆ ಎಣ್ಣೆ ಹಚ್ಚಿಸಿಕೊಂಡೆ" ಎಂದಿತು. ಮಾಣಿಗೆ ಮತ್ತಷ್ಟು ಸಿಟ್ಟು ಬಂತು. ಮಾಣಿಯು ಹಿಟ್ಟುಂಬೆಯನ್ನು ಎಣ್ಣೆ ಪಾತ್ರೆಯಿಂದ ಎತ್ತಿ ಗೊಡಗುಡವ ನೀರಿನಲ್ಲಿ ಹಾಕಿದನು. "ಹಿಟ್ಟುಂಬೆ ಹಿಟ್ಟುಂಬೆ ಸತ್ತೆಯಾ?" ಎಂದು ಕೇಳಿದನು. ಆಗ ಹಿಟ್ಟುಂಬೆಯು "ಮಜ್ಜಿಗೆಯನ್ನು ಕುಡಿದೆ, ಬೆನ್ನಿಗೆ ಗುದ್ದಿಸಿಕೊಂಡೆ, ಎಣ್ಣೆಯನ್ನು ಹಚ್ಚಿಸಿಕೊಂಡೆ ಈಗ ಬಿಸಿನೀರಿನ ಸ್ನಾನ ಮಾಡುತ್ತೇನೆ" ಎಂದಿತು. ಮಾಣಿ ಅದನ್ನು ನೀರಿನ ಪಾತ್ರೆಯಿಂದ ತೆಗೆದು ಉಪ್ಪಿನ ಕಾಯಿಯ ಪಾತ್ರೆಯಲ್ಲಿ ಹಾಕಿದನು. "ಹಿಟ್ಟುಂಬೆ ಹಿಟ್ಟುಂಬೆ ಸತ್ತೆಯಾ"?ಎಂದು ಕೇಳಿದನು. ಆಗ ಹಿಟ್ಟುಂಬೆಯು "ಮಜ್ಜಿಗೆಯನ್ನು ಕುಡಿದೆ, ಬೆನ್ನಿಗೆ ಗುದ್ದಿಸಿಕೊಂಡೆ, ಎಣ್ಣೆಯನ್ನು ಹಚ್ಚಿಸಿಕೊಂಡೆ, ಬಿಸಿನೀರನ್ನು ಮಿಂದೆ, ಉಪ್ಪಿನಕಾಯಿಯನ್ನು ತೆಗೆಯುತ್ತಿದ್ದೇನೆ" ಎಂದಿತು. ಮಾಣಿ ಅದನ್ನು ಎತ್ತಿ ಒಲೆಯ ಮೇಲೆ ಬೇಯುತ್ತಿರುವ ಗಂಜಿ ಮಡಿಕೆಯಲ್ಲಿ ಎತ್ತಿ ಹಾಕಿದನು. ಹಿಟ್ಟುಂಬೆ ಹಿಟ್ಟುಂಬೆ ಸತ್ತೆಯಾ?" ಎಂದು ಕೇಳಿದನು. ಆಗ "ಹಿಟ್ಟುಂಬೆ ಮಜ್ಜಿಗೆಯನ್ನು ಕುಡಿದೆನು, ಬೆನ್ನಿಗೆ ಗುದ್ದಿಸಿಕೊಂಡೆನು, ಎಣ್ಣೆಯನ್ನು ಹಚ್ಚಿಸಿಕೊಂಡೆನು, ಬಿಸಿನೀರನ್ನು ಮಿಂದೆನು, ಉಪ್ಪಿನಕಾಯಿ ತೆಗೆದೆನು, ಈಗ ಗಂಜಿ ಉಣ್ಣುತ್ತಿದ್ದೇನೆ" ಎಂದಿತು. ಮಾಣಿ ಹಿಟ್ಟುಂಬೆಯನ್ನು ಗಂಜಿ ಮಡಕೆಯಿಂದ ಎತ್ತಿ ಬೊಂಡು ಹೊಯಗೆಯ ಮೇಲೆ ಚೆಲ್ಲಿದನು."ಹಿಟ್ಟುಂಬೆ ಹಿಟ್ಟುಂಬೆ ಸತ್ತೆಯಾ?"ಎಂದು ಕೇಳಿದನು. ಆಗ ಹಿಟ್ಟುಂಬೆಯು "ಮಜ್ಜಿಗೆಯನ್ನು ಕುಡಿದೆನು, ಬೆನ್ನಿಗೆ ಗುದ್ದಿಸಿಕೊಂಡೆನು, ಎಣ್ಣೆ ಹಚ್ಚಿಸಿಕೊಂಡೆನು, ಬಿಸಿನೀರನ್ನು ಮಿಂದೆನು, ಉಪ್ಪಿನ ಕಾಯಿಯನ್ನು ತಿಂದೆನು, ಗಂಜಿಯನ್ನು ಉಂಡೆನು, ಈಗ ಬೊಂಡ ಹೊಯಗೆಯ ಮೇಲೆ ಹುಡಿಯಾಟ ಆಡುತ್ತಿದ್ದೇನೆ" ಎಂದಿತು. ಮಾಣಿಗೆ ಸಿಟ್ಟನ್ನು ತಡೆಯಲಾಗಲಿಲ್ಲ ಹಿಟ್ಟುಂಬೆಯನ್ನು ಎತ್ತಿ ಸಮುದ್ರಕ್ಕೆ ಎಸೆದು ಬಿಟ್ಟನು. "ಹಿಟ್ಟುಂಬೆ ಹಿಟ್ಟುಂಬೆ ಸತ್ತೆಯಾ?" ಎಂದು ಕೇಳಿದನು. ಆಗ ಹಿಟ್ಟುಂಬೆ "ಮಜ್ಜಿಗೆಯನ್ನು ಕುಡಿದೆನು. ಬೆನ್ನಿಗೆ ಗುದ್ದಿಸಿಕೊಂಡೆನು, ಎಣ್ಣೆ ಹಚ್ಚಿಸಿಕೊಂಡೆನು, ಬಿಸಿನೀರನ್ನು ಮಿಂದೆನು, ಉಪ್ಪಿನ ಕಾಯಿಯನ್ನು ತೆಗೆದೆನು, ಗಂಜಿಯನ್ನು ಉಂಡೆನು, ಹುಡಿಯಾಟ ಆಡಿದೆನು ಈಗ ಸಮುದ್ರದಲ್ಲಿ ಸ್ನಾನ ಮಾಡುತ್ತಿದ್ದೇನೆ" ಎಂದಿತು. ಮಾಣಿಗೆ ಇನ್ನಷ್ಟು ಸಿಟ್ಟು ಬಂತು. ಹಿಟ್ಟುಂಬೆಯನ್ನು ಎತ್ತಿ ಬೆಂಕಿಗೆ ಎಸೆದನು.

"ಹಿಟ್ಟುಂಬೆ ಹಿಟ್ಟುಂಬೆ ಸತ್ತೆಯಾ?" ಎಂದು ಕೇಳಿದನು. ಆಗ ಹಿಟ್ಟುಂಬೆಯು "ಮಜ್ಜಿಗೆಯನ್ನು ಕುಡಿದ್ದೆನು, ಬೆನ್ನಿಗೆಗುದ್ದಿಸಿಕೊಂಡೆನು, ಎಣ್ಣೆಯನ್ನು ಹಚ್ಚಿಸಿಕೊಂಡೆನು, ಬಿಸಿನೀರನ್ನು ಮಿಂದೆನು, ಉಪ್ಪಿನಕಾಯಿಯನ್ನು ತೆಗೆದೆನು, ಗಂಜಿಯನ್ನು ಉಂಡೆನು, ಹುಡಿಯಾಟವನ್ನು ಆಡಿದೆನು, ಸಮುದ್ರ ಸ್ನಾನ ಮಾಡಿದೆನು, ಈಗ ಬೆಂಕಿಯಲ್ಲಿ ಬಿದ್ದು ಸತ್ತೆನು" ಎಂದಿತು. "ಹೀಗೆ ಬಾ ದಾರಿಗೆ ಈಗ ಸತ್ತೆಯಲ್ಲವೇ?" ಎಂದು ಸಂತೋಷದಿಂದ ನುಡಿದನು. ಅಂದಿನಿಂದ ಮಾಣಿಯು ಪ್ರತಿದಿನ ಅಜ್ಜನ ಮನೆಗೆ ಹೋಗಿ ಮಜ್ಜಿಗೆಯನ್ನು ಕೊಟ್ಟು ಬರುತ್ತಿದ್ದನು.

□□

೨

ಸೂಜ್ಯಯಕ್ಕ

ಒಂದೂರಿನಲ್ಲಿ ಸೂಜಿಯಕ್ಕ ಇದ್ದಳು. ಅವಳು ಊರಿನ ಜನರಿಗೆ ಉಪಕಾರ ಮಾಡುತ್ತಿದ್ದಳು. ಆ ಊರಿನಲ್ಲಿ ಒಬ್ಬ ರಾಕ್ಷಸನಿದ್ದನು. ಅವನು ಊರಿಗೆ ಉಪದ್ರವ ಕೊಡುತ್ತಿದ್ದನು. ಒಂದು ದಿನ ಸೂಜಿಯಕ್ಕ ಆ ರಾಕ್ಷಸನಿಗೆ ಬುದ್ಧಿ ಕಲಿಸಬೇಕೆಂದು ಅವನ ಊರಿಗೆ ಹೊರಟಳು. ಆ ದಾರಿಯಲ್ಲಿ ಕಂಬಳಿಹುಳಕ್ಕ ಎದುರಾದಳು.

"ಸೂಜಿಯಕ್ಕಾ ಸೂಜಿಯಕ್ಕಾ ಎಲ್ಲಿಗೆ ಹೊರಟೆ?" ಎಂದು ಅವಳು ಕೇಳಿದಳು. ಆಗ ಸೂಜಿಯಕ್ಕ "ನಾನು ರಾಕ್ಷಸನಿಗೆ ಬುದ್ಧಿ ಕಲಿಸಲು ಹೊರಟಿದ್ದೇನೆ" ಎಂದಳು. "ಸೂಜಿಯಕ್ಕಾ ಸೂಜಿಯಕ್ಕಾ ನಾನೂ ನಿನ್ನ ಜೊತೆ ಬರುತ್ತೇನೆ" ಎಂದಳು. ಕಂಬಳಿ ಹುಳಕ್ಕ.

ಸೂಜಿಯಕ್ಕ ಕಂಬಳಿಹುಳಕ್ಕನನ್ನು ತನ್ನ ಜೊತೆ ಕರೆದುಕೊಂಡಳು.

ಇಬ್ಬರೂ ಮುಂದೆ ನಡೆದರು. ದಾರಿಯಲ್ಲಿ ವಟಾಣಿ ಕಾಳಕ್ಕ ಎದುರಾದಳು."ಕಂಬಳಿ ಹುಳಕ್ಕಾ ಕಂಬಳಿಹುಳಕ್ಕಾ ಎಲ್ಲಿಗೆ ಹೋಗುತ್ತೀ?" ಎಂದು ವಟಾಣಿ ಕಾಳಕ್ಕ ಕೇಳಿದಳು. ನಾನು ರಾಕ್ಷಸನಿಗೆ ಬುದ್ಧಿ ಕಲಿಸಲು ಹೊರಟಿದ್ದೇನೆ" ಎಂದಳು ಕಂಬಳಿಹುಳಕ್ಕ. "ಕಂಬಳಿಹುಳಕ್ಕಾ ಕಂಬಳಿಹುಳಕ್ಕಾ ನಾನೂ ನಿನ್ನ ಜೊತೆ ಬರುತ್ತೇನೆ" ಎಂದಳು ವಟಾಣಿ ಕಾಳಕ್ಕ.

ಕಂಬಳಿಹುಳಕ್ಕ ವಟಾಣಿ ಕಾಳಕ್ಕನನ್ನು ತನ್ನ ಜೊತೆ ಕರೆದುಕೊಂಡಳು.

ಮೂವರೂ ಮುಂದೆ ನಡೆದರು. ದಾರಿಯಲ್ಲಿ ದೊಣ್ಣೆಯಕ್ಕ ಎದುರಾದಳು.

"ವಟಾಣಿ ಕಾಳಕ್ಕಾ ವಟಾಣಿ ಕಾಳಕ್ಕಾ ಎಲ್ಲಿಗೆ ಹೋಗುತ್ತೀ?" ಎಂದು ದೊಣ್ಣೆಯಕ್ಕ ಕೇಳಿದಳು.

ನಾನು ರಾಕ್ಷಸನಿಗೆ ಬುದ್ಧಿ ಕಲಿಸಲು ಹೊರಟಿದ್ದೇನೆ" ಎಂದಳು. ವ್ಟಟಾಣಿ ಕಾಳಕ್ಕ "ವಟಾಣಿ ಕಾಳಕ್ಕಾ ವಟಾಣಿ ಕಾಳಕ್ಕಾ ನಾನೂ ನಿನ್ನ ಜೊತೆ ಬರುತ್ತೇನೆ" ಎಂದಳು ದೊಣ್ಣೆಯಕ್ಕ.

ವಟಾಣಿ ಕಾಳಕ್ಕ ದೊಣ್ಣೆಯಕ್ಕನನ್ನು ತನ್ನ ಜೊತೆ ಕರೆದುಕೊಂಡಳು. ನಾಲ್ವರೂ ಮುಂದೆ ನಡೆದರು.

"ಹಿಟ್ಟುಂಬೆ ಹಿಟ್ಟುಂಬೆ ಸತ್ತೆಯಾ?" ಎಂದು ಕೇಳಿದನು. ಆಗ ಹಿಟ್ಟುಂಬೆಯು "ಮಜ್ಜಿಗೆಯನ್ನು ಕುಡಿದೆನ್ನು, ಬೆನ್ನಿಗೆಗುದ್ದಿಸಿಕೊಂಡೆನು, ಎಣ್ಣೆಯನ್ನು ಹಚ್ಚಿಸಿಕೊಂಡೆನು, ಬಿಸಿನೀರನ್ನು ಮಿಂದೆನು, ಉಪ್ಪಿನಕಾಯಿಯನ್ನು ತೆಗೆದೆನು, ಗಂಜಿಯನ್ನು ಉಂಡೆನು, ಹುಡಿಯಾಟವನ್ನು ಆಡಿದೆನು, ಸಮುದ್ರ ಸ್ನಾನ ಮಾಡಿದೆನು, ಈಗ ಬೆಂಕಿಯಲ್ಲಿ ಬಿದ್ದು ಸತ್ತೆನು" ಎಂದಿತು. "ಹೀಗೆ ಬಾ ದಾರಿಗೆ ಈಗ ಸತ್ತೆಯಲ್ಲವೇ?" ಎಂದು ಸಂತೋಷದಿಂದ ನುಡಿದನು. ಅಂದಿನಿಂದ ಮಾಣಿಯು ಪ್ರತಿದಿನ ಅಜ್ಜನ ಮನೆಗೆ ಹೋಗಿ ಮಜ್ಜಿಗೆಯನ್ನು ಕೊಟ್ಟು ಬರುತ್ತಿದ್ದನು.

□□

ದಾರಿಯಲ್ಲಿ ಸಗಣಿಯಕ್ಕ ಎದುರಾದಳು. "ದೊಣ್ಣೆಯಕ್ಕಾ, ದೊಣ್ಣೆಯಕ್ಕಾ, ಎಲ್ಲಿಗೆ ಹೋಗುತ್ತೀ?" ಎಂದು ಸಗಣಿಯಕ್ಕ ಕೇಳಿದಳು.

"ನಾನು ಸೂಜಿಯಕ್ಕನ ಜೊತೆ ರಾಕ್ಷಸನಿಗೆ ಬುದ್ಧಿ ಕಲಿಸಲು ಹೊರಟಿದ್ದೇನೆ" ಎಂದಳು ದೊಣ್ಣೆಯಕ್ಕ.

"ದೊಣ್ಣೆಯಕ್ಕಾ ದೊಣ್ಣೆಯಕ್ಕಾ ನಾನೂ ನಿನ್ನ ಜೊತೆ ಬರುತ್ತೇನೆ" ಎಂದಳು ಸಗಣಿಯಕ್ಕ. ದೊಣ್ಣೆಯಕ್ಕ ಸಗಣಿಯಕ್ಕನನ್ನು ತನ್ನ ಜೊತೆಗೆ ಕರೆದುಕೊಂಡಳು.

ಸೂಜಿಯಕ್ಕ, ಕಂಬಳಿಹುಳಕ್ಕ, ವಟಾಣಿಕಾಳಕ್ಕ, ದೊಣ್ಣೆಯಕ್ಕ, ಸಗಣಿಯಕ್ಕ ರಾಕ್ಷಸನ ಮನೆಗೆ ಹೋದರು.

ಸೂಜಿಯಕ್ಕ ಹೋಗಿ ರಾಕ್ಷಸನ ಹಸೆಯ ಮೇಲೆ ಕುಳಿತುಕೊಂಡಳು.

ಕಂಬಳಿಹುಳಕ್ಕ ಹೋಗಿ ರಾಕ್ಷಸನ ಎಣ್ಣೆ ತಟ್ಟೆಯಲ್ಲಿ ಕುಳಿತುಕೊಂಡಳು.

ವಟಾಣಿಕಾಳಕ್ಕ ಹೋಗಿ ಒಲೆಯಲ್ಲಿ ಕುಳಿತು ಕೊಂಡಳು.

ದೊಣ್ಣೆಯಕ್ಕ ಹೋಗಿ ಬಾಗಿಲ ಮೂಲೆಯಲ್ಲಿ ಕುಳಿತುಕೊಂಡಳು.

ಸಗಣಿಯಕ್ಕ ಹೋಗಿ ಬಾಗಿಲಲ್ಲಿ ಕುಳಿತುಕೊಂಡಳು. ಎಂದಿನಂತೆ ರಾಕ್ಷಸನು ಬಂದು ತನ್ನ ಹಾಸಿಗೆಯ ಮೇಲೆ ಮಲಗಿದನು.

ಆಗ ಸೂಜಿಯು ಅವನ ಮೈಗೆ ನಟ್ಟಿತು. ರಾಕ್ಷಸನು "ಅಯ್ಯಯ್ಯೋ" ಎನ್ನುತ್ತ ಎಣ್ಣೆಯ ತಟ್ಟೆಯ ಹತ್ತಿರ ಬಂದನು. ಗಾಯಕ್ಕೆ ಎಣ್ಣೆ ಹಚ್ಚಲೆಂದು ತಟ್ಟೆಯಲ್ಲಿ ಕೈ ಹಾಕಿದನು. ಆಗ ಎಣ್ಣೆಯಲ್ಲಿದ್ದ ಕಂಬಳಿ ಹುಳಕ್ಕ ರಾಕ್ಷಸನನ್ನು ಕಚ್ಚಿತು. ರಾಕ್ಷಸನು ಅಯ್ಯಯ್ಯೋ" ಎಂದು ಕೂಗಿದನು. ನೋವಾದ ಕೈಯನ್ನು ಕಾಸಿಕೊಳ್ಳಲೆಂದು ಅವನು ಒಲೆಯ ಹತ್ತಿರ ಬಂದನು. ಒಲೆಯಲ್ಲಿ ಬೆಂಕಿಯನ್ನು ಒಟ್ಟಿದನು. ಒಲೆಯಲ್ಲಿ ಕುಳಿತ್ತಿದ್ದ ವಟಾಣಿ ಕಾಳಕ್ಕ ಪಟ್ಟನೆ ಸಿಡಿದಳು. ಆಗ ಬಿಸಿಬೂದಿಯು ಅವನ ಕಣ್ಣಿಗೆ ಬಡಿಯಿತು. ಅವನು ಕೂಗುತ್ತ ಬಾಗಿಲ ಹತ್ತಿರ ಬಂದನು. ಬಾಗಿಲ ಮೂಲೆಯ ಬಳಿ ನಿಂತನು. ದೊಣ್ಣೆಯಕ್ಕ ಎದ್ದು ಬಂದು ಅವನ ಬೆನ್ನ ಮೇಲೆ ಪಟಪಟ ಬಡಿದಳು. ಅವನು ಹೊರಗೆ ಓಡಿದನು. ಬಾಗಿಲಲ್ಲಿ ಸಗಣಿಯಕ್ಕ ಇದ್ದಳು. ರಾಕ್ಷಸನು ಸಗಣಿಯಕ್ಕನ ಮೇಲೆ ಕಾಲಿಟ್ಟನು. ಅವನು ಜಾರಿ ಬಿದ್ದನು.

"ನನಗೆ ಈ ಮನೆ ಬೇಡ, ಈ ಊರು ಬೇಡ" ಎನ್ನುತ್ತ ಊರನ್ನು ಬಿಟ್ಟು ಓಡಿ ಹೋದನು. ಊರಿನ ಜನರು ಸುಖವಾಗಿ ಉಳಿದರು. ಸೂಜಿಯಕ್ಕ ಮತ್ತು ಅವಳ ಸಂಗಡಿಗರು ಒಗ್ಗಟ್ಟಿನಿಂದ ರಾಕ್ಷಸನನ್ನು ಓಡಿಸಿ ಊರಿಗೆ ಉಪಕಾರ ಮಾಡಿದರು.

□□

೩

ಚಿತ್ರಾಟೆ ಕಾಳಣ್ಣ

ಒಂದೂರಿನಲ್ಲಿ ಒಬ್ಬ ರೈತನಿದ್ದನು. ಅವನ ಹೆಸರು ರಾಮಣ್ಣ. ರಾಮಣ್ಣನ ಬಳಿ ಒಂದು ಎತ್ತಿನ ಜೋಡಿಯಿತ್ತು. ಈ ಜೋಡಿ ಬಹಳ ಬುದ್ಧಿವಂತವಾಗಿತ್ತು. ಇದು ನೇಗಿಲನ್ನು ಹಿಡಿಯುವವರು ಬಳಿಯಿಲ್ಲದಿದ್ದರೂ ತನ್ನ ಒಡೆಯನ ಗದ್ದೆಯನ್ನು ಹೂಡುತ್ತಿತ್ತು.

ಒಂದು ದಿನ ರಾಮಣ್ಣನು ತನ್ನ ಎತ್ತಿನ ಜೋಡಿಯೊಂದಿಗೆ ಗದ್ದೆಗೆ ಹೋದನು. ಜೋಡಿ ಎತ್ತುಗಳನ್ನು ನೊಗಕ್ಕೆ ಕಟ್ಟಿದನು. ಅವು ಹೂಡಲು ತೊಡಗಿದವು. ರಾಮಣ್ಣನು ಅವುಗಳನ್ನು ಗದ್ದೆಯಲ್ಲಿ ಬಿಟ್ಟು ಮನೆಗೆ ಬಂದನು.

ಆ ದಿನ ಆ ಊರಿನ ಅರಸು ಮತ್ತು ಪ್ರಧಾನಿ ತಿರುಗಾಡುತ್ತ ಈ ಗದ್ದೆಯ ಬಳಿ ಬಂದರು. ಎತ್ತಿನ ಜೋಡಿಗಳು ಗದ್ದೆಯನ್ನು ಹೂಡುತ್ತಿದ್ದವು. ಆದರೆ ಬಳಿಯಲ್ಲಿ ನೇಗಿಲನ್ನು ಹಿಡಿಯುವ ರೈತನು ಇರಲಿಲ್ಲ. ಎತ್ತುಗಳ ಜಾಣ್ಮೆಯನ್ನು ಕಂಡು ಅರಸನಿಗೆ ಅವುಗಳ ಮೇಲೆ ಬಹಳ ಪ್ರೀತಿ ಉಂಟಾಯಿತು. ಎತ್ತುಗಳನ್ನು ತಾನು ಪಡೆಯಬೇಕೆಂದು ಬಯಸಿದನು. ಹೂಡುತ್ತಿದ್ದ ಎತ್ತಿನ ಜೋಡಿಗಳನ್ನು ಬಿಡಿಸಿಕೊಂಡು ತನ್ನ ಮನೆಗೆ ಬಂದನು. ತನ್ನ ಮನೆಯ ಕೊಟ್ಟಿಗೆಯಲ್ಲಿ ಕಟ್ಟಿದನು.

ಇತ್ತ ರಾಮಣ್ಣನು ತನ್ನ ಗದ್ದೆಗೆ ಬಂದನು. ಗದ್ದೆಯಲ್ಲಿ ಅವನ ಎತ್ತುಗಳು ಇರಲಿಲ್ಲ. ಆಚೆ ಈಚೆಯ ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದವರ ಬಳಿ ಹೋಗಿ "ನನ್ನ ಎತ್ತುಗಳನ್ನು ಕಂಡಿದ್ದೀರಾ?" ಎಂದು ಕೇಳಿದನು. "ಈ ಊರ ಅರಸನು ಎತ್ತಿನ ಜೋಡಿಯನ್ನು ಬಿಡಿಸಿಕೊಂಡು ಒಯ್ದಿದ್ದಾನೆ" ಎಂದು ಬದಿಯಲ್ಲಿದ್ದ ರೈತರು ತಿಳಿಸಿದರು. ಈ ಸುದ್ದಿಯನ್ನು ಕೇಳಿ ರಾಮಣ್ಣನಿಗೆ ಬಹಳ ದುಃಖವಾಯಿತು. ರಾತ್ರಿ ಅವನಿಗೆ ನಿದ್ದೆ ಬರಲಿಲ್ಲ. ಎತ್ತುಗಳಿಲ್ಲದೆ ತನ್ನ ಕೈ ಮುರಿದಂತಾಯಿತೆಂದು ಅವನು ಚಿಂತೆಯಲ್ಲಿದ್ದನು.

ರಾಮಣ್ಣನು ಮಲಗುವ ಜಾಗದ ಮೂಲೆಯಲ್ಲಿ ಚಿತ್ರಾಟೆ ಕಾಳಣ್ಣ ಹೊಕ್ಕೊಂಡಿದ್ದನು. ಅವನು ರಾಮಣ್ಣನ ಬಾಡಿದ ಮುಖವನ್ನು ಕಂಡು "ರಾಮಣ್ಣಾ ಯಾಕೆ ಚಿಂತೆ ಯಲ್ಲಿರುವೆ? ನಿನಗೆ ಏನು ಆಪತ್ತು ಬಂತು?" ಎಂದು ಕೇಳಿದನು.

"ನಾನು ನನ್ನ ಗದ್ದೆಯಲ್ಲಿ ನನ್ನ ಎತ್ತುಗಳನ್ನು ಬಿಟ್ಟು ಬಂದಿದ್ದೆನು. ಅವು ಅಲ್ಲಿ ನನ್ನ ಗದ್ದೆಯನ್ನು ಹೂಡುತ್ತಿದ್ದವು. ಅವುಗಳನ್ನು ನಮ್ಮೂರ ಅರಸು ಬಿಡಿಸಿಕೊಂಡು ಒಯ್ದನಂತೆ ನನಗೆ ಅದೇ ಚಿಂತೆ" ಎಂದನು ರಾಮಣ್ಣ.

"ಚಿಂತೆ ಮಾಡಬೇಡ ನಿನ್ನ ಎತ್ತುಗಳನ್ನು ನಾನು ಬಿಡಿಸಿಕೊಂಡು ಬರುತ್ತೇನೆ" ಎಂದನು ಚಿತ್ರಾಟೆ ಕಾಳಣ್ಣ. "ಏನು? ನೀನು ನನ್ನ ಎತ್ತುಗಳನ್ನು ಬಿಡಿಸಿಕೊಂಡು ಬರುತ್ತೀಯಾ? ನಿನ್ನಿಂದ ಅದು ಸಾಧ್ಯವಿಲ್ಲ". ಎಂದನು ರಾಮಣ್ಣ.

"ರಾಮಣ್ಣಾ ಈ ಚಿತ್ರಾಟೆ ಕಾಳಣ್ಣನ ಶಕ್ತಿ ಎಷ್ಟು ಎಂಬುದು ನಿನಗೆ ಗೊತ್ತಿಲ್ಲ. ನಾಡದು ಬೆಳಗಾಗುವವರೆಗೆ ನಿನ್ನ ಎತ್ತುಗಳು ನಿನ್ನ ಕೊಟ್ಟಿಗೆಯಲ್ಲಿರುತ್ತವೆ ಎಂದು ತಿಳಿದುಕೋ" ಎಂದಿತು ಚಿತ್ರಾಟೆ ಕಾಳಣ್ಣ.

ಮರುದಿನ ರಾತ್ರಿ ಚಿತ್ರಾಟೆ ಕಾಳಣ್ಣ ಅರಸನ ಮನೆಗೆ ಹೊರಟಿತು. ದಾರಿಯ ಮೇಲೆ ಕಪ್ಪೆಯಣ್ಣ ಎದುರಾಯಿತು. "ಚಿತ್ರಾಟೆ ಕಾಳಣ್ಣಾ, ಚಿತ್ರಾಟೆ ಕಾಳಣ್ಣಾ ಎಲ್ಲಿಗೆ ಹೋಗುತ್ತೀ?" ಎಂದು ಕೇಳಿತು. ಕಪ್ಪೆಯಣ್ಣ "ಅರಸನ ಮನೆಗೆ ಹೋಗುತ್ತೇನೆ. ರಾಮಣ್ಣನ ಎತ್ತನ್ನು ತರುತ್ತೇನೆ" ಎಂದಿತು. ಚಿತ್ರಾಟೆ ಕಾಳಣ್ಣ. "ನಾನೂ ಬರಲೋ?" ಕೇಳಿತು ಕಪ್ಪೆಯಣ್ಣ. "ಹೂಂ ನೀನೂ ಬಾ," ಎಂದಿತು ಚಿತ್ರಾಟೆ ಕಾಳಣ್ಣ,

ಚಿತ್ರಾಟೆ ಕಾಳಣ್ಣ. ಕಪ್ಪೆಯಣ್ಣ ಜೊತೆಗೂಡಿ ಅರಸನ ಮನೆಗೆ ಹೋದವು. ಮುಂದೆ ಹೋಗುತ್ತಿರುವಾಗ ಹಾಂತೆಯಣ್ಣ ಎದುರಾಯಿತು. "ಚಿತ್ರಾಟೆ ಕಾಳಣ್ಣಾ ಚಿತ್ರಾಟೆ ಕಾಳಣ್ಣಾ ಎಲ್ಲಿಗೆ ಹೋಗುತ್ತೀ?" ಎಂದು ಹಾಂತೆಯಣ್ಣ ಕೇಳಿತು. "ಅರಸನ ಮನೆಗೆ ಹೋಗುತ್ತೇನೆ. ರಾಮಣ್ಣನ ಎತ್ತನ್ನು ತರುತ್ತೇವೆ" ಎಂದಿತು ಚಿತ್ರಾಟೆ ಕಾಳಣ್ಣ. "ನಾನೂ ಬರಲೋ?" ಕೇಳಿತು ಹಾಂತೆಯಣ್ಣ. "ಹೂಂ ನೀನೂ" ಬಾ ಎಂದಿತು ಚಿತ್ರಾಟೆ ಕಾಳಣ್ಣ.

ಚಿತ್ರಾಟೆ ಕಾಳಣ್ಣ. ಕಪ್ಪೆಯಣ್ಣ, ಹಾಂತೆಯಣ್ಣ ಜೊತೆಗೂಡಿ ಅರಸನ ಮನೆಗೆ ಹೋದವು. ಹೀಗೆ ಮುಂದೆ ಹೋಗುತ್ತಿರುವಾಗ ದೊಣ್ಣೆಯಣ್ಣ ಸಿಕ್ಕಿತು. "ಚಿತ್ರಾಟೆ ಕಾಳಣ್ಣಾ ಚಿತ್ರಾಟೆ ಕಾಳಣ್ಣಾ ಎಲ್ಲಿಗೆ ಹೋಗುತ್ತೀ?" ಕೇಳಿತು ದೊಣ್ಣೆಯಣ್ಣ. "ಅರಸನ ಮನೆಗೆ ಹೋಗುತ್ತೇನೆ. ರಾಮಣ್ಣನ ಎತ್ತನ್ನು ತರುತ್ತೇನೆ" ಎಂದಿತು. ಚಿತ್ರಾಟೆ ಕಾಳಣ್ಣ. "ನಾನು ಬರಲೋ?" ಕೇಳಿತು ದೊಣ್ಣೆಯಣ್ಣ. "ಹೂಂ ನೀನೂ ಬಾ" ಎಂದಿತು ಚಿತ್ರಾಟೆ ಕಾಳಣ್ಣ.

ಚಿತ್ರಾಟೆ ಕಾಳಣ್ಣ, ಕಪ್ಪೆಯಣ್ಣ ಹಾಂತೆಯಣ್ಣ, ದೊಣ್ಣೆಯಣ್ಣ ಜೊತೆಗೂಡಿ ಅರಸನ ಮನೆಗೆ ಹೋದವು. ದಾರಿಯಲ್ಲಿ ಹಾವಣ್ಣ ಎದುರಾಯಿತು. "ಚಿತ್ರಾಟೆ ಕಾಳಣ್ಣಾ ಚಿತ್ರಾಟೆ ಕಾಳಣ್ಣಾ ಎಲ್ಲಿಗೆ ಹೋಗುತ್ತೀ?" ಕೇಳಿತು ಹಾವಣ್ಣ."ಅರಸನ ಮನೆಗೆ ಹೋಗುತ್ತೇನೆ. ರಾಮಣ್ಣನ ಎತ್ತನ್ನು ತರುತ್ತೇನೆ" ಎಂದಿತು ಚಿತ್ರಾಟೆ ಕಾಳಣ್ಣ. "ನಾನು ಬರಲೋ?" ಕೇಳಿತು ಹಾವಣ್ಣ. "ಹೂಂ ನೀನೂ ಬಾ" ಎಂದಿತು ಚಿತ್ರಾಟೆ ಕಾಳಣ್ಣ.

ಚಿತ್ರಾಟೆ ಕಾಳಣ್ಣ. ಕಪ್ಪೆಯಣ್ಣ, ಹಾಂತೆಯಣ್ಣ, ದೊಣ್ಣೆಯಣ್ಣ, ಹಾವಣ್ಣ ಜೊತೆಗೂಡಿ ಅರಸನ ಮನೆಗೆ ಹೋದವು. ದಾರಿಯಲ್ಲಿ ಕಟ್ಟಿರುವೆಯ ಸಾಲು ಎದುರಾಯಿತು. "ಚಿತ್ರಾಟೆ ಕಾಳಣ್ಣಾ ಚಿತ್ರಾಟೆ ಕಾಳಣ್ಣಾ ಎಲ್ಲಿಗೆ ಹೋಗುತ್ತೀ?" ಕೇಳಿತು ಕಟ್ಟಿರುವೆಯ ಸಾಲು ."ಅರಸನ ಮನೆಗೆ ಹೋಗುತ್ತೇನೆ. ರಾಮಣ್ಣನ ಎತ್ತನ್ನು ತರುತ್ತೇನೆ" ಎಂದಿತು. ಚಿತ್ರಾಟೆ ಕಾಳಣ್ಣ. "ನಾನೂ ಬರಲೋ?" ಕೇಳಿತು ಕಟ್ಟಿರುವೆಯ ಸಾಲು. "ಹೂಂ ನೀನೂ ಬಾ" ಎಂದಿತು ಚಿತ್ರಾಟೆ ಕಾಳಣ್ಣ.

ಚಿತ್ರಾಟೆ ಕಾಳಣ್ಣ, ಕಪ್ಪೆಯಣ್ಣ, ಹಾಂತೆಯಣ್ಣ, ದೊಣ್ಣೆಯಣ್ಣ, ಹಾವಣ್ಣ, ಕಟ್ಟಿರುವೆಯ ಸಾಲು ಎಲ್ಲರೂ ಜೊತೆಗೂಡಿ ಅರಸನ ಮನೆಗೆ ಹೋದವು. ಅರಸನ ಮನೆಯಲ್ಲಿ ಯಾರ್‍ಯಾರು ಏನೇನು ಕೆಲಸ ಮಾಡಬೇಕೆಂಬುದನ್ನು ಜೊತೆಗೆ ಬಂದವರಿಗೆ ಚಿತ್ರಾಟೆ ಕಾಳಣ್ಣ ಮೊದಲೇ ತಿಳಿಸಿಕೊಟ್ಟಿತ್ತು. ಕಪ್ಪೆಯಣ್ಣ ಒಲೆಯ ಬೂದಿಯಲ್ಲಿ ಕುಳಿತಿತು. ದೊಣ್ಣೆಯಣ್ಣ ಕದದ ಮೂಲೆಯಲ್ಲಿ ಕುಳಿತಿತ್ತು. ಹಾಂತೆಯಣ್ಣ ದೀಪದ ಗುಡ್ಡಣದ ಕೆಳಗೆ ಕುಳಿತಿತ್ತು. ಹಾವಣ್ಣ ಅರಸನ ಮಂಚದ ಕೆಳಗೆ ಕುಳಿತಿತ್ತು. ಕಟ್ಟಿರುವೆಗಳ ಸಾಲು ತೆಂಗಿನಮರದ ಕೆಳಗೆ ಉಳಿಯಿತು.

ಸಂಜೆ ಅರಸನ ಹೆಂಡತಿ ಕದವನ್ನು ಮುಚ್ಚಲು ಬಂದಳು. ಕೂಡಲೇ ದೊಣ್ಣೆಯಣ್ಣ ಅವಳಿಗೆ ಬಡಾಬಡಾ ಬಡಿಯಿತು. ಅವಳು ಹೆದರಿ ದೀಪ ದೊಡ್ಡದು ಮಾಡಿದಳು. ಹಾಂತೆಯಣ್ಣ ಪಟಕ್ಕನೆ ದೀಪವನ್ನು ನಂದಿಸಿತು. ಅಯ್ಯೋ ಇದೇನು ಬಂತು ಕಾಟ?. ಯಾರ ಕಾಟ ಇದು? ಅವಳು ಕೂಗಿದಳು. ಅರಸನು ಗದ್ದಲವನ್ನು ಕೇಳಿ ಎದ್ದು ಕುಳಿತನು. ಮಂಚದಿಂದ ಕೆಳಗಿಳಿಯಲೆಂದು ಕೆಳಗೆ ಕಾಲಿಟ್ಟನು. ಹಾವಣ್ಣ ಅವನ ಕಾಲನ್ನು ಸುತ್ತು ಹಾಕಿತು. ಅವನು "ಅಯ್ಯಯ್ಯೋ" ಎಂದು ಕೂಗಿದನು. ಅವನ ಹೆಂಡತಿ ಮತ್ತೆ ದೀಪ ಹಚ್ಚಿದಳು. ಹಾಂತೆಯಣ್ಣ ಪಟಕ್ಕನೆ ದೀಪವನ್ನು ನಂದಿಸಿತು.

ಅರಸನು ಕಾಲನ್ನು ಕೊಡವಿ ಕೊಡವಿ ಹಾವಿನಿಂದ ಬಿಡಿಸಿಕೊಂಡನು. ಗಂಡಹೆಂಡತಿ ಮಲಗಿದರು. ನಡುರಾತ್ರಿಯಲ್ಲಿ ಅರಸನಿಗೆ ಮೂತ್ರಕ್ಕೆ ಹೋಗಬೇಕೆನಿಸಿತು. ಎದ್ದು ಹೊರಗೆ ಬಂದನು. ಕಟ್ಟಿರುವೆಗಳ ರಾಶಿಯೆಲ್ಲ ಒಟ್ಟುಗೂಡಿ ಅವನ ಕಾಲನ್ನು ಕಚ್ಚಿದವು. ಇರುವೆಗಳನ್ನು ಕೊಡವಿಕೊಳ್ಳುತ್ತ ಒಳಕ್ಕೆ ಬಂದನು. ಬಾಗಿಲಲ್ಲಿ ದೊಣ್ಣೆಯಣ್ಣನು ಅರಸನ ತಲೆಯ ಮೇಲೆ ಪೆಟ್ಟುಕೊಟ್ಟನು. ನೋವನ್ನು ತಡೆಯಲಾರದೆ ಅರಸನು ಮಂಚದ ಮೇಲೆ ಬಿದ್ದುಕೊಂಡನು.

ಬೆಳಗಾಗುತ್ತ ಬಂತು ಒಲೆಯಲ್ಲಿ ಬೆಂಕಿ ಮಾಡಲೆಂದು ಅರಸನ ಹೆಂಡತಿ ಒಲೆಯ ಬಳಿ ಹೋದಳು. ಒಲೆಯ ಬೂದಿಯನ್ನು ತೆಗೆಯಲು ಮುಖ ಕೆಳಗೆ ಮಾಡಿ ಕುಳಿತಳು. ಬೂದಿಯಲ್ಲಿ ಕುಳಿತಿದ್ದ ಕಪ್ಪೆಯಣ್ಣ ಒಲೆಯಲ್ಲಿದ್ದ ಬೂದಿಯನ್ನು ಅರಸನ ಹೆಂಡತಿಯ ಮುಖಕ್ಕೆ ಬುಸಕ್ ಬುಸಕ್ ತೋಕಿತು. ಬೂದಿ ಕಣ್ಣಿನೊಳಗೆ ಹೊಕ್ಕಿತು. ಅವಳಿಗೆ ತನ್ನ ಕಣ್ಣನ್ನು ತೆರೆಯಲು ಆಗಲಿಲ್ಲ.

ಅರಸನು ಹೆಂಡತಿಯ ಸ್ಥಿತಿಯನ್ನು ಕಂಡು ಯಾಕೆ ಹೀಗೆ ಆಗುತ್ತದೆ ಯಾರು ಹೀಗೆ ಮಾಡಿದವರು ತಿಳಿಯುವುದಿಲ್ಲ. ಎಂದು ಹಲುಬಲು ಸುರು ಮಾಡಿದನು. ಆಗ ಮೂಲೆಯಲ್ಲಿದ್ದ ಚಿತ್ರಾಟೆಕಾಳಣ್ಣ "ಅರಸಾ ಅರಸಾ. ರಾಮಣ್ಣನ ಮನೆ ಎತ್ತು ಬೇಕೋ ಈ ಕಾಟ ಬೇಕೋ" ಎಂದಿತು.

ಆಗ ಅರಸು "ಮಹಾರಾಯಾ ನನಗೆ ರಾಮಣ್ಣನ ಎತ್ತೂ ಬೇಡ, ನಿನ್ನ ಕಾಟವೂ ಬೇಡ. ನಮ್ಮ ಜೀವಕ್ಕೆ ಕುತ್ತು ಬರದಿದ್ದರೆ ಸಾಕು. ರಾಮಣ್ಣನ ಮನೆಯ ಎತ್ತಿನ ಜೋಡಿ ಜೊತೆಗೆ ನಮ್ಮ ಮನೆಯ ನಾಲ್ಕು ಎತ್ತುಗಳನ್ನು ಕೊಡುತ್ತೇನೆ ತೆಗೆದುಕೊಂಡು ಹೋಗಿರಿ. ಇನ್ನು ಮುಂದೆ ರಾಮಣ್ಣನ ಮನೆಯ ಎತ್ತಿನ ಸುದ್ದಿಗೆ ಬರುವುದಿಲ್ಲ." ಎಂದನು. ಅರಸನು ಕೊಟ್ಟಿಗೆಗೆ ಹೋಗಿ ರಾಮಣ್ಣನ ಎರಡು ಎತ್ತುಗಳನ್ನು ಬಿಟ್ಟನು. ಜೊತೆಗೆ ತನ್ನ ನಾಲ್ಕು ಎತ್ತುಗಳನ್ನು ಬಿಟ್ಟನು.

ಚಿತ್ರಾಟೆ ಕಾಳಣ್ಣ ತನ್ನ ಸಂಗಡಿಗರನ್ನು ಕರೆದುಕೊಂಡು ಆರೂ ಎತ್ತುಗಳನ್ನು ಹೊಡೆದುಕೊಂಡು ರಾಮಣ್ಣನ ಮನೆಯ ಕೊಟ್ಟಿಗೆಯಲ್ಲಿ ಕಟ್ಟಿತು. ಬೆಳಿಗ್ಗೆ ರಾಮಣ್ಣನ ಹೆಂಡತಿ ಆಕಳ ಹಾಲನ್ನು ಕರೆಯಲು ಕೊಟ್ಟಿಗೆಗೆ ಬಂದಳು. "ನಮ್ಮ ಎತ್ತುಗಳು ಬಂದಿವೆ ಅವಕ್ಕೆ ಹುಲ್ಲು ಹಾಕಿ ಬನ್ನಿ" ಎಂದು ಗಂಡನನ್ನು ಕೂಗಿ ಕರೆದಳು.

ರಾಮಣ್ಣ ಓಡಿ ಬಂದು ಕೊಟ್ಟಿಗೆಯೊಳಗೆ ಹೊಕ್ಕನು. ಅಲ್ಲಿ ಅವನ ಎತ್ತಿನ ಜೋಡಿಯ ಜೊತೆಗೆ ಮತ್ತೆ ನಾಲ್ಕು ಗಟ್ಟಿಮುಟ್ಟಾದ ಎತ್ತುಗಳಿದ್ದವು. ಇವುಗಳನ್ನು ನೋಡಿ ರಾಮಣ್ಣನಿಗೆ ಖುಷಿಯಾಯಿತು. ಈ ಎತ್ತುಗಳನ್ನು ತಂದವರು ಯಾರಿರಬಹುದು? ಎಂದುಕೊಳ್ಳುತ್ತಿರುವಾಗ ಚಿತ್ರಾಟೆ ಕಾಳಣ್ಣ ಮತ್ತು ಅವನ ಸಂಗಡಿಗರು ಬಂದರು. ಇದು ಚಿತ್ರಾಟೆ ಕಾಳಣ್ಣನ ಕೆಲಸವೆಂಬುದು ಅವನಿಗೆ ತಿಳಿಯಿತು.

"ನಾಳೆ ನಮ್ಮ ಮನೆಗೆ ಊಟಕ್ಕೆ ಬನ್ನಿರಿ. ನಿಮಗೆಲ್ಲರಿಗೂ ಪಾಯಸದ ಊಟ ಬಡಿಸುತ್ತೇನೆ" ಎಂದನು ರಾಮಣ್ಣ. ಮರುದಿನ ಚಿತ್ರಾಟೆ ಕಾಳಣ್ಣ ಮತ್ತು ಅವನ ಸಂಗಡಿಗರು ರಾಮಣ್ಣನ ಮನೆಗೆ ಹೋದರು. ಪಾಯಸದ ಊಟ ಉಂಡು ಸಂತೋಷಪಟ್ಟರು.

□□

೪

ಹೇನು

ಒಂದಲ್ಲಾ ಒಂದು ಊರಿನಲ್ಲಿ ಗಂಡ ಹೆಂಡತಿ ಇದ್ದರು. ಗಂಡನ ಹೆಸರು ಬಟ್ಟ. ಹೆಂಡತಿಯ ಹೆಸರು ಬಡತಿ. ಅವಳ ತಲೆಯಲ್ಲಿ ತುಂಬಾ ಹೇನುಗಳು ಇದ್ದವು. ಒಂದು ದಿನ ಬಟ್ಟನ ಹೆಂಡತಿ ನೆಲದ ಮೇಲೆ ಕುಳಿತುಕೊಂಡು ಗಟ್ಟಿಯಾಗಿ ತಲೆ ಬಾಚುತ್ತಾ ಇದ್ದಳು. ಬಾಚುವಾಗ ತುಂಬಾ ಹೇನುಗಳು ಕೆಳಗೆ ಬಿದ್ದವು. ಅವಳು ಎಲ್ಲಾ ಹೇನನ್ನೂ ಒರೆದು ಹಾಕಿದಳು. ಅದರಲ್ಲಿ ಒಂದು ಹೇನು ತಪ್ಪಿಸಿಕೊಂಡು ಓಡಿ ಹೋಯಿತು. ಹೋಗುವಾಗ ಒಂದು ಗದ್ದೆ ಸಿಕ್ಕಿತು. ಆ ಗದ್ದೆಯಲ್ಲಿ ಒಂದು ಬೆಳ್ಳಕ್ಕಿ ಕಂಡಿತು. ಅದು ಹೇನಿನ ಹತ್ತಿರ "ಹೇನಕ್ಕಾ ಹೇನಕ್ಕಾ ಎಲ್ಲಿಗೆ ಹೋಗುತ್ತೀಯಾ?"ಎಂದು ಕೇಳಿತು. ಆಗ ಹೇನು "ಬಟ್ಟನ ಹೆಂಡತಿಯ ತಲೆಯಲ್ಲಿದ್ದೆ. ಅವಳು ತಲೆಯನ್ನು ಬಾಚಿದಳು. ನಾನು ಅವಳ ತಲೆಯಿಂದ ನೆಲದ ಮೇಲೆ ಬಿದ್ದೆ. ಬಟ್ಟನ ಹೆಂಡತಿಯ ತಲೆಯನ್ನು ಬಿಟ್ಟು ಬಂದೆ'ಎಂದಿತು. ಆಗ ಬೆಳ್ಳಕ್ಕಿ "ಈಗ ಎಲ್ಲಿಗೆ ಹೋಗುತ್ತೀಯಾ?" ಎಂದು ಕೇಳಿತು. ಆಗ ಹೇನು"ಈಗ ಬೇರೆ ಯಾರದಾದರೂ ತಲೆಯಲ್ಲಿ ಸೇರಿಕೊಳ್ಳುವ ಎಂದು ಹೋಗುತ್ತಾ ಇದ್ದೇನೆ"ಎಂದು ಹೇಳಿತು. ಅಲ್ಲಿಂದ ಹೇನು ಒಂದು ದಣಪೆ ದಾಟಿತು. ಅಲ್ಲಿ ಒಂದು ಗಿಳಿ ಮೇವು ಹುಡುಕುತ್ತಾ ಇತ್ತು. ಅದು 'ಹೇನಕ್ಕಾ ಹೇನಕ್ಕಾ ಎಲ್ಲಿಗೆ ಹೋಗುತ್ತೀಯಾ?" ಎಂದು ಕೇಳಿತು. ಆಗ ಹೇನು "ಬಟ್ಟನ ಹೆಂಡತಿಯ ತಲೆ ಬಿಟ್ಟು ಬಂದೆ. ಬೆಳ್ಳಾರಿ ಬೆಳ್ಳಕ್ಕಿಯಿಂದ ತಪ್ಪಿಸಿಕೊಂಡು ಬಂದೆ"ಎಂದಿತು. ಗಿಳಿ "ಹೇನಕ್ಕಾ ಹೇನಕ್ಕಾ ಈಗ ಎಲ್ಲಿಗೆ ಹೋಗುತ್ತೀಯಾ?" ಕೇಳಿತು. ಆಗ ಹೇನಕ್ಕ "ಬೇರೆ ಯಾರದಾದರೂ ತಲೆಯಲ್ಲಿ ಸೇರಿಕೊಳ್ಳೋಣ ಎಂದು ಹೋಗುತ್ತಿದ್ದೇನೆ" ಎಂದಿತು. ಅಲ್ಲಿಂದ ಹೇನು ಮುಂದೆ ಹೋಯಿತು. ಅಲ್ಲೊಂದು ಹದ್ದು ಎದುರಾಯಿತು. "ಹೇನಕ್ಕಾ ಹೇನಕ್ಕಾ ಎಲ್ಲಿಗೆ ಹೋಗುತ್ತೀಯಾ?"ಎಂದು ಕೇಳಿತು. ಅದಕ್ಕೆ ಎಲ್ಲರ ಹತ್ತಿರ ಹೇಳಿ ಹೇಳಿ ಬೇಜಾರು ಬಂದಿತ್ತು. ಆಗ ಅದು ಸಿಟ್ಟಿನಲ್ಲಿ "ಬಟ್ಟನ ಹೆಂಡತಿಯ ತಲೆಯನ್ನು ಬಿಟ್ಟು ಬಂದೆ, ಬೆಳ್ಳಾರಿ ಬೆಳ್ಳಕ್ಕಿಯ ಕೈಯಿಂದ ತಪ್ಪಿಸಿಕೊಂಡು ಬಂದೆ, ಹಚ್ಚನೆಯ ಗಿಳಿಗೆ ಹೇಳದೆ

ಬಂದೆ, ಇದೆಲ್ಲಿಂದ ಹಾಳಾಗಿ ಬಂತು ಮುದಿ ಗೂಬೆ ಹದ್ದು" ಅಂದಿತು. ಹೇನಕ್ಕನ ಮಾತನ್ನು ಕೇಳಿ ಹದ್ದಿಗೆ ಸಿಟ್ಟು ಬಂದು "ಹೇನಕ್ಕಾ ನಿನ್ನ ಚಟ್ ಗುಡಿಸಿ ಬಿಡುತ್ತೇನೆ" ಎಂದಿತು. ಹೀಗೆ ಹೇಳಿದ ಹದ್ದು ಹೇನಕ್ಕನನ್ನು ಚುಂಚಿನಲ್ಲಿ ಕಚ್ಚಿಕೊಂಡು ಹೋಗಿ ಬಾವಿ ಕಟ್ಟೆಯ ಮೇಲೆ ಇಟ್ಟು 'ಚಟ್' ಎಂಬ ಶಬ್ದ ಬರುವಂತೆ ವರೆದು ಹಾಕಿತು. ಹೇನಕ್ಕ ಸತ್ತು ಹೋಯಿತು

□□

೫

ಕಾಕಣ್ಣ ಗುಬ್ಬಣ್ಣ - ೧

ಒಂದು ಊರಿನಲ್ಲಿ ಕಾಕಣ್ಣ ಗುಬ್ಬಣ್ಣ ಇದ್ದರು. ಅವರಿಬ್ಬರು ಗೆಳೆಯರಾಗಿದ್ದರು. ಅವರು ಒಂದು ದಿನ ಬಟ್ಟೆ ಒಗೆಯಲು ಹೋದರು. ಕಾಕಣ್ಣನದು ಕಂಬಳಿಯ ತುಂಡು ಗುಬ್ಬಣ್ಣನದು ಮಡಿ ಬಟ್ಟೆಯಾಗಿತ್ತು.

ಆಗ ಮಳೆಗಾಲವಾಗಿತ್ತು. ಇವರು ಬಟ್ಟೆ ಒಗೆಯಲು ಹಳ್ಳಕ್ಕೆ ಹೋದಾಗ ದೊಡ್ಡ ಮಳೆ ಬಂತು. ಗುಬ್ಬಣ್ಣ ತನ್ನ ಮಡಿ ಬಟ್ಟೆಯನ್ನು ಬೇಗ ಒಗೆದುಕೊಂಡು ಮನೆಗೆ ಬಂದಿತು. ಕಾಕಣ್ಣನದು ಕಂಬಳಿ ತುಂಡು ಅದು ಜಪ್ಪಿ ಜಪ್ಪಿದರೂ ಬಿಳಿಯಾಗಲಿಲ್ಲ. ಕಾಕಣ್ಣ ಮಳೆಯಲ್ಲಿ ನೆನೆಯುತ್ತಾ ಬಂದಿತು.

ಗುಬ್ಬಣ್ಣನ ಮನೆಯ ಮುಂದೆ ಒಂದು ಮಂದಾರದ ಗಿಡವಿತ್ತು. ಆ ಗಿಡದ ಮೇಲೆ ಕುಳಿತುಕೊಂಡು ಕಾಕಣ್ಣ ಗುಬ್ಬಣ್ಣನನ್ನು ಕರೆಯಿತು. "ಗುಬ್ಬಣ್ಣಾ ಗುಬ್ಬಣ್ಣಾ ಮಂದಾರ ಗಿಡದ ಮೇಲೆ ಕುಳಿತುಕೊಂಡು ಕೂದಲೆಲ್ಲಾ ಒದ್ದೆಯಾಯಿತು. ಬಾಗಿಲನ್ನು ತೆಗೆಯೇ ಗುಬ್ಬಣ್ಣ" ಎಂದಿತು. ಕಾಕಣ್ಣ ಮತ್ತೆ ಮತ್ತೆ ಕೂಗಿತು. ಆದರೂ ಗುಬ್ಬಣ್ಣ ಬಾಗಿಲನ್ನು ತೆಗೆಯಲಿಲ್ಲ. ಬಳಿಕ ಬಹಳ ಹೊತ್ತಿನ ಮೇಲೆ ಬಾಗಿಲನ್ನು ತೆಗೆಯಿತು. ಕಾಕಣ್ಣ ಒಳಗೆ ಹೋಯಿತು.

ಒಳಗೆ ಹೋದ ಕಾಕಣ್ಣ ಗುಬ್ಬಿ ಗುಬ್ಬಿ ಮಳೆಯಲ್ಲಿ ನಿಂತುಕೊಂಡು ಮಂಡೆಯೆಲ್ಲಾ ಒದ್ದೆಯಾಯಿತು. ಚಳಿಯಿಂದ ನಡುಗುತ್ತಿದ್ದೇನೆ. ತುಸು ಬೆಂಕಿ ಉರಿಸಿಕೊಡು" ಎಂದಿತು. ಗುಬ್ಬಣ್ಣ ಬೆಂಕಿ ಉರಿಸಿಕೊಟ್ಟಿತು. ಕಾಕಣ್ಣ ಚಳಿಯನ್ನು ಕಾಸಿಕೊಂಡಿತು. ಬಳಿಕ ಗುಬ್ಬಿ ನಿನಗೆ ಎಲ್ಲಿ ಹಸೆ ಮಾಡಿ ಕೊಡಲಿ? ಗೋಡೆಯ ಬದಿಗೆ ಹಸೆಯ ಮಾಡಲೆ. ಹಸೆಯ ನೆಲೆಯ ಅಡಿಯಲ್ಲಿ ಆಗಬಹುದೇ. ಮಣೆಯ ರಾಶಿಯ ಅಡಿಗೆ ಆಗಬಹುದೇ. ಎಲ್ಲಿ ಆಗಬಹುದು ಹೇಳು"ಎಂದು ಕೇಳಿತು. ಆಗ ಕಾಕಣ್ಣ ಗೋಡೆ ಅಡಿಯಲ್ಲಿ ಹಸೆ ಮಾಡಿದರೆ ಗೋಡೆಯು ಹರಿದು ಬಿದ್ದು ನಾನು ಸತ್ತು ಹೋಗುತ್ತೇನೆ. ಅಲ್ಲಿ ಬೇಡ ಮಣೆಯ ರಾಶಿಯ ಅಡಿಯಲ್ಲಿ ಮಲಗಿಕೊಂಡರೆ ಮಣೆಯು ಹರಿದು ಬಿದ್ದು ನಾನು ಸತ್ತು ಹೋಗುತ್ತೇನೆ. ಅಯ್ಯೋ ಅಯ್ಯೋ ಅಲ್ಲಿ ನನಗೆ ಬೇಡ. ಹಸೆ ನೆಲೆಯ ಅಡಿಯಲ್ಲಾದರೆ ಹಸೆ ಮೈಮೇಲೆ ಬಿದ್ದು ಸತ್ತು ಹೋಗುವೆನು. ನನಗೆ ಅಲ್ಲಿ

ಮಲಗಿಕೊಳ್ಳಲು ಹೆದರಿಕೆಯಾಗುತ್ತದೆ" ಎಂದಿತು. ಹಾಗೆಯೆ ತೊಟ್ಟಿಲ ಅಡಿಯಲ್ಲಿ ಹಸೆ ಮಾಡಿಕೊಡು" ಎಂದಿತು. ಗುಬ್ಬಣ್ಣ ಅದಕ್ಕೆ ಅಲ್ಲಿ ಹಸೆ ಮಾಡಿ ಕೊಟ್ಟಿತು.

ಕಾಕಣ್ಣ ಇಡಿ ರಾತ್ರಿ ಮಲಗಲಿಲ್ಲ. ತೊಟ್ಟಿಲಲ್ಲಿದ್ದ ಗುಬ್ಬಿ ಮರಿಯ ಕಣ್ಣ ಬೇಳೆಯೆಲ್ಲವನ್ನು ಒಲೆಯಲ್ಲಿ ಹಾಕುತ್ತಾ ಉಳಿಯಿತು.

ಒಂದು ಕಣ್ಣ ಬೇಳೆ ಒಲೆಯಲ್ಲಿ ಬಡ್ ಎಂದಿತು. ಆ ಶಬ್ದವನ್ನು ಕೇಳಿ ಗುಬ್ಬಣ್ಣ ಎದ್ದು ಕೊಡುವಿ ಅದೆಂತದು ಕಾಕಣ್ಣ" ಎಂದು ಕೇಳಿತು. ಆಗ ಕಾಕಣ್ಣ ನನ್ನಣ್ಣ ಚಂದಾವರಕ್ಕೆ ಹೋಗಿ ಒಂಬತ್ತು ಬೇಳೆಗಳನ್ನು ತಂದಿದ್ದನು, ಒಲೆಯಲ್ಲಿ ಸುಟ್ಟೆನು. ಒಂದು ಹೊಟ್ಟು ಹೋಯಿತು. ಇನ್ನೊಂದು ಕತ್ತಿತು. ಉಳಿದದ್ದನ್ನು ನಾನು ತಿಂದೆ" ಎಂದಿತು.

ಅವು ಗುಬ್ಬಣ್ಣನ ಮಕ್ಕಳ ಕಣ್ಣಿನ ಬೇಳೆ ಆಗಿದ್ದವು. ಗುಬ್ಬಣ್ಣ ಮುಂಜಾನೆ ಎದ್ದು ನೋಡಿತು. ಅದರ ಮಕ್ಕಳೆಲ್ಲವೂ ಸತ್ತು ಹೋಗಿದ್ದವು. ಅವಕ್ಕೆ ಕಣ್ಣಿನ ಬೇಳೆಯೆ ಇರಲಿಲ್ಲ.

ಗುಬ್ಬಣ್ಣ ಕಾಕಣ್ಣನಿಗೆ ಆಸರ ಕುಡಿಯುವಾಗ ಬುದ್ಧಿ ಕಲಿಸಬೇಕೆಂದುಕೊಂಡಿತು. ಒಂದು ಬಿಳಿ ಕಲ್ಲನ್ನು ಒಲೆಯಲ್ಲಿ ಹಾಕಿಟ್ಟಿತು. ಕಾಕಣ್ಣನ ಬಳಿ ಬಂದು "ನಿನಗೆ ಹಸಿ ಬೆಣ್ಣೆ ಬೇಕೊ ಬಿಸಿ ಬೆಣ್ಣೆ ಬೇಕೋ" ಎಂದು ಕೇಳಿತು. ಕಾಕಣ್ಣ "ಬಿಸಿ ಬೆಣ್ಣೆ"ಎಂದಿತು. ಆಗ ಗುಬ್ಬಣ್ಣ ಒಲೆಯಲ್ಲಿ ಹಾಕಿದ ಬಿಳಿ ಕಲ್ಲು ಕೆಂಪಾದ ಕೂಡಲೇ ತೆಗೆದು ತಂದು ಕಾಕಣ್ಣನ ಹತ್ತಿರ ಬಾಯಿಯನ್ನು ತೆರೆ ಎಂದಿತು. ಕಾಕಣ್ಣ ಬಾಯಿ ತೆರೆಯಿತು. ಗುಬ್ಬಣ್ಣ ಆ ಬಿಳಿ ಕಲ್ಲನ್ನು ಕಾಕಣ್ಣನ ಬಾಯಲ್ಲಿ ಚೆಲ್ಲಿತು. ಕಾಕಣ್ಣನ ಬಾಯಿ ಸುಟ್ಟಿತು. ಕಾಕಣ್ಣ ಕಾಕಾ ಎಂದು ಹೇಳಿ ಕೂಗಿ ಸತ್ತು ಹೋಯಿತು. ಕತೆ ಕಾಶಿಗೆ ಹೋಯಿತು. ನಾನು ಮನೆಗೆ ಬಂದೆ.

□□

೬

ಕಾಕಣ್ಣ ಗುಬ್ಬಣ್ಣ - ೨

ಯಾವುದೋ ಒಂದು ಊರಿನಲ್ಲಿ ಕಾಕಣ್ಣ ಗುಬ್ಬಣ್ಣ ಇದ್ದರು. ಗುಬ್ಬಣ್ಣನ ಮನೆ ಕಲ್ಲಿನದಾಗಿತ್ತು. ಕಾಕಣ್ಣನ ಮನೆ ಸಗಣಿಯದಾಗಿತ್ತು. ಇಬ್ಬರೂ ಒಂದು ದಿನ ಬಟ್ಟೆ ತೊಳೆಯಲು ಕೆರೆಗೆ ಹೋದವು. ಕಾಕಣ್ಣನದು ಕಂಬಳಿ ತುಂಡಾಗಿತ್ತು. "ಗುಬ್ಬಣ್ಣನದು ಪಂಜಿಯಾಗಿತ್ತು. ಗುಬ್ಬಣ್ಣ ಪಂಜಿಯನ್ನು ಬೇಗ ಬೇಗ ಒಗೆಯಿತು. ಆಗ ಕಾಕಣ್ಣ ಗುಬ್ಬಣ್ಣನ ಹತ್ತಿರ ಗುಬ್ಬಣ್ಣ ಗುಬ್ಬಣ್ಣ ನಿನ್ನ ಪಂಜಿ ಸ್ವಚ್ಛವಾಯಿತು. ನನ್ನ ಕಂಬಳಿಯನ್ನು ಹಾಗೆಯೆ ತೊಳೆದುಕೊಡು" ಎಂದಿತು. ಹಾಗೆ ಗುಬ್ಬಣ್ಣ ಕಂಬಳಿ ತುಂಡನ್ನು ಒಗೆಯಲು ಆರಂಭಿಸಿತು. ಆಗ ದೊಡ್ಡ ಮಳೆ ಬಂದಿತು. ಮಳೆ ಬಂದ ಕೂಡಲೇ ಗುಬ್ಬಣ್ಣ ಮನೆಗೆ ನಡೆಯಿತು. ಕಾಕಣ್ಣನ ಕಂಬಳಿ ತುಂಡು ಒಗೆದು ಆಗಿರಲಿಲ್ಲ. ಕಾಕಣ್ಣ ಮಳೆಯಲ್ಲಿ ಒದ್ದೆಯಾಯಿತು. ಅಷ್ಟೊತ್ತಿಗೆ ಸಂಜೆಯಾಯಿತು. ಆದ್ದರಿಂದ ಕಾಕಣ್ಣ ಗುಬ್ಬಣ್ಣನ ಮನೆಯಲ್ಲಿ ಉಳಿದುಕೊಳ್ಳಲೆಂದು ಅಲ್ಲಿಗೆ ಬಂದಿತು. ಆಗ ಗುಬ್ಬಣ್ಣನ ಮನೆಯ ಕದ ಮುಚ್ಚಿತು. ಕಾಕಣ್ಣ ಮುಂದೆ ಹೋಗಿ "ಗುಬ್ಬಣ್ಣಾ ಗುಬ್ಬಣ್ಣಾ ತುಸು ಬಾಗಿಲನ್ನು ತೆಗೆ" ಎಂದಿತು. ಆಗ ಗುಬ್ಬಣ್ಣ ಮಕ್ಕಳಿಗೆ ಬಡಿಸುತ್ತಿದ್ದೇನೆ. "ತುಸು ತಡಿ" ಎಂದಿತು.

ಬಳಿಕ ಮತ್ತೊಮ್ಮೆ "ಕಾಕಣ್ಣ ಗುಬ್ಬಣ್ಣಾ ಗುಬ್ಬಣ್ಣಾ ಬಾಗಿಲ ತೆಗಿಯೇ" ಎಂದಿತು. ಆಗ ಗುಬ್ಬಣ್ಣ ನಾನು ಮಕ್ಕಳ ಕೈ ತೊಳೆಸುತ್ತಿದ್ದೇನೆ" ಎಂದಿತು. ಬಳಿಕ ಮತ್ತೊಮ್ಮೆ "ಕಾಕಣ್ಣ ಗುಬ್ಬಣ್ಣಾ ಗುಬ್ಬಣ್ಣಾ ಬಾಗಿಲನ್ನು ತೆಗೆ" ಎಂದಿತು. ಆಗ ಗುಬ್ಬಣ್ಣ ನಾನು ಊಟಕ್ಕೆ ಕುಳಿತಿದ್ದೇನೆ. ತುಸು ತಡೆ" ಎಂದಿತು.

ಆಗ ಕಾಕಣ್ಣ ಮತ್ತೊಂದು ಬಾರಿ "ಗುಬ್ಬಣ್ಣಾ ಗುಬ್ಬಣ್ಣಾ ಬಾಗಿಲನ್ನು ತೆಗೆ" ಎಂದಿತು. ಆಗ ಗುಬ್ಬಣ್ಣ ತುಸು ಬಾಗಿಲನ್ನು ತೆಗಿಯಿತು. ನನ್ನ ತಲೆ ಹೊಕ್ಕುವುದಿಲ್ಲ. ಮತ್ತೆ ತುಸು ಬಾಗಿಲು ತೆಗೆ" ಎಂದಿತು ಕಾಕಣ್ಣ. "ಗುಬ್ಬಣ್ಣ ಮತ್ತೆ ತುಸು ಬಾಗಿಲನ್ನು ತೆಗೆಯಿತು. ನನ್ನ ಹೊಟ್ಟೆ ಹೊಕ್ಕುವುದಿಲ್ಲ. ಮತ್ತಷ್ಟು ಬಾಗಿಲ ತೆಗೆ" ಎಂದಿತು. ಗುಬ್ಬಣ್ಣ ಮತ್ತೆ ತುಸು ಬಾಗಿಲನ್ನು ತೆಗೆಯಿತು.

ಕಾಕಣ್ಣ ಗುಬ್ಬಣ್ಣನ ಮನೆಗೆ ಹೋಯಿತು. ಆಗ ಗುಬ್ಬಣ್ಣ ಕಾಕಣ್ಣ ಕಾಕಣ್ಣ ಎಲ್ಲಿ ಮಲಗಿಕೊಳ್ಳುವೆ. ಸಿಕ್ಕದ ಅಡಿಯಲ್ಲಿ ಆಗಬಹುದೇ?" ಕೇಳಿತು. ಆಗ ಕಾಕಣ್ಣ ನಾನು

ಸಿಕ್ಕದ ಅಡಿಯಲ್ಲಿ ಮಲಗುವುದಿಲ್ಲ ಸಿಕ್ಕ ಹರಿದು ಬಿದ್ದು ನಾನು ಸತ್ತು ಹೋಗುವೆ." ಹಾಗಾದರೆ ನಾಗವಂದಿಗೆಯ ಮೇಲೆ ಆಗಬಹುದೆ"? ಎಂದು ಕೇಳಿತು. 'ಅಯ್ಯೋ ಬೇಡ ನಾಗವಂದಿಗೆ ಹರಿದು ಬಿದ್ದರೆ ನಾನು ಸತ್ತು ಹೋಗುವೆ' ಎಂದಿತು. ಹಾಗಾದರೆ ಕದದ ಮೂಲೆಯಲ್ಲಿ ಮಲಗಿಕೊಳ್ಳುವೆಯಾ ಎಂದು ಗುಬ್ಬಣ್ಣ ಕೇಳಿತು. ಆಗಲೂ ಕಾಕಣ್ಣ ಕದವು ಮೈಮೇಲೆ ಬಿದ್ದು ನಾನು ಸತ್ತು ಹೋಗುವೆ" ಎಂದಿತು. ಹಾಗಾದರೆ ಒಲೆಯ ಕಟ್ಟೆಯ ಮೇಲೆ ಆಗಬಹುದೇ ಕೇಳಿತು. ಆಗ ಕಾಕಣ್ಣ ಅಡ್ಡಿಯಿಲ್ಲ, ಒಲೆಯ ಬುಡದಲ್ಲಿ ಚಳಿ ಕಾಸಿಕೊಳ್ಳುತ್ತಾ ಒಲೆಯ ಕಟ್ಟೆಯ ಮೇಲೆ ಮಲಗಿಕೊಳ್ಳುತ್ತೇನೆ" ಎಂದಿತು. ಕಾಕಣ್ಣ ಮಲಗಿದ ಮೇಲೆ ಗುಬ್ಬಣ್ಣ ಮಲಗಿಕೊಂಡಿತು.

ಗುಬ್ಬಣ್ಣನಿಗೆ ಮೂರು ಮರಿಗಳಿದ್ದವು. ರಾತ್ರಿ ಕಾಕಣ್ಣ ಗುಬ್ಬಣ್ಣನ ಮರಿಗಳನ್ನು ಸುಟ್ಟುಕೊಂಡು ತಿನ್ನುತ್ತಿತ್ತು. ಅಲ್ಲಿ ಚಟಗುಡುವ ಸಪ್ಪಳ ಬರುತ್ತಿತ್ತು. ಆಗ ಗುಬ್ಬಣ್ಣ ಕಾಕಣ್ಣ ಕಾಕಣ್ಣ ಅದು ಎಂತದು" ಎಂದು ಕೇಳಿತು. ಆಗ ಕಾಕಣ್ಣ ನನ್ನ ಅಣ್ಣನು ಚಂದಾವರಕ್ಕೆ ಹೋಗಿದ್ದನು ಮೂರು ಬೇಳೆ ತಂದಿದ್ದನು. ಮೂರು ಬೇಳೆಗಳನ್ನು ಒಲೆಗೆ ಹಾಕಿದ್ದೇನೆ. ಒಂದು ಹೊಟ್ಟಿತು. ಇನ್ನೊಂದು ಕತ್ತಿತ್ತು. ಒಂದು ಉಳಿದಿತ್ತು ಅದನ್ನೇ ತಿಂದೆ" ಎಂದಿತು. ಗುಬ್ಬಣ್ಣ ಇರಬಹುದು ಎಂದುಕೊಂಡು ಸುಮ್ಮನಾಯಿತು.

ಬೆಳಗಾದ ಕೂಡಲೆ ನೋಡಿತು. ಕಾಕಣ್ಣ ಓಡಿ ನೆಡೆದಿತ್ತು. ಅಲ್ಲಿ ಮರಿ ಒಂದು ಇರಲಿಲ್ಲ. ಕಾಕಣ್ಣನಿಗೆ ಬುದ್ಧಿ ಕಲಿಸಬೇಕೆಂದು ಒಂದು ಉಪಾಯ ಮಾಡಿತು. ಎಲ್ಲಾ ಕಾಗೆಗಳನ್ನು ಕರೆದು ಊಟ ಹಾಕಬೇಕೆಂದುಕೊಂಡಿತು. ಎಲ್ಲಾ ಕಾಗೆಗಳನ್ನು ಕರೆಯಿತು. ಎಲ್ಲಾ ಕಾಗೆಗಳು ಬಂದವು. ಅಲ್ಲಿ ಗುಬ್ಬಣ್ಣನ ಮರಿಗಳನ್ನು ತಿಂದ ಕಾಗೆಯು ಬಂದಿತು. ಎಲ್ಲರನ್ನೂ ಸಾಲಾಗಿ ಕುಳ್ಳಿರಿಸಿ ಬಡಿಸಿ ಆದ ಮೇಲೆ ಗುಬ್ಬಣ್ಣ ತಣಿದ ಬೆಣ್ಣೆ ಬೇಕೊ ಬಿಸಿ ಬೆಣ್ಣೆ ಬೇಕೊ" ಎಂದು ಕೇಳುತ್ತಾ ಬಂತು. ತಣಿದ ಬೆಣ್ಣೆ ಬೇಕು ಎಂದವರಿಗೆ ತಣಿದ ಬೆಣ್ಣೆಯನ್ನು ಹಾಕಿತು. ಬಿಸಿ ಬೆಣ್ಣೆ ಬೇಕೆಂದು ಹೇಳಿದವರಿಗೆ ಒಲೆಯಲ್ಲಿ ಇಟ್ಟಿದ ಬಿಳಿಕಲ್ಲನ್ನು ತಂದು ಅದರ ಬಾಯಿಗೆ ಹಾಕಿತು. ಬಿಸಿ ಬೆಣ್ಣೆ ಬೇಕು ಎಂದದ್ದು ಮರಿಗಳನ್ನು ತಿಂದ ಕಾಗೆ ಆಗಿತ್ತು. ಬಿಸಿಯ ಕಲ್ಲು ಕಾಕಣ್ಣನ ಗಂಟಲಲ್ಲಿ ಹೋಯಿತು. ಕೊನೆಯಲ್ಲಿ ಅದು ಕಾವ್ ಕಾವ್ ಎನ್ನುತ್ತಾ ಸತ್ತು ಹೋಯಿತು. ಮತ್ತೆ ಎಲ್ಲ ಕಾಗೆಗಳು ಮನೆಗೆ ಹೋದವು. ಗುಬ್ಬಣ್ಣ ಸುಖವಾಗಿ ಉಳಿಯಿತು.

□□

೭

ಕಾಗೆಯ ಅಪ್ಪನ ಪ್ರಸ್ತಾ

ಒಂದು ಊರಿನಲ್ಲಿ ಒಂದು ಕಾಗೆ ಇತ್ತು. ಅದರ ಅಪ್ಪ ಸತ್ತು ಹೋಗಿದ್ದನು. ಅದು ಅಪ್ಪನ ಪ್ರಸ್ತಾ ಮಾಡಬೇಕು ಎಂದುಕೊಂಡು ನೆರೆಮನೆಗೆ ಹಾಲು ತರಲು ಹೋಗಿತ್ತು. ಹಾಲನ್ನು ತೆಗೆದುಕೊಂಡು ಬರುವಾಗ ಒಂದು ಗೋಳಿ ಮರದ ಮೇಲೆ ಕುಳಿತುಕೊಂಡಿತ್ತು. ಆಗ ಅದರ ತಲೆಯ ಹೇನು ಹಾಲಿನಲ್ಲಿ ಬಿದ್ದು ಹೋಯಿತು. ಆಗ ಅಪ್ಪನ ಪ್ರಸ್ತಾ ಕೆಟ್ಟು ಹೋಯಿತು ಎಂದು ಅಳುವುದಕ್ಕೆ ಶುರು ಮಾಡಿತು. ಆಗ ಗೋಳಿಮರವು "ಕಾಕಣ್ಣಾ ಯಾಕೆ ಅಳುತ್ತೀಯಾ?" ಕೇಳಿತು.

ಆಗ ಕಾಕಣ್ಣ "ಅಪ್ಪನ ಪ್ರಸ್ತ ಕೆಟ್ಟು ಹೋಯಿತು. ಗೋಳಿಮರವು ಒಣಗಿ ಹೋಗಲಿ" ಎಂದಿತು. ಆಗ ಗೋಳಿ ಮರ ಒಣಗಿ ಹೋಯಿತು. ಅಲ್ಲಿಗೆ ಒಂದು ಆನೆ ಬಂದಿತು. ಆಗ ಅದು ಗೋಳಿ ಮರದ ಹತ್ತಿರ "ನೀನು ಯಾಕೆ ಒಣಗಿ ಹೋದೆ ಎಂದು" ಕೇಳಿತು.

"ಆಗ ಗೋಳಿಮರವು 'ಕಾಕೆಯಪ್ಪನ ಪ್ರಸ್ತಾ ಹೋಯಿತು. ಗೋಳಿಮರವು ಒಣಗಿ ಹೋಯಿತು. "ಆನೆ ಸೊಂಡಿಲು ವಾರೆಯಾಗಿ ಹೋಗಲಿ" ಎಂದು ಹೇಳಿತು. ಆಗ ಆನೆ ಸೊಂಡಿಲು ವಾರೆಯಾಯಿತು. ಒಂದು ದಿನ ಆನೆಯು ನೀರು ಕುಡಿಯಲು ಕೆರೆಗೆ ಹೋಗಿತ್ತು. ಅಲ್ಲಿ ಅಜ್ಜಿ ಸವಟನ್ನು ತಿಕ್ಕುತ್ತಾ ಇದ್ದಳು. ಆಗ ಅಜ್ಜಿ "ಆನೆ ಆನೆ ನಿನ್ನ ಸೊಂಡಿಲು ಯಾಕೆ ವಾರೆಯಾಯಿತು?" ಎಂದು ಕೇಳಿದಳು.

ಆಗ ಆನೆ "ಕಾಕೆಯಪ್ಪನ ಪ್ರಸ್ತಾ ಹೋಯಿತು. ಗೋಳಿಮರಾ ಬತ್ತಿ ಹೋಯಿತು. ಆನೆ ಸೊಂಡಿಲು ವಾರೆಯಾಗಿ ಹೋಯಿತು" ಎಂದು ಹೇಳಿ ನಂತರ "ಅಜ್ಜಿ ಕೈಯಿಗೆ ಸವಟು ಹಿಡಿದು ಹೋಗಲಿ" ಎಂದಿತು.

ಆಗ ಅಜ್ಜಿಯ ಕೈಯಿಗೆ ಸವಟು ಹಿಡಿದುಹೋಯಿತು. ಆಗ ಅಲ್ಲಿಗೆ ಒಬ್ಬ ಗೌಡನು ಕೈ ಕಾಲು ತೊಳೆಯಲು ಬಂದನು. ಅವನು ಅಜ್ಜಿ ಹತ್ತಿರ "ನಿನ್ನ ಕೈಗೆ ಸವಟು ಹೇಗೆ ಹಿಡಿಯಿತು?" ಎಂದು ಕೇಳಿದನು. ಆಗ ಅಜ್ಜಿಯು "ಕಾಕ್ಯಪ್ಪನ ಪ್ರಸ್ತಾ ಹೋಯಿತು. ಗೋಳಿ ಮರವು ಬತ್ತಿ ಹೋಯಿತು. ಆನೆಯ ಸೊಂಡಿಲು ವಾರೆ ಯಾಯಿತು. ಅಜ್ಜಿ ಕೈಯಿಗೆ ಸವಟು ಹಿಡಿದುಕೊಂಡಿತು." ಗೌಡನ ತಲೆ ಮುದುಡಿ ಹೋಗಲಿ?" ಎಂದಿತು. ಆಗ ಗೌಡನ ತಲೆ ಮುದ್ದೆ ಮುದ್ದೆಯಾಯಿತು. ಅಲ್ಲಿ ಒಬ್ಬ

ಮಾಣಿಯು ಪಾಗಾರದ ಮೇಲೆ ನಿಂತುಕೊಂಡು "ಗೌಡ ಗೌಡ ನಿನ್ನ ತಲೆ ಯಾಕೆ ಮುದುಡಿ ಹೋಗಿದೆ?" ಎಂದು ಕೇಳಿದನು. ಆಗ ಗೌಡನು "ಕಾಕ್ಕಪ್ಪನ ಪ್ರಸ್ತಾ ಹೋಯಿತು. ಗೋಳಿ ಮರಾ ಬತ್ತಿಹೋಯಿತು. ಆನೆಯ ಸೊಂಡಿಲು ವಾರೆಯಾಯಿತು. ಅಜ್ಜಿಯ ಕೈಗೆ ಸವಟು ಹಿಡಿದುಹೋಯಿತು. ಗೌಡನ ತಲೆ ಮುದುಡಿ ಹೋಯಿತು. "ಮಾಣಿ ಕಾಲಿಗೆ ಪಾಗಾರ ಹಿಡಿದುಹೋಗಲಿ?" ಎಂದಿತು. "ಆಗ ಮಾಣಿ ಕಾಲಿಗೆ ಪಾಗಾರ ಹಿಡಿದುಹೋಯಿತು. ಅಲ್ಲಿ ಒಬ್ಬ ಭಟ್ಟನು ಬಂದನು. ಆ ಭಟ್ಟನು ಮಣೆಯ ಮೇಲೆ ಕುಳಿತುಕೊಂಡು ಪೂಜೆ ಮಾಡುತ್ತ ಇದ್ದನು. ಮಾಣಿಯನ್ನು ನೋಡಿ ಮಾಣಿಯ ಹತ್ತಿರ "ನಿನ್ನ ಕಾಲಿಗೆ ಯಾಕೆ ಪಾಗಾರ ಹಿಡಿದುಕೊಂಡಿದೆ?" ಎಂದು ಕೇಳಿದನು".

ಆಗ ಮಾಣಿಯು ಕಾಕ್ಕಪ್ಪನ ಪ್ರಸ್ತ ಹೋಯಿತು. ಗೋಳಿ ಮರ ಬತ್ತಿಹೋಯಿತು. ಆನೆಯ ಸೊಂಡಿಲು ವಾರೆಯಾಯಿತು. ಅಜ್ಜಿಯ ಕೈಗೆ ಸವಟು ಹಿಡಿದುಹೋಯಿತು. ಗೌಡನ ತಲೆ ಮುದುಡಿ ಹೋಯಿತು. ಮಾಣಿಯ ಕಾಲಿಗೆ ಪಾಗಾರ ಹಿಡಿದು ಹೋಯಿತು. ಭಟ್ಟನ ಪುಕ್ಕಿಗೆ ಮಣೆ ಹಿಡಿದು ಹೋಗಲಿ?" ಎಂದನು. ಆಗ ಬಟ್ಟನ ಪುಕ್ಕಿಗೆ ಮಣೆ ಹಿಡಿದುಹೋಯಿತು.

ಆಗ ಭಟ್ಟನು ಈಶ್ವರನ ಧ್ಯಾನ ಮಾಡುತ್ತ ಕುಳಿತುಕೊಂಡನು. ಕೊನಗೆ ಒಂದು ತಿಂಗಳ ನಂತರ ಈಶ್ವರನು ಪ್ರತ್ಯಕ್ಷವಾಗಿ ಏನು ವರ ಬೇಕು ಕೇಳು" ಎಂದನು. ಆಗ ಭಟ್ಟನು "ನಮ್ಮೆಲ್ಲರ ಕಷ್ಟ ಪರಿಹಾರ ಮಾಡು"ಎಂದನು. ಆಗ ಈಶ್ವರನು 'ತತಾಸ್ತು' ಎಂದನು. ಆಗ ಎಲ್ಲರೂ ಮೊದಲಿನ ಹಾಗೆಯೇ ಆದರು. ತಮ್ಮ ತಮ್ಮ ಕೆಲಸಕ್ಕೆ ಹೋದರು. ಕಾಗೆ ತನ್ನ ಅಪ್ಪನ ಪ್ರಸ್ತಾ ಮಾಡಿತು. ಎಲ್ಲರೂ ಊಟ ಮಾಡಿದರು. ಎಲ್ಲರೂ ಸುಖದಿಂದ ಬಾಳಿದರು.

□□

೮

ಬಾಳೆಹಣ್ಣಿನ ಹಕ್ಕಿ

ಒಂದು ಊರಿನಲ್ಲಿ ಒಂದು ಬಾಳೆಹಣ್ ಹಕ್ಕಿ ಇತ್ತು. ಅದು ಪ್ರತಿದಿನ ಅಂಗಡಿಯಿಂದ ಒಂದೊಂದು ಬಾಳೆಹಣ್ಣನ್ನು ಕದ್ದು ತಂದು ಮರದ ಮೇಲೆ ಕುಳಿತು ತಿನ್ನುತ್ತಿತ್ತು. ಒಂದು ದಿನ ಅದು ಅಂಗಡಿಯಿಂದ ಬಾಳೆಹಣ್ಣನ್ನು ಕದ್ದು ತಂದು ತಿನ್ನುವಾಗ ಆ ಬಾಳೆಹಣ್ಣು ಮರದ ಕೆಳಗೆ ಬಿದ್ದು ಹೋಯಿತು. ಆಗ ಅದೇ ದಾರಿಯಲ್ಲಿ ದೊಣ್ಣಪ್ಪ ನಾಯಕನು ಬರುತ್ತಿದ್ದನು.

ಆಗ ಆ ಹಕ್ಕಿಯು ದೊಣ್ಣಪ್ಪ ನಾಯಕನ ಹತ್ತಿರ "ದೊಣ್ಣಪ್ಪ ನಾಯಕ ದೊಣ್ಣಪ್ಪ ನಾಯಕ ನನಗೆ ಆ ಬಾಳೆಹಣ್ಣನ್ನು ಹೆಕ್ಕಿ[ಎತ್ತಿ] ಕೊಡು"ಎಂದಿತು. ಆಗ ಅವನು"ನಾನು ಹೆಕ್ಕಿ ಕೊಡುವುದಿಲ್ಲ"ಎಂದನು. ಆಗ ಬಾಳೆಹಣ್ಣಿನ ಹಕ್ಕಿಯು "ತಡೆ, ದೊಣ್ಣೆಯು ಬರಲಿ. ನಿನಗೆ ಹೊಡೆ" ಎಂದು ಹೇಳುತ್ತೇನೆ"ಎಂದಿತು. ಆಗ ದೊಣ್ಣೆಯು ಬಂದಿತು. ದೊಣ್ಣೆ, ದೊಣ್ಣೆ, ದೊಣ್ಣಪ್ಪ ನಾಯಕನಿಗೆ ಹೊಡೆ" ಎಂದಿತು. ಆಗ ದೊಣ್ಣೆಯು "ನಾನು ಹೊಡೆಯುವುದಿಲ್ಲ" ಎಂದಿತು. ಆಗ ಹಕ್ಕಿಯು "ಬೆಂಕಿಯು ಬರಲಿ, ನಿನ್ನನ್ನು ಸುಡು ಎನ್ನುತ್ತೇನೆ"ಎಂದಿತು. ಸ್ವಲ್ಪ ಹೊತ್ತಿನ ನಂತರ ಅಲ್ಲಿಗೆ ಬೆಂಕಿಯು ಬಂದಿತು. ಆಗ ಹಕ್ಕಿಯು "ಬೆಂಕಿ, ಬೆಂಕಿವು ದೊಣ್ಣೆಯನ್ನು ಸುಟ್ಟಿಹಾಕು" ಎಂದಿತು. ಆಗ ಬೆಂಕಿಯು "ನಾನು ಸುಡುವುದಿಲ್ಲ" ಎಂದಿತು. ಆಗ ಹಕ್ಕಿಯು "ತಡೆ ನೀರು ಬರಲಿ, ನಿನ್ನನ್ನು ನಂದಿಸಿಹಾಕು ಎನ್ನುತ್ತೇನೆ" ಎಂದಿತು.

ನೀರು ಬಂತು. ಆಗ ಹಕ್ಕಿಯು "ನೀರೆ, ನೀರೆ, ಬೆಂಕಿಯನ್ನು ನಂದಿಸು"ಎಂದಿತು. ನೀರು "ನಾನು ನಂದಿಸುವುದಿಲ್ಲ" ಎಂದಿತು. ಆಗ ಹಕ್ಕಿಯು "ಎಮ್ಮೆ ಬರಲಿ ನಿನ್ನನ್ನು ಕುಡಿ ಅನ್ನುತ್ತೇನೆ" ಎಂದಿತು.

ಆಗ ಎಮ್ಮೆ ಬಂದಿತು. ಆಗ ಹಕ್ಕಿಯು ಎಮ್ಮೆ ಹತ್ತಿರ "ಎಮ್ಮೆ ಎಮ್ಮೆ ನೀರನ್ನು ಕುಡಿ"ಎಂದು ಹೇಳಿತು. ಆಗ ಎಮ್ಮೆ "ನಾನು ಕುಡಿಯುವುದಿಲ್ಲ" ಎಂದಿತು. ಆಗ ಹಕ್ಕಿಯು "ತಡಿ, ಹಗ್ಗ, ಬರಲಿ, ನಿನ್ನನ್ನು ಕಟ್ಟಿಹಾಕು" ಎಂದು ಹೇಳುತ್ತೇನೆ" ಎಂದಿತು.

ಆಗ ಅಲ್ಲಿಗೆ ಹಗ್ಗವು ಬಂದಿತು. ಹಗ್ಗದ ಹತ್ತಿರ ಹಕ್ಕಿಯು "ಹಗ್ಗಾ, ಹಗ್ಗಾ, ಎಮ್ಮೆಯನ್ನು ಕಟ್ಟು"ಎಂದಿತು. ಆಗ ಹಗ್ಗವು "ನಾನು ಕಟ್ಟುವುದಿಲ್ಲ" ಎಂದು

ಹೇಳಿತು. ಆಗ ಹಕ್ಕಿಯು "ಇಲಿ ಬರಲಿ ನಿನ್ನನ್ನು ತುಂಡು ಮಾಡು"ಎಂದು ಹೇಳುತ್ತೇನೆ" ಎಂದಿತು.

ಸ್ವಲ್ಪಹೊತ್ತಿನ ನಂತರ ಇಲಿಯು ಬಂದಿತು. ಇಲಿಯ ಹತ್ತಿರ ಹಕ್ಕಿಯು "ಇಲಿಯೇ, ಇಲಿಯೇ, ಹಗ್ಗವನ್ನು ತುಂಡುಮಾಡು ಎಂದಿತು. ಇಲಿಯು "ನಾನು ತುಂಡು ಮಾಡುವುದಿಲ್ಲ"ಎಂದಿತು. ಆಗ ಹಕ್ಕಿಯು "ಬೆಕ್ಕು ಬರಲಿ ನಿನ್ನನ್ನು ತಿನ್ನು ಎನ್ನುತ್ತೇನೆ" ಎಂದಿತು.

ಆಗ ಬೆಕ್ಕು ಬಂದಿತು. ಬೆಕ್ಕಿನ ಹತ್ತಿರ "ಬೆಕ್ಕೇ ಬೆಕ್ಕೇ ಇಲಿಯನ್ನು ತಿನ್ನು"ಎಂದಿತು. ಆಗ ಆ ಬೆಕ್ಕು "ನಾನು ತಿನ್ನುವುದಿಲ್ಲ" ಎಂದಿತು. ಆಗ ಆಗ ಹಕ್ಕಿಯು "ಅಜ್ಜಿಯು ಬರಲಿ ನಿನಗೆ ಅನ್ನ ಹಾಕಬೇಡ ಎನ್ನುತ್ತೇನೆ" ಎಂದಿತು. ಅಜ್ಜಿ ಬಂದಳು. ಆಗ ಅಜ್ಜಿಯ ಹತ್ತಿರ ಹಕ್ಕಿಯು "ಅಜ್ಜಿ ಅಜ್ಜಿ ಬೆಕ್ಕಿಗೆ ಅನ್ನ ಹಾಕಬೇಡ" ಎಂದಿತು. ಆಗ ಅಜ್ಜಿ "ನನ್ನ ಮುದ್ದು ಬೆಕ್ಕಿಗೆ ಅನ್ನ ಹಾಕುತ್ತೇನೆ" ಎಂದಳು. ಆಗ ಹಕ್ಕಿಯು "ಅಜ್ಜನು ಬರಲಿ, ಅಜ್ಜನ ಹತ್ತಿರ ನಿನಗೊಂದು ಗುದ್ದು ಹಾಕು ಎನ್ನುತ್ತೇನೆ" ಎಂದಿತು.

ನಂತರ ಅಜ್ಜನು ಬಂದನು. ಆಗ ಹಕ್ಕಿಯು "ಅಜ್ಜಾ ಅಜ್ಜಾ ಅಜ್ಜಿಗೆ ಒಂದು ಗುದ್ದು ಹಾಕು" ಎಂದಿತು. ಆಗ ಅಜ್ಜನು "ನನ್ನ ಪ್ರೀತಿಯ ಹೆಂಡತಿಗೆ ಗುದ್ದು ಹಾಕಲಾರೆ" ಎಂದನು. ಆಗ ಹಕ್ಕಿಯು "ಕಟ್ಟಿರುವೆ ಬರಲಿ, ನಿನ್ನ ಕಾಲನ್ನು ಕಚ್ಚು ಎನ್ನುತ್ತೇನೆ" ಎಂದಿತು.

ಕಟ್ಟಿರುವೆ ಸಾಲು ಬಂದಿತು. "ಕಟ್ಟಿರುವೆ ಕಟ್ಟಿರುವೆ 'ಅಜ್ಜನ ಕಾಲನ್ನು ಕಚ್ಚು" ಎಂದಿತು. ಆಗ ಕಟ್ಟಿರುವೆಯು ಅಜ್ಜನ ಕಾಲನ್ನು ಕಚ್ಚಿತು. ಅಜ್ಜನು ಹೋಗಿ ಅಜ್ಜಿಗೆ ಮೂರು ಗುದ್ದು ಹಾಕಿದನು. ಅಜ್ಜಿಯು ಬೆಕ್ಕಿಗೆ ಅನ್ನ ಹಾಕಲಿಲ್ಲ. ಬೆಕ್ಕು ಹೋಗಿ ಇಲಿಯ ಬಾಲವನ್ನು ಕಚ್ಚಿತು. ಇಲಿಯು ಹೋಗಿ ಹಗ್ಗವನ್ನು ತುಂಡು ಮಾಡಿತು. ಹಗ್ಗವು ಹೋಗಿ ಎಮ್ಮೆಯನ್ನು ಕಟ್ಟಿಹಾಕಿತು. ಎಮ್ಮೆ ಹೋಗಿ ನೀರನ್ನು ಕುಡಿಯಿತು. ನೀರು ಹೋಗಿ ಬೆಂಕಿಯನ್ನು ನಂದಿಸಿತು. ಬೆಂಕಿ ಹೋಗಿ ದೊಣ್ಣೆಯನ್ನು ಸುಟ್ಟು ಹಾಕಿತು. ದೊಣ್ಣೆ ಹೋಗಿ ದೊಣ್ಣಪ್ಪ ನಾಯಕನಿಗೆ ಹೊಡೆಯಿತು. ದೊಣ್ಣಪ್ಪ ನಾಯಕನು ಹೋಗಿ ಹಕ್ಕಿಗೆ ಬಾಳೆಹಣ್ಣನ್ನು ತಂದು ಕೊಟ್ಟನು. ಹಕ್ಕಿಯು ಬಾಳೆಹಣ್ಣನ್ನು ತಿಂದಿತು.

□□

೯

ಅವಲಕ್ಕಿ ಹೆಟ್ಟೆ

ಒಂದು ಊರಿನಲ್ಲಿ ಅವಲಕ್ಕಿಯನ್ನು ಮಾರುವ ಶೆಟ್ಟಿಯಿದ್ದನು. ಅವನು ಅವಲಕ್ಕಿಯ ಬುಟ್ಟಿಯನ್ನು ಹೊತ್ತುಕೊಂಡು ಅವಲಕ್ಕಿಯನ್ನು ಮಾರಲು ಹೋಗುತ್ತಿದ್ದನು. ಆಗ ಒಂದು ಗುಬ್ಬಕ್ಕಿಯು ಮರದ ಮೇಲೆ ಕುಳಿತುಕೊಂಡಿತ್ತು. ಅದು ಅಲ್ಲಿಂದ ಹಾರಿ ಬಂದು ಒಂದು ಅವಲಕ್ಕಿಯ ಹೆಟ್ಟೆಯನ್ನು ಎತ್ತಿಕೊಂಡು ನಡೆಯಿತು. ಮರದ ಮೇಲೆ ಆ ಅವಲಕ್ಕಿ ಹೆಟ್ಟೆಯನ್ನು ಇಟ್ಟುಕೊಂಡಿತು. ಆಗ ಅವಲಕ್ಕಿ ಹೆಟ್ಟೆಯು ಮರದ ವಟ್ಟೆಯಲ್ಲಿ ಬಿದ್ದುಹೋಯಿತು. ಆ ಹಾದಿಯಲ್ಲಿ ಒಬ್ಬ ಆಚಾರಿಯು ಬರುತ್ತಿದ್ದನು. ಗುಬ್ಬಕ್ಕಿಯು "ಆಚಾರಿ, ಆಚಾರಿ, ನನ್ನ ಅವಲಕ್ಕಿ ಹೆಟ್ಟೆಯನ್ನು ತೆಗೆದು ಕೊಡು" ಎಂದಿತು. ಆಗ ಆಚಾರಿಯು ಇದು ನನ್ನಿಂದಾಗದು" ಎಂದನು. ಆಗ ಗುಬ್ಬಿಯು "ತಡೆ, ದೊಣ್ಣೆಯು ಬರಲಿ, ನಿನ್ನ ಕಾಲನ್ನು ಮುರಿಸುತ್ತೇನೆ" ಎಂದಿತು. ಅಲ್ಲಿಗೆ ಒಂದು ದೊಣ್ಣೆಯು ಬಂದಿತು, ಆಗ ಗುಬ್ಬಿಯು "ದೊಣ್ಣೆ ದೊಣ್ಣೆ ಆಚಾರಿಯ ಕಾಲನ್ನು ಮುರಿ" ಅಂದಿತು. "ದೊಣ್ಣೆ ನನ್ನಿಂದಾಗದು" ಎಂದಿತು. ತಡೆ ಬೆಂಕಿಯು ಬರಲಿ, ನಿನ್ನನ್ನು ಸುಡಿಸುತ್ತೇನೆ ಎಂದಿತು. ಬೆಂಕಿಯು ಬಂದಿತು. ಆಗ ಗುಬ್ಬಿಯು "ಬೆಂಕಿ ಬೆಂಕಿ ದೊಣ್ಣೆಯನ್ನು ಸುಡು" ಎಂದಿತು "ಬೆಂಕಿಯು ನನ್ನಿಂದಾಗದು"ಎಂದಿತು "ತಡೆ ನೀರು ಬರಲಿ ನಿನ್ನನ್ನು ನಂದಿಸಲು ಹೇಳುತ್ತೇನೆ" ಎಂದಿತು. ನೀರು ಬಂದಿತು. ಆಗ ಗುಬ್ಬಿಯು "ನೀರೆ ನೀರೆ ಬೆಂಕಿಯನ್ನು ನಂದಿಸು" ಎಂದಿತು. ಆಗ ನೀರು ನನ್ನಿಂದಾಗದು" ಎಂದಿತು. ಆಗ ಗುಬ್ಬಿಯು "ತಡೆ, ಹೋರಿಯು ಬರಲಿ. ನಿನ್ನನ್ನು ಮೋರು ಅನ್ನುತ್ತೇನೆ" ಎಂದಿತು. ಹೋರಿಯು ಬಂದಿತು. ಆಗ ಗುಬ್ಬಿಯು "ಹೋರಿ ಹೋರಿ ನೀರನ್ನು ಮೋರು" ಎಂದಿತು. ಹೋರಿಯು "ನನ್ನಿಂದಾಗದು" ಎಂದಿತು. ಆಗ ಗುಬ್ಬಿಯು. "ತಡೆ ಹಗ್ಗವು ಬರಲಿ. ನಿನ್ನನ್ನು ಬಿಗಿಯಲೂ ಹೇಳುತ್ತೇನೆ" ಎಂದಿತು. ಆಗ ಅಲ್ಲಿಗೆ ಹಗ್ಗವು ಬಂದಿತು. ಗುಬ್ಬಿಯು "ಹಗ್ಗಾ ಹಗ್ಗಾ ಹೋರಿಯನ್ನು ಬಿಗಿ" ಎಂದಿತು. ಆಗ ಹಗ್ಗವು "ನನ್ನಿಂದಾಗದು" ಎಂದಿತು. ಆಗ ಗುಬ್ಬಿಯು "ಇಲಿ, ಬರಲಿ, ನಿನ್ನನ್ನು ಕಡಿಯಲು ಹೇಳುತ್ತೇನೆ" ಎಂದಿತು. ಆಗ ಇಲಿಯು ಬಂದಿತು. ಗುಬ್ಬಿಯು 'ಇಲಿ ಇಲಿ ಹಗ್ಗವನ್ನು ಕಡಿ" ಎಂದಿತು ಆಗ ಇಲಿಯು "ನನ್ನಿಂದಾಗದು"

ಎಂದಿತು. ಗುಬ್ಬಿಯು "ಬೆಕ್ಕು ಬರಲಿ ನಿನ್ನನ್ನು ಹಿಡಿಸುತ್ತೇನೆ" ಎಂದಿತು. ಬೆಕ್ಕು ಬಂದಿತು ಗುಬ್ಬಿಯು "ಬೆಕ್ಕೆ ಚೆಕ್ಕೆ ಇಲಿಯನ್ನು ಹಿಡಿ" ಎಂದಿತು. ಬೆಕ್ಕು "ನನ್ನಿಂದಾಗದು" ಎಂದಿತು. ಆಗ ಗುಬ್ಬಿಯು "ಅಜ್ಜಿಯು ಬರಲಿ ನಿನ್ನನ್ನು ಜಜ್ಜಿಸುತ್ತೇನೆ" ಎಂದಿತು. ಅಜ್ಜಿ ಬಂದಳು. ಗುಬ್ಬಿಯು "ಅಜ್ಜಿ ಅಜ್ಜಿ ಬೆಕ್ಕನ್ನು ಜಜ್ಜು' ಎಂದಿತು ಅಜ್ಜಿಯು ನನ್ನ ಮುದ್ದಿನ ಬೆಕ್ಕನ್ನು ಜಜ್ಜಲಾರೆ" ಎಂದಿತು. ಆಗ ಗುಬ್ಬಿಯು "ಅಜ್ಜನು ಬರಲಿ. ನಿನ್ನನ್ನು ಜಜ್ಜು ಎನ್ನುತ್ತೇನೆ" ಎಂದಿತು. ಆಗ ಅಜ್ಜನು ಬಂದನು. ಗುಬ್ಬಿಯು 'ಅಜ್ಜಾ, ಅಜ್ಜಾ, ಅಜ್ಜಿಯನ್ನು ಜಜ್ಜು' ಎಂದಿತು. ಅಜ್ಜನು ಹೋಗಿ ಅಜ್ಜಿಯನ್ನು ಜಜ್ಜಿದನು. ಅಜ್ಜಿಯು ಹೋಗಿ ಬೆಕ್ಕನ್ನು ಜಜ್ಜಿದಳು. ಬೆಕ್ಕು ಹೋಗಿ ಇಲಿಯನ್ನು ಹಿಡಿಯಿತು. ಇಲಿಯು ಹೋಗಿ ಹಗ್ಗದ ಕಣಿಯನ್ನು ಕಡಿಯಿತು. ಹಗ್ಗದ ಕಣಿಯು ಹೋಗಿ ಹೋರಿಯನ್ನು ಬಿಗಿಯಿತು. ಹೋರಿಯು ಹೋಗಿ ನೀರನ್ನು ಮೋರಿತು. ನೀರು ಹೋಗಿ ಬೆಂಕಿಯನ್ನು ನಂದಿಸಿತು. ಬೆಂಕಿಯು ಹೋಗಿ ದೊಣ್ಣೆಯನ್ನು ಸುಟ್ಟಿತು. ದೊಣ್ಣೆಯು ಹೋಗಿ ಆಚಾರಿಯ ಕಾಲನ್ನು ಮುರಿಯಿತು. ಆಚಾರಿಯು ಹೋಗಿ ಅವಲಕ್ಕಿಯ ಹೆಟ್ಟೆಯನ್ನು ತೆಗೆದನು. ಗುಬ್ಬಕ್ಕಿಯು ಅವಲಕ್ಕಿಯ ಹೆಟ್ಟೆಯನ್ನು ಕಚ್ಚಿಕೊಂಡು ನಡೆಯಿತು."ಮಾಣೀ ಗುಬ್ಬಕ್ಕಿಯು ಅವಲಕ್ಕಿ ಹೆಟ್ಟೆಯನ್ನು ಕಚ್ಚಿಕೊಂಡಿದೆಯಾ? ಹೊರಗೋಗಿ ನೋಡು."

□□

೧೦

ಯಮನ ಶಾಪ

ಒಂದು ಊರಿನಲ್ಲಿ ಗಂಡ ಹೆಂಡತಿ ಇದ್ದರು. ಅವರ ಮನೆಯಲ್ಲಿ ಸೀತೆ ಎಂಬ ಒಂದು ದನವಿತ್ತು. ಅದರ ಒಡತಿಯು ದಿನವೂ ಮುಂಜಾನೆ ದನಗಳಿಗೆ ಗೋಗ್ರಾಸ ಕೊಡುತ್ತಿದ್ದಳು. ಒಂದು ದಿನ ಆ ಒಡತಿಯ ಗಂಡನಿಗೆ ಆರೋಗ್ಯ ಕೆಟ್ಟಿತು. ನಾಳೆ ಸಾಯುತ್ತಾನೆ ಎಂಬಂತಾಯಿತು. ಅವರ ಮನೆಯ ಸೀತೆ ಎಂಬ ದನದ ಕಣ್ಣಲ್ಲಿ ಕಣ್ಣೀರು ಬಳ ಬಳ ಸುರಿಯಿತು. ಅದನ್ನು ನೋಡಿ ಒಡತಿಯು ದನದ ಬಳಿ ಬಂದು "ಸೀತೆ ಏತಕ್ಕೆ ಕಣ್ಣೀರು ಸುರಿಸುತ್ತೀಯೆ?" ಕೇಳಿದಳು. ಆಗ ಸೀತೆಯು "ನಾಳೆ ನನ್ನ ಒಡೆಯನು ಸತ್ತು ಹೋಗುತ್ತಾನೆ. ಆದ್ದರಿಂದ ನಾನು ಕಣ್ಣೀರು ಸುರಿಸುತ್ತಿದ್ದೇನೆ. ಒಡೆಯನ ಸಾವನ್ನು ತಪ್ಪಿಸಲು ನೀನು ಒಂದು ಉಪಾಯ ಮಾಡು. ಸಂಜೆಗೆ ಹೊಳ್ಳಿಯ ಮೆಟ್ಟಿಲ ಮೇಲೆ ಎರಡು ಬಿಸಿ ನೀರಿನ ತಂಬಿಗೆಗಳನ್ನು ಇಡು. ಮತ್ತೊಂದು ಬಾಗಿಲ ಮೆಟ್ಟಿಲ ಮೇಲೆ ಎರಡು ಹಾಲಿನ ತಂಬಿಗೆಗಳನ್ನು ಇಡು. ನಿಮ್ಮ ಮನೆಗೆ ಮರುದಿನ ಎರಡು ಜನರು ಬರುತ್ತಾರೆ. ನೀನು ಅವರಿಗೆ ಒಳ್ಳೊಳ್ಳೆಯ ಕಜ್ಜಾಯವನ್ನು ಮಾಡಿ ಬಡಿಸು. ಮೂರನೆಯ ದಿನ ಯಮರಾಜನು ಬರುತ್ತಾನೆ. ಆ ದಿನ ನೀವಿಬ್ಬರು ನಿಮ್ಮನ್ನು ಹಗ್ಗದಲ್ಲಿ ಸುತ್ತಿಕೊಂಡು ಮಲಗಿಕೊಳ್ಳಿರಿ" ಎಂದಿತು. ಒಡತಿಯು ಸಂಜೆ ಎರಡು ಬಿಸಿ ನೀರಿನ ತಂಬಿಗೆಗಳನ್ನು ಹೊಳ್ಳಿಯ ಮೆಟ್ಟಿಲ ಮೇಲೆ ಇಟ್ಟಳು. ಹಾಲಿನ ತಟ್ಟೆಯನ್ನು ಬಾಗಿಲ ಮೆಟ್ಟಿಲ ಮೇಲೆ ಇಟ್ಟಳು. ಮೊದಲನೆಯ ದಿನ ಯಮನ ದೂತರು ಬಂದರು. ಅವರು ಚಳಿಯಿಂದ ಗಡ ಗಡ ನಡುಗುತ್ತಿದ್ದರು. ಅವರು ಹೊಳ್ಳಿಯ ಮೆಟ್ಟಿಲ ಮೇಲಿನ ಬಿಸಿ ನೀರಿನ ತಂಬಿಗೆಯನ್ನು ಎತ್ತಿಕೊಂಡು ತಮ್ಮ ಕಾಲನ್ನು ತೊಳೆದುಕೊಂಡರು. ಅವರಿಗೆ ಹಸಿವೆಯಾಗಿತ್ತು. ಬಾಗಿಲ ಮೆಟ್ಟಿಲ ಮೇಲಿದ್ದ ತಟ್ಟೆಯಲ್ಲಿಯ ಹಾಲನ್ನು ಕುಡಿದರು. ಉಂಡ ಮನೆಗೆ ದ್ರೋಹ ಮಾಡಬಾರದು ಎಂದುಕೊಂಡು ಒಡತಿಯ ಗಂಡನ ಜೀವವನ್ನು ಬಿಟ್ಟು ಹೋದರು. ಎರಡನೆಯ ದಿನ ಮತ್ತೆ ಎರಡು ಜನ ಬಂದರು. ಅವರಿಗೆ ಒಡತಿಯು ಒಳ್ಳೊಳ್ಳೆಯ ಕಜ್ಜಾಯ ಮಾಡಿ ಬಡಿಸಿದಳು. ಅವರು ಉಂಡ ಮನೆಗೆ ದ್ರೋಹ ಮಾಡಬಾರದು ಎಂದುಕೊಂಡು ಒಡತಿಯ ಗಂಡನ ಜೀವವನ್ನು ಬಿಟ್ಟು ಹೋದರು. ಮೂರನೆಯ ದಿನ ಯಮರಾಜನು

ಬಂದನು. ಅವನ ಹಲ್ಲು ಉದ್ದವಾಗಿತ್ತು. ಇವರಿಬ್ಬರೂ ತಮ್ಮನ್ನು ಹಗ್ಗದಲ್ಲಿ ಸುತ್ತಿಕೊಂಡಿದ್ದರು. ಅವರ ಆ ಹಗ್ಗವನ್ನು ಕತ್ತರಿಸಲು ಯಮನಿಂದ ಸಾಧ್ಯವಾಗಲಿಲ್ಲ. ಅವನ ಹಲ್ಲು ಉದುರಿ ಹೋಯ್ತು. ಅವನು ಬರಿಗೈಯಲ್ಲಿ ಹೋದನು. ಒಡತಿಯ ಗಂಡನು ಬದುಕಿದನು. ಒಡತಿಯ ಈ ಕೆಲಸಕ್ಕೆ ಸೀತೆ ಎಂಬ ದನವೇ ಕಾರಣವೆಂದು ಯಮನಿಗೆ ತಿಳಿಯಿತು. ಯಮನು ದನಗಳ ಜಾತಿಗೆ ಮಾತು ಬರದಿರಲಿ ಎಂದು ಶಾಪವಿತ್ತನು. ಅಂದಿನಿಂದ ದನಗಳಿಗೆ ಮಾತು ಬರುವುದಿಲ್ಲ.

□□

೧೧

ಇಣಚಿ

ಒಂದೂರಿನಲ್ಲಿ ಒಂದು ಇಣಚಿಯಿತ್ತು. ಅದು ದಿನಾಲು ಮುಳ್ಳೆ ಹಣ್ಣನ್ನು ತಿನ್ನಲು ಗುಡ್ಡಕ್ಕೆ ಹೋಗುತ್ತಿತ್ತು. ಒಂದು ದಿನ ಅದರ ಬಾಲಕ್ಕೆ ಮುಳ್ಳು ನೆಟ್ಟಿತು. ಈ ಮುಳ್ಳನ್ನು ತೆಗೆಯಲಾರದೆ ಅದು ಸುಮ್ಮನೆ ಕುಳಿತುಕೊಂಡಿತು. ಆಗ ಆ ದಾರಿಯಲ್ಲಿ ಒಬ್ಬ ಸಾವುಕಾರನು ಹೋಗುತ್ತಿದ್ದನು. ಆ ಇಣಚಿಯು "ಸಾವುಕಾರ ಸಾವುಕಾರ ನನ್ನ ಬಾಲಕ್ಕೆ ಮುಳ್ಳು ನೆಟ್ಟಿದೆ. ಅದನ್ನು ತೆಗೆಯುತ್ತೀಯಾ?" ಕೇಳಿತು. ಸಾವುಕಾರನು ತನ್ನ ಚೂರಿಯನ್ನು ಹಿಡಿದು ಆ ಮುಳ್ಳನ್ನು ಬಿಡಿಸುತ್ತಿದ್ದನು. ಆಗ ಇಣಚಿಯ ಬಾಲವು ತುಂಡಾಯಿತು.

ಇಣಚಿಯು "ನನ್ನ ಬಾಲ ಕೊಡುತ್ತೀಯಾ, ನಿನ್ನ ಚೂರಿಯನ್ನು ಕೊಡುತ್ತೀಯಾ?" ಎನ್ನುತ್ತ ಗಲಾಟೆ ಮಾಡಿತು. ಆಗ ಸಾವುಕಾರನು ತನ್ನ ಚೂರಿಯನ್ನು ಕೊಡುತ್ತೇನೆ" ಎಂದನು. ಚೂರಿಯನ್ನು ಇಣಚಿಗೆ ಕೊಟ್ಟನು. ಇಣಚಿ ಚೂರಿಯನ್ನು ಹಿಡಿದುಕೊಂಡು ಒಂದು ಮೈಲು ದೂರ ಬಂದಿತು. ಅಲ್ಲಿ ಒಬ್ಬನು ಮಡಕೆಯನ್ನು ಇಟ್ಟುಕೊಂಡು ಒಂದು ಕೋಲಿನ ತುಂಡಿನಿಂದ ಅದನ್ನು ಕೆರೆಸುತ್ತಾ ಇದ್ದನು. ಇಣಚಿಯು ಅದನ್ನು ನೋಡಿತು.

ಇಣಚಿ ಹೇಳಿತು "ಏ ಮಳ್ಳಾ ಮಡಕೆಗಳನ್ನು ಕೋಲಲ್ಲಿ ಕೆರೆಸುವುದಿಲ್ಲ ಚೂರಿಯಲ್ಲಿ ಕೆರೆಸಬೇಕು. ನನ್ನ ಚೂರಿಯಲ್ಲಿ ಕೆರೆಸಿನೋಡು" ಎಂದಿತು. ತನ್ನ ಚೂರಿಯನ್ನು ಕೊಟ್ಟಿತು. ಚೂರಿಯಿಂದ ಮಡಕೆಯನ್ನು ಕೆರೆಸುವಾಗ ಚೂರಿ ಮುರಿದು ಹೋಯಿತು. ಆಗ ಇಣಚಿ "ನನ್ನ ಚೂರಿಯನ್ನು ಕೊಡುತ್ತೀಯಾ ನಿನ್ನ ಮಡಕೆಯನ್ನು ಕೊಡುತ್ತೀಯಾ?" ಎಂದು ಗಲಾಟೆ ಮಾಡಿತು. "ಅವನು ಮಡಕೆಯನ್ನು ಕೊಡುತ್ತೇನೆ" ಎಂದನು. ಮಡಕೆಯನ್ನು ಕೊಟ್ಟನು. ಬಳಿಕ ಈ ಮಡಕೆಯನ್ನು ಎತ್ತಿಕೊಂಡು ಇಣಚಿಯು ಒಂದು ಮೈಲು ದೂರ ನಡೆಯಿತು. ಅಲ್ಲಿ ಒಬ್ಬನು ತನ್ನ ಗದ್ದೆಯಲ್ಲಿ ಕಾಯಿಪಲ್ಲೆ ಬೆಳೆಸಲು ಹಿತ್ತಲು ಮಾಡಿದ್ದನು. ಗರಟೆಯಿಂದ ನೀರನ್ನೆತ್ತಿ ಗಿಡಗಳಿಗೆ ಪುಚುಪುಚು ನೀರು ಹೊಯ್ಯುತ್ತಿದ್ದನು. ಅವನನ್ನು ನೋಡಿ ಇಣಚಿಯು ಏ ಪೆದ್ದಾ ಹಿತ್ತಲಕ್ಕೆ ಗರಟೆಯಲ್ಲಿ ನೀರನ್ನು ಹಾಕುವುದೇ? ಈ ಮಡಕೆ ತಕೋ, ನೀರು ಹಾಕು

ನಾಳೆ ನನಗೆ ಮಡಕೆಯನ್ನು ತಿರುಗಿ ಕೊಡು ಎಂದಿತು. ಕಾಯಿಪಲ್ಲೆ ಬೆಳೆಸುವವನು ಆ ಮಡಕೆಯಿಂದ ಗಿಡಗಳಿಗೆ ನೀರನ್ನು ಹನಿಸುವಾಗ ಮಡಕೆಯು ತುಂಡಾಯಿತು. ಮರುದಿನ ಇಣಚಿ ಬಂದು "ನನ್ನ ಮಡಕೆ ಎಲ್ಲಿ?" ಎಂದು ಹಿತ್ತಲದವನನ್ನು ಕೇಳಿತು. ಅವನು "ನಿನ್ನ ಮಡಕೆ ಒಡೆದು ಹೋಯಿತು." ಎಂದನು. ಆಗ ಇಣಚಿ "ನನ್ನ ಮಡಕೆ ಕೊಡುತ್ತೀಯೋ, ಆರು ಬದನೆ ಕಾಯಿ ಕೊಡುತ್ತೀಯೋ?" ಎಂದು ಗಲಾಟೆ ಮಾಡಿತು. ಅವನು ಇಣಚಿಗೆ ಬದನೆಕಾಯಿಗಳನ್ನು ಕೊಟ್ಟನು. ಇಣಚಿಯು ಬದನೆಕಾಯಿಗಳನ್ನು ತೆಗೆದುಕೊಂಡು ಮುಂದೆ ಬಂದಿತು. ಸುಮಾರು ಒಂದು ಮೈಲು ದೂರ ಬಂದ ಬಳಿಕ ಒಂದು ಮನೆಯಲ್ಲಿ ಯಾರೋ ಅಳುವ ಧ್ವನಿಯನ್ನು ಕೇಳಿತು. ಮನೆಯವನು ಬಟ್ಟಲಿನಲ್ಲಿ ಗಂಜಿ ಹಾಕಿಕೊಂಡು ಪದಾರ್ಥಕ್ಕೆ ಏನೂ ಇಲ್ಲವೆಂದು ಅಳುತ್ತ ಕುಳಿತ್ತಿದ್ದನು.

ಇಣಚಿ ಅವನಿಗೆ ಆರು ಬದನೆಕಾಯಿಗಳನ್ನು ಕೊಟ್ಟಿತು. ಇವುಗಳ ಪಲ್ಯ ಮಾಡಿ ಉಣ್ಣು. ನಾಳೆ ನನ್ನ ಬದನೆಕಾಯಿಗಳನ್ನು ಕೊಡು" ಎಂದಿತು.

ಮರುದಿನ ಬಂದು ನನ್ನ ಬದನೆಕಾಯಿಗಳನ್ನು ಕೊಡು ಎಂದಿತು. ಅವನು "ನಾನು ಪೇಟೆಗೆ ಹೋಗಿಲ್ಲ ಬದನೆಕಾಯಿ ತಂದಿಲ್ಲ" ಎಂದನು.

"ನನ್ನ ಆರು ಬದನೆಕಾಯಿಗಳನ್ನು ಕೊಡುತ್ತೀಯೋ?", ನಿನ್ನ ಹೆಂಡತಿಯನ್ನು ಕೊಡುತ್ತೀಯೋ?" ಎಂದು ಕೇಳಿತು. "ಈ ಅಡುಗೆ ಮಾಡದ ಹೆಂಡತಿ ನನಗೆ ಬೇಡ. ನೀನೇ ಒಯ್ದು ಬಿಡು" ಎನ್ನುತ್ತ ಅವನು ತನ್ನ ಹೆಂಡತಿಯನ್ನು ಇಣಚಿಗೆ ಕೊಟ್ಟನು. ಇಣಚಿ ಈ ಹೆಂಡತಿಯನ್ನು ಕರೆದುಕೊಂಡು ಮುಂದೆ ಹೋಯಿತು. ಅಲ್ಲಿ ಒಬ್ಬನು ಅಡುಗೆ ಮಾಡಲು ತನಗೆ ಹೆಂಡತಿಯಿಲ್ಲದ ಕಾರಣ ತಾನೇ ಅಡುಗೆ ಮಾಡಿಕೊಳ್ಳುತ್ತಿದ್ದನು. ಇದನ್ನು ಕಂಡು ಇಣಚಿ "ಈ ಹೆಂಡತಿಯನ್ನು ತಕೋ ನಾಲ್ಕು ದಿನದ ಮೇಲೆ ಕೊಡು" ಎಂದಿತು. ಇಣಚಿ ನಾಲ್ಕು ದಿನದ ಬಳಿಕ ಅಲ್ಲಿಗೆ ಹೋಗಿ "ಹೆಂಡತಿಯನ್ನು ಕೊಡು" ಎಂದಿತು. ಅವನು ಈ ಹೆಂಡತಿಯನ್ನು ಅಡಗಿಸಿಟ್ಟನು. ಅವಳು ಸತ್ತು ಹೋಗಿದ್ದಾಳೆ ಎಂದನು. ಆಗ ಇಣಚಿ "ಹೆಂಡತಿಯನ್ನು ಕೊಡುತ್ತೀಯೋ ನಿನ್ನ ಎತ್ತನ್ನು ಕೊಡುತ್ತೀಯೋ?" ಎಂದು ಕೇಳಿತು. ಅವನು "ಎತ್ತನ್ನು ಕೊಡುತ್ತೇನೆ" ಎಂದನು. ಇಣಚಿ ಎತ್ತನ್ನು ಹೊಡೆದುಕೊಂಡು ಮುಂದೆ ನಡೆಯಿತು. ಅಲ್ಲೊಬ್ಬನು ಒಂದು ಬದಿಗೆ ಒಂದು ಎತ್ತನ್ನು ಇನ್ನೊಂದು ಬದಿಗೆ ತನ್ನ ಹೆಂಡತಿಯನ್ನು ಕಟ್ಟಿಕೊಂಡು ಗದ್ದೆಯನ್ನು ಉಳುತ್ತಿದುದ್ದನ್ನು ನೋಡಿ ಇಣಚಿಯು "ಏ ಮಳ್ಳಾ ಹೆಂಡತಿಯನ್ನು ಗದ್ದೆಯಲ್ಲಿ ನೊಗ ಹೇರಿ ಉಳುತ್ತಾರೇನೋ?" ಎಂದು ಕೇಳಿತು. ಅವನು ನಾಚಿಕೆಯಿಂದ ತಲೆತಗ್ಗಿಸಿದನು. ಅದನ್ನು ನೋಡಿ ಇಣಚಿಯು ಅವನಿಗೆ ತನ್ನ ಎತ್ತನ್ನು ಕೊಟ್ಟಿತು. ನಾಳೆ ಅದನ್ನು ತಿರುಗಿ ಕೊಡು" ಎಂದಿತು. ಮರುದಿನ ಇಣಚಿಯು ಬಂದು "ನನ್ನ ಎತ್ತನ್ನು ಕೊಡು" ಎಂದಿತು. "ಅವನ ಎತ್ತು ಸತ್ತು

ಹೋಯಿತು." ಎಂದನು. ಅವನ ಹತ್ತಿರ ಒಂದು ಡುಮ್ಮಿಕ್ಕಿಯಿತ್ತು. "ಹಾಗಾದರೆ ನನ್ನ ಎತ್ತನ್ನು ಕೊಡುತ್ತೀಯೋ? ನಿನ್ನ ಡುಮ್ಮಿ ಕೊಡುತ್ತೀಯೋ?" ಎಂದು ಕೇಳಿತು. ಅವನು "ಡುಮ್ಮಿ ಕೊಡುತ್ತೇನೆ" ಎಂದನು. ಇಣಚಿಯು ಡುಮ್ಮಿ ತೆಗೆದುಕೊಂಡು ತನ್ನ ಬಾಲ ಕತ್ತರಿಸಿದ ಸಾವುಕಾರನ ಮನೆಯ ಹತ್ತಿರಕ್ಕೆ ಬಂದಿತು. ಮರವನ್ನು ಹತ್ತಿ ಅದರ ಮೇಲೆ ಕುಳಿತು ಡುಮ್ಮಿ ಬಾರಿಸಿ ಹಾಡತೊಡಗಿತು.

"ಬಾಲಾ ಹೋಗಿ ಚೂರಿ ಬಂತು ಡುಂಡುಂ
ಚೂರಿ ಹೋಗಿ ಮಡ್ಕೆ ಬಂತು ಡುಂಡುಂ
ಮಡ್ಕೆ ಹೋಗಿ ಬದನೆಕಾಯಿ ಬಂತು ಡುಂಡುಂ
ಬದನೆಕಾಯ್ಹೋಗಿ ಹೆಂಡತಿ ಬಂತು ಡುಂಡುಂ
ಹೆಂಡತಿ ಹೋಗಿ ಎತ್ತು ಬಂತು ಡುಂಡುಂ
ಎತ್ತು ಹೋಗಿ ಡುಮಕಿ ಬಂತು ಡುಂಡುಂ" ಎಂದು ಪದ ಹೇಳಿತು.

ಸಾವುಕಾರನು ಅದರ ಜಾಣತನಕ್ಕೆ ಮೆಚ್ಚಿ ತನ್ನ ಮನೆಯಲ್ಲಿ ಸುಂದರ ಪಂಜರವನ್ನು ಕಟ್ಟಿಸಿ ಅದರಲ್ಲಿ ಇಣಚಿಯನ್ನಿಟ್ಟು ಅದನ್ನು ಸಾಕಿದನು. ಇಣಚಿಗೆ ತುಂಬಾ ಬುದ್ಧಿಯಿದೆ. ಕತೆ ಬಹಳ ಚಂದವಿದೆ ಅಲ್ಲವೇ?

□□

೧೨

ನೂರಾ ಒಂದು ದನ

ಒಂದು ಊರಿನಲ್ಲಿ ಒಬ್ಬ ಮಾಣಿಯಿದ್ದನು. ಅವನಿಗೆ ತಾಯಿ ಇದ್ದಿರಲಿಲ್ಲ. ಚಿಕ್ಕಮ್ಮ ಇದ್ದಳು. ಚಿಕ್ಕಮ್ಮನಿಗೆ ಒಬ್ಬ ಮಗಳಿದ್ದಳು. ಅವರ ಮನೆಯಲ್ಲಿ ನೂರಾ ಒಂದು ದನಗಳಿದ್ದವು. ಆ ಮಾಣಿಯು ಪ್ರತಿ ದಿನವೂ ಆ ದನಗಳನ್ನು ಗುಡ್ಡಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಅವುಗಳನ್ನು ಮೇಯಿಸಿಕೊಂಡು ಬರುತ್ತಿದ್ದನು. ಚಿಕ್ಕಮ್ಮ ತನ್ನ ಮಗಳಿಗೆ ಮಾತ್ರ ಹಾಲು ಮೊಸರು ತುಪ್ಪ ಕೊಡುತ್ತಿದ್ದಳು. ಇವನಿಗೆ ಏನನ್ನೂ ಕೊಡುತ್ತಿರಲಿಲ್ಲ.

ಒಂದು ದಿನ ಇವನು ಗುಡ್ಡಕ್ಕೆ ಹೋದಾಗ ಎಲ್ಲಾ ದನಗಳೂ ಅವನ ಬಳಿ ಬಂದು ಹೀಗೆಂದವು "ನೀನು ದಿನವೂ ಒಂದು ಮಣ್ಣಿನ ಪಾತ್ರೆಯಲ್ಲಿ ನಮ್ಮ ಹಾಲನ್ನೆಲ್ಲ ಹಿಂಡು ಅದಕ್ಕೆ ಒಂದು ಲಿಂಬು ಹಣ್ಣನ್ನು ಹಿಂಡು ಮರುದಿನ ಗಟ್ಟಿಯಾದ ಮೊಸರು ತಯಾರಾಗುತ್ತದೆ ಅದನ್ನು ನೀನು ತಿನ್ನು" ಎಂದವು. ಇವನು ಹಾಗೆಯೇ ಮಾಡಿದನು. ಮರುದಿನ ಒಂದು ಮಣ್ಣು ಪಾತ್ರೆಯನ್ನು ತಂದು ಅದರಲ್ಲಿ ಎಲ್ಲಾ ದನಗಳ ಹಾಲನ್ನು ಹಿಂಡಿದನು. ಅದಕ್ಕೆ ಒಂದು ಲಿಂಬೆ ಹಣ್ಣನ್ನು ಹಿಂಡಿದನು. ಮರುದಿನ ಒಂದು ಚಾಕುವನ್ನು ತೆಗೆದುಕೊಂಡು ಹೋಗಿ ಆ ಗಟ್ಟಿಯಾದ ಮೊಸರನ್ನು ಕತ್ತರಿಸಿ ತಿಂದನು.

ಈ ಎಲ್ಲ ದನಗಳೂ ಮನೆಗೆ ಬಂದ ಮೇಲೆ ಚಿಕ್ಕಮ್ಮ ಹಾಲು ಕರೆಯಲು ಬಂದಾಗ ಅವಳಿಗೆ ಪಟ ಪಟ ಒದೆಯುತ್ತಿದ್ದವು. ಕೆಲವು ದಿನದ ಮೇಲೆ ಚಿಕ್ಕಮ್ಮನಿಗೆ ಸಂಶಯ ಬಂದಿತು. ಅವಳು ತನ್ನ ಮಗಳನ್ನು ಕರೆದು "ನೀನು ಅಣ್ಣನ ಸಂಗಡ ಗುಡ್ಡಕ್ಕೆ ಹೋಗು ಅಲ್ಲಿ ಅವನು ಏನು ಮಾಡುತ್ತಿದ್ದಾನೆ ನೋಡಿ ಬಾ" ಎಂದಳು.

ಮರುದಿನ ಅಣ್ಣನು ಗುಡ್ಡಕ್ಕೆ ಹೋಗುವಾಗ "ಅಣ್ಣ ಅಣ್ಣ ನಾನು ಬರುತ್ತೇನೆ" ಎಂದಳು. ಅವನು ಬೇಡವೆಂದರೂ ಅವಳು ಕೇಳಲಿಲ್ಲ. ಅವನ ಜೊತೆಗೆ ಹೋದಳು. ಅವನು ಗುಡ್ಡಕ್ಕೆ ಬಂದ ಮೇಲೆ ಒಂದು ಪಾಗಾರದ ವಟ್ಟೆಯಲ್ಲಿ ಇದ್ದ ಪಾತ್ರೆಯನ್ನು ತೆಗೆದನು. ಅದರಲ್ಲಿದ್ದ ಮೊಸರನ್ನು ಕತ್ತರಿಸಿ ತಂಗಿಗೂ ಒಂದು ಚೂರು ಕೊಟ್ಟನು. ತಂಗಿಯು ಮನೆಗೆ ಬಂದು ಅಮ್ಮನ ಹತ್ತಿರ ಹೇಳಿದಳು. ಚಿಕ್ಕಮ್ಮ ಹೇಗಾದರೂ

ಮಾಡಿ ಆ ಮಾಣಿಯನ್ನು ಕೊಲ್ಲಬೇಕೆಂದು ಯೋಚನೆ ಮಾಡಿದಳು. ಮಾಣಿಯ ಹತ್ತಿರ ನೀನು ತಲೆಗೆ ಮೀಯದೆ ಬಹಳ ದಿನಗಳಾದವು. ನಾನು ನಿನ್ನ ತಲೆಗೆ ಮೀಸುತ್ತೇನೆ" ಎಂದಳು. ಅವನು ಅಡ್ಡಿಯಿಲ್ಲ ಎಂದನು. ಇವಳು ಕುದಿಯುವ ನೀರನ್ನು ಅವನ ತಲೆಗೆ ಎರೆದಳು. ಅವನು ಕೂಗುತ್ತಾ ಓಡಿದನು. ಮರುದಿನ ಚಿಕ್ಕಮ್ಮ ತೋಟದಲ್ಲಿಯ ಒಂದು ಬಾಳೆಯ ಗಿಡದ ಬಳಿಯಲ್ಲಿ ಒಂದು ದೊಡ್ಡ ಹೊಂಡವನ್ನು ತೋಡಿದಳು. ಅದರ ಮೇಲೆ ಸೊಪ್ಪು ಸದೆ ಹಾಕಿ ಮುಚ್ಚಿದಳು. ಆ ಮಾಣಿಗೆ ಬಾಳೆ ಎಲೆಯನ್ನು ಕೊಯ್ದುಕೊಂಡು ಬಾ ಎಂದಳು. ತಾನು ಬಾಗಿಲ ಸಂದಿಯಲ್ಲಿ ನೋಡುತ್ತಾ ನಿಂತಳು. ಬಾಳೆ ಎಲೆಯನ್ನು ಕೊಯ್ಯಲು ಹೋಗಿ ಅವನು ಹೊಂಡದಲ್ಲಿ ಬಿದ್ದನು. ಇವಳು ಓಡಿ ಹೋಗಿ ಆ ಹೊಂಡವನ್ನು ಮುಚ್ಚಿದಳು. ಸಂಜೆಯಾದ ಬಳಿಕ ದನಗಳೆಲ್ಲವೂ ಬಂದವು. ಮಾಣಿಯನ್ನು ಕಾಣದೇ ತೋಟಕ್ಕೆ ಹೋದವು. ಹೊಂಡದಲ್ಲಿ ಬಿದ್ದಿರುವ ಮಾಣಿಯನ್ನು ಕಂಡು ಅವನನ್ನು ಮೇಲಕ್ಕೆ ತಂದವು. ಹೊಳ್ಳಿಯ ಮೇಲೆ ಮಲಗಿಸಿದವು ಅವನನ್ನು ನೆಕ್ಕಿ ನೆಕ್ಕಿ ಜೀವ ತಂದವು. ಆ ಚಿಕ್ಕಮ್ಮನನ್ನು ಅದೇ ಹೊಂಡದಲ್ಲಿ ಹಾಕಿ ಹುಗಿದವು. ಬಳಿಕ ಆ ಮಾಣಿಯು ಸುಖವಾಗಿ ಉಳಿದನು.

□□

೧೩

ಕೊಕ್ರಮೀಸೆಯ ಕೊರ್ಲಿಗೌಡ

ಒಂದು ಊರಿನಲ್ಲಿ ಒಬ್ಬನು ಬಹಳ ಕುರಿಯನ್ನು ಸಾಕುತ್ತಿದ್ದನು. ಅದರಲ್ಲಿ ಒಂದು ಕುರಿ ಕುಂಟಾಗಿತ್ತು. ಅವನು ದಿನವೂ ಕುರಿಗಳನ್ನು ಹೊಡೆದುಕೊಂಡು ಮೇಯಿಸಲಿಕ್ಕೆ ಹೋಗುತ್ತಿದ್ದನು. ಆದರೆ ಕುಂಟು ಕುರಿಯ ನಡಿಗೆ ತಡವಾಗುತ್ತಿತ್ತು. ಅದು ಉಳಿದ ಕುರಿಗಳು ಬಂದ ಒಂದು ತಾಸಿನ ಅನಂತರ ಅದು ಮನೆಗೆ ಬಂದು ಮುಟ್ಟುತ್ತಿತ್ತು. ಅದರಂತೆ ಮನೆಗೆ ಬರುವಾಗ ಕೂಡ ಅದಕ್ಕೆ ತಡವಾಗುತ್ತಿತ್ತು. ಒಂದು ದಿನ ಆ ಕುಂಟ ಕುರಿಯು ಮನೆಗೆ ಬರುವಾಗ ತಡವಾಯಿತು . ಸಂಜೆಯೂ ಆಯಿತು. ದಾರಿಯ ಮೇಲೆ ಒಂದು ಹುಲಿಯ ಮನೆ ಇತ್ತು. ಹುಲಿಯು ಮನೆಯಲ್ಲಿ ಇರಲಿಲ್ಲ. ರಾತ್ರಿ ಹುಲಿಯ ಮನೆಯಲ್ಲಿ ಇದ್ದು ಬೆಳಿಗ್ಗೆ ಮನೆಗೆ ಹೋದರಾಯಿತು ಎಂದು ಯೋಚಿಸಿಕೊಂಡು ಅದು ಹುಲಿಯ ಮನೆಯಲ್ಲಿ ಉಳಿಯಿತು. ಆಗ ಹುಲಿ ಬೇಟೆಗೆ ಹೋಗಿತ್ತು. ಬಹಳ ಹೊತ್ತಿನ ನಂತರ ಅದು ತನ್ನ ಮನೆಗೆ ಬಂದಿತು. ಒಳಗೆ ಯಾರೋ ಇದ್ದಾರೆ ಎಂದು ಹುಲಿಗೆ ವಾಸನೆ ಬಂದಿತು. ಹುಲಿ "ಅದು ಯಾರು ನನ್ನ ಮನೆಯ ಒಳಗೆ ಇರುವವರು"? ಎಂದು ಕೇಳಿತು. ಆಗ ಕುರಿಯು "ನಾನೇ ಸಯ್ ಕೊಕ್ರ ಮೀಸೆ ಕೊರ್ಲಿ ಗೌಡಾ" ಎಂದಿತು. ಹುಲಿ ಅದನ್ನು ಕೇಳಿ ಹೆದರಿಕೆಯಿಂದ ಓಡಿ ಹೋಯಿತು. ಹೀಗೆ ಓಡುವಾಗ ದಾರಿ ಬದಿಯಲ್ಲಿ ಒಂದು ನರಿ ನಿಂತುಕೊಂಡು ಹುಲಿ ಓಡುವುದನ್ನು ನೋಡಿತು. ನರಿ ಮುಂದೆ ಬಂದು "ಹುಲಿಯಣ್ಣಾ ಹುಲಿಯಣ್ಣಾ ಇಷ್ಟು ವೇಗದಲ್ಲಿ ಎಲ್ಲಿಗೆ ಓಡ್ತಿದ್ದೀಯಾ?" ಎಂದು ಕೇಳಿತು. ಆಗ ಹುಲಿ ಹೇಳಿತು "ಮಹಾರಾಯನೇ ನನ್ನ ಮನೆಯ ಒಳಗೆ ಯಾರೋ ಬಂದು ಹೊಕ್ಕಿದ್ದಾರೆ. ಯಾರೋ ಕೊಕ್ರ ಮೀಸೆ ಕೊರ್ಲಿ ಗವ್ಡನಂತೆ ಹೆಸರು ಕೇಳಿದರೆ ಹೆದರಿಕೆಯಾಗುತ್ತದೆ" ಎಂದಿತು. ಆಗ ನರಿ "ಅವರು ಯಾರು ಎಂದು ತೋರಿಸು. ಅವರನ್ನು ತಿಂದು ಬಿಡುತ್ತೇನೆ" ಎಂದಿತು. ಆಗ ಹುಲಿ "ನಾನಂತೂ ಬರುವುದಿಲ್ಲ, ನನಗೆ ತುಂಬಾ ಭಯವಾಗುತ್ತದೆ" ಎಂದಿತು. ಆಗ ನರಿ "ನಮ್ಮಿಬ್ಬರ ಬಾಲವನ್ನು ಗಂಟು ಹಾಕಿಕೊಂಡು ಹೋಗೋಣ ಬಾ" ಎಂದು ಹೇಳಿತು. ಅಂತೂ ಇಂತೂ ಹುಲಿಯಣ್ಣ ಮತ್ತು ನರಿಯಣ್ಣ ತಮ್ಮ ಬಾಲವನ್ನು ಗಂಟು ಹಾಕಿಕೊಂಡು ಮುಂದೆ ಹೋದರು. ನರಿಯು ಹುಲಿಯ

ಮನೆಯ ಹತ್ತಿರ ನಿರತುಕೊಂಡು "ಹುಲಿಯಣ್ಣನ ಮನೆಯ ಒಳಗೆ ಇರುವವರು ಯಾರು?" ಎಂದು ಕೇಳ್ತಿತು. ಅಗ ಒಳಗಡೆಯಿಂದ ಕುಂಟ ಕುರಿ ಹೇಳಿತು"ನಾನೇ ಕೊಕ್ರ ಮೀಸೆ ಕೊರ್ಲಿ ಗೌಡ. ಹಗ್ಗ ತರಲೋ ಅಥವಾ ಹಾಗೇ ಬರಲೋ?" ಹೀಗೆ ಹೇಳಿದ್ದೇ ತಡ ಹುಲಿ ನರಿಯ ಮುಖವನ್ನು ಅಡಿಯಲ್ಲಿ ಹಾಕಿ ಎಳೆದುಕೊಂಡು ಓಡಿತು. ನರಿಯ ಬಾಯಿ ಒಡೆದು ರಕ್ತ ಬಂದಿತು. ನರಿ ಎದ್ದುಕೊಂಡು ಮಣ್ಣು ರಕ್ತ ಎಲ್ಲವನ್ನೂ ಒರೆಸಿಕೊಳ್ಳುತ್ತಾ ಹೋಯಿತು. ದಾರಿಯಲ್ಲಿ ಹುಲಿಯಣ್ಣನು ಒಂದು ಹಿಂಡಿನ ಬುಡದಲ್ಲಿ ನಿಂತುಕೊಂಡಿತ್ತು. ನರಿಯ ಬಾಯಿ ಕೆಂಪಾಗಿದ್ದದ್ದನ್ನು ನೋಡಿ "ನಿನ್ನ ಬಾಯಿ ಏಕೆ ಕೆಂಪಾಗಿದೆ?" ಎಂದು ಕೇಳಿತು. ಆಗ ನರಿ "ಒಂದು ಕವಳ ತಿಂದಿದ್ದೆನು. ಆದ್ದರಿಂದ ಬಾಯಿ ಕೆಂಪಾಗಿದೆ" ಎಂದಿತು.

□□

೧೪

ಬೊದ್ ನರಿ

ಒಂದು ಊರಿನಲ್ಲಿ ಒಂದು ನರಿ ಇತ್ತು. ಅದಕ್ಕೆ ದಡ್ಡ ಸ್ವಭಾವ ಇತ್ತು. ಒಂದು ದಿನ ಅದು ಹಿತ್ತಲ ಒಳಗೆ ಹೋಯಿತು. ಅದು ಅಲ್ಲಿ ಇದ್ದಂತಹ ಹಿತ್ತಲ ಕಾಯಿಗಳನ್ನು ಹೊಟ್ಟೆ ಬಿರಿಯುವ ತನಕ ತಿಂದಿತು. ಅದು ಕಾಯಿಗಳನ್ನು ತಿನ್ನುತ್ತಿರುವಾಗ ಆ ಹಿತ್ತಲದ ಒಡೆಯನು ಬಂದನು. ಆ ನರಿ ಅವನನ್ನು ಕಂಡ ಕೂಡಲೇ ಹೆದರಿಕೊಂಡು ಓಡಿ ಹೋಯಿತು. ಹೀಗೆ "ಓಡುವಾಗ ಅದರ ಬೆನ್ನಿಗೆ ಹಣ್ಣಾದ ತಗಟೆ ಸಿಪ್ಪೆ ಹಿಡಿದುಕೊಂಡಿತು. ಆಗ ಅದು ತನ್ನ ಬೆನ್ನನ್ನು ನೋಡಿಕೊಂಡು ತನ್ನ ಬೆನ್ನಿಗೆ ಕಜ್ಜಿಯಾಗಿದೆ" ಎಂದು ತಿಳಿದುಕೊಂಡಿತು. "ಜೋಯಿಸ ನರಿಯ ಬಳಿಗೆ ಹೋಯಿತು. ವಿನನ್ನ ಬೆನ್ನಿಗೆ ಕಜ್ಜಿಯಾಗಿದೆ ಈಗ ಏನು ಮಾಡುವುದು?" ಎಂದು ಕೇಳಿತು. ಆಗ "ಜೋಯಿಸ ನರಿಯು ನೀನು ಹಿತ್ತಲಕಾಯಿ ತಿಂದ ಹಿತ್ತಲಲ್ಲಿ ಚವಡಿ ಬಲೆ ಇತ್ತು. ನೀನು ಆ ಕಾಯಿಯನ್ನು ಕದ್ದು ತಿಂದ ಪರಿಣಾಮ ನಿನ್ನ ಬೆನ್ನಿಗೆ ಕಜ್ಜಿಯಾಗಿದೆ" ಎಂದಿತು. ಆಗ ಬೊದ್ದ ನರಿಯು ಹಾಗಾದರೆ ಈಗ ನಾನೇನು ಮಾಡಲಿ"? ಎಂದು ಕೇಳಿತು. ಆಗ ಜೋಯಿಸ ನರಿಯು ಈ ಕಜ್ಜಿ ಗುಣ ಆಗಬೇಕೆಂದರೆ ನೀನು ಚವಡಿ ಬಲೆಗೆ ಎರಡು ಕೋಳಿ ಹುಂಜವನ್ನು ಬಲಿ ಕೊಡಬೇಕು" ಎಂದಿತು.

ಆಗ ಆ ಬೊದ್ದ ನರಿಯು ಎರಡು ಕೋಳಿ ಹುಂಜಗಳನ್ನು ತರುವುದರ ಸಲುವಾಗಿ ಹುಂಜಗಳನ್ನು ಹುಡುಕುತ್ತಾ ಹೋಯಿತು. ಅದು ಹೋಗುವಾಗ ಅಲ್ಲಿಯೇ ಸಮೀಪದಲ್ಲಿ ಎರಡು ಮೂರು ಜನ ಸಣ್ಣ ಸಣ್ಣ ಮಕ್ಕಳು ಕೋಳಿ ಹುಂಜವನ್ನು ತೆಗೆದುಕೊಂಡು ಆಡಿಸುತ್ತಾ ಇದ್ದರು. ಆಗ ನರಿ ಅವರನ್ನು ದೂರ ಕಳುಹಿಸಲು ಒಂದು ಉಪಾಯ ಮಾಡಿತು. ಆ ಮಕ್ಕಳ ಹತ್ತಿರ ಹೋಗಿ "ಈ ಕೋಳಿಮರಿಯನ್ನು ನಾನು ಆಡಿಸುತ್ತೇನೆ. ನೀವು ನೋಡಿ ನಾನು ಹೇಗೆ ಆಡಿಸುತ್ತೇನೆ" ಎಂದಿತು. ಅದು ಆಡಿಸಲು ಶುರು ಮಾಡಿತು. ನರಿಯು "ನಾನು ಒಂದು ಜಾದೂ ಮಾಡುತ್ತೇನೆ. ಅದಕ್ಕಾಗಿ ನೀವು ನಿಮ್ಮ ನಿಮ್ಮ ಮನೆಗೆ ಹೋಗಿ ತುಸು ಬೂದಿಯನ್ನು ತೆಗೆದುಕೊಂಡು ಬನ್ನಿ" ಎಂದಿತು. ಆಗ ಆ ಮಕ್ಕಳು ಗುಡು ಗುಡು ಓಡಿ ಹೋದರು. ಮತ್ತು ಬೂದಿಯನ್ನು ತೆಗೆದುಕೊಂಡು ಬಂದರು. ಆಗ ಅದು ಕೋಳಿ ಹುಂಜವನ್ನು

ತೆಗೆದುಕೊಂಡು ತನ್ನ ಬಾಯಿ ಹತ್ತಿರ ಹಿಡಿದುಕೊಂಡು "ನೋಡಿ ನೋಡಿ ನನ್ನ ಜಾದು ನೋಡಿ" ಎಂದಿತ್ತು. ಇದು ಏನೋ ಜಾದು ಮಾಡುತ್ತದೆ ಎಂದು ಆ ಮಕ್ಕಳು ಬಾಯಿ ತೆರೆದುಕೊಂಡು ಅದರ ಕಡೆ ನೋಡುತ್ತಾ ಕುಳಿತುಕೊಂಡರು. ಆ ನರಿ ಕೋಳಿ ಹುಂಜವನ್ನು ಅವರ ಕೈಯಿಂದ ತೆಗೆದುಕೊಂಡು ಹೋಗುವುದಕ್ಕಾಗಿ ತನ್ನ ಬಾಯಲ್ಲಿ ಬೂದಿ ತುಂಬಿಸಿಕೊಂಡು. ಆ ಬೂದಿಯನ್ನು ಬಾಯಿಂದ ಉಗುಳಿತು. ಆ ಬೂದಿ ಮಕ್ಕಳ ಕಣ್ಣಿಗೆ ತುಂಬಿತು. ಆಗ ಆ ನರಿ ಆ ಕೋಳಿ ಹುಂಜವನ್ನು ತೆಗೆದುಕೊಂಡು ಓಡಿ ಹೋಯಿತು. ಮತ್ತೆ ಆ ಕೋಳಿ ಹುಂಜವನ್ನು ಆ ಬಲೆಗೆ ಬಲಿ ಕೊಟ್ಟಿತು. ಜೋಯಿಸ ನರಿಯು ಬಲೆಯ ಹಿಂದೆ ಕುಳಿತುಕೊಂಡಿತ್ತು. ಅದು ಬಲಿಯಾದ ಹುಂಜವನ್ನು ತಿಂದಿತು. ಸ್ವಲ್ಪ ದಿನದ ಮೇಲೆ ಆ ನರಿಯ ಬೆನ್ನಿಗೆ ಹಿಡಿದುಕೊಂಡ ತಗಟೆ ಸೊಪ್ಪು ಒಣಗಿ ಬಿದ್ದು ಹೋಯಿತು. ಅದರಿಂದ ಕೋಳಿ ಹುಂಜವನ್ನು ಬಲಿ ಕೊಟ್ಟಿದ್ದಕ್ಕಾಗಿ ತನ್ನ ಕಜ್ಜಿ ಕಡಿಮೆಯಾಯಿತು ಎಂದು ಆ ಬೊದ್ದ ನರಿ ತಿಳಿದುಕೊಂಡಿತು.

□□

೧೫

ಹುಲಿ ಮುಕಳಿಯನ್ನು ಸುಟ್ಟುಕೊಂಡದ್ದು

ಒಂದು ಊರಿನಲ್ಲಿ ಒಂದು ಕಾಡು ಇತ್ತು. ಆ ಕಾಡಿನಲ್ಲಿ ಬಹಳ ಪ್ರಾಣಿಗಳು ಇದ್ದವು. ಒಂದು ದಿನ ನರಿಯೊಂದು ತುಂಬಾ ಹಸಿದಿತ್ತು. ಅದು ಆಹಾರಕ್ಕಾಗಿ ಕಾಡಿನಲ್ಲಿ ಸುತ್ತುತ್ತಾ ಇತ್ತು. ಆ ಕಾಡಿನ ಹತ್ತಿರ ಒಂದು ಗದ್ದೆ ಇತ್ತು. ಅಲ್ಲಿ ಒಂದು ಕೋಳಿ ಬತ್ತವನ್ನು ತಿನ್ನುತ್ತಿತ್ತು. ನರಿ ಆ ಕೋಳಿಯನ್ನು ನೋಡಿತು. ಅದನ್ನು ಕಚ್ಚಿಕೊಂಡು ಹೋಗಿ ಗದ್ದೆಯ ಹಾಳೆ ಕಂಟದ ಮೇಲೆ ಕೋಳಿಯನ್ನು ಮುಕಳಿಯ ಅಡಿಯಲ್ಲಿ ಇಟ್ಟುಕೊಂಡು ತಿನ್ನಲು ಶುರುಮಾಡಿತು.

ಆಗ ಅಲ್ಲಿಗೆ ಒಂದು ದೊಡ್ಡ ಹುಲಿ ಬಂದಿತು. "ನರಿಯಣ್ಣಾ ನರಿಯಣ್ಣಾ ಏನು ತಿನ್ನುತಿದ್ದೀಯಾ? ಎಂದು ಕೇಳಿತು. ಆಗ ಆ ನರಿಗೆ ಹೆದರಿಕೆಯಾಗಿ ಏನು ಹೇಳಬೇಕು ಎಂಬುದು ತಿಳಿಯಲಿಲ್ಲ. ಅದು ಒಂದು ಉಪಾಯ ಮಾಡಿತು."ಮುಕಳಿಯನ್ನು ಸುಟ್ಟುಕೊಂಡು ತಿನ್ನುತ್ತಿದ್ದೇನೆ" ಎಂದಿತು. ಆಗ ಹುಲಿ "ನನಗೊಂದು ಚೂರು ಕೊಡು"ಎಂದಿತು. ಹುಲಿಗೆ ಕೋಳಿ ಚೂರು ಕೊಡಲು ನರಿಗೆ ಮನಸ್ಸೇ ಬರಲಿಲ್ಲ. ಅದು ತನ್ನ ಬಾಲದ ಸ್ವಲ್ಪ ಚೂರನ್ನು ತೆಗೆದು ಹುಲಿಗೆ ಕೊಟ್ಟಿತು. ಹುಲಿ ಆ ಚೂರನ್ನು ತಿಂದು "ಇನ್ನೊಂದು ಚೂರು ಕೊಡು" ಎಂದಿತು. ಆಗಲೂ ನರಿ ಹಾಗೆಯೆ ಮಾಡಿತು. ಕೊನೆಗೆ ಹುಲಿಯು ನರಿಯ ಹತ್ತಿರ "ಈ ಮುಕಳಿ ಚೂರು ಹೇಗೆ ಮಾಡಿದೆ?" ಎಂದು ಕೇಳಿತು. ಆಗ ನರಿ ಹೇಳಿತು. "ಬೆಟ್ಟದಲ್ಲಿ ಬಹಳ ಜನ ಹೆಂಗಸರು ಕಟ್ಟಿಗೆ ತರಲು ಬಂದಿದ್ದರು. ಆಗ ನಾನು ಅವರನ್ನೆಲ್ಲ ಹೆದರಿಸಿ ಬಿಟ್ಟೆ. ಅವರು ಹೆದರಿಕೊಂಡು ಕಟ್ಟಿಗೆ ಹೊತ್ತಾಕಿ ಓಡಿ ಹೋದರು. ಆ ಕಟ್ಟಿಗೆಗೆ ಬೆಂಕಿ ಹಾಕಿ ಅದರ ಮೇಲೆ ನಾನು ಕುಳಿತುಕೊಂಡೆ. ಆಗ ಮುಕಳಿ ಚೂರು ತಯಾರಾಯಿತು. ಹೀಗೆ ನರಿ ಸುಳ್ಳು ಸುಳ್ಳು ಹೇಳಿತು. ಹುಲಿಯು ಅದರ ಮಾತನ್ನು ನಂಬಿತು. ಅಹುದೇ? ಎಂದು ಕೇಳಿತು. ಆಗ ನರಿ "ಹೌದು ನೀನೂ ಹಾಗೆ ಮಾಡು ಎಂದಿತು. ಹುಲಿಯು "ಆಗಲಿ ಹಾಗೆ ಮಾಡುತ್ತೇನೆ" ಎಂದು ಹೇಳಿ ಕಾಡಿಗೆ ನಡೆಯಿತು. ಹೋಗಿ ನರಿ ಹೇಳಿದ ಹಾಗೆ ಮಾಡಿತು.

ಕಟ್ಟಿಗೆ ತೆಗೆದುಕೊಂಡು ಹೋಗಲು ಬಹಳ ಜನ ಗೌಡತಿಯರು ಕಾಡಿಗೆ ಬಂದಿದ್ದರು. ಹುಲಿಯು ಹೋಗಿ ಅವರ ಮುಂದೆ ನಿಂತುಕೊಂಡಿತು. ಅವರೆಲ್ಲರೂ ಕಟ್ಟಿಗೆಯನ್ನು ಅಲ್ಲಿಯೇ ಹೊತ್ತಾಕಿ ಓಡಿ ಹೋದರು. ಹುಲಿ ಕಟ್ಟಿಗೆಗೆ ಬೆಂಕಿ ಹಾಕಿಕೊಂಡು ಅದರ ಮೇಲೆ ಕುಳಿತುಕೊಂಡಿತು. ಆಗ ಬೆಂಕಿ ಉರಿಯಿತು. ಹುಲಿಯ ಮುಕಳಿ ಸುಟ್ಟು ಹೋಯಿತು. "ಅಯ್ಯಯ್ಯೋ ಮುಕ್ಳಿ ಚೂರು ಬರುವುದಿಲ್ಲ". "ನಾನು ಸಾಯುತ್ತಿದ್ದೇನೆ" ಎನ್ನುತ್ತಾ ಕಾಡಿನಲ್ಲಿ ದೂರ ಓಡಿತು. ಹುಲಿಯು ಸತ್ತು ಹೋಯಿತು. ಯಾವತ್ತೂ ಕೆಟ್ಟವರ ಸಂಗ ಮಾಡಬಾರದು.

□□

೧೬

ಕುನ್ನಿಯ ಮಕ್ಕಳು - ೧

ಒಂದು ಊರಿನಲ್ಲಿ ರಾಜ, ರಾಣಿ ಇದ್ದರು. ಅವರ ಮನೆಯ ಮುಂದೆ ಒಂದು ಗಂಡುಕುನ್ನಿ, ಒಂದು ಹೆಣ್ಣು ಕುನ್ನಿ ಇದ್ದವು. ರಾಣಿ ಬಸುರಿಯಾದಳು. ಅವರ ಮನೆಯ ಮುಂದೆ ಇದ್ದ ಕುನ್ನಿಯೂ ಬಸುರಿಯಾಯಿತು. "ಒಂದು ದಿನ ರಾಣಿಯು ಕುನ್ನಿ ಹತ್ತಿರ ಜಗಳ ಮಾಡಿತು. ನನಗೆ ಬಯಕೆಯಾದರೆ ಬೇಕಾದದ್ದನ್ನೆಲ್ಲ ತಿನ್ನುತ್ತೇನೆ. ನಿನಗಾದರೆ ಏನೂ 'ಇಲ್ಲ" ಎಂದಿತು. ಆಗ "ಕುನ್ನಿಯು ನೀನು ಊಟ ಮಾಡಿದ ಆ ಬಾಳೆಯನ್ನು ನಾನು ನೆಕ್ಕಿ ನನ್ನ ಬಯಕೆಯನ್ನು ತೀರಿಸಿಕೊಳ್ಳುತ್ತೇನೆ" ಎಂದಿತು. ಆಗ "ರಾಣಿಯು ನಿನಗೆ ನನ್ನ ಎಂಜಲು ಬಾಳೆಯನ್ನೂ ತಿನ್ನಲು ಕೊಡುವುದಿಲ್ಲ" ಎಂದಿತು. ಆಗ ""ಕುನ್ನಿ ನೀನು ಹಾಗೆಯೆ ಮಾಡು ನನಗಿಲ್ಲದಿದ್ದರು ಚಿಂತೆಯಿಲ್ಲ" ಎಂದಿತು. ರಾಣಿ ದಿನವೂ ತಾನು ಊಟ ಮಾಡಿಕೊಂಡು ಎಂಜಲು ಬಾಳೆಯನ್ನು ಒಗೆಯಲು ಒಂದು ಆಳವಾದ ಹೊಂಡವನ್ನು ತೋಡಿಸಿಕೊಂಡು ಪ್ರತಿ ದಿನ ಊಟದ ಎಂಜಲು ಬಾಳೆಯನ್ನು ಆ ಹೊಂಡದಲ್ಲಿ ಒಗೆಯುತ್ತಿತ್ತು. ಕುನ್ನಿಯು ಹೊಂಡವನ್ನು ಹಾರಿಕೊಂಡು ಬಾಳೆ ನೆಕ್ಕಬಹುದು ಎಂದು ತಿಳಿದುಕೊಂಡು ಬಾಳೆ ಎಲೆಯ ಮೇಲೆ ಕಲ್ಲಿನ ಗೊಜ್ಜು ಮಣ್ಣು ಹಾಕಿ ಇಡುತ್ತಿದ್ದಳು.

ರಾಣಿಗೆ ತಿಂಗಳು ತುಂಬಿ ಅವಳು ಹಡೆದಳು. ಅವಳಿಗೆ ಎರಡು ಕುನ್ನಿ ಮರಿ ಹುಟ್ಟಿದವು. ರಾಣಿಗೆ ಬಹಳ ಬೇಸರವಾಯಿತು. ಕುನ್ನಿಯೂ ಹಡೆಯಿತು ಅದಕ್ಕೆ ಎರಡು ಹೆಣ್ಣು ಮಕ್ಕಳು ಹುಟ್ಟಿದರು. ಕುನ್ನಿಯು ಅವರನ್ನು ಕಾಡಿನಲ್ಲಿ ಒಂದು ಗುಹೆಯಲ್ಲಿ ಇಟ್ಟಳು. ಪ್ರತಿ ದಿನ ಕುನ್ನಿ ರಾಣಿ ಮನೆಯಿಂದ ಅನ್ನವನ್ನು ತೆಗೆದುಕೊಂಡು ಹೋಗಿ ಅವರಿಗೆ ಕೊಡುತ್ತಿತ್ತು. ಮಕ್ಕಳು ದೊಡ್ಡವರಾದರು. ಕುನ್ನಿ ರಾಣಿ ಮನೆಗೆ ಅನ್ನ ತರಲು ಹೋದಾಗ ಎರಡು ಜನ ರಾಜನ ಮಕ್ಕಳು ಕಾಡಿಗೆ ಬಂದರು. ಅವರು ಆ ಕುನ್ನಿ ಮಕ್ಕಳನ್ನು ಕಂಡರು. 'ಅವರು ಆ ಮಕ್ಕಳ ಹತ್ತಿರ ಅವರ ಪರಿಚಯ ಕೇಳಿದರು. ಆಗ ಮಕ್ಕಳು ನಿಮಗೆ ಹೇಳಲು ನಮಗೆ ನಾಚಿಕೆ ಆಗುತ್ತದೆ' ಎಂದರು. "ತೊಂದರೆಯಿಲ್ಲ ಹೇಳಿ" ಎಂದರು ರಾಜನ ಮಕ್ಕಳು. ಆಗ ಅವರು. "ನಾವು ಕುನ್ನಿ ಮಕ್ಕಳು" ಎಂದರು. ತಾಯಿಯು ತಮ್ಮನ್ನು ಕಷ್ಟಪಟ್ಟು ಸಾಕಿದ ರೀತಿಯನ್ನು ತಿಳಿಸಿದರು.

ಈ ಹೆಣ್ಣು ಮಕ್ಕಳ ಒಳ್ಳೆಯ ಗುಣವನ್ನು ನೋಡಿ ಆ ರಾಜನ ಮಕ್ಕಳು ಅವರನ್ನು ಮದುವೆ ಮಾಡಿಕೊಂಡು ಹೋದರು. ಕುನ್ನಿಯು ತನ್ನ ಮಕ್ಕಳಿಗಾಗಿ ಅನ್ನವನ್ನು ತೆಗೆದುಕೊಂಡು ಬಂದಿತು. ಅದು ದಾರಿ ಮೇಲೆ ಬರುವಾಗ ಅವರನ್ನು ಕಂಡಿತು. ಅವರು "ತಾಯಿ ಕುನ್ನಿಯ ಹತ್ತಿರ ನಾವು ಹೋಗುವ ದಾರಿಯನ್ನು ಗುರುತು ಮಾಡಿ ಹೋಗುತ್ತೇವೆ. ನೀನು ಯಾವಾಗಲಾದರೂ ಬರುವುದಾದರೆ ಇದೇ ದಾರಿಯಲ್ಲಿ ಬಾ" ಎಂದು ಹೇಳಿ ಹೋದರು. ಕುನ್ನಿಗೆ ಒಂದು ದಿನ ಮಕ್ಕಳ ಮನೆಗೆ ಹೋಗುವ ಮನಸ್ಸಾಯಿತು. ಅವರು ಗುರುತು ಮಾಡಿದ ದಾರಿಯಲ್ಲಿ ಹೋಯಿತು. ಮಗಳ ಮನೆ ಬಂದ ಕೂಡಲೇ ಅದು ಸೀದಾ ಒಳಗೆ ಹೋಯಿತು. ಅವರಲ್ಲಿ ಕಿರಿಮಗಳು ಅಮ್ಮನನ್ನು ಬಯ್ದಳು. ಹಿರಿಮಗಳು ತಾಯಿಗೆ ಕುಡಿಯಲು ಕೊಟ್ಟಳು. ತಿನ್ನಲು ತಿಂಡಿಯನ್ನು ಕೊಟ್ಟಳು. ಕುನ್ನಿ ಆಸರವನ್ನು ಕುಡಿಯಲು ಒಳಗೆ ಹೋದಾಗ ತಂಗಿಯು ಕುನ್ನಿಗೆ ಬಿಸಿನೀರನ್ನು ತೋಕಿದಳು. ಅದು ಸತ್ತು ಹೋಯಿತು. ಹಿರಿ ಮಗಳು ಅಮ್ಮನ ಹೆಣವನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿಟ್ಟಳು. ಒಂದು ವಾರದ ನಂತರ ತೆಗೆದು ನೋಡಿದಳು. ಅದು ಚಿನ್ನವಾಗಿತ್ತು. ಹಿರಿ ಮಗಳು ಮತ್ತು ಅವಳ ಗಂಡ ಸುಖವಾಗಿ ಉಳಿದರು.

□□

೧೭

ಕುನ್ನಿಯ ಮಕ್ಕಳು - ೨

ಒಂದು ಊರಿನಲ್ಲಿ ಒಬ್ಬ ರಾಜನಿದ್ದನು. ಅವನಿಗೆ ಒಬ್ಬಳು ಹೆಂಡತಿಯಿದ್ದಳು. ಅವರ ಮನೆಯಲ್ಲಿ ಒಂದು ಕುನ್ನಿಯನ್ನು ಸಾಕಿದ್ದರು. ರಾಜನ ಹೆಂಡತಿಯೂ ಬಸುರಿಯಾಗಿದ್ದಳು. ಅವಳ ಮನೆಯಲ್ಲಿದ್ದ ಕುನ್ನಿಯೂ ಬಸುರಿ ಆಗಿತ್ತು. ಅವರಿಬ್ಬರೂ ಹೆತ್ತರು. ರಾಜನ ಹೆಂಡತಿಗೆ ಕುನ್ನಿಮರಿ ಹುಟ್ಟಿತು. ಕುನ್ನಿಗೆ ಎರಡು ಜನ ಹೆಣ್ಣು ಮಕ್ಕಳು ಹುಟ್ಟಿದರು. ತನಗೆ ಕುನ್ನಿ ಮರಿ ಹುಟ್ಟಿದೆಯೆಂದು ನಾಚಿಕೊಂಡು ಕುನ್ನಿಯ ಹೆಣ್ಣುಮಕ್ಕಳನ್ನು ತನ್ನ ಮಡಿಲಲ್ಲಿ ತಂದು ಮಲಗಿಸಿಕೊಳ್ಳುತ್ತಿತ್ತು. ಕುನ್ನಿಯೂ ಆ ಕುನ್ನಿ ಮರಿಗಳನ್ನು ರಾಜನ ಹೆಂಡತಿಯ ಬಳಿಯಲ್ಲಿ ಬಿಟ್ಟು ತನ್ನ ಮಕ್ಕಳನ್ನು ತನ್ನ ಮಡಿಲಲ್ಲಿ ಮಲಗಿಸಿಕೊಳ್ಳುತ್ತಿತ್ತು. ಅದು ಪ್ರತಿದಿನ ಎಂಜಲು ಕುಪ್ಪೆಗೆ ಹೋಗಿ ಬಿಟ್ಟ ಅನ್ನವನ್ನು ತಂದು ತನ್ನ ಮಕ್ಕಳಿಗೆ ಕೊಟ್ಟು ಸಾಕುತ್ತಿತ್ತು. ಅವರು ದೊಡ್ಡವರಾದರು. ಒಂದು ದಿನ ಅವರ ಮನೆಯ ದಾರಿಯಲ್ಲಿ ಎರಡು ಜನ ಸಾಹುಕಾರನ ಮಕ್ಕಳು ಹೋಗುತ್ತಿದ್ದರು. ಅವರು ಈ ಮಕ್ಕಳನ್ನು ನೋಡಿಕೊಂಡು ತಮ್ಮ ಮನೆಗೆ ಕರೆದುಕೊಂಡು ಹೋದರು. ಕಿರಿ ಮಗಳು ತನ್ನ ಕೊರಳಲ್ಲಿದ್ದ ವಟಾಣಿ ಸರವನ್ನು ಹರಿದು ಒಂದೊಂದೇ ವಟಾಣಿ ಗುಂಡನ್ನು ದಾರಿ ಮೇಲೆ ಹೊತ್ತಾಕುತ್ತಾ ಹೋದಳು. ಹೀಗೆ ಯಾಕೆ ಮಾಡುತ್ತೀಯಾ ಎಂದು ಆ ಸಾಹುಕಾರನ ಮಕ್ಕಳು ಕೇಳಿದರು "ನಾವು ಇದೇ ದಾರಿಯಲ್ಲಿ ಹೋಗಿದ್ದೇವೆ ಎಂದು ಅಮ್ಮನಿಗೆ ತಿಳಿಯಲಿ ಅದಕ್ಕಾಗಿ ಹೀಗೆ ಮಾಡಿದೆ" ಎಂದು ಕಿರಿಮಗಳು ಹೇಳಿದಳು. ಆ ಸಾಹುಕಾರನ ಮಕ್ಕಳು ಒಬ್ಬೊಬ್ಬರು ಒಬ್ಬೊಬ್ಬ ಹುಡುಗಿಯನ್ನು ಮದುವೆಯಾದರು.

ಕುನ್ನಿಯು ಸುಮಾರು ಹೊತ್ತಿನ ಮೇಲೆ ಮನೆಗೆ ಬಂದಿತು. ಮನೆಯನ್ನೆಲ್ಲ ನೋಡಿತು. ಮಕ್ಕಳು ಕಾಣಲಿಲ್ಲ ಕೊನೆಗೆ ಮಕ್ಕಳು ಹೋದ ದಾರಿಯಲ್ಲಿ ನಡೆಯಿತು. ಆ ದಾರಿಯಲ್ಲಿ ಬಿದ್ದ ವಟಾಣಿ ಗುಂಡನ್ನು ಒಂದೊಂದಾಗಿ ಬಾಯಲ್ಲಿ ತುಂಬಿಕೊಂಡು ಒಂದು ಮನೆಗೆ ಬಂದಿತು. ಅದು ಅದರ ಹಿರಿಮಗಳ ಮನೆಯಾಗಿತ್ತು. ಹಿರಿಮಗಳು ಅಮ್ಮನಿಗೆ "ನೀನು ನನ್ನ ಮನೆಗೆ ಬರಬೇಡ ಎಂದು ಬಯ್ದು ಹೊಡೆಯಿತು" ಕೊನೆಗೆ ಅದು ಇನ್ನೊಂದು ದಾರಿಯನ್ನು ಹಿಡಿದುಕೊಂಡು ಬಂದಿತು. ಅದು ಅದರ

ಎರಡನೇ ಮಗಳ ಮನೆಯಾಗಿತ್ತು. ಅದು ತನ್ನ ಮನೆಗೆ ಕರೆದುಕೊಂಡು ಹೋಗಿ ಅನ್ನ ಹಾಕಿತು. ಆಗ ಕುನ್ನಿಯು ದಾರಿಯಲ್ಲಿ ಬೀರಿದ್ದ ವಟಾಣಿ ಗುಂಡನ್ನು ತನ್ನ ಕಿರಿ ಮಗಳ ಮುಂದೆ ಇಟ್ಟಿತು. ಆ ಮಗಳಿಗೆ ತಾನು ಬೀರಕೊಂಡು ಬಂದ ಗುಂಡು ತನಗೆ ಸಿಕ್ಕಿತು ಎಂದು ಬಹಳ ಖುಷಿಯಾಯಿತು. ಕೊನೆಗೆ ಆ ಕುನ್ನಿಯು ಅವರ ಮನೆ ಮುಂದೆ ಒಂದು ಅಶ್ವತ್ಥ ಕಟ್ಟೆಯ ಮೇಲೆ ನಿಂತುಕೊಂಡಿತು. "ಪಾಪ ಮಾಡಿದವರು ನರಕಕ್ಕೆ ಹೋಗಲಿ, ಪುಣ್ಯ ಮಾಡಿದವರಿಗೆ ಐಶ್ವರ್ಯ ಸಿಗಲಿ" ಎಂದಿತು. ಆಗ ಆ ಕುನ್ನಿ ಹೇಳಿದ ಹಾಗೆ ಆಯಿತು. ಹಿರಿಮಗಳ ಮನೆಗೆ ನೀರು ಬಂದು ಕೊಚ್ಚಿಕೊಂಡು ಹೋಯಿತು. ಕಿರಿಮಗಳ ಮನೆಯಲ್ಲಿ ಐಶ್ವರ್ಯ ತುಂಬಿತು. ಅಯ್ಯಯೋ ಹಿರಿಮಗಳಿಗೆ ತಾಯಿಯ ಮೇಲೆ ಸ್ವಲ್ಪವೂ ಕರುಣೆ ಇರಲಿಲ್ಲ. ತಾಯಿಯನ್ನೇ ಹೊಡೆಯುವುದನ್ನು ಮಾಡುತ್ತಾ ಇದ್ದಳು. ಇದರಿಂದ ಹಿರಿಮಗಳಿಗೆ ಈ ಗತಿ ಬಂದಿತು. ನಾನು ಕಿರಿಮಗಳ ಮನೆಗೆ ಹೋಗಿಬಂದೆ. ಅವಳು ಸುಖವಾಗಿದ್ದಾಳೆ.

□□

೧೮

ಸಣ್ಣ ಮೊಽಳ ದೊಡ್ಡ ಮೊಽಳ

ಒಂದು ಊರಿನಲ್ಲಿ ಸಣ್ಣ ಮೊಽಳ ದೊಡ್ಡ ಮೊಽಳ ಎಂಬ ಅಣ್ಣ ತಮ್ಮಂದಿರಿದ್ದರು. ಸಣ್ಣ ಮೊಽಳನು ಮಾಳ ಕಾಯಲು ಪ್ರತಿ ದಿನ ಹೋಗುತ್ತಿದ್ದನು. ಒಂದು ದಿನ ನರಿಯು ಬಂದು "ನೀನು ಸಣ್ಣ ಮೊಽಳನೊ ದೊಡ್ಡ ಮೊಽಳನೋ" ಎಂದು ಕೇಳಿತು, ಆಗ ಅವನು ಸಣ್ಣ ಮೊಽಳ ಎಂದನು.

ಅವನು ದಿನವೂ ಬುತ್ತಿ ತೆಗೆದುಕೊಂಡು ಮಾಳ ಕಾಯಲು ಹೋಗುತ್ತಿದ್ದನು. ಮತ್ತೊಂದು ದಿನ ಆ ನರಿಯು ಬಂದು "ನೀನು ಸಣ್ಣ ಮೊಽಳನೋ ದೊಡ್ಡ ಮೊಽಳನೋ" ಎಂದು ಕೇಳಿತು. ಆಗ ಇವನು ತಾನು ಸಣ್ಣ ಮೊಽಳ ಎಂದನು. ನರಿ ಮಾಳದ ಒಳಗೆ ಬಂದಿತು."

"ಬುತ್ತಿಯ ಗಂಟನ್ನು ಬಿಡಿಸು
ಹೊಡತಲ ಗುಡಿ ಮಾಡಿ
ನನ್ನ ಮುಕಳಿಯನ್ನು ತುರಿಸು" ಎಂದಿತು

ಇದೇ ರೀತಿ ಪ್ರತಿ ದಿನವು ನರಿಯು ಬಂದು ಬುತ್ತಿಯನ್ನು ತಿಂದುಕೊಂಡು ಸಣ್ಣ ಮೊಽಳನ ಹತ್ತಿರ ತನ್ನ ಮುಕಳಿಯನ್ನು ತುರಿಸು ಎಂದು ಹೇಳುತ್ತಾ ಇತ್ತು. ಸಣ್ಣ ಮೊಽಳನು ಬುತ್ತಿ ಗಂಟನ್ನು ನರಿಗೆ ಕೊಟ್ಟು ಹೊಡಸಲ ಗುಡಿ ಹಾಕಿಕೊಟ್ಟು ನರಿಯ ಮುಕಳಿಯನ್ನು ತೊಳಿಸುತ್ತಾ ತಾನು ಉಪವಾಸ ಇರುತ್ತಿದ್ದನು.

ಹೀಗೆಯೆ ಬಹಳ ದಿನ ಕಳೆಯಿತು. ಸಣ್ಣ ಮೊಽಳನು ಸೊರಗಿ ಹೋದನು. ಒಂದು ದಿನ ದೊಡ್ಡ ಮೊಽಳನು ತಮ್ಮನ ಬಳಿ "ನೀನು ಇಷ್ಟೊಂದು ಯಾಕೆ ಸೊರಗಿದ್ದಿ" ಎಂದು ಕೇಳಿದನು. ಆಗ ತಮ್ಮನು "ಮಾಳದ ಹತ್ತಿರ ಒಂದು ನರಿ ಬರುತ್ತದೆ. ಅದು ನಾನು ತೆಗೆದುಕೊಂಡು ಹೋದ ಬುತ್ತಿಯನ್ನು ತಿನ್ನುತ್ತದೆ. ಆದ್ದರಿಂದ ನಾನು ಜೀರಾಗಿದ್ದೆ" ಎಂದನು. ಆಗ ಅಣ್ಣನು "ಇಂದು ನಾನು ಹೋಗುತ್ತೇನೆ" ಎಂದು ಹೇಳಿ ತಾನು ಬುತ್ತಿ ಗಂಟನ್ನು ತೆಗೆದುಕೊಂಡು ಹೋದನು.

ನರಿ ಬಂದು "ಸಣ್ಣ ಮೊಽಳನೋ ದೊಡ್ಡ ಮೊಽಳನೋ" ಎಂದು ಕೇಳಿತು. ಆಗ ಅವನು "ಸಣ್ಣ ಮೊಽಳ" ಎಂದನು. ನರಿಯು ಬಂದು ಮಾಳದ ಮೇಲೆ ಕುಳಿತುಕೊಂಡು

ಪ್ರತಿ ದಿನದ ಹಾಗೇ ಹಾಡುತ್ತಾ ಕುಳಿತುಕೊಂಡಿತು. ಅಣ್ಣನು ಬುತ್ತಿ ಗಂಟನ್ನು ಬಿಡಿಸಿಕೊಟ್ಟನು. ಹೊಡಸಲ ಗುಡಿಯನ್ನು ಹಾಕಿಕೊಟ್ಟನು. ಅದರಲ್ಲಿ ಹಾರೆ ಕೋಲನ್ನು ಹಾಕಿ ತುರಿಸುತ್ತಾ ಕುಳಿತನು.

ಬುತ್ತಿಯ ಗಂಟನ್ನು ತಿಂದು ಮುಗಿಸುವ ವೇಳೆಗೆ ಹಾರೆ ಕೋಲನ್ನು ತೆಗೆದು ಅದರ ಮುಕಳಿಯ ಒಳಗೆ ತೂರಿದನು. ಆಗ ಅದು "ಸಣ್ಣ ಮೊಃಳನು ಅಲ್ಲಾ ದೊಡ್ಡ ಮೊಃಳನು ಅಲ್ಲ" ಎಂದು ಹೇಳುತ್ತಾ ಕೂಗುತ್ತಾ ಓಡಿ ಹೋಯಿತು.

೧೯

ಸುಕ್ಕಿನುಂಡೆ

ಒಂದು ಊರಿನಲ್ಲಿ ಅಮ್ಮ ಮಗನು ಇದ್ದರು. ಅಮ್ಮ ಒಂದು ದಿನ ಮೂರು ದೋಸೆ ಮಾಡಿದಳು. ಅಮ್ಮ ಮಗನ ಹತ್ತಿರ ಎರಡು ದೋಸೆ ಕೊಡುತ್ತೇನೆ. "ಅಂಗಡಿಗೆ ಹೋಗಿ ಎರಡು ಸುಕ್ಕಿನುಂಡೆ ತೆಗೆದುಕೊಂಡು ಬಾ" ಎಂದಳು. ಮಗನು ಅಂಗಡಿಗೆ ಹೋಗಿ ಎರಡು ದೋಸೆ ಕೊಟ್ಟು ಅದರ ಬದಲಾಗಿ ಎರಡು ಸುಕ್ಕಿನುಂಡೆ ತೆಗೆದುಕೊಂಡು ಬರುವಾಗ ದಾರಿಯ ಮೇಲೆ ಒಂದು ಮರ ಸಿಕ್ಕಿತು. ಉಚ್ಚಿ ಹೊಯ್ಯಲಿಕ್ಕೆಂದು ಸುಕ್ಕಿನುಂಡೆಯನ್ನು ಮರದ ವಟ್ಟೆಯಲ್ಲಿ ಇಟ್ಟು ಹೋದನು. ಸುಕ್ಕಿನುಂಡೆಯು ಮರದ ವಟ್ಟೆಯಲ್ಲಿ ಕೆಳಗೆ ಇಳಿದು ನಡೆಯಿತು. ಆಗ ಅದು ಅವನ ಕೈಗೆ ಸಿಗಲೇ ಇಲ್ಲ. ಹಾದಿಯಲ್ಲಿ ಒಬ್ಬ ಆಚಾರಿ ಬರುತ್ತಾ ಇದ್ದನು. ಆಗ ಅವನ ಹತ್ತಿರ "ಆಚಾರಿ ಆಚಾರಿ ಆ ಮರದ ವಟ್ಟೆಯಲ್ಲಿ ಎರಡು ಸುಕ್ಕಿನುಂಡೆ ಇದೆ ತೆಗೆದುಕೊಡು" ಎಂದನು. ಆಗ ಆಚಾರಿಯು "ನಾನು ತೆಗೆಯುವುದಿಲ್ಲ" ಎಂದನು. ಆ ಹಾದಿಯಲ್ಲಿ ಒಂದು ಕುನ್ನಿ ಬಂದಿತು. "ಕುನ್ನಿ ಕುನ್ನಿ ಆಚಾರಿಯನ್ನು ಕಚ್ಚು" ಎಂದನು. ಆ ಕುನ್ನಿ "ನಾನು ಕಚ್ಚುವುದಿಲ್ಲ" ಎಂದು ಹೇಳಿತು. ಆಗ ಆ ಹಾದಿಯಲ್ಲಿ ಒಂದು ದೊಣ್ಣೆ ಬಿದ್ದುಕೊಂಡಿತ್ತು. "ದೊಣ್ಣೆ ದೊಣ್ಣೆ ಕುನ್ನಿಯನ್ನು ಹೊಡೆ" ಎಂದನು. ಆ ದೊಣ್ಣೆ "ನಾನು ಹೊಡೆಯುವುದಿಲ್ಲ" ಎಂದಿತು. ಹಾದಿಯ ಬದಿಯಲ್ಲಿ ಬೆಂಕಿಹರಿಯುತ್ತಾ ಬಂತು. "ಬೆಂಕಿ ಬೆಂಕಿ ದೊಣ್ಣೆಯನ್ನು ಸುಡು" ಎಂದನು. ಆಗ ಬೆಂಕಿ"ನಾನು ಸುಡುವದಿಲ್ಲ" ಎಂದಿತು. ಆಚೆ ಬದಿಯಲ್ಲಿ ನೀರು ಹರಿಯುತ್ತಾ ಇತ್ತು. "ನೀರೆ ನೀರೆ ಬೆಂಕಿಯನ್ನು ನಂದಿಸು" ಎಂದನು. ನೀರು "ನಾನು ನಂದಿಸುವುದಿಲ್ಲ" ಎಂದಿತು. ಆಗ ಸಿಟ್ಟಿನಿಂದ ಮಾಣಿಯು ನೀರಿನಲ್ಲಿ ಮುಳುಗಲು ಹೋದನು. ಆಗ ನೀರು "ಮುಳುಗಬೇಡ ಮುಳುಗಬೇಡ ನಾನು ಬೆಂಕಿಯನ್ನು ನಂದಿಸುತ್ತೇನೆ" ಎಂದಿತು. ಬೆಂಕಿ "ನಂದಿಸಬೇಡ ನಂದಿಸಬೇಡ ನಾನು ದೊಣ್ಣೆಯನ್ನು ಸುಡುತ್ತೇನೆ" ಎಂದಿತು. ದೊಣ್ಣೆ "ಸುಡಬೇಡ ಸುಡಬೇಡ ನಾನು ಕುನ್ನಿಯನ್ನು ಹೊಡೆಯುತ್ತೇನೆ" ಎಂದಿತು. ಕುನ್ನಿ "ಹೊಡಿಯಬೇಡ ನಾನು ಆಚಾರಿಯನ್ನು ಕಚ್ಚುತ್ತೇನೆ" ಎಂದಿತು. ಆಗ ಆಚಾರಿಯು "ಕಚ್ಚಬೇಡ ಕಚ್ಚಬೇಡ ನಾನು ಸುಕ್ಕಿನುಂಡೆ ತೆಗೆದುಕೊಡುತ್ತೇನೆ" ಎಂದನು. ಕೊನೆಗೂ ಆಚಾರಿ ಉಂಡೆಯನ್ನು ತೆಗೆದುಕೊಟ್ಟನು. ಮಾಣಿ ಉಂಡೆಗಳನ್ನು ತೆಗೆದುಕೊಂಡು ಅಮ್ಮನ ಹತ್ತಿರ ಕೊಟ್ಟನು. ಅಮ್ಮ ಮಗ ಸುಕ್ಕಿನುಂಡೆಯನ್ನು ತಿನ್ನುತ್ತಾರೆ.

□□

೨೦

ಜಾಣಭಟ್ಟನ ಕತೆ

ಒಂದೂರಲ್ಲಿ ಒಬ್ಬ ಜಾಣ ಭಟ್ಟ ಮತ್ತು ಅವನ ಹೆಂಡತಿಯಿದ್ದರು. ಅವನ ಹೆಂಡತಿ ಪ್ರತಿ ದಿನ ಬೆಳಿಗ್ಗೆ ಎದ್ದು ಮುಖ ತೊಳೆದುಕೊಂಡು ಹೂವನ್ನು ಕೊಯ್ದು ಈಶ್ವರನ ದೇವಸ್ಥಾನಕ್ಕೆ ಹೂವನ್ನು ಹಾಕಿ ಏನೋ ಬೇಡಿಕೊಂಡು ಬರುತ್ತಿದ್ದಳು. ಇವಳು ಪ್ರತಿದಿನ ಹೋಗುವುದರಿಂದ ಜಾಣ ಭಟ್ಟನಿಗೆ ಸಂಶಯ ಬಂದಿತು.

ಒಂದು ದಿನ ಜಾಣ ಭಟ್ಟನು ಅದರ ಹಿಂದೆಯೇ ಹೋಗಿ ದೇವಸ್ಥಾನದ ಹಿಂದೆ ನಿಂತುಕೊಂಡನು. ಅವನ ಹೆಂಡತಿ ದೇವರ ಹತ್ತಿರ ನಿಂತು "ದೇವರೆ ನನ್ನ ಗಂಡನ ಕಣ್ಣು ಕುರುಡಾಗಲಿ ಬೇಗ ಕುರುಡಾಗುವ ಹಾಗೇ ಮಾಡು" ಎಂದು ಬೇಡಿಕೊಳ್ಳುತ್ತಿದ್ದಳು. ಇದನ್ನು ಕೇಳಿಸಿಕೊಂಡ ಜಾಣ ಭಟ್ಟನು ಮನೆಗೆ ಓಡಿ ಬರುತ್ತಾನೆ. ಮನೆಯ ಹೊಳ್ಳಿಯ ಮೇಲೆ ಕುಳಿತುಕೊಂಡನು. ಸ್ವಲ್ಪ ಹೊತ್ತಿನ ನಂತರ ಅವನ ಹೆಂಡತಿ ಬಂದಳು. ಆಗ ಅವನು "ಅಯ್ಯೋ ನನಗೆ ಕಣ್ಣು ಕಾಣುತ್ತಿಲ್ಲ. ಇದೆಲ್ಲ ಹಿಂದಿನ ಜನ್ಮದ ಕರ್ಮದ ಫಲವಿರಬೇಕು" ಎಂದು ಸುಳ್ಳು ಸುಳ್ಳು ಹೇಳುತ್ತಾ ಕಣ್ಣು ಕಾಣದ ಹಾಗೇ ನಾಟಕ ಮಾಡಲು ಶುರು ಮಾಡಿದ. ಹೀಗೆ ಒಂದೆರಡು ದಿನ ಕಳೆಯಿತು. ಇವನು ತನಗೆ ಕುರುಡು ಎಂದು ಹೇಳುತ್ತಿದ್ದನು.

ಒಂದು ದಿನ ಅವನ ಹೆಂಡತಿ ರಾಜನ ಮಗನನ್ನು ಮನೆಗೆ ಕರೆದುಕೊಂಡು ಬಂದಳು. ಮಧ್ಯಾಹ್ನದ ಊಟದ ವೇಳೆ ಕಜ್ಜಾಯ ಮಾಡಿದಳು. ಗಂಡನಿಗೆ ಒಂದು ಕಡೆ ಊಟಕ್ಕೆ ಹಾಕಿದಳು. ಇನ್ನೊಂದು ಬದಿಯಲ್ಲಿ ರಾಜನ ಮಗನಿಗೆ ಊಟ ಹಾಕಿಕೊಂಡು ಅವನ ಪಕ್ಕದಲ್ಲಿ ಕುಳಿತು ಊಟ ಮಾಡಿದಳು. ಊಟವಾದ ಮೇಲೆ ದೇವರ ಕೋಣೆಯ ಒಳಗೆ ರಾಜನ ಮಗನಿಗೆ ಮಲಗಲು ತಯಾರಿ ಮಾಡಿದಳು. ಕಜ್ಜಾಯ ತಿಂದ ಪರಿಣಾಮವಾಗಿ ಹೊಟ್ಟೆ ಭಾರವೆನಿಸಿ ಆತನಿಗೆ ಒಳ್ಳೆಯ ನಿದ್ರೆ ಬಂದಿತು. ರಾತ್ರಿಯಾಯಿತು ಆ ಹೊತ್ತಿನಲ್ಲಿ ಜಾಣ ಭಟ್ಟ ಒಂದು ಉಪಾಯ ಮಾಡಿದನು. ಅವನು ಕೊಟ್ಟಿಗೆಗೆ ಹೋಗಿ ದನ ಕರುಗಳನ್ನು ಅಂಗಳಕ್ಕೆ ಬಿಟ್ಟನು. ನಂತರ ಒಳಗೆ ಹೋಗಿ ಕುಳಿತುಕೊಂಡು ಹೆಂಡತಿಯನ್ನು ಕರೆದನು "ಲೇ ಅದೇನೋ ಕಟ್ ಕಟ್ ಶಬ್ದ ಆಗುತ್ತಾ ಇದೆ. ದನಗಳು ಅಂಗಳಕ್ಕೆ ಬಂದಿರಬೇಕು ಸ್ವಲ್ಪ ಕಟ್ಟಿ

ಹಾಕು ಬಾರೆ"ಎಂದು ಕೂಗಿದನು. ಹೆಂಡತಿ ಬಂದಳು ದನ ಕಟ್ಟಿಹಾಕಲು ಕೊಟ್ಟಿಗೆಗೆ ಹೋದಳು. ಈ ಜಾಣ ಭಟ್ಟನು ಸುಮ್ಮನೆ ಒಳಗೆ ಬಂದನು ಪುರಿ ಸುಟ್ಟಂತಹ ಎಣ್ಣೆ ಬಂಡಿಯಲ್ಲಿ ಎಣ್ಣೆ ಕಾದುಕೊಂಡಿತ್ತು. ಅವನು ಎಣ್ಣೆ ಬಂಡಿಯನ್ನು ತೆಗೆದುಕೊಂಡು ದೇವರ ಕೋಣೆಗೆ ಹೋದನು. ಅಲ್ಲಿ ರಾಜನ ಹುಡುಗ ಗೊರಕೆ ಹೊಡಿಯುತ್ತಾ ಬಾಯಿ ತೆಗೆದುಕೊಂಡು ನಿದ್ರೆ ಮಾಡುತ್ತಾ ಇದ್ದನು. ಅದನ್ನು ನೋಡಿಕೊಂಡು ಎಣ್ಣೆಯನ್ನು ಅವನ ಬಾಯಿಯಲ್ಲಿ ಹೊಯ್ದನು. ರಾಜನ ಮಗನು ಸತ್ತು ಹೋದನು. ನಂತರ ಬಂಡಿಯನ್ನು ಒಲೆಯ ಮೇಲಿಟ್ಟು ತಾನು ಹೊರಗೆ ಬಂದು ಕುಳಿತುಕೊಂಡನು. ನಂತರ ಅವನ ಹೆಂಡತಿಯು ದೇವರ ಕೋಣೆಗೆ ಹೋದಳು. ಅಲ್ಲಿ ಹೋಗಿ ನೋಡಿದರೆ ರಾಜನ ಮಗ ಸತ್ತು ಹೋಗಿದ್ದನು. ಆಗ ಅವನ ಹೆಂಡತಿ ಗಂಡನ ಹತ್ತಿರ ನಡೆದ ಸಂಗತಿಯನ್ನೆಲ್ಲ ಹೇಳಿದಳು. "ಒಂದು ಉಪಾಯ ಹೇಳು" ಎಂದಳು. "ಆಗ ಅವನು ನೀನು ಅಮವಾಸೆ ಗೌಡನ ಮನೆ ಬಾಳೆಯ ಮರಕ್ಕೆ ಹೆಣವನ್ನು ತೆಗೆದುಕೊಂಡು ಹೋಗಿ ಅದರ ಕೈಯಲ್ಲೊಂದು ಬಾಯಲ್ಲೊಂದು ಬಾಳೆಕಾಯಿ ಹಾಕಿ ಒತ್ತಿ ದೂಡಿ ಹಾಕಿ ಬಾ" ಎಂದನು. ಅವಳು ಹೆಣವನ್ನು ತೆಗೆದುಕೊಂಡು ಹೋಗಿ ಅವನು ಹೇಳಿದ ಹಾಗೆ ಮಾಡಿ ಬಾಳೆಮರವನ್ನು ದೂಡಿದಳು. ಬಾಳೆಮರವು ಬಿದ್ದ ಶಬ್ದವನ್ನು ಕೇಳಿ ಅಮವಾಸೆ ಗೌಡನು ಓಡಿ ಬಂದು ನೋಡುತ್ತಾನೆ. ಸತ್ತು ಬಿದ್ದ ರಾಜನ ಮಗನನ್ನು ನೋಡಿದ. ಕೂಡಲೇ ಅವನು ಜಾಣ ಬಟ್ಟನ ಮನೆಗೆ ಓಡಿ ಬಂದನು. "ರಾಜನ ಮಗನು ನಮ್ಮ ಮನೆಯ ಬಾಳೆಮರದ ಕೆಳಗೆ ಬಿದ್ದು ಸತ್ತು ಹೋಗಿದ್ದಾನೆ. ಏನಾದರೂ ಉಪಾಯ ಹೇಳು ನಿನಗೆ ಒಂದು ಸಾವಿರ ರೂಪಾಯಿ ಯನ್ನು ಕೊಡುತ್ತೇನೆ" ಎಂದನು. ಆಗ ಜಾಣ ಭಟ್ಟನು ಒಂದು ಉಪಾಯವನ್ನು ಹೇಳಿದನು. "ನೋಡು ಶಂಕರ ಗೌಡನ ಮನೆ ಗದ್ದೆ ಇದೆ ಅವನು ಪ್ರತಿ ದಿನ ಗದ್ದೆ ಕಾಯಲು ಬರುತ್ತಾನೆ. ನೀನು ಅವನ ಗದ್ದೆಯ ಮಾಳದ ಒಳಗೆ ಹೆಣವನ್ನು ಹಾಕಿ ಬಾ" ಎಂದನು. ಅಮವಾಸೆ ಗೌಡನು ಆತನಿಗೆ ಒಂದು ಸಾವಿರ ರೂಪಾಯಿಯನ್ನು ಕೊಟ್ಟು ಹೋದನು. ಆತನು ಜಾಣ ಭಟ್ಟ ಹೇಳಿದ ಹಾಗೆ ಮಾಡಿದನು.

ಶಂಕರಗೌಡನು ಒಂದು ದೊಡ್ಡ ಬೆಂಕಿಯ ಸೂಡಿಯನ್ನು ಬೀಸುತ್ತಾ ಗದ್ದೆ ಕಾಯಲು ಬಂದನು. ಮಾಳದ ಹತ್ತಿರ ಬಂದು ಮಾಳದ ಅಡಿಯಲ್ಲಿ ಸೂಡಿಯನ್ನು ಹೊತ್ತಾಕುವಾಗ ರಾಜನ ಮಗನ ಹೆಣವನ್ನು ಕಂಡನು. ಹೆಣವನ್ನು ನೋಡಿದ ಕೂಡಲೇ ಜಾಣ ಭಟ್ಟನ ಹತ್ತಿರ ಓಡಿ ಬಂದನು.

"ನನ್ನ ಗದ್ದೆ ಮಾಳದ ಅಡಿಯಲ್ಲಿ ರಾಜನ ಮಗನು ಸತ್ತು ಬಿದ್ದಿದ್ದಾನೆ, ಏನಾದರೂ ಉಪಾಯ ಹೇಳು. ನಿನಗೆ ಒಂದು ಸಾವಿರ ರೂಪಾಯಿ ಕೊಡುತ್ತೇನೆ" ಎಂದನು. ಆಗ ಜಾಣ ಬಟ್ಟನು ಹೇಳಿದನು, ರಾಜನ ಮನೆಯಲ್ಲಿ ಒಂದು ಎಮ್ಮೆ ಇದೆ, ನೀನು ಹೆಣವನ್ನು ತೆಗೆದುಕೊಂಡು ಅಲ್ಲಿಗೆ ಹೋಗಿ ಆ ಹೆಣಕ್ಕೆ ಸ್ವಲ್ಪ ಸಗಣಿಯನ್ನು ಬಡಿದು

ಎಮ್ಮೆಯ ಕಾಲ ಬುಡದಲ್ಲಿ ಹೆಣವನ್ನು ಹಾಕಿ ಬಾ" ಎಂದನು. ಆತ ಹಾಗೆಯೇ ಮಾಡಿದನು ಮತ್ತು ಜಾಣ ಭಟ್ಟನಿಗೆ ಒಂದು ಸಾವಿರ ರೂಪಾಯಿಯನ್ನು ನೀಡಿದನು.

ನಂತರ ರಾಜನ ಸೇವಕರು ರಾಜನ ಮಗನು ಕಾಣಿಸುತ್ತಿಲ್ಲವಲ್ಲ ಎಂದು ಅತನನ್ನು ಹುಡುಕತೊಡಗಿದರು. ಕೊಟ್ಟಿಗೆಯಲ್ಲಿ ನೋಡಿದಾಗ ರಾಜನ ಮಗನು ಎಮ್ಮೆಯ ಕಾಲ ಬುಡದಲ್ಲಿ ಬಿದ್ದುಕೊಂಡಿದ್ದನು. ಹೆಣವನ್ನು ಮನೆಗೆ ತಂದರು. ರಾಜನಿಗೆ ಬಹಳ ದುಃಖವಾಯಿತು. ಕೊನೆಗೆ ಅವನ ಮಗನನ್ನು ತೆಗೆದುಕೊಂಡು ಹೋಗಿ ಗಂಧದ ಕಟ್ಟಿಗೆಯನ್ನು ಹಾಕಿ ಬೆಂಕಿ ಇಟ್ಟರು. ಭಟ್ಟನ ಹೆಂಡತಿಯು ಗಂಡನ ಹತ್ತಿರ ಬಂದು "ಮಗ ಸತ್ತು ಹೋಗಿದ್ದಾನೆ ಎಂದು ರಾಜನಿಗೆ ಬಹಳ ದುಃಖವಾಗಿದೆ, ನಾನು ಮಾತನಾಡಿಸಿ ಬರುತ್ತೇನೆ ಒಂದು ಉಪಾಯ ಹೇಳಿಕೊಡಿ" ಎಂದಳು. ಆಗ ಜಾಣ ಭಟ್ಟನು ಒಂದು ಒಳ್ಳೆಯ ಉಪಾಯವನ್ನು ಹೇಳಿದನು "ಅವರು ದುಃಖಿಸುತ್ತಾ ಇರುತ್ತಾರೆ. ಆಗ ನೀನು ಹೋಗಿ ನನ್ನ ಸಲುವಾಗಿ ನೀನು ಸತ್ತುಹೋದೆ, ನಿನ್ನ ಸಲುವಾಗಿ ನಾನು ಸಾಯುತ್ತೇನೆ ಎಂದು ಹೇಳುತ್ತಾ ನೀನು ಅಳಬೇಕು" ಎಂದನು. ಅವಳು ಹೋಗಿ ರಾಜನ ಮುಂದೆ ಗಂಡ ಹೇಳಿದ ಹಾಗೆ ಹೇಳುತ್ತಾ ಅಳಲು ಶುರು ಮಾಡಿದಳು. ಆಗ ರಾಜನಿಗೆ ತನ್ನ ಮಗನ ಸಾವಿಗೆ ಇವಳೇ ಕಾರಣವೆಂದು ತಿಳಿಯಿತು. ಅವಳನ್ನು ಆ ಬೆಂಕಿಯಲ್ಲಿ ಹಾಕಲು ಸೇವಕರಿಗೆ ಹೇಳಿದನು. ರಾಜನ ಸೇವಕರು ಭಟ್ಟನ ಹೆಂಡತಿಯನ್ನು ಎಳೆದು ಬೆಂಕಿಯಲ್ಲಿ ಹಾಕಿದರು. ರಾಜನ ಮಗನನ್ನು ಹಾಕಿದ ಬೆಂಕಿಯಲ್ಲೇ ಭಟ್ಟನ ಹೆಂಡತಿಯನ್ನು ಹಾಕಿದ್ದಾರೆ ಎಂದು ಜಾಣ ಭಟ್ಟನಿಗೆ ಸುದ್ದಿ ಮುಟ್ಟುತ್ತದೆ. ಮರುದಿನ ರಾಜನ ಹತ್ತಿರ ಜಾಣ ಭಟ್ಟನು ಬಂದನು. "ನನಗೆ ಮನೆಯಲ್ಲಿ ಹೆಂಡತಿ ಇಲ್ಲ, ನನ್ನ ಹೆಂಡತಿಯನ್ನು ನೀವು ಸುಟ್ಟು ಹಾಕಿದ್ದೀರಿ, ನನಗೆ ಅಡುಗೆ ಮಾಡಲು ಹೆಂಡತಿಯಿಲ್ಲ, ನನ್ನ ಹೆಂಡತಿ ತುಂಬಾ ಒಳ್ಳೆಯವಳು. ರಾಜನ ಮಗನನ್ನು ಅವಳು ಸಾಯಿಸಲಿಲ್ಲ ನನಗೆ ಈಗ ಹೆಂಡತಿ ಬೇಕು" ಎಂದನು. ಬೆಳಕು ಹರಿಯುವ ಮೊದಲೇ ಭಟ್ಟನಿಗೆ ಬೇರೆ ಹೆಣ್ಣನ್ನು ತಂದು ರಾಜನು ಮದುವೆ ಮಾಡಿಸಿದನು ಮತ್ತು ಭಟ್ಟನಿಗೆ ತುಂಬಾ ಹಣವನ್ನು ದನ ಕರುಗಳನ್ನು ಕೊಟ್ಟನು. ಹೊಸ ಹೆಂಡತಿಯ ಜೊತೆಯಲ್ಲಿ ಜಾಣ ಭಟ್ಟನು ಸುಖವಾಗಿ ಸಂಸಾರ ಮಾಡಿದನು.

□□

೨೧

ಗೊವೆ ರಾಮಭಟ್ಟನ ಕತೆ

ಒಂದು ಊರಿನಲ್ಲಿ ಭಟ್ಟ ಭಟ್ಟಿತಿ ಇದ್ದರು. ಭಟ್ಟನು ಬಹಳ ಜಿಪುಣನಾಗಿದ್ದನು. ಬಿಲ್ಲಿಗೆ ಬಿಲ್ಲಿ ತೆಗೆದುಕೊಳ್ಳುತ್ತಿದ್ದನು. ಒಂದು ದಿನ ಹೆಂಡತಿಯ ಹತ್ತಿರ ಪೂರಿಯನ್ನು ಮಾಡು, ತಿನ್ನದೇ ಬಹಳ ದಿನವಾಗಿದೆ ಎಂದನು. ಬೇರೆ ಯಾರಾದರೂ ಬರಬಹುದು ಅಂದುಕೊಂಡು ಮನೆಯ ಸುತ್ತಮುತ್ತಲು ಬೇಲಿಯನ್ನು ಹಾಕಿದನು. ಆ ಭಟ್ಟನಿಗೆ ಒಬ್ಬ ಸ್ನೇಹಿತನಿದ್ದನು. ಅವನು ಬೇಲಿಯ ಒಳಗೆ ಬಂದುಕೊಂಡು ಮಾತನಾಡುತ್ತಾ ನಿಂತುಕೊಂಡನು. ರಾಮ ಭಟ್ಟನ ಬೇಲಿ ಕಟ್ಟಿ ಮುಗಿಯಿತು. ಸ್ನೇಹಿತ ಬೇಲಿಯ ಒಳಗಡೆ ಉಳಿದು ಬಿಟ್ಟನು. ಹಾಗೆಯೆ ಅವನು ಭಟ್ಟನ ಜೊತೆಯಲ್ಲಿ ಭಟ್ಟನ ಮನೆಗೆ ಬಂದನು. ಭಟ್ಟನ ಹೆಂಡತಿ ಪೂರಿಯನ್ನು ಸುಟ್ಟು ಇಟ್ಟಿದ್ದಳು. ಸಂಜೆಯಾದರೂ ಭಟ್ಟನ ಸ್ನೇಹಿತ ಹೋಗುವ ಸೂಚನೆಯೇ ಇಲ್ಲವಾಯಿತು. ಭಟ್ಟನು ನಿರ್ವಾಹವಿಲ್ಲದೆ ಸ್ನೇಹಿತನನ್ನು ಊಟಕ್ಕೆ ಕರೆದನು.

ರಾತ್ರಿ ಎಲ್ಲರೂ ಊಟ ಮಾಡಿದರು. ಭಟ್ಟನ ಸ್ನೇಹಿತನು ಊಟವನ್ನು ಮುಗಿಸಿ ಕೈ ತೊಳೆಯಲು ಹೊರಗೆ ಹೋದ ಸಮಯ ನೋಡಿ ರಾಮ ಭಟ್ಟನು ಹೆಂಡತಿಯ ಹತ್ತಿರ "ಪೊರಕೆಯನ್ನು ನನ್ನ ಕಾಲಿಗೆ ಕಟ್ಟಿಕೊಂಡು ಮಲಗುತ್ತೇನೆ. ಸ್ನೇಹಿತನಿಗೆ ನಿದ್ರೆ ಬಂದ ಕೂಡಲೇ ನನ್ನನ್ನು ಎಚ್ಚರಿಸು" ಎಂದನು. ಹೊರಗೆ ಹೋದ ಭಟ್ಟನ ಸ್ನೇಹಿತನು ಭಟ್ಟನ ಹತ್ತಿರವೇ ಬಂದು ಮಲಗಿದನು. ರಾಮ ಭಟ್ಟನಿಗೆ ನಿದ್ರೆ ಬಂದ ಕೂಡಲೇ ಅವನ ಸ್ನೇಹಿತ ರಾಮಭಟ್ಟನ ಕಾಲಿನ ಹಿಡಿಯನ್ನು ತೆಗೆದು ತನ್ನ ಕಾಲಿಗೆ ಹಾಕಿಕೊಂಡು ಮಲಗಿದನು. ಸುಮಾರು ಮಧ್ಯ ರಾತ್ರಿಯ ಹೊತ್ತಿಗೆ ರಾಮ ಬಟ್ಟನ ಹೆಂಡತಿಯು ಅವನೇ ಗಂಡ ಅಂದುಕೊಂಡು ಗಂಡನ ಸ್ನೇಹಿತನನ್ನು ನಿಧಾನವಾಗಿ ಎಚ್ಚರಿಸಿಕೊಂಡು ಒಳಗೆ ಹೋದಳು. ಭಟ್ಟನ ಸ್ನೇಹಿತನು ಒಳಗೆ ಹೋಗಿ ಪೂರಿಯನ್ನು ತಿಂದುಕೊಂಡು ಬಂದು ಮಲಗಿದನು. ಬೆಳಗಾದ ಮೇಲೆ ರಾಮ ಬಟ್ಟನು ಹೆಂಡತಿ ಹತ್ತಿರ "ನೀನು ನನ್ನನ್ನು ರಾತ್ರಿ ಎಚ್ಚರಿಸಲೇ ಇಲ್ಲ" ಎಂದನ್ನು. ಆಗ ಹೆಂಡತಿ "ತಿನ್ನುವಷ್ಟು ತಿಂದು ಆದ ಮೇಲೆ ತಿನ್ನಲಿಲ್ಲ ಎಂದು ಸುಳ್ಳು ಹೇಳುತ್ತೀರಾ"? ಎಂದು ಗಂಡನನ್ನೇ ಪ್ರಶ್ನಿಸಿದಳು. ಆಗ ರಾಮ ಭಟ್ಟನಿಗೆ ನಡೆದ ಸಂಗತಿಯೆಲ್ಲ ತಿಳಿಯಿತು. ಮುಂಜಾನೆ ಭಟ್ಟನ ಸ್ನೇಹಿತನು ಬಟ್ಟನ ಜೊತೆ ಚಹ ತಿಂಡಿ ತಿಂದು ಅಲ್ಲಿಯೇ ಹರಟೆ ಹೊಡೆಯುತ್ತ ಕುಳಿತನು.

□□

೨೨

ಏಕಾದಶಿ ಭಟ್ಟ

ಒಂದು ಊರಿನಲ್ಲಿ ಭಟ್ಟ ಭಟ್ಟಿತಿ ಇದ್ದರು. ಅವರು ತುಂಬ ಬಡವರಾಗಿದ್ದರು. ಒಂದು ದಿನ ಅವರ ಮನೆಯಲ್ಲಿ ಏಕಾದಶಿ ಹಬ್ಬವಾಗಿತ್ತು. ಅವರಿಗೆ ದೋಸೆ ತಿನ್ನಬೇಕೆಂದು ಬಹಳ ಆಸೆ ಆಯಿತು. ಆಗ ಭಟ್ಟನ ಹೆಂಡತಿ ಗಂಡನ ಹತ್ತಿರ "ಅಕ್ಕಿಯಿಲ್ಲ" ಎಂದಳು. ಬಟ್ಟ ಅಕ್ಕಿ ತರಲು ಒಂದು ಒದ್ದೆ ಬಟ್ಟೆಯನ್ನು ತೆಗೆದುಕೊಂಡು ಅಂಗಡಿಗೆ ಹೋದನು. ಒದ್ದೆ ಬಟ್ಟೆಯನ್ನು ಅಕ್ಕಿ ಚೀಲದಲ್ಲಿ ಹಾಕಿದನು. ಆಗ ಅಕ್ಕಿಯೆಲ್ಲ ಆ ಬಟ್ಟೆಗೆ ಹಿಡಿದುಕೊಂಡಿತು. ಮನೆಗೆ ಬಂದು ಅದಕ್ಕೆ ಹಿಡಿದಿದ್ದ ಅಕ್ಕಿಯನ್ನೆಲ್ಲಾ ತೆಗೆದನು. ಆಗ ಹೆಂಡತಿ "ಉದ್ದಿನಬೇಳೆ ಇಲ್ಲ" ಎಂದಳು. ಆಗ ಮತ್ತೆ ಒದ್ದೆ ಬಟ್ಟೆಯನ್ನು ತೆಗೆದುಕೊಂಡು ಅಂಗಡಿಗೆ ಹೋದನು. ಆ ಒದ್ದೆ ಬಟ್ಟೆಯನ್ನು ಉದ್ದಿನ ಬೇಳೆ ಡಬ್ಬದಲ್ಲಿ ಹಾಕಿದನು. ಉದ್ದಿನಬೇಳೆ ಎಲ್ಲ ಆ ಬಟ್ಟೆಗೆ ಹಿಡಿದುಕೊಂಡಿತು. ಮನೆಗೆ ಬಂದು ಆ ಒದ್ದೆ ಬಟ್ಟೆಗೆ ಹಿಡಿದಿದ್ದ ಉದ್ದಿನ ಬೇಳೆಯನ್ನು ತೆಗೆದನು. ಹೆಂಡತಿಯು "ಎಣ್ಣೆ ಇಲ್ಲ" ಎಂದಳು. ಆಗ ಭಟ್ಟನು ಒಣ ಬಟ್ಟೆಯನ್ನು ತೆಗೆದುಕೊಂಡು ಅಂಗಡಿಗೆ ಹೋಗಿ ಅಲ್ಲಿಯ ಎಣ್ಣೆ ಡಬ್ಬದಲ್ಲಿ ಅದನ್ನು ಮುಳುಗಿಸಿದನು. ಮನೆಗೆ ಬಂದು ಆ ಬಟ್ಟೆಯನ್ನು ಹಿಂಡಿದನು. ಆಗ ಪೂರಿ ಮಾಡುವಷ್ಟು ಎಣ್ಣೆ ಸಿಕ್ಕಿತು. ಹೆಂಡತಿಯು ಕಟ್ಟಿಗೆ ಇಲ್ಲ ಎಂದಳು. ಆಗ ಬಟ್ಟನು ಕಟ್ಟಿಗೆ ತರಲು ಕಾಡಿಗೆ ಹೋದನು. ಕಟ್ಟಿಗೆ ಕಡಿಯುತ್ತಿರುವಾಗ ಒಂದು ದೊಡ್ಡ ಹುಲಿ ಬಂದಿತು. "ಭಟ್ಟ ಭಟ್ಟ ನಾನು ನಿನ್ನನ್ನು ತಿನ್ನುತ್ತೇನೆ" ಎಂದಿತು. ಆಗ ಭಟ್ಟ ಹೇಳಿದನು "ಈ ದಿನ ನಮ್ಮ ಮನೆಯಲ್ಲಿ ಏಕಾದಶಿ ಹಬ್ಬ. ಅದಕ್ಕಾಗಿ ಇವತ್ತು ದೋಸೆ ಮಾಡುತ್ತೇವೆ, ನೀನು ರಾತ್ರಿ ನಮ್ಮ ಮನೆಗೆ ಬಾ. ನಿನಗೆ ತುಂಬಾ ದೋಸೆಯನ್ನು ಕೊಡುತ್ತೇನೆ" ಎಂದನು. ಆಗ ಹುಲಿ "ಆಯಿತು ನಾನು ಬರುತ್ತೇನೆ" ಎಂದಿತು. ತಾನೂ ಸ್ಹಹ ಭಟ್ಟನಿಗೆ ಕಟ್ಟಿಗೆಯನ್ನು ಕಟ್ಟಿಕೊಟ್ಟಿತು. ಭಟ್ಟನು ಮನೆಗೆ ಬಂದವನೇ ಹೆಂಡತಿ ಹತ್ತಿರ "ಬೇಗ ಬೇಗ ದೋಸೆ ಮಾಡು" ಎಂದನು. ರಾತ್ರಿ ಆಗುವುದರೊಳಗೆ ಇಬ್ಬರೂ ಸೇರಿ ಎಲ್ಲಾ ದೋಸೆಯನ್ನು ತಿಂದು ಮುಗಿಸಿದರು. ನಂತರ ಕೊಡಪಾನದಲ್ಲಿ ಹಾವನ್ನು ತಂಬಿಗೆಯಲ್ಲಿ ಕಪ್ಪೆಯನ್ನು ಹಾಕಿ ಇಟ್ಟರು. ಒಲೆಯ ಮೇಲೆ ದೋಸೆ ಬಂಡಿ ಇಟ್ಟು ಮೇಲೆ ಒಂದು

ಒದ್ದೆ ಬಟ್ಟೆಯನ್ನು ಕಟ್ಟಿದರು. ಬೆಕ್ಕಿನ ಕುತ್ತಿಗೆಗೆ ಪೊರಕೆಯನ್ನು ಕಟ್ಟಿದರು. ಅಟ್ಟದ ಮೇಲಿನ ಏಣಿಗೆ ಬೆಣ್ಣೆಯನ್ನು ಹಚ್ಚಿದರು. ತಾವು ಇಬ್ಬರೂ ಅಟ್ಟದ ಮೇಲೆ ಹೋಗಿ ಸೋರೆ ಬುರುಡೆಯಲ್ಲಿ ಹೊಕ್ಕಿಕೊಂಡು ಕುಳಿತರು. ರಾತ್ರಿ ಹುಲಿ ಬಂದಿತು. "ಭಟ್ಟ, ಭಟ್ಟ ಬಾಗಿಲು ತೆಗೆ" ಎಂದಿತು. ಭಟ್ಟ ಮಾತನಾಡಲಿಲ್ಲ. ಮತ್ತೆ ಕರೆಯಿತು. ಆಗ ಭಟ್ಟ "ನಾನು ಗುಡಿಸುತ್ತಿದ್ದೇನೆ" ಎಂದನು. ಸುಮಾರು ಹೊತ್ತಿನ ನಂತರ ಮತ್ತೆ ಕರೆಯಿತು. ಆಗ ಭಟ್ಟ ಮಾತನಾಡಲಿಲ್ಲ. ಹುಲಿಗೆ ಸಿಟ್ಟು ಬಂದು ಹಿತ್ತಲ ಬದಿಯ ಬಾಗಿಲಿನಿಂದ ಒಳಗೆ ಬಂತು. ದೋಸೆ ಬಂಡಿಯ ಮೇಲೆ ನೀರು ಬೀಳುತ್ತಾ ಇತ್ತು. ಅದರಿಂದ ಚೊಯ್ ಎನ್ನುವ ಶಬ್ದ ಕೇಳುತ್ತಿತ್ತು. ಹುಲಿ ದೋಸೆ ಬಂಡಿಯ ಮೇಲೆ ಹಾರಿತು. ಅದರ ಕೈ ಕಾಲು ಸುಟ್ಟು ಹೋಯಿತು.

ಹುಲಿಗೆ ತುಂಬಾ ಉರಿ ಆಯಿತು. ಅದು ಕೊಡದಲ್ಲಿ ಕೈ ಹಾಕಿತು. ಆಗ ಕೊಡದಲ್ಲಿದ್ದ ಹಾವು ಹುಲಿಯ ಕೈಯನ್ನು ಕಚ್ಚಿತು. ತಂಬಿಗೆಯಲ್ಲಿ ಕೈ ಹಾಕಿತು. ಆಗ ಕಪ್ಪೆ ಕಚ್ಚಿತು. ಅದೇ ಸಮಯದಲ್ಲಿ ಭಟ್ಟನಿಗೆ ಕೆಮ್ಮು ಬಂದಿತು. ಜೋರಾಗಿ ಕೆಮ್ಮುತ್ತಾನೆ. ಹುಲಿ ಭಟ್ಟನು ಅಟ್ಟದ ಮೇಲೆ ಇದ್ದಾನೆ ಎಂದು ತಿಳಿದು ಅಟ್ಟವನ್ನು ಹತ್ತಲು ಹೋಯಿತು. ಏಣಿಗೆ ಬೆಣ್ಣೆ ಹಚ್ಚಿದ್ದರಿಂದ ಹುಲಿ ಒಂದನೇ ಮೆಟ್ಟಿಲು ಹತ್ತುವುದರ ಒಳಗೆಯೇ ಜಾರಿ ಬೀಳುತಿತ್ತು. ಅಂತೂ ಕೊನೆಯ ಮೆಟ್ಟಿಲನ್ನು ಹತ್ತಿತ್ತು. ಅಲ್ಲಿಂದ ಜಾರಿ ಕೆಳಗೆ ಬಿದ್ದು ಕೈ ಕಾಲನ್ನೆಲ್ಲ ಮುರಿದುಕೊಂಡು ಸತ್ತು ಹೋಯಿತು.

□□

೨೩

ಬೋಳು ಕೆತ್ತಿ ವಡೆ ಮಾಡಿದ್ದು

ಒಂದೂರಲ್ಲಿ ಗಂಡ-ಹೆಂಡತಿ ಇದ್ದರು. ಹೆಂಡತಿಗೆ ತುಂಬಾ ದಿನದಿಂದ ವಡೆ ಮಾಡಬೇಕೆಂದು ಮನಸ್ಸಾಗುತ್ತಿತ್ತು. ಗಂಡ ಇಲ್ಲದ ಸಮಯವನ್ನು ನೋಡಿ ವಡೆಯನ್ನು ಮಾಡಿದಳು. ಅವಳಿಗೆ ಸರಿಯಾಗಿ ವಡೆ ಮಾಡಲು ಬರುತ್ತಿರಲಿಲ್ಲ, ಆದ್ದರಿಂದ ಅವಳು ಮಾಡಿದ ವಡೆ ಉಬ್ಬಲೇ ಇಲ್ಲ. ಅದು ಒಂದು ದಿನಾ ಪಕ್ಕದ ಮನೆಯಲ್ಲಿ ಪ್ರಸ್ತವಾಗಿತ್ತು. ಆಗ ಇವಳು ಹೋಗಿದ್ದಳು. ಆ ಮನೆಯಲ್ಲಿ ವಡೆಯನ್ನು ಸುಡುತ್ತಾ ಇದ್ದರು. ಆಗ ಇವಳು ವಡೆ ಸುಡುತ್ತಿರುವವರ ಹತ್ತಿರ ಕೇಳಿದಳು "ನಾನು ವಡೆ ಸುಟ್ಟರೆ ಯಾಕೆ ವಡೆ ಉಬ್ಬುವುದಿಲ್ಲ?" ಎಂದು ಕೇಳಿದಳು. ಆಗ ಅವರು ಹೇಳಿದರು "ತಲೆ ಬೋಳಿಸಿಕೊಂಡು ಸುಟ್ಟರೆ ಮಾತ್ರ ವಡೆ ಉಬ್ಬುತ್ತದೆ" ಎಂದರು. ಅವಳು ಮನೆಗೆ ಬಂದ ಕೂಡಲೇ ಕ್ಷೌರಿಕನನ್ನು ಮನೆಗೆ ಕರೆಯಿಸಿಕೊಂಡು ತಲೆಯನ್ನು ಬೋಳಿಸಿಕೊಂಡು ವಡೆ ಸುಡುವ ಸಿದ್ಧತೆ ಮಾಡಿಕೊಂಡಳು. ಅದೇ ಹೊತ್ತಿನಲ್ಲಿ ಅವಳ ಗಂಡ ಬಂದನು. ಹೆಂಡತಿಯನ್ನು ನೋಡಿ ಆತನಿಗೆ ಬಹಳ ಸಿಟ್ಟು ಬಂದಿತು. "ಯಾಕೆ ಈ ರೀತಿ ತಲೆಯನ್ನು ಬೋಳಿಸಿಕೊಂಡಿದ್ದೀಯಾ?" ಎಂದು ಕೇಳಿದನು. ಹೆಂಡತಿಯು ನಡೆದ ವಿಷಯವನ್ನು ತಿಳಿಸಿದಳು. ಗಂಡನಿಗೆ ಸಂಗತಿ ತಿಳಿದು ಇನ್ನಷ್ಟು ಸಿಟ್ಟು ಬಂದಿತು. "ಯಾವುದೇ ಕೆಲಸವನ್ನು ಮಾಡಬೇಕಾದರೂ ವಿಚಾರ ಮಾಡಿ ಕೆಲಸವನ್ನು ಮಾಡಬೇಕು" ಎಂದು ಹೇಳಿ. ನೀನು ಮೂರ್ಖ ಹೆಂಗಸು ಎಂದು ಗದರಿಸಿದನು. ಅವಳನ್ನು ಮನೆಯಿಂದ ಹೊರಗೆ ಹಾಕಿದನು. ಇನ್ನೊಂದು ಮದುವೆಯಾಗಿ ಸುಖವಾಗಿದ್ದನು.

□□

೨೪

ಕುಂಟ ತಮ್ಮನ ಕತೆ

ಒಂದು ಊರಿನಲ್ಲಿ ಅಣ್ಣ ತಮ್ಮ ಇದ್ದರು. ತಮ್ಮನು ಕುಂಟನಾಗಿದ್ದನು. ಅವನಿಗೆ ಯಾವ ಕೆಲಸವೂ ಸಾಧ್ಯವಾಗುತ್ತಿರಲಿಲ್ಲ. ಅಣ್ಣನ ಹೆಂಡತಿಗೆ ಇದು ಸೇರುತ್ತಿರಲಿಲ್ಲ. ಅವಳಿಗೆ ಈ ತಮ್ಮನ ಮೇಲೆ ಕೋಪವಿತ್ತು. ಅವಳು ಗಂಡನ ಬಳಿ ಬಂದು 'ನಿಮ್ಮ ತಮ್ಮ ಒಂದು ಕಡ್ಡಿ ಕೆಲಸವನ್ನು ಮಾಡುವುದಿಲ್ಲ ಅವನನ್ನು ಹೊರಗೆ ಹಾಕಿ ಬಿಡಿ' ಎಂದಳು. ಅಣ್ಣನು ಹಿಂದೆ ಮುಂದೆ ವಿಚಾರ ಮಾಡಲಿಲ್ಲ. ತಮ್ಮನನ್ನು ಕರೆದು 'ನೀನು ಮನೆಯಲ್ಲಿರಬೇಡ' ಎಂದುಬಿಟ್ಟನು. ತಮ್ಮನು ನಿರ್ವಾಹವಿಲ್ಲದೆ ಮನೆಯಿಂದ ಹೊರನಡೆದನು.

ಅವನು ಕುಂಟುತ್ತ ಒಂದೇ ಕಾಲಲ್ಲಿ ನಡೆಯುತ್ತಿದ್ದನು. ನಡೆದು ನಡೆದು ಅವನ ಕಾಲು ಸುಲಿದು ಹೋಯಿತು. ನಡೆಯಲಾಗಲಿಲ್ಲ. ದಾರಿ ಬದಿಯ ಕಲ್ಲಿನ ಮೇಲೆ ಕುಳಿತುಕೊಂಡು ಅಳುವುದಕ್ಕೆ ಸುರು ಮಾಡಿದನು. ಇದೇ ಸಮಯಕ್ಕೆ ಈಶ್ವರ ಪಾರ್ವತಿ ಆಕಾಶದಲ್ಲಿ ತಿರುಗಾಡುತ್ತಿದ್ದರು. ಕುಂಟ ತಮ್ಮನು ಅಳುತ್ತಿರುವುದು ಪಾರ್ವತಿಗೆ ಕೇಳಿಸಿತು. ಅವಳು ಈಶ್ವರನನ್ನು ಕರೆದುಕೊಂಡು ಕುಂಟ ತಮ್ಮನಲ್ಲಿಗೆ ಬಂದಳು. ಅವನು ಅಳುವ ಕಾರಣವನ್ನು ತಿಳಿದುಕೊಂಡಳು. ಅವನನ್ನು ಸಮಾಧಾನಪಡಿಸಿದಳು. ಮೂರು ಹರಳುಗಳನ್ನು ಅವನ ಕೈಗೆ ಕೊಟ್ಟು "ಈ ಹರಳುಗಳನ್ನು ಒಂದೊಂದಾಗಿ ಒಗೆದು ನಿನಗೆ ಬೇಕಾದದ್ದನ್ನು ಕೇಳಿಕೊ" ಎಂದಳು. ಕುಂಟ ತಮ್ಮನು ಮೂರು ಹರಳುಗಳನ್ನು ತೆಗೆದುಕೊಂಡು ರಾತ್ರಿ ಮನೆಗೆ ಬಂದನು. ಎಲ್ಲರೂ ಮಲಗಿದ್ದರು. ಒಂದು ಹರಳನ್ನು ಒಗೆದು "ಇಲ್ಲಿ ಮೂರು ಉಪ್ಪರಿಗೆಯ ಮನೆ ಆಗಲಿ" ಎಂದನು. ಕೂಡಲೇ ಅಲ್ಲೊಂದು ಮೂರು ಉಪ್ಪರಿಗೆಯ ಮನೆಯಾಯಿತು. ಮತ್ತೊಂದು ಹರಳನ್ನು ಒಗೆದು "ಈ ಮನೆಯಲ್ಲಿ ಚಿನ್ನ, ವಜ್ರ, ದವಸಧಾನ್ಯ ಎಲ್ಲ ತುಂಬಿ ಹೋಗಲಿ" ಎಂದನು. ಕೂಡಲೇ ಆ ಮನೆಯು ಚಿನ್ನ, ವಜ್ರ, ದವಸಧಾನ್ಯಗಳಿಂದ ತುಂಬಿಹೋಯಿತು. ಅವನು ಮೂರನೆಯ ಹರಳನ್ನು ಒಗೆದನು. "ತನಗೊಂದು ಸುಂದರ ಹೆಂಡತಿ ಬರಲಿ, ಕೊಟ್ಟಿಗೆಯಲ್ಲಿ ಹಾಲನ್ನು ಕೊಡುವ ಹತ್ತು ಆಕಳು

ಎಮ್ಮೆಗಳು ಬರಲಿ" ಎಂದನು. ಅವನು ಹೇಳಿದ ಕೂಡಲೇ ಕುಂಟ ತಮ್ಮನಿಗೆ ಸುಂದರ ಹೆಂಡತಿ ಬಂದಳು. ಕೊಟ್ಟಿಗೆಗೆ ಆಕಳು ಎಮ್ಮೆಗಳು ಬಂದವು. ಮರುದಿನ ಮುಂಜಾನೆ ಅಣ್ಣನ ಹೆಂಡತಿ ಎದ್ದು ನೋಡಿದರೆ ಮನೆ ಅರಮನೆಯಾಗಿದೆ. ಗೋಮಯ ತರುವುದಕ್ಕೆ ಕೊಟ್ಟಿಗೆಗೆ ಹೋದಳು. ಕೊಟ್ಟಿಗೆಯಲ್ಲಿ ಆಕಳು ಎಮ್ಮೆಗಳು ನಿಂತಿದ್ದವು. ಅವಳಿಗೆ ಬಹಳ ಸಂತೋಷವಾಯಿತು. ಗಂಡನ ಹತ್ತಿರ ಓಡಿದಳು. ಗಂಡನನ್ನು ಏಳಿಸಿದಳು ತಾನು ಕಂಡದ್ದನ್ನು ತೋರಿಸಿದಳು ನಿಜವಾಗಿ ನಿನ್ನ ತಮ್ಮನೇ ಇದನೆಲ್ಲ ತಂದಿದ್ದಾನೆ. ಹೋಗಿ ಅವನನ್ನು ಕೇಳು ಇದನ್ನೆಲ್ಲ ಎಲ್ಲಿಂದ ತಂದೆ ಕೇಳು ಎಂದಳು. ಅಣ್ಣನು ತಮ್ಮನ ಬಳಿ ಕೇಳಿದನು. ತಮ್ಮ ಬಹಳ ಮುಗ್ಧನಾಗಿದ್ದನು. ತಾನು ಗುಡ್ಡದ ಮೇಲೆ ಅಳುತ್ತ ಕುಳಿತಿದ್ದೆ. ಈಶ್ವರ ಪಾರ್ವತಿ ಬಂದು ತನಗೆ ಹರಳು ಕೊಟ್ಟದ್ದು ಹರಳಿನಿಂದ ಇವನ್ನೆಲ್ಲ ಪಡೆದದ್ದು ಎಲ್ಲವನ್ನೂ ಹೇಳಿದನು.

ಅಣ್ಣ ತನ್ನ ಹೆಂಡತಿಯ ಹತ್ತಿರ ಈ ವಿಷಯವನ್ನು ಹೇಳಿದನು. ಅಣ್ಣನ ಹೆಂಡತಿಗೆ ಕುಂಟ ತಮ್ಮನಂತೆ ಹರಳುಗಳನ್ನು ಪಡೆದು ತನ್ನ ಆಶೆ ತೀರಿಸಿಕೊಳ್ಳಬೇಕೆಂಬ ಮನಸ್ಸಾಯಿತು. ಗಂಡನ ಹತ್ತಿರ ನೀನೂ ಗುಡ್ಡೆಯ ಮೇಲೆ ಕುಳಿತು ಅಳುತ್ತ ಕುಳಿತು ಕೊಳ್ಳಬೇಕೆಂದು ಒತ್ತಾಯ ಮಾಡಿದಳು. ಈ ಅಣ್ಣನು ತಮ್ಮನು ಹೋದ ಗುಡ್ಡಕ್ಕೆ ಹೋದನು. ತನ್ನ ಕಾಲನ್ನು ಕುಂಟು ಮಾಡಿಕೊಳ್ಳಲು ಸಮೀಪದ ಒಂದು ಕಲ್ಲನ್ನು ಎತ್ತಿ ತನ್ನ ಕಾಲ ಮೇಲೆ ಹಾಕಿಕೊಂಡನು. ಕಾಲು ಮುರಿದು ರಕ್ತ ಕೋಡಿಯಾಗಿ ಹರಿಯಿತು. ಈ ನೋವನ್ನು ತಡೆಯಲಾರದೆ ಕಲ್ಲಿನ ಮೇಲೆ ಕುಳಿತುಕೊಂಡು ಅಳತೊಡಗಿದನು. ಪಾರ್ವತಿ ಈಶ್ವರ ಸಂಚಾರಕ್ಕೆ ಬಂದವರು ಅಣ್ಣನು ಅಳುವ ಧ್ವನಿಯನ್ನು ಕೇಳಿ ಆಕಾಶದಿಂದ ಕೆಳಗಿಳಿದು ಬಂದರು. ತನ್ನ ಕಾಲು ಕುಂಟಾಗಿದೆ ನಡೆಯಲು ಆಗುವುದಿಲ್ಲ. ನಾನು ಬಹಳ ಬಡವ ಎಂದನು. "ಪಾರ್ವತಿ ಈಶ್ವರ ಇವನಿಗೂ ಮೂರು ಹರಳುಗಳನ್ನು ಕೊಟ್ಟರು ನಿನಗೆ ಬೇಕಾದದ್ದನ್ನು ಹೇಳಿ ಒಂದು ಹರಳನ್ನು ಒಗೆ" ಎಂದರು. ಹರಳಿನ ಆಸೆಯಿಂದ ತನ್ನ ಕಾಲಿನ ಮೇಲೆ ತಾನೇ ಕಲ್ಲನ್ನು ಹಾಕಿಕೊಂಡಿದ್ದ ಅಣ್ಣನಿಗೆ ಕಾಲು ಬಾತುಕೊಂಡಿತು. ಮುಂದೆ ನಡೆಯಲಾಗಲಿಲ್ಲ. ಕುಂಟುತ್ತ ಕುಂಟುತ್ತ ಮನೆಯನ್ನು ಮುಟ್ಟಿದನು. ಅಣ್ಣನ ಹೆಂಡತಿ ಕಾಲ ಮೇಲೆ ಕಾಲನ್ನು ಹಾಕಿಕೊಂಡು ಮಂಚದ ಮೇಲೆ ಕುಳಿತ್ತಿದ್ದಳು. ಗಂಡನನ್ನು ಕಂಡ ಕೂಡಲೇ "ಹರಳು ತಂದಿರಾ"? ಎಲ್ಲಿ ಎಲ್ಲಿ ಕೊಡಿ? ಎಂದು ಗಡಬಡಿಸಿದಳು. ಅಣ್ಣನಿಗೆ ಬಹಳ ಸಿಟ್ಟು ಬಂದಿತ್ತು. "ನಿನ್ನ ತಲೆ" ಎಂದುಬಿಟ್ಟನು. ಅವನು ಹಾಗೆ ಹೇಳುತ್ತ ಹರಳುಗಳನ್ನು ಹೊರಗೆ ತೆಗೆದನು. ಆಗ ಒಂದು ಹರಳು ಜಾರಿ ಬಿದ್ದು ಹೋಯಿತು. ಮನೆತುಂಬ ಅವನ ಹೆಂಡತಿಯ ತಲೆಯೇ ತಲೆ, ಅವನ ಮೈಗೆ ನಾಲ್ಕಾರು ತಲೆ ಜೋತು ಬಿದ್ದಿತು. ಅವನ ಹೆಂಡತಿಯ ಮೈಗೆ ತಲೆಗೆ ತಲೆಗಳು ಜೋತುಬಿದ್ದವು. ಅಣ್ಣನಿಗೆ

ಹೆದರಿಕೆಯಾಗಿ ಹೆಂಡತಿಯ ತಲೆಗಳೆಲ್ಲ ಇಲ್ಲಿಂದ ಹೋಗಿ ಬಿಡಲಿ ಎಂದು ಹೇಳಿ ಒಂದು ಹರಳನ್ನು ಒಗೆದನು. ಕೂಡಲೇ ಎಲ್ಲ ತಲೆಗಳೂ ಮಾಯವಾದವು ಅವನ ಹೆಂಡತಿಯ ತಲೆಯೂ ಮಾಯವಾಯಿತು. ಹೆಂಡತಿಯು ನೆಲ ಮೇಲೆ ಹೊರಳಾಡಲು ಸುರುಮಾಡಿದಳು. ಅಣ್ಣನಿಗೆ ಹೆಂಡತಿಯ ಅವಸ್ಥೆಯನ್ನು ನೋಡಿ ಗಾಬರಿಯಾಯಿತು. ನನ್ನ ಹೆಂಡತಿಯ ತಲೆ ಬರಲಿ" ಎಂದು ಹೇಳಿ ಕೊನೆಯ ಹರಳನ್ನು ಒಗೆದನು. ಆಗ ಅವನ ಹೆಂಡತಿಯ ತಲೆ ಬಂದಿತು. ಅತಿಯಾಸೆ ಗತಿಗೇಡಾಯಿತು.

□□

೨೫

ಕುಂಟಣ್ಣನ ಕತೆ

ಒಂದು ಊರಲ್ಲಿ ಮೂರು ಜನ ಅಣ್ಣ ತಮ್ಮಂದಿರು ಇದ್ದರು. ಒಬ್ಬನು ಕುಂಟನಾಗಿದ್ದನು. ಅದಕ್ಕಾಗಿ ಅವನ ಹತ್ತಿರ ಏನೂ ಕೆಲಸ ಮಾಡಲು ಆಗುತ್ತಿರಲಿಲ್ಲ. ಅದಕ್ಕಾಗಿ ಅವನನ್ನು ಬೇರೆ ಇಟ್ಟಿದ್ದರು. ಅವನಿಗೆ ಒಂದು ಗದ್ದೆ ತುಂಡು, ಮುರಿದು ಹೋದ ನೇಗಿಲು, ಒಂದು ಕುಂಟ ಎತ್ತನ್ನು ಕೊಟ್ಟಿದ್ದರು. ಕುಂಟಣ್ಣನಿಗೆ ಗದ್ದೆ ಬಿತ್ತಲು ಬರುತ್ತಿರಲಿಲ್ಲ. ಆದರೂ ಅವನು ಕುಂಟ ಎತ್ತನ್ನು ತೆಗೆದುಕೊಂಡು ಗದ್ದೆ ಹೂಡಿ ಸೊರೆ ಬೀಜವನ್ನು ಬಿತ್ತಿದನು. ಸೊರೆ ಬೀಜ ಬಳ್ಳಿ ಆಗಿ ಬಳ್ಳಿ ಬಹಳ ಕಾಯಿ ಆಯಿತು. ಕಾಯಿಗಳು ಒಣಗಿದವು. ಕಾಯಿಗಳನ್ನು ಒಡೆದನು. ಕಾಯಿಯ ಹೊಟ್ಟೆಯ ಒಳಗೆ ಸಣ್ಣಕ್ಕಿ ತುಂಬಿತ್ತು. ಕುಂಟಣ್ಣನಿಗೆ ಒಬ್ಬಳು ತಂಗಿ ಇದ್ದಳು. ತಂಗಿಯನ್ನು ಕರೆದುಕೊಂಡು ಬಂದು ಕಾಯಿಯನ್ನು ಒಡೆಸಿದನು. ಅಕ್ಕಿ ರಾಶಿಯಾಯಿತು, ಅಕ್ಕಿಯನ್ನು ಅಳೆಯಲು ಅವನ ಬಳಿ ಕೊಳಗವಿರಲಿಲ್ಲ.

ತಂಗಿಯ ಹತ್ತಿರ ಅಣ್ಣನ ಮನೆಯಿಂದ ಕೊಳಗ ತರಲು ಹೇಳಿದನು. ಆಗ ತಂಗಿ ಅಣ್ಣನ ಮನೆಗೆ ಹೋಗಿ "ಕುಂಟಣ್ಣ ಕೊಳಗ ಕೊಡಲು ಹೇಳಿದ್ದಾನೆ" ಎಂದು ಅಣ್ಣನ ಹತ್ತಿರ ಹೇಳಿದಳು. ಆಗ ಅಣ್ಣನ ಹೆಂಡತಿ ಕುಂಟಣ್ಣನಿಗೆ ಕೊಳಗ ಯಾಕೆ ಎಂದು ಅವಳಿಗೆ ಕುತೂಹಲ ಆಯಿತು. ಅವಳು ಕೊಳಗದ ಕೆಳಬದಿಯಲ್ಲಿ ಮಿಶ್ರಿ ಮೇಣ ಹಚ್ಚಿ ಕೊಟ್ಟಳು. ತಂಗಿ ಕೊಳಗ ತೆಗೆದುಕೊಂಡು ಕುಂಟಣ್ಣನಿಗೆ ಕೊಟ್ಟಳು. ಕುಂಟಣ್ಣನು ಅಕ್ಕಿಯನ್ನು ಅಳೆದು ಕೊಳಗವನ್ನು ತಂಗಿಯ ಕೈಯಲ್ಲಿ ಕಳುಹಿಸಿಕೊಟ್ಟನು. ಅವಳು ಅಣ್ಣನ ಹೆಂಡತಿಯ ಹತ್ತಿರ ಕೊಳಗವನ್ನು ಕೊಟ್ಟಳು. ಕೊಳಗದ ಬುಡದಲ್ಲಿ ಸಣ್ಣಕ್ಕಿ ಹಿಡಿದುಕೊಂಡಿತ್ತು. ಅದನ್ನು ನೋಡಿಕೊಂಡು "ಸಣ್ಣಕ್ಕಿ ಎಲ್ಲಿಂದ ಬಂತು?"ಎಂದು ಕೇಳಿದಳು. ಆಗ ತಂಗಿಯು "ಕುಂಟಣ್ಣನಿಗೆ ನೀವು ಕೊಟ್ಟ ಕಲ್ಲು ಕೊಟ್ಟರೆ ಗದ್ದೆಯಲ್ಲಿ ಮುರಿದ ನೇಗಿಲು, ಕುಂಟ ಎತ್ತನ್ನು ತೆಗೆದುಕೊಂಡು ಹೂಡಿ ಸೊರೆ ಬೀಜವನ್ನು ಬಿತ್ತಿದ್ದನು. ಸೊರೆ ಕಾಯಿ ಬೆಳೆಯಿತು ಅದರಲ್ಲಿ ಸಣ್ಣಕ್ಕಿ ತುಂಬಿತ್ತು." ಎಂದಳು. ಆಗ

ಅದೇ ದಿನ ಕುಂಟಣ್ಣನ ಅಣ್ಣನ ಕಡೆಯವರು ತಮ್ಮ ಗದ್ದೆಗೆ ಹೋಗಿ ಕಟ್ಟಿರುವೆ ಬಿಟ್ಟು ಗದ್ದೆಯನ್ನು ಕಲ್ಲಿನ ಕೊಟರೆಯನ್ನಾಗಿ ಮಾಡಿದರು. ತಮ್ಮ ಮನೆಯ ಒಳ್ಳೆಯ ನೇಗಿಲನ್ನು ಮುರಿದು ಕೊಟ್ಟಿಗೆಗೆ ಹೋಗಿ ಎತ್ತಿನ ಕಾಲನ್ನು ಮುರಿದು ಕುಂಟ ಎತ್ತನ್ನಾಗಿ ಮಾಡಿಕೊಂಡು ಗದ್ದೆಗೆ ಹೋದರು. ಗದ್ದೆಯನ್ನು ಹೂಡಿ ಸೊರೆಬೀಜವನ್ನು ಬಿತ್ತಿದರು. ಸೊರೆಕಾಯಿ ಬಹಳ ಆಯಿತು. ಅದನ್ನೆಲ್ಲಾ ಒಡೆದು ನೋಡಿದರೆ ಅದರಲ್ಲಿ ಇರುವುದು ಬರೀ ಸೊರೆ ಬೀಜವೇ ಆಗಿತ್ತು. ಆಗ ಅವರಿಗೆ ತುಂಬಾ ದುಃಖವಾಯಿತು.

□□

೨೬

ಗೊಂಡೆಯ ಗಿಡ

ಒಂದು ಊರಲ್ಲಿ ಅಣ್ಣ ತಂಗಿ ಇದ್ದರು. ತಂಗಿಯ ಹೆಸರು ಪರಮೇಶ್ವರಿ. ಅಣ್ಣನ ಹೆಸರು ಶಂಕರ. ಅವರಿಬ್ಬರು ಒಂದೊಂದು ಗೊಂಡೆಯ ಗಿಡವನ್ನು ನೆಟ್ಟಿದ್ದರು. ಅಣ್ಣನದು ಹೆಣ್ಣು ಗಿಡ ಆಗಿತ್ತು. ತಂಗಿಯದು ಗಂಡು ಗಿಡ ಆಗಿತ್ತು. ಒಮ್ಮೆ ಅಣ್ಣನು ದಂಡಿಗೆ ಹೋಗುವ ಸಂದರ್ಭ ಬಂದಿತು. ಆಗ ಅಣ್ಣನು ದಂಡಿಗೆ ಹೋಗುವಾಗ ತಂಗಿಯ ಹತ್ತಿರ "ನನ್ನ ಗೊಂಡೆಯ ಗಿಡಕ್ಕೆ ನೀರು ಹಾಕು"ಎಂದು ಹೇಳಿ ಹೋದನು.

ಒಂದು ದಿನ ಪರಮೇಶ್ವರಿ ನೀರು ಹಾಕುವಾಗ ಒಂದು ಹೂವು ಚೊಟ್ಟು ಮುರಿದು ಬಿದ್ದು ಕೆಳಗೆ ಬಿದ್ದಿತು. ಪರಮೇಶ್ವರಿಯು ಆ ಹೂವನ್ನು ಮುಡಿದುಕೊಂಡಳು. ಅಣ್ಣ ಬಂದವನು ಗೊಂಡೆ ಹೂವು ಇಲ್ಲದಿದ್ದನ್ನು ನೋಡಿ ಅಮ್ಮನ ಹತ್ತಿರ ಕೇಳಿದನು "ಅಮ್ಮ ಗೊಂಡೆ ಹೂವನ್ನು ಯಾರು ಕೊಯ್ದರು?" ಎಂದು ಕೇಳಿದನು. ಆಗ ಅವನ ತಾಯಿಯು "ತಮ್ಮ ಆ ಹೂವು ಚೊಟ್ಟು ಮುರಿದು ಬಿದ್ದಿತ್ತು, ಅದನ್ನು ತಂಗಿ ಮುಡಿದಳು" ಎಂದಳು. ಆಗ ಅಣ್ಣ "ಹಾಗಾದರೆ ನಾನು ಅವಳನ್ನೇ ಮದುವೆ ಯಾಗುತ್ತೇನೆ" ಎಂದನು. ಬೇಡ ಎಂದು ಹೇಳಿದರೂ ಆತನು ತನ್ನ ಹಟವನ್ನು ಬಿಡಲಿಲ್ಲ. ಕೊನೆಗೆ ಒಂದು ದಿನ ಮದುವೆ ನಿಶ್ಚಯ ಮಾಡಿದರು. ಮದುವೆ ಮುಹೂರ್ತದ ದಿನ ಪರಮೇಶ್ವರಿ ಮನೆಯ ಮುಂದೆ ಇರುವ ಪತ್ರೆಯ ಮರವನ್ನು ಹತ್ತಿ ಕುಳಿತುಕೊಂಡಳು. ಅಣ್ಣನ ಸ್ನಾನವಾದ ಮೇಲೆ ಪರಮೇಶ್ವರಿಯನ್ನು ಕರೆಯಲು ಅವಳ ಅಪ್ಪ ಬಂದನು. ಪತ್ರೆ ಮರದ ಬುಡದಲ್ಲಿ ನಿಂತುಕೊಂಡು

"ಕಾಯಿಸಿದ ನೀರು ಕಬ್ಬಿಣವಾಗಿದೆ
ತಂದ ಜವಳಿ ಲಡ್ಡಾಯಿತು
ಮೀಯಲು ಬಾರೇ ಪರಮೇಶ್ವರಿ" ಎಂದು ಕರೆದನು

ಪರಮೇಶ್ವರಿ ಕೆಳಗೆ ಇಳಿಯಲೇ ಇಲ್ಲ. ಆಗ ಅವಳ ಅಮ್ಮ ಬಂದಳು. ಪತ್ರೆ ಮರದ ಬುಡದಲ್ಲಿ ನಿಂತುಕೊಂಡು

"ಕಾಯಿಸಿದ ನೀರು ಕಬ್ಬಿಣವಾಗಿದೆ
ತಂದ ಜವಳಿ ಲಡ್ಡಾಯಿತು
ಮೀಯಲು ಬಾರೇ ಪರಮೇಶ್ವರಿ" ಎಂದು ಕರೆದಳು.

ಆದರೂ ಪರಮೇಶ್ವರಿ ಕೆಳಗೆ ಇಳಿಯಲೇ ಇಲ್ಲ. ಆಗ ಅವಳ ಅಣ್ಣ ಬಂದನು ಪತ್ರೆ ಮರದ ಬುಡದಲ್ಲಿ ನಿಂತುಕೊಂಡು ಕರೆದನು.

"ಕಾಯಿಸಿದ ನೀರು ಕಬ್ಬಿಣವಾಗಿದೆ
ತಂದ ಜವಳಿ ಲಡ್ಡಾಯಿತು
ಮೀಯಲು ಬಾರೇ ಪರಮೇಶ್ವರಿ" ಎಂದು ಕರೆದನು.

ಯಾರು ಕರೆದರೂ ಅವಳು ಕೆಳಗೆ ಇಳಿಯಲಿಲ್ಲ. ನಂತರ ಮನೆಗೆ ಬಂದ ನೆಂಟರೆಲ್ಲರೂ ಕೂಡಿಕೊಂಡು ಮರವನ್ನು ಕಡಿಯಲು ಸುರು ಮಾಡಿದರು. ಆಗ ಪರಮೇಶ್ವರಿ ಸೂರ್ಯದೇವರನ್ನು ನೆನೆದಳು. ಸೂರ್ಯದೇವನಿಗೆ ಕರುಣೆ ಬಂದು ನೂಲನ್ನು ಬಿಟ್ಟನು. ಅವಳು ಆ ನೂಲನ್ನು ಹಿಡಿದುಕೊಂಡಳು. ಸೂರ್ಯ ದೇವನು ಅವಳನ್ನು ಮೇಲೆ ಎಳೆದುಕೊಂಡನು. ನಂತರ ಅಪ್ಪ, ಅಮ್ಮ, ಅಣ್ಣ ಎಲ್ಲರೂ ಸೂರ್ಯದೇವನನ್ನು ನೆನೆದರು. ಆಗ ಸೂರ್ಯದೇವನು ಒಂದು ನೂಲನ್ನು ಬಿಟ್ಟನು. ಅವರೆಲ್ಲರೂ ಅದನ್ನು ಹಿಡಿದುಕೊಂಡರು. ಸ್ವಲ್ಪ ಮುಂದೆ ಹೋದ ಕೂಡಲೇ ಕೆಳಗೆ ಬಿದ್ದು ಸತ್ತು ಹೋದರು.

□□

೨೭

ಸಿರಿಯಕ್ಕನ ಕತೆ

ಒಂದು ಊರಲ್ಲಿ ಅಣ್ಣ-ತಂಗಿ ಇದ್ದರು. ಅಣ್ಣ ತಂಗಿ ಇಬ್ಬರೂ ಸೇರಿ ಗೊಂಡೆ ಹೂವಿನ ಗಿಡ ನೆಟ್ಟಿದ್ದರು. ಅದರಲ್ಲಿ ತಂಗಿಯದು ಗಂಡು ಗಿಡವಾಗಿತ್ತು. ಅಣ್ಣನದು ಹೆಣ್ಣು ಗಿಡವಾಗಿತ್ತು. ಅಣ್ಣನಿಗೆ ದಂಡಿಗೆ ಹೋಗಲು ಕರೆ ಬಂದಿತು. ಹೋಗುವ ಮೊದಲು ಅವನು ಎಲ್ಲ ಹೂವಿನ ಮೊಗ್ಗನ್ನು ಲೆಕ್ಕ ಮಾಡಿ ಇಟ್ಟಿದ್ದನು. ಒಂದು ದಿನ ಒಂದು ಹೂವು ತೊಟ್ಟು ಮುರಿದು ಬಿತ್ತು. ತಂಗಿ ಬಿದ್ದ ಹೂವನ್ನು ಮುಡಿದುಕೊಂಡಳು. ಅಣ್ಣ ದಂಡಿಗೆ ಹೋದವನು ಬಂದನು. ಅಲ್ಲಿ ಒಂದು ಹೂವು ಇದ್ದಿರಲಿಲ್ಲ. ಆಗ ಅಣ್ಣ ಹೂ ಮುಡಿದವರನ್ನು ನಾನು ಮದುವೆಯಾಗುತ್ತೇನೆ ಎಂದನು.

ತಂಗಿ ಕಾಯಿ ಕೆರೆಯುತ್ತಾ ಇರುವಾಗ ಒಂದು ಬೆಕ್ಕು ಬಂದು "ಸಿರಿಯಕ್ಕಾ ಸಿರಿಯಕ್ಕಾ, ನನಗೊಂದು ಕಾಯಿ ಚೂರು ಕೊಡು ನಾನು ನಿನಗೆ ಏನನ್ನೋ ಹೇಳುತ್ತೇನೆ" ಎಂದಿತು. ಆಗ ಸಿರಿಯಕ್ಕ ಅದಕ್ಕೆ ಕಾಯಿ ಚೂರನ್ನು ಕೊಟ್ಟಳು. ಆಗ ಬೆಕ್ಕು ಹೇಳಿತು "ನಿನ್ನ ಅಣ್ಣಾ ನಿನ್ನನ್ನು ಮದುವೆಯಾಗುತ್ತಾನಂತೆ ಹೌದಾ?" ಎಂದು ಕೇಳಿತು. ಸಿರಿಯಕ್ಕನಿಗೆ ನಾಚಿಕೆಯಾಗಿ ಒಂದು ಆಲದ ಮರದ ಮೇಲೆ ಹೋಗಿ ಕುಳಿತುಕೊಂಡಳು. ಹೋಗುವಾಗ ಎಲೆ, ಅಡಿಕೆ, ಸುಣ್ಣ ತೆಗೆದುಕೊಂಡು ಹೋದಳು. ಕವಳ ಹಾಕಿ ಉಗುಳಿ ಆಲದ ಮರಕೆಂಪಾಗಿ ಹೋಗಿತ್ತು. ಮರುದಿನ ಅಪ್ಪ ಅಮ್ಮ ಅಣ್ಣ ಎಲ್ಲರೂ ಹೋಗಿ ಸಿರಿಯಕ್ಕನಿಗೆ ಕೆಳಗಿಳಿದು ಬಾ ಎಂದು ಹೇಳಿದರು.

ಅವಳ ಅಪ್ಪ ಹೇಳಿದನು

"ಕಾಯಿಸಿದ ನೀರು ಕಬ್ಬಿಣವಾಗಿದೆ
ತಂದ ಜವಳಿ ಲಡ್ಡಾಯಿತು
ಮೀಯಲು ಬಾರೇ ಪರಮೇಶ್ವರಿ"

ಎಂದು ಕರೆದನು.

"ಕಾಯಿಸಿದ ನೀರು ಕಬ್ಬಿಣ ಆಯಿತು.
ಅರಿಶಿನದ ಎಣ್ಣೆ ಗೊಬ್ಬರ ಆಯಿತು
ನೀನು ಕೆಳಗೆ ಇಳಿದು ಬಾ" ಎಂದರು.

ಆಗ ಸಿರಿಯಕ್ಕ

"ಅಪ್ಪ ಎನ್ನುವವನು ಮಾವನಾದ.
ಅಮ್ಮ ಎನ್ನುವವಳು ಅತ್ತೆಯಾದಳು
ಅಣ್ಣ ಎನ್ನುವವನು ಗಂಡನಾದನು
ಊರಿಗೆ ಮುಖ ತೋರಿಸಲಾರೆ" ಎಂದಳು

ಅಮ್ಮ ಹೋದಳು

"ಸಿರಿಯಕ್ಕಾ ಸಿರಿಯಕ್ಕಾ,
ಕಾಯಿಸಿದ ನೀರು ಕಬ್ಬಿಣ ಆಯ್ತು.
ಅರಿಶಿನದ ಎಣ್ಣೆ ಗೊಬ್ಬರ ಆಯಿತು.
ನೀನು ಕೆಳಗೆ ಬಾ" ಎಂದಳು.

ಆಗ ಸಿರಿಯಕ್ಕ ಅಮ್ಮನ ಹತ್ತಿರ

"ಅಪ್ಪ ಎನ್ನುವವನು ಮಾವನಾದ
ಅಮ್ಮ ಎನ್ನುವವಳು ಅತ್ತೆಯಾದಳು
ಅಣ್ಣ ಎನ್ನುವವನು ಗಂಡನಾದ.
ನಾನು ಊರಿಗೆ ಮುಖ ತೋರಿಸಲಾರೆ" ಎಂದಳು.

ಆಗ ಅಣ್ಣ ಎಂದನು

"ಕಾಯಿಸಿದ ನೀರು ಕಬ್ಬಿಣವಾಯ್ತು.
ಅರಿಶಿನದ ಎಣ್ಣೆ ಗೊಬ್ಬರವಾಯಿತು.
ಕೆಳಗೆ ಇಳಿದು ಬಾ" ಎಂದನು.

ಆಗ ಸಿರಿಯಕ್ಕ ಹೇಳಿದಳು

"ಅಪ್ಪ ಎನ್ನುವವನು ಮಾವನಾದ
ಅಮ್ಮ ಎನ್ನುವವಳು ಅತ್ತೆಯಾದಳು .
ಅಣ್ಣ ಎನ್ನುವವನು ಗಂಡನಾದ.
ನಾನು ಊರಿಗೆ ಮುಖ ತೋರಿಸಲಾರೆ" ಎಂದಳು.

ಸಿರಿಯಕ್ಕನನ್ನು ಕರೆಯಲು ಮದುವೆಗೆ ಬಂದ ದಿಬ್ಬಣದವರು ಹೋದರು. ಯಾರು ಬಂದರೂ ಸಿರಿಯಕ್ಕ ಕೆಳಗೆ ಇಳಿಯಲೇ ಇಲ್ಲ.

ಕೊನೆಗೆ ಎಲ್ಲರೂ ಸೇರಿ ಮರ ಕಡಿಯಲು ಸುರು ಮಾಡಿದರು. ಕಡೆಗೆ ಮರ ಬೀಳಲು ಸುರುವಾಯಿತು. ಆಗ ಸೂರ್ಯದೇವ ನೂಲನ್ನು ಬಿಟ್ಟನು. ಅವಳು ನೂಲು ಹತ್ತಿಕೊಂಡು ಮೇಲೆ ಹೋದಳು. ಸೂರ್ಯದೇವ ಅವಳನ್ನು ಮದುವೆಯಾದ. ಅವರಿಗೆ ಒಂದು ಮಗುವಾಯಿತು.

ಒಂದು ದಿನ ಸಿರಿಯಕ್ಕ ಗಂಡನ ತಲೆಯನ್ನು ನೋಡುತ್ತಿದ್ದಳು. ಆಗ ಒಂದು ಹನಿ ಕಣ್ಣೀರು ಸೂರ್ಯದೇವನ ಮೈಮೇಲೆ ಬಿದ್ದಿತು. ಆಗ ಸಿರಿಯಕ್ಕನ ಹತ್ತಿರ "ಅಪ್ಪ-ಅಮ್ಮನನ್ನು ನೋಡಬೇಕು ಅನಿಸುತ್ತದೆಯೆ" ಎಂದು ಕೇಳಿದನು. ಆಗ ಅವಳು "ಹೌದು" ಎಂದಳು. ಆಗ ಸೂರ್ಯದೇವ ನೂಲನ್ನು ಬಿಟ್ಟನು. ಸಿರಿಯಕ್ಕ ಮಗನನ್ನು ಕರೆದುಕೊಂಡು ಕೆಳಗೆ ಇಳಿದು ಬಂದಳು. ಆದರೆ ಅಪ್ಪ ಅಮ್ಮ ಎಲ್ಲರೂ ಮಾಯದ ನಿದ್ದೆಯಲ್ಲಿದ್ದರು.

ಸಿರಿಯಕ್ಕಾ ಮನೆಗೆ ಬಂದು "ಅಪ್ಪಾ ಅಪ್ಪಾ ಗೆಜ್ಜೆ ಕಾಲಿನ ಮೊಮ್ಮಗ ಬಂದಿದ್ದಾನೆ" ಎಂದಳು. ಅಪ್ಪನಿಗೆ ಎಚ್ಚರಿಕೆ ಆಗಲಿಲ್ಲ. ಅಮ್ಮನ ಹತ್ತಿರ ಹೋದಳು "ಅಮ್ಮ ಅಮ್ಮ ಗೆಜ್ಜೆ ಕಾಲಿನ ಮೊಮ್ಮಗ ಬಂದಿದ್ದಾನೆ" ಎಂದಳು. ಅಮ್ಮನಿಗೂ ಎಚ್ಚರವಾಗಲಿಲ್ಲ. ಅಪ್ಪ-ಅಮ್ಮನ ತಲೆಯ ಬದಿಯಲ್ಲಿ ತಾನು ತಂದ ಚಿನ್ನ ದುಡ್ಡನ್ನು ಇಟ್ಟು ನೆರೆಮನೆಯ ಅಜ್ಜಿಯ ಹತ್ತಿರ ಹೋದಳು. ಅಜ್ಜಿಯನ್ನು ಎಬ್ಬಿಸಿ ಮೊಮ್ಮಗನನ್ನು ತೋರಿಸಿ ಅಜ್ಜಿಗೆ ಚಿನ್ನ ದುಡ್ಡನ್ನು ಕೊಟ್ಟಳು. ಆಗ ಸೂರ್ಯದೇವ ನೂಲನ್ನು ಬಿಟ್ಟನು. ಅವಳ ಮಗನನ್ನು ಕರೆದುಕೊಂಡು ಮೇಲೆ ಹೋದಳು.

ಮರುದಿನ ಅಪ್ಪ-ಅಮ್ಮ ಎದ್ದು ನೋಡಿದರೆ ಅಲ್ಲಿ ಚಿನ್ನ ದುಡ್ಡು ಇದ್ದವು. ಇದನ್ನು ಯಾರು ಇಟ್ಟು ಹೋಗಿದ್ದಾರೆ ಎಂದು ಅವರಿಗೆ ತಿಳಿಯಲಿಲ್ಲ. ಆಗ ನೆರೆಮನೆಯ ಅಜ್ಜಿ ಬಂದು "ರಾತ್ರಿ ಸಿರಿಯಕ್ಕ ಬಂದಿದ್ದಳು. ಅವಳಿಗೆ ಒಬ್ಬ ಮಗ ಹುಟ್ಟಿದ್ದಾನೆ ಚೆನ್ನಾಗಿದ್ದಾನೆ. ಅವನು ಕಾಲಿಗೆ ಗೆಜ್ಜೆ ಹಾಕಿಕೊಂಡು ಬಂದಿದ್ದನು, ಸಿರಿಯಕ್ಕ ಚಿನ್ನ ದುಡ್ಡು ಎಲ್ಲವನ್ನೂ ಇಟ್ಟು ಹೋಗಿದ್ದಾಳೆ" ಎಂದಳು. ಆಗ ಅಪ್ಪ-ಅಮ್ಮ ನಾವು ಅವಳನ್ನು ನೋಡುವುದು ಆಗಲಿಲ್ಲ, ಎಂದು ಹೇಳುತ್ತಾ ತುಂಬಾ ಅತ್ತರು.

□□

೨೮

ಕುಡಕೆ

ಒಂದು ಊರಿನಲ್ಲಿ ಒಬ್ಬ ಬಡ ಭಟ್ಟನಿದ್ದನು. ಅವನಿಗೆ ಒಬ್ಬಳು ಹೆಂಡತಿಯಿದ್ದಳು. ನಾಲ್ಕು ಜನ ಮಕ್ಕಳಿದ್ದರು. ಅವನಿಗೆ ಹೆಂಡತಿ ಮಕ್ಕಳ ಹೊಟ್ಟೆ ಹೊರೆಯುವುದು ಸಾಧ್ಯವಾಗುತ್ತಿರಲಿಲ್ಲ. ಮಕ್ಕಳು ಹಸಿವೆಯಿಂದ ಸಂಕಟಪಡುತ್ತಿದ್ದರು.

ಒಂದು ದಿನ ಅವನ ಹೆಂಡತಿಯು ಗಂಡನಿಗೆ "ದುಡಿಯದೇ ಮನೆಯಲ್ಲಿ ಕುಳಿತರೆ ಸಂಸಾರವು ಸಾಗುವುದಿಲ್ಲ. ಹೊರಗೆ ಹೋಗಿ ಏನಾದರೂ ದುಡಿದು ಬಾ" ಎಂದಳು. ಬಡ ಭಟ್ಟನು ಊರೂರೆಲ್ಲ ಸುತ್ತಿದನು. ಎಲ್ಲಿಯೂ ದುಡಿತ ಸಿಗಲಿಲ್ಲ. ಅವನು ಒಂದು ಗುಡ್ಡದ ಮೇಲೆ ಹೋಗಿ ದೇವರನ್ನು ನೆನೆಯುತ್ತ ಕುಳಿತನು. ಇದು ಪಾರ್ವತಿಗೆ ತಿಳಿಯಿತು. ಪಾರ್ವತಿ ಶಿವನಿಗೆ "ಭೂಲೋಕದಲ್ಲಿ ಒಬ್ಬನು ನಮ್ಮನ್ನು ನೆನೆದುಕೊಳ್ಳುತ್ತಿದ್ದಾನೆ. ಅಲ್ಲಿಗೆ ಹೋಗೋಣ ಬನ್ನಿ" ಎಂದಳು. ಆಗ ಶಿವನು ಪಾರ್ವತಿಯೊಂದಿಗೆ ಬಡ ಭಟ್ಟನಿದ್ದ ಸ್ಥಳಕ್ಕೆ ಬಂದನು. "ತನ್ನನ್ನು ನೆನೆದುಕೊಳ್ಳುತ್ತಿದ್ದ ಕಾರಣವೇನು" ಎಂದು ಕೇಳಿದನು. ಆಗ ಭಟ್ಟನು "ನನಗೆ ಬಡತನ ಬಂದಿದೆ. ಉಣ್ಣುವುದಕ್ಕೆ ತಿನ್ನುವುದಕ್ಕೆ ಏನೂ ಇಲ್ಲ" ಎಂದನು. ಆಗ ಪಾರ್ವತಿಯು ನನ್ನ ಕೈಯಲ್ಲಿ [ಬಳಿ] ಮೂರು ಕುಡಕೆಗಳಿವೆ ಅವುಗಳಲ್ಲಿ ಒಂದು ಕುಡಕೆಯನ್ನು ನಿನಗೆ ಕೊಡುತ್ತೇನೆ. ಈ ಕುಡಕೆಯನ್ನು ಹಿಡಿದು ನಿನಗೆ ಅನ್ನ ಬೇಕಾದರೆ 'ಅನ್ನ' ಎಂದು ಕೂಗು, ಅನ್ನದ ರಾಶಿ ಬೀಳುತ್ತದೆ" ಎಂದಳು. ಆಗ ಬ್ರಾಹ್ಮಣನು ಕುಡಕೆಯನ್ನು ತಗೆದುಕೊಂಡು ತನ್ನ ಮನೆಯ ದಾರಿ ಹಿಡಿದು ಬಂದನು. ಬರುವಾಗ ಅಡ್ಡದಾರಿಯಲ್ಲಿ ಒಂದು ಅಂಗಡಿಯು ಸಿಕ್ಕಿತು. ಅವನಿಗೆ ಹಸಿವೆಯಾಗಿತ್ತು. ಅವನು ತನ್ನ ಕುಡಕೆಯನ್ನು ಅಂಗಡಿಯಲ್ಲಿಟ್ಟು "ಇದು ಪಾರ್ವತಿಯು ನನಗೆ ಕೊಟ್ಟದ್ದು ಜೋಪಾನ" ಎಂದು ಅಂಗಡಿಯ ಶೆಟ್ಟಿಗೆ ಹೇಳಿ ಒಬ್ಬರ ಮನೆಗೆ ಊಟಕ್ಕೆ ಹೋದನು. ಆ ಅಂಗಡಿಯ ಶೆಟ್ಟಿಯು ಬಡಭಟ್ಟನ ಕುಡಕೆಯನ್ನು ತೆಗೆದು ಒಳಗಿಟ್ಟನು. ಆ ಕುಡುಕೆಯ ಜಾಗದಲ್ಲಿ ಬೇರೊಂದು ಕುಡುಕೆಯನ್ನು ಇಟ್ಟನು.

ಆ ಭಟ್ಟನು ಊಟ ಮಾಡಿ ಬಂದು ಅಲ್ಲಿದ್ದ ಕುಡಕೆಯನ್ನು ತೆಗೆದುಕೊಂಡು ಮನೆಗೆ ನಡೆದನು. ಇತ್ತ ಆ ಅಂಗಡಿ ಶೆಟ್ಟಿಯು ಬಡಭಟ್ಟನ ಕುಡಕೆಯನ್ನು

ಹಿಡಿದುಕೊಂಡು. "ಮುಂಡಕ್ಕಿ ಮುಂಡಕ್ಕಿ" ಎಂದನು. ಆಗ ಅವನ ಮುಂದೆ ಮುಂಡಕ್ಕಿಯ ರಾಶಿ ಬಿದ್ದಿತು. ಶೆಟ್ಟಿಯು ಆ ಕುಡಕೆಯನ್ನು ಹಿಡಿದುಕೊಂಡು ತನಗೆ ಬೇಕಾದ ಎಲ್ಲ ಸಾಮಾನುಗಳ ಹೆಸರನ್ನು ಒಂದೊಂದಾಗಿ ಹೇಳಿದನು. ಅವನು ಹೆಸರು ಹೇಳಿದ ಎಲ್ಲ ಸಾಮಾನುಗಳು ರಾಶಿರಾಶಿಯಾಗಿ ಅಂಗಡಿಯಲ್ಲಿ ತುಂಬಿಹೋದವು. ಇತ್ತ ಭಟ್ಟನಿಗೆ ತನ್ನ ಕುಡುಕೆ ಬದಲಾಗಿರುವುದು ಗೊತ್ತಾಗಲೇ ಇಲ್ಲ. ಮನೆಗೆ ಬಂದು ಕುಡುಕೆಯನ್ನು ಮುಂದಿಟ್ಟುಕೊಂಡು "ಅನ್ನ ಅನ್ನ" ಎಂದು ಹೇಳಿದನು. ಅನ್ನ ಬರಲೇ ಇಲ್ಲ. ಅಲ್ಲಿಂದ ಅಳುತ್ತ ಅಡವಿಗೆ ಹೋದನು. ಅಲ್ಲಿ ಬಂಡೆಯ ಮೇಲೆ ಕುಳಿತು ಈಶ್ವರ ಪಾರ್ವತಿಯರನ್ನು ನೆನೆಯತೊಡಗಿದನು. ಈಶ್ವರ ಮತ್ತು ಪಾರ್ವತಿ ಭಟ್ಟನ ಮುಂದೆ ಪ್ರತ್ಯಕ್ಷವಾದರು.

"ನಮ್ಮನ್ನು ಯಾಕೆ ನೆನೆದೆ?" ಎಂದು ಕೇಳಿದರು. ಆಗ ಭಟ್ಟನು "ನೀವು ಕೊಟ್ಟ ಕುಡಕೆಯಲ್ಲಿ ಅನ್ನ ಬರುತ್ತಿಲ್ಲ" ಎಂದನು. ಆಗ ಪಾರ್ವತಿ ಮತ್ತೊಂದು ಕುಡಕೆಯನ್ನು ಅವನಿಗೆ ಕೊಟ್ಟಳು.

ಭಟ್ಟನು ಈ ಕುಡಕೆಯನ್ನು ತೆಗೆದುಕೊಂಡು ಹೋಗಿ ಈ ಹಿಂದೆ ಇಟ್ಟ ಅಂಗಡಿಯಲ್ಲಿಯೇ ಇಟ್ಟನು. ಊಟ ಮಾಡಲೆಂದು ಒಬ್ಬರ ಮನೆಗೆ ಹೋದನು. ಅಂಗಡಿಯ ಶೆಟ್ಟಿಯು ಈ ಬಾರಿಯೂ ಭಟ್ಟನ ಕುಡಕೆಯನ್ನು ತೆಗೆದು ಒಳಗಿಟ್ಟು ಅಲ್ಲಿ ಬೇರೊಂದು ಕುಡಕೆಯನ್ನಿಟ್ಟನು. ಭಟ್ಟನು ಈ ಕುಡಕೆಯನ್ನು ಮನೆಗೊಯ್ದನು. ಅಲ್ಲಿ ಕುಡಕೆಯನ್ನು ಮುಂದಿಟ್ಟುಕೊಂಡು "ಅನ್ನ ಅನ್ನ" ಎಂದನು. ಆದರೆ ಕುಡಕೆಯಿಂದ ಅನ್ನ ಹೊರಬರಲಿಲ್ಲ. ಭಟ್ಟನು ಅಳುತ್ತ ಅಡವಿಗೆ ಹೋದನು. ಈಶ್ವರ ಪಾರ್ವತಿಯರನ್ನು ನೆನೆದನು. ಅವರು ಭಟ್ಟನ ಮುಂದೆ ಬಂದು ನಿಂತರು. "ಏನು ತೊಂದರೆಯಾಯಿತು?" ಎಂದು ಕೇಳಿದರು.

ಬಟ್ಟನು "ಈ ಬಾರಿಯೂ ಕುಡಕೆಯಿಂದ ಅನ್ನ ಬರಲಿಲ್ಲ"ವೆಂದು ಹೇಳಿದನು. ಅವನು ಕುಡಕೆಯನ್ನು ಶೆಟ್ಟಿಯ ಅಂಗಡಿಯಲ್ಲಿಟ್ಟಿದ್ದ ಸಂಗತಿಯನ್ನು ತಿಳಿಸಿದನು. ಆಗ ಪಾರ್ವತಿ ಈಶ್ವರರಿಗೆ ಇಲ್ಲಿ ಏನಾಯಿತೆಂಬುದು ತಿಳಿದುಹೋಯಿತು. ಅವರು ಭಟ್ಟನಿಗೆ ಇನ್ನೊಂದು ಕುಡಕೆಯನ್ನು ಕೊಟ್ಟರು. ಇದನ್ನು ಶೆಟ್ಟಿಯ ಅಂಗಡಿಯಲ್ಲಿಡು ನಮ್ಮ ಬಂಟರು ಬಂದು ನಿನಗೆ ಸಹಾಯ ಮಾಡುತ್ತಾರೆ ಎಂದರು. ಭಟ್ಟನು ಕುಡಕೆಯನ್ನೊಯ್ದು ಶೆಟ್ಟರ ಅಂಗಡಿಯಲ್ಲಿಟ್ಟನು. ಎಂದಿನಂತೆ ತಾನು ಊಟಕ್ಕೆ ಹೋದನು.

ಶೆಟ್ಟಿಯು ಈ ಕುಡಕೆಯನ್ನು ಎತ್ತಿಕೊಂಡನು. ಅವನು ಎತ್ತಿಕೊಂಡದ್ದೇ ತಡ ಕುಡಕೆಯಿಂದ ದೆವ್ವಭೂತಗಳು ಹೊರಗೆ ಬಂದು ಶೆಟ್ಟಿಯನ್ನು ಬಡಿಯತೊಡಗಿದವು. ಅದೇ ಸಮಯದಲ್ಲಿ ಭಟ್ಟನು ಊಟ ಮುಗಿಸಿಕೊಂಡು ಕುಡಕೆಯಿದ್ದ ಸ್ಥಳಕ್ಕೆ ಬಂದನು.

ಭೂತ ದೆವ್ವಗಳು ಅಂಗಡಿಯ ಶೆಟ್ಟಿಗೆ ಹೊಡೆಯುತ್ತಿದ್ದವು. ಭಟ್ಟನು ಶೆಟ್ಟಿಯ ಬಳಿ ನಿಂತು. 'ನನ್ನ ಕುಡಕೆಗಳನ್ನು ಕೊಟ್ಟುಬಿಡು ನಿನಗೆ ಹೊಡೆತ ಬೀಳುವುದಿಲ್ಲ' ಎಂದನು. ಶೆಟ್ಟಿ ಒಳಗೆ ಹೋಗಿ ಎರಡೂ ಕುಡಕೆಗಳನ್ನು ತಂದು ಭಟ್ಟನಿಗೆ ಒಪ್ಪಿಸಿದನು. ಅವನು ತನ್ನ ಎರಡೂ ಕುಡಕೆಗಳನ್ನು ತೆಗೆದುಕೊಂಡನು. ಮೂರನೆಯ ಕುಡಕೆಯನ್ನು ಕವಚಿಟ್ಟನು. ದೆವ್ವ ಭೂತಗಳು ತಮ್ಮ ಜಾಗಕ್ಕೆ ಹೋದವು. ಭಟ್ಟನು, ಆ ಮೂರು ಕುಡಕೆಗಳನ್ನು ಮನೆಗೆ ತಂದನು. ಭಟ್ಟ ಹಾಗೂ ಭಟ್ಟನ ಮಕ್ಕಳು ಮರಿ ಎಲ್ಲರೂ ಸುಖವಾಗಿ ಉಳಿದರು.

□□

೨೯

ಕಟ್ಟಿಗ್ಗಾ ಹೊಯ್ದೊಣ್ಣೆ ಕೋಲು

ಒಂದು ಊರಿನಲ್ಲಿ ತಾಯಿ ಮಗ ಇದ್ದರು. ಒಂದು ದಿನ ತಾಯಿ ಮಗನನ್ನು ಕರೆದು "ಮಗನೇ ನಿನಗೆ ಓದಲು ಬರೆಯಲು ಬರುವುದಿಲ್ಲ. "ಶಾಲೆಗೆ ಹೋಗಿ ಪಾಠವನ್ನು ಕಲಿತುಕೊಂಡು ಬಾ"ಎಂದಳು. ಆಗ ಮಗನು "ತನಗೆ ರೊಟ್ಟಿ ಮಾಡಿಕೊಡು ತಾನು ಪಾಠವನ್ನು ಕಲಿತುಕೊಂಡು ಬರುತ್ತೇನೆ"ಎಂದನು. ತಾಯಿ ಅವನಿಗೆ ರೊಟ್ಟಿ ಮಾಡಿಕೊಟ್ಟಳು

ಮಗನು ರೊಟ್ಟಿಯನ್ನು ತೆಗೆದುಕೊಂಡು ಹೋದನು. ಹೋಗುವಾಗ ಅವನಿಗೆ ಒಬ್ಬ ಅಜ್ಜಿ ಕಾಣಿಸಿಕೊಂಡಳು. "ಮಾಣಿ ಮಾಣಿ ನನಗೆರಡು ರೊಟ್ಟಿ ಕೊಡು ಎಂದಳು" ಅವನು ಎರಡು ರೊಟ್ಟಿಗಳನ್ನು ಆ ಅಜ್ಜಿಗೆ ಕೊಟ್ಟನು. ಅಜ್ಜಿಗೆ ಖುಶಿಯಾಯಿತು. ಅವಳು ಮಾಣಿಗೆ ಒಂದು ಅಕ್ಷಯ ಪಾತ್ರೆಯನ್ನು ಕೊಟ್ಟಳು. "ಈ ಪಾತ್ರೆಯನ್ನು ಹಿಡಿದು ಅನ್ನ ಬರಲಿ ಎಂದು ಹೇಳಿದರೆ ನಿನಗೆ ಸಾಕಷ್ಟು ಅನ್ನ ಸಿಗುತ್ತದೆ" ಎಂದು ಅಜ್ಜಿ ಹೇಳಿದಳು.

ಮಾಣಿ ಆ ಪಾತ್ರೆಯನ್ನು ಎತ್ತಿಕೊಂಡು ಬಂದನು. ಬರುವಾಗ ಅವನಿಗೆ ಉಚ್ಚಿ ಹೊಯ್ಯಬೇಕೆನಿಸಿತು. ಅಲ್ಲಿ ಒಂದು ಅಂಗಡಿಯಿತ್ತು. ಆ ಅಂಗಡಿಯಲ್ಲಿ ಈ ಅಕ್ಷಯ ಪಾತ್ರೆಯನ್ನಿಟ್ಟು "ಶೆಟ್ಟಿ ಶೆಟ್ಟಿ ಇಲ್ಲೇ ಉಚ್ಚಿ ಹೊಯ್ದು ಬರುತ್ತೇನೆ, ಈ ಅಕ್ಷಯ ಪಾತ್ರೆ ಕಡೆ ತುಸು ಗಮನವಿರಲಿ" ಎಂದನು. ಆ ಅಂಗಡಿಯ ಶೆಟ್ಟಿಯು "ಇಲ್ಲೆಲ್ಲೂ ಉಚ್ಚೆ ಹೊಯ್ಯಬೇಡ ಈ ಗುಡ್ಡೆ ದಾಟಿ ಆಚೆ ಗುಡ್ಡೆಗೆ ಹೋಗು"ಎಂದನು. ಮಾಣಿ ಈ ಗುಡ್ಡೆಯನ್ನು ದಾಟಿ ಆ ಗುಡ್ಡೆಗೆ ಹೋದನು. ಇತ್ತ ಅಂಗಡಿಯ ಶೆಟ್ಟಿಯು ಮಾಣಿಯ ಅಕ್ಷಯ ಪಾತ್ರೆಯನ್ನು ಒಳಗಿಟ್ಟುಕೊಂಡು ಆ ಜಾಗದಲ್ಲಿ ಬೇರೆ ಪಾತ್ರೆಯನ್ನಿಟ್ಟನು.

ಮಾಣಿ ತಿರುಗಿ ಬಂದು ಅದು ತನ್ನ ಪಾತ್ರೆಯೆಂದು ತಿಳಿದು ಅದನ್ನು ತೆಗೆದುಕೊಂಡು ಹೋದನು. ಮನೆಗೆ ಹೋಗಿ "ಪಾತ್ರೆ ಪಾತ್ರೆ ಅನ್ನ ಬರಲಿ" ಎಂದನು. ಅನ್ನವೂ ಇಲ್ಲ ಗಿನ್ನವೂ ಇಲ್ಲ. ಮಾಣಿಯ ತಾಯಿ ಇವನ ದಡ್ಡತನವನ್ನು ಕಂಡು ಚೆನ್ನಾಗಿ ಬಯ್ದಳು. "ಪಾಠ ಕಲಿಯದೆ ಬಂದಿದ್ದೀಯಲ್ಲ ಹೋಗು ಎಲ್ಲಾದರೂ ಹೋಗಿ ಪಾಠ ಕಲಿತುಕೊಂಡು ಬಾ" ಎಂದಳು. ತನಗೆ ಎರಡು ರೊಟ್ಟಿ ಮಾಡಿಕೊಡು ಎಂದು ಮಾಣಿ ತಾಯಿಗೆ

ಹೇಳಿದನು. ತಾಯಿ ರೊಟ್ಟಿ ಮಾಡಿಕೊಟ್ಟಳು. ಮಾಣಿ ರೊಟ್ಟಿಗಳನ್ನು ಹಿಡಿದುಕೊಂಡು ನಡೆದನು. ಅಲ್ಲಿಗೆ ಆ ಅಜ್ಜಿ ಬಂದಳು. "ಮಾಣಿ ಮಾಣಿ ನನಗೆ ಎರಡು ರೊಟ್ಟಿ ಕೊಡು, ನಿನಗೆ ರತ್ನ, ಉಚ್ಚುವ, ಕುದುರೆಯನ್ನು ಕೊಡುತ್ತೇನೆ" ಎಂದಳು. ಆಗ ಮಾಣಿ ಅವಳಿಗೆ ಎರಡು ರೊಟ್ಟಿಗಳನ್ನು ಕೊಟ್ಟನು. ರತ್ನ ಉಚ್ಚುವ ಕುದುರೆಯನ್ನು ಕೊಟ್ಟಳು, ಮಾಣಿ ಆ ಕುದುರೆಯನ್ನು ತೆಗೆದುಕೊಂಡು ಬರುವಾಗ ಅವನಿಗೆ ಗುಡ್ಡೆಗೆ ಹೋಗಬೇಕೆನಿಸಿತು. ಮಾಣಿ ಮೊದಲು ಹೋದ ಅಂಗಡಿಗೆ ಹೋದನು "ಶೆಟ್ಟಿ ಇದು ರತ್ನ ಉಚ್ಚುವ ಕುದುರೆ ಇದನ್ನು ಇಲ್ಲಿಯೇ ಬಿಡುತ್ತೇನೆ. ನನಗೆ ಗುಡ್ಡೆಗೆ ಹೋಗಬೇಕಾಗಿದೆ. ಕುದುರೆ ಕಡೆ ಗಮನವಿರಲಿ" ಎಂದನು. ಆಗ ಶೆಟ್ಟಿ "ಇಲ್ಲೆಲ್ಲೂ ಗುಡ್ಡೆಗೆ ಹೋಗಬೇಡ ಈ ಗುಡ್ಡೆಯನ್ನು ದಾಟಿ ಆ ಗುಡ್ಡೆಗೆ ಹೋಗು" ಎಂದನು. ಮಾಣಿ ನಡೆದನು. ಅಂಗಡಿಯ ಶೆಟ್ಟಿ ತನ್ನ ಕುದುರೆಯನ್ನು ತಂದನು. ಮಾಣಿಯ ಕುದುರೆಯ ಸ್ಥಳದಲ್ಲಿ ಅದನ್ನು ಕಟ್ಟಿದನು. ಮಾಣಿಯ ಕುದುರೆಯನ್ನು ತಮ್ಮ ಕುದುರೆಯ ಜಾಗದಲ್ಲಿ ಕಟ್ಟಿದನು. ಮಾಣಿ ಬಂದನು ಕುದುರೆಯನ್ನು ತನ್ನ ಮನೆಗೆ ಒಯ್ದನು. ತಾಯಿ ಹತ್ತಿರ "ನಾನು ರತ್ನ ಉಚ್ಚುವ ಕುದುರೆಯನ್ನು ತಂದಿದ್ದೇನೆ ಬೆಳಿಗ್ಗೆ ಎದ್ದು ನೋಡು" ಎಂದನು. ತಾಯಿಗೆ ಸಂತೋಷವಾಯಿತು.

ತಾಯಿ ಬೆಳಿಗ್ಗೆ ಎದ್ದು ಕುದುರೆಯ ಬಳಿ ಹೋದಳು. ಅಲ್ಲೇನಿದೆ ಬರೀ ಸಗಣಿ. ತಾಯಿ ಬಂದು ಮಾಣಿಗೆ ವಿಷಯ ತಿಳಿಸಿದಳು. ಮಾಣಿಗೆ ಸಿಟ್ಟು ಬಂತು. ಆ ಮುದುಕಿ ನನಗೆ ಮೋಸ ಮಾಡಿದ್ದಾಳೆ ಎಂದುಕೊಂಡನು. ತಾಯಿಯ ಹತ್ತಿರ ತನಗೆ ಎರಡು ರೊಟ್ಟಿ ಮಾಡಿಕೊಡು ಎಂದನು. ತಾಯಿ ರೊಟ್ಟಿ ಮಾಡಿಕೊಟ್ಟಳು. ಮಾಣಿ ರೊಟ್ಟಿಯನ್ನು ಹಿಡಿದು ನಡೆದನು.

ದಾರಿಯ ಮೇಲೆ ಅದೇ ಮುದುಕಿ ಕಾಣಿಸಿಕೊಂಡಳು. ಮಾಣಿ ನನಗೆರಡು ರೊಟ್ಟಿ ಕೊಡು ಎಂದಳು. ಆಗ ಮಾಣಿ "ನೀನು ನನಗೆ ಮೋಸ ಮಾಡಿರುವೆ, ನೀನು ಕೊಟ್ಟ ಪಾತ್ರೆ ಅನ್ನ ಕೊಡುವುದಿಲ್ಲ, ನೀನು ಕೊಟ್ಟ ಕುದುರೆ ರತ್ನ ಉಚ್ಚುವುದಿಲ್ಲ" ಎಂದನು. ಆ ಮುದುಕಿ "ಮಾಣಿ ನೀನು ಪಾತ್ರೆಯನ್ನು, ಕುದುರೆಯನ್ನು ಎಲ್ಲಿ ಇಟ್ಟೆ?" ಎಂದು ವಿಚಾರಿಸಿದಳು. ಮಾಣಿ "ತಾನು ಅವುಗಳನ್ನು ಶೆಟ್ಟಿಯ ಅಂಗಡಿಯಲ್ಲಿಟ್ಟು ಗುಡ್ಡಕ್ಕೆ ಹೋಗಿದ್ದೆ" ಎಂದನು. ಅಂಗಡಿಯ ಶೆಟ್ಟಿಯೇ ನಿನಗೆ ಮೋಸ ಮಾಡಿದ್ದಾನೆ ನಾನಲ್ಲ ಎಂದಳು ಮುದುಕಿ.

ಅಜ್ಜಿ ಒಂದು ಕಟ್ಟಗ್ಗಾ ಒಂದು ಹೊಯ್ದೊಣ್ಣೆ ಕೋಲನ್ನು ಅವನಿಗೆ ಕೊಟ್ಟು "ಇದನ್ನು ಶೆಟ್ಟಿಯ ಅಂಗಡಿಯಲ್ಲಿಡು ಅದು ಅವನಿಗೆ ಬುದ್ಧಿ ಕಲಿಸುತ್ತದೆ" ಎಂದಳು. ಮಾಣಿ ಅಜ್ಜಿಗೆ ಎರಡು ರೊಟ್ಟಿಗಳನ್ನು ಕೊಟ್ಟು ಕಟ್ಟಗ್ಗಾ ಹೊಯ್ದೊಣ್ಣೆ ಕೋಲುಗಳನ್ನು ಒಯ್ದನು. ಮಾಣಿ ಶೆಟ್ಟಿಯ ಅಂಗಡಿಗೆ ಹೋಗಿ ಇದು ಕಟ್ಟಗ್ಗಾ ಹೊಯ್ದೊಣ್ಣೆ ಕೋಲು ಇದನ್ನು ಇಲ್ಲಿಯೇ ಇಡುತ್ತೇನೆ. ತುಸು ಗಮನವಿರಲಿ. ನಾನು ಮಿಂದು

ಬರುತ್ತೇನೆ ಎಂದನು. ಶೆಟ್ಟಿ "ಈ ಗುಡ್ಡೆಯ ಆಚೆಯ ಗುಡ್ಡದ ಹತ್ತಿರ ಒಂದು ಹಳ್ಳವಿದೆ ಅಲ್ಲಿಗೆ ಹೋಗಿ ಮಿಂದು ಬಾ" ಎಂದನು. ಮಾಣಿ ಅತ್ತ ಹೊರಟನು. ಇತ್ತ ಶೆಟ್ಟಿಯು ಮಾಣಿಯ ಕಟ್ಟಗ್ಗಾ ಹೊಯ್ಡೊಣ್ಣೆ ಕೋಲುಗಳನ್ನು ಒಳಗೆ ಒಯ್ದನು. ಅವನ ಹೆಂಡತಿ "ಇದು ಏನು?" ಎಂದು ಕೇಳಿದಳು. ಆಗ ಶೆಟ್ಟಿಯು ಇದು "ಕಟ್ಟಗ್ಗಾ ಹೊಯ್ದೊಣ್ಣೆ ಕೋಲು" ಎಂದು ಹೇಳುವುದರೊಳಗೆ ಹಗ್ಗವು ಶೆಟ್ಟಿಯನ್ನು ಕಟ್ಟಿತು. ಕೋಲು ಅವನ ಬೆನ್ನ ಮೇಲೆ ಹೊಡೆಯತೊಡಗಿತು. ಶೆಟ್ಟಿ ಬೊಬ್ಬೆಯಿಟ್ಟನು ಅವನ ಹೆಂಡತಿ ಮಕ್ಕಳು ಬಂದು ತಪ್ಪಿಸಲು ಪ್ರಯತ್ನಿಸಿದರು. ಆದರೆ ಅವರಿಗೂ ದೊಣ್ಣೆಯ ಪೆಟ್ಟು ಬಿತ್ತು. ಅಷ್ಟರಲ್ಲಿ ಮೀಯಲು ಹೋದ ಮಾಣಿಯ ಬಂದನು 'ಮಾಣಿ ಮಾಣಿ' ನನ್ನ ತಪ್ಪಾಯಿತು ಎಂದು ಕೂಗಿದನು. "ನನ್ನ ಅಕ್ಷಯ ಪಾತ್ರೆ ಮತ್ತು ನನ್ನ ರತ್ನ ಉಚ್ಚುವ ಕುದುರೆಗಳನ್ನು ಕೊಟ್ಟರೆ ನಿನ್ನನು ಬಿಡಿಸುತ್ತೇನೆ" ಎಂದನು. ಶೆಟ್ಟಿ ಒಪ್ಪಿಕೊಂಡನು. ಮಾಣಿಯು ಕಟ್ಟಗಾ ಹೊಯ್ದೊಣ್ಣೆ ಕೋಲು ಬಿಡು ಎಂದನು. ಕೋಲು ಹೊಡೆಯುವವರನ್ನು ನಿಲ್ಲಿಸಿತು. ಹಗ್ಗ ಬಿಚ್ಚಿಕೊಂಡು ಕೆಳಗೆ ಬಿದ್ದಿತು. ಮಾಣಿಯ ಅಕ್ಷಯ ಪಾತ್ರೆ ರತ್ನ ಉಚ್ಚುವ ಕುದುರೆ ಹಾಗೂ ಕಟ್ಟಗ್ಗ ಹೊಯ್ದೊಣ್ಣೆ ಕೋಲುಗಳೊಂದಿಗೆ ಮನೆಗೆ ಬಂದನು. ತಾಯಿ ಮಗ ಸುಖವಾಗಿ ಉಳಿದರು.

ಒಂದು ದಿನ ಆ ಊರಿನ ರಾಜರ ದೂತನು ಮಾಣಿಯ ಮನೆಗೆ ಬಂದನು. ಬೀಡಿ ಸೇದಲು ಬೆಂಕಿ ಕೆಂಡ ಕೊಡು ಎಂದನು. ಮಾಣಿಯ ತಾಯಿ 'ನಮ್ಮ ಮನೆಯಲ್ಲಿ ಬೆಂಕಿಯಿಲ್ಲ. ಬೆಂಕಿಯ ಕೆಂಡವೂ ಇಲ್ಲ. ನಾವು ಒಲೆ ಉರಿಸುವುದಿಲ್ಲ. ನಮ್ಮ ಮನೆಯಲ್ಲಿ ಅಕ್ಷಯ ಪಾತ್ರೆಯಿದೆ. ಅದು ಅನ್ನವನ್ನು ಕೊಡುತ್ತದೆ' ಎಂದಳು

ರಾಜನ ದೂತನು ರಾಜನಿಗೆ ಈ ಸುದ್ದಿಯನ್ನು ಮುಟ್ಟಿಸಿದನು. ಅಯ್ದಾರು ಜನ ಸೈನಿಕರು ಮಾಣಿಯ ಮನೆಗೆ ಬಂದರು. ಮಾಣಿ ಅಲ್ಲಿರಲಿಲ್ಲ. ಮಾಣಿಯ ತಾಯಿಯನ್ನು ಹೆದರಿಸಿ ಅಕ್ಷಯ ಪಾತ್ರೆಯನ್ನು ಅರಮನೆಗೆ ಒಯ್ದರು.

ಮಾಣಿಯು ಮನೆಗೆ ಬಂದನು. ರಾಜನ ಸೈನಿಕರು ಬಂದು ಅಕ್ಷಯ ಪಾತ್ರೆ ಒಯ್ದರೆಂದು ತಾಯಿ ಹೇಳಿದಳು. ಮಾಣಿ ತನ್ನ ಕುದುರೆಯನ್ನೇರಿ ಅರಮನೆಗೆ ಹೋದನು. "ತನ್ನ ಅಕ್ಷಯ ಪಾತ್ರೆಯನ್ನು ಕೊಡು" ಎಂದನು. ರಾಜ ಒಪ್ಪಲಿಲ್ಲ "ನನ್ನೊಡನೆ ಹೊಡೆದಾಡಿ ಜಯಿಸಿ ನಿನ್ನ ಪಾತ್ರೆ ಒಯ್ಯಬಹುದು"ಎಂದನು ರಾಜ.

ಮಾಣಿ "ಬಾ ನನ್ನೊಡನೆ ಹೊಡೆದಾಡು"ಎಂದು ರಾಜನನ್ನು ಕರೆದನು. ರಾಜನು ತನ್ನ ಒಬ್ಬ ಸೈನಿಕನನ್ನು ಕಳಿಸಿದನು. ಸೈನಿಕನು ಕತ್ತಿಯನ್ನು ಹಿಡಿದು ಮುಂದೆ ಬಂದನು. ಮಾಣಿಯು "ಕಟ್ಟಗ್ಗಾ ಹೊಯ್ದೊಣ್ಣೆ" ಎಂದನು. ಹಗ್ಗ ಹೋಗಿ ಆ ಸೈನಿಕನನ್ನು ಕಟ್ಟಿತು. ದೊಣ್ಣೆ ಹೋಗಿ ಎಲ್ಲ ಸೈನಿಕನ ಬೆನ್ನ ಮೇಲೆ ಬಡಿಯಿತು. ಸೈನಿಕನು ನೋವನ್ನು ತಡೆಯಲಾರದೆ ಬೊಬ್ಬೆ ಹಾಕಿದನು.

ರಾಜನ ನೂರು ಜನ ಸೈನಿಕರು ಕತ್ತಿ ಹಿಡಿದು ಮುಂದೆ ಬಂದರು. ಮಾಣಿಯು 'ಕಟ್ಬಗ್ಗಾ ಹೊಯ್ದೊಣ್ಣೆ' ಎಂದನು. ಹಗ್ಗ ಹೋಗಿ ಎಲ್ಲ ಸೈನಿಕರನ್ನು ಕಟ್ಟಿ ಹಾಕಿತು. ದೊಣ್ಣೆ ಹೋಗಿ ಸೈನಿಕರಿಗೆ ಪಟ ಪಟ ಬಡಿಯತೊಡಗಿತು.

ಸೈನಿಕರೆಲ್ಲ ಕೂಗತೊಡಗಿದರು. ರಾಜನು ಬಂದು "ನಿನ್ನ ಪಾತ್ರೆಯನ್ನು ನಿನಗೆ ಒಪ್ಪಿಸುತ್ತೇನೆ ನನ್ನ ಸೈನಿಕರನ್ನು ಬಿಡಿಸು" ಎಂದು ಮಾಣಿ ಹತ್ತಿರ ಬೇಡಿಕೊಂಡನು. ಮಾಣಿ 'ಕಟ್ಬಗ್ಗಾ ಹೊಯ್ದೊಣ್ಣೆ ಬಿಡು' ಎಂದನು. ದೊಣ್ಣೆ ಬಡಿಯುವುದನ್ನು ನಿಲ್ಲಿಸಿತು. ಹಗ್ಗ ಸೈನಿಕರನ್ನು ಬಿಟ್ಟಿತು. ರಾಜನು ಮಾಣಿಯ ಅಕ್ಷಯ ಪಾತ್ರೆಯನ್ನು ತಂದು ಮಾಣಿಗೆ ಒಪ್ಪಿಸಿದನು. ಕತೆ ಕಾಶಿಗೆ ಹೋಯಿತು. ನಾನು ಮನೆಗೆ ಬಂದೆ.

□□

೩೦

ಸುಟ್ಟೇವಿನ ಮರ - ೧

ಒಂದು ಊರಲ್ಲಿ ಭಟ್ಟ ಭಡತಿ ಇದ್ದರು. ಪ್ರಸ್ತಾ ಸತ್ಯನಾರಾಯಣನ ಕತೆ, ಗಂದಾಕ್ಷತೆ ಮಾಡಿಕೊಂಡು ಹೊಟ್ಟೆ ಹೊರೆದುಕೊಳ್ಳುತ್ತಿದ್ದರು. ಒಂದು ದಿವಸ ಒಬ್ಬರ ಮನೆಯಲ್ಲಿ ಪ್ರಸ್ತಾ ಆಗಿತ್ತು. ಅಲ್ಲಿ ಇಪ್ಪತ್ತು ಸುಟ್ಟೇವು ಕೊಟ್ಟರು. ಬರಬೇಕಾದರೆ ಅವನಿಗೆ ಗುಡ್ಡೆಗೆ ಹೋಗಬೇಕೆನಿಸಿತು. ಗುಡ್ಡೆಗೆ ಹೋದಾಗ ಸುಟ್ಟೆವು ಬಿದ್ದು ಹೋಯಿತು. ನಂತರ ಮನೆಗೆ ಬಂದನು. ಮನೆಯಲ್ಲಿ ಮಕ್ಕಳು ಮರಿ ಎಲ್ಲಾ "ಅಪ್ಪಾ ಅಪ್ಪಾ ಏನೂ ತರಲಿಲ್ಲವಾ" ಎಂದು ಕೇಳಿದರು. "ಮಕ್ಕಳೇ ಕೇಳಿ ಸುಟ್ಟೇವು ಗುಡ್ಡದ ಹತ್ತಿರ ಬಿದ್ದು ಹೋಯಿತು" ಎಂದನು. ಸುಮಾರು ದಿನದ ನಂತರ ಒಬ್ಬನನ್ನು ಕರೆದು "ತಮ್ಮಾ ಸುಟ್ಟೆವಿನ ಗಿಡ ಆಗಿದೆಯಾ ಎಂದು ನೋಡಿಕೊಂಡು ಬಾ" ಎಂದನು. ಅಲ್ಲಿ ಗಿಡ ಆಗಿತ್ತು. ಆಗ ಮಾಣಿಯು ಬಂದುಕೊಂಡು "ಅಪ್ಪ ಗಿಡ ಆಗಿದೆ" ಎಂದು ಹೇಳಿದ. ಕಾಯಿ ಆಗುವವರೆಗೂ ಮಾಣಿ ಹೋಗಿ ನೋಡಿಕೊಂಡು ಬರುತ್ತಿದ್ದನು. ಮತ್ತೊಂದು ದಿನ ಹೋದನು. ಹಣ್ಣು ಆಗಿತ್ತು. ಮರವನ್ನು ಹತ್ತಿ ಕೊಯ್ಯುತ್ತಾ ಇರುವಾಗ ಅಲ್ಲಿ ಒಂದು ಕೆಟ್ಟ ಅಜ್ಜಿ ಬಂದಳು. "ತಮ್ಮಾ ನನಗೊಂದು ಸುಟ್ಟೆವು ಕೊಡು" ಎಂದಳು. ಆ ಮಾಣಿ ಕೆಳಗೆ ಹಾಕಿದನು. "ತಮ್ಮಾ ಇದು ಉಚ್ಚೆ ಕುಪ್ಪಿಯಲ್ಲಿ ಬಿದ್ದು ಹೋಯಿತು" ಎಂದಳು. ಮತ್ತೊಂದು ಬಾರಿ ಹೊತ್ತಾಕಿದನು. ಆಗಲೂ "ಕೆಸರಲ್ಲಿ ಬಿದ್ದು ಹೋಯಿತು" ಎಂದಳು. ಅವನು ಹೊತ್ತಾಕಿದಾಗಲೆಲ್ಲ ಏನಾದರೂ ಒಂದು ನೆಪ ಹೇಳುತ್ತಿದ್ದಳು. ಕೊನೆಗೆ ಅಜ್ಜಿಯು 'ಒಂದು ಪಂಜೆಯಲ್ಲಿ ಕಟ್ಟಿ ಕೆಳಗೆ ಬಿಡು ನಾನು ತೆಗೆದುಕೊಳ್ಳುತ್ತೇನೆ' ಎಂದಳು. ಆ ಮಾಣಿಯು ಪಂಜಿಯಲ್ಲಿ ಕಟ್ಟಿ ಕೆಳಗೆ ಬಿಟ್ಟನು. ಆ ಅಜ್ಜಿ ಪಂಜಿಯನ್ನು ಎಳೆದು ಬಿಟ್ಟಳು. ನಂತರ ತನ್ನ ಪೆಟ್ಟಿಗೆಯಲ್ಲಿ ಮಾಣಿಯನ್ನು ತುಂಬಿದಳು.

ಒಂದು ಗದ್ದೆ ಬಯಲಲ್ಲಿ ಗೌಡರೆಲ್ಲ ಕೆಲಸ ಮಾಡುತ್ತಾ ಇದ್ದರು. ಪೆಟ್ಟಿಗೆ ಅಲ್ಲಿಯೇ ಇಟ್ಟು "ಗುಡ್ಡದ ಹತ್ತಿರ ಹೋಗಿ ಬರುತ್ತೇನೆ" ಎಂದು ಹೇಳಿ ಹೋದಳು. ಆಗ ಗೌಡರು ಪೆಟ್ಟಿಗೆಯ ಮುಚ್ಚಳ ತೆಗೆದರು. ಆಗ ಅದರಿಂದ ಆ ಮಾಣಿ ಹೊರಗೆ ಬಿದ್ದನು. ನಂತರ ಆ ಪೆಟ್ಟಿಗೆಯಲ್ಲಿ ಹಾವು, ಕಪ್ಪೆ, ಸಿಕ್ಕಾಪಟ್ಟೆ ತುಂಬಿ ಇಟ್ಟರು. ಕೊನೆಗೆ ಅಜ್ಜಿ ಬಂದು ಪೆಟ್ಟಿಗೆಯನ್ನು ತೆಗೆದುಕೊಂಡು ಹೋದಳು. ಮನೆಗೆ ಬಂದು ತನ್ನ ಮೊಮ್ಮಗಳ ಹತ್ತಿರ "ನೀರು ಕುದಿಸು ಇದರ ಒಳಗೆ ಏನೋ ಇದೆ" ಎಂದು ಹೇಳಿ ತಾನು ಸ್ನಾನಕ್ಕೆ ಹೋದಳು. ಆಗ ಮೊಮ್ಮಗಳು ಆ ಪೆಟ್ಟಿಗೆ ಮುಚ್ಚಳವನ್ನು ತೆಗೆದಳು. ಅದರಲ್ಲಿ ಇದ್ದಂತಹ ಹಾವು,ಕಪ್ಪೆ ಮೊಮ್ಮಗಳನ್ನು ಕಚ್ಚಿ ಕೊಂದು ಬಿಟ್ಟಿತು.

□□

೩೧

ಸುಟ್ಟೇವಿನ ಮರ - ೨

ಒಂದು ಊರಿನಲ್ಲಿ ಗಂಡ-ಹೆಂಡತಿ, ಮಗ ಇದ್ದರು. ಆ ಭಟ್ಟನ ಹೆಸರು ಬಡ ಭಟ್ಟ. ಒಂದು ದಿನಾ ಆ ಬಡ ಭಟ್ಟನು ಕೇಶವ ಭಟ್ಟರ ಮನೆ ಪ್ರಸ್ತಕ್ಕೆ ಹೋಗಿದ್ದನು. ಅಲ್ಲಿ ಅವರ ಮನೆಯ ಪ್ರಸ್ತಾ ಮುಗಿಸಿಕೊಂಡು ಬರುವಾಗ ಅ ಮನೆಯ ಅಡುಗೆಯ ಮನೆಯ ಒಳಗೆ ಹೋಗಿ ತನಗೆ ನಾಲ್ಕು ಸುಟ್ಟೇವು ಬೇಕು" ಎಂದನು. ಮನೆಯ ಯಜಮಾನತಿ ಸುಟ್ಟೇವು ಕೊಟ್ಟಳು. ಭಟ್ಟನು ಅದನ್ನು ತೆಗೆದುಕೊಂಡು ಬಂದನು. ಮನೆಗೆ ಬರುವಾಗ ಹೊಟ್ಟೆಯಲ್ಲಿ ತೊಂದರೆ ಆದ ಹಾಗೇ ಆಯಿತು. ಕಣ್ಣು ಕತ್ತಲೆ ಬಂದ ಹಾಗೆ ಆಗಿ ರಸ್ತೆಯ ಮೇಲೆ ಕುಳಿತುಕೊಂಡನು. ತುಂಬ ಹೊತ್ತಿನ ನಂತರ ಬಡ ಭಟ್ಟನಿಗೆ ಎಚ್ಚರವಾಗಿ ಗಡಿಬಿಡಿಯಿಂದ ಎದ್ದುಕೊಂಡು ಸಂಜೆಯಾಯಿತು ಎಂದು ಓಡೋಡಿ ಬಂದನು. ಬರುವಾಗ ಸುಟ್ಟೇವು ಕಟ್ಟಿದ ಪಂಜೆಯು ದಾರಿ ಮೇಲೆ ಬಿದ್ದುಹೋಗಿತ್ತು. ಬಡ ಭಟ್ಟ ಅದನ್ನು ನೋಡದೆ ಮನೆಗೆ ಬಂದನು. ಮಾಣಿ ಒಳಗೆ ಇದ್ದನು. ಭಟ್ಟನು ದಣಪೆ ದಾಟುತ್ತಿದ್ದನ್ನು ನೋಡಿ ಅವನ ಹೆಂಡತಿ ಮಗನನ್ನು ಕೂಗಿ ಬಂದರು ಎಂದಳು. ಮಗ ಬಂದವನೆ ಅಪ್ಪನ ಚೀಲವನ್ನು ನೋಡಿದನು. "ಅಪ್ಪಾ ನೀನು ಯಾವಾಗಲೂ ಸುಟ್ಟೇವು ತರುತ್ತಿದ್ದೆ. ಆದರೆ ಇಂದು ಏಕೆ ತರಲಿಲ್ಲ?"ಎಂದು ಕೇಳಿದನು. ಆಗ ಭಟ್ಟನು ಹೇಳಿದ "ಮಾಣಿ ಅಲ್ಲಿ ದಾರಿಯ ಮೇಲೆ ಗೋಕರ್ಣ ಸಣ್ಣ ಭಟ್ಟ ವಿಶ್ವೇಶ್ವರ ಭಟ್ಟರ ಅಣ್ಣ ವೆಂಕಟರಮಣ ಭಟ್ಟರು ಅಂದರೆ ನಿನಗೆ ಗೊತ್ತಿಲ್ಲವಾ? ಆ ವೆಂಕಟರಮಣ ಭಟ್ಟರ ಮಗ ನಾಗಪ್ಪ ಭಟ್ಟರು ಸಿಕ್ಕಿದರು. ಅವರ ಹತ್ತಿರ ಮಾತನಾಡುತ್ತ ದಾರಿ ಮೇಲೆ ಕುಳಿತುಕೊಂಡಿದ್ದೆ. ಅಲ್ಲೆ ಬಿದ್ದಿರಬೇಕು. ನಾಳೆ ಹೋಗಿ ನೋಡು ಸಸಿಯಾಗಿರಬಹುದು" ಎಂದನು. ಮಾಣಿಯು ನೋಡಿಕೊಂಡು ಬಂದು "ಅಪ್ಪ ಅಪ್ಪ ಗಿಡ ದೊಡ್ಡ ಆಗಿದೆ" ಎಂದನು. ಹೀಗೆ ದಿನ ಕಳೆಯಿತು. ಭಟ್ಟನು ಮಗನ ಹತ್ತಿರ ಮರ ಆಗಿದೆಯಾ ಎಂದು ನೋಡಿಕೊಂಡು ಬಾ ಎನ್ನುತ್ತಿದ್ದನು. ಆಗ ಅವನು ನೋಡಿಕೊಂಡು ಬಂದು "ಅಪ್ಪ ದೊಡ್ಡ ಮರವಾಗಿದೆ. ಹೂವು ಬಿಟ್ಟಿದೆ"ಎಂದನು. ಇದನ್ನು ಕೇಳಿ ಬಡ ಭಟ್ಟನಿಗೆ ಸಂತೋಷವಾಯಿತು. ಎರಡನೆಯ ದಿನ ಮಗನನ್ನು ಕರೆದು "ತಮ್ಮಾ ಮಿಡಿ ಆಗಿದೆಯಾ ಎಂದು ನೋಡಿಕೊಂಡು ಬಾ"ಎಂದನು. ಮಾಣಿಯು ಹೋಗಿ ನೋಡಿಕೊಂಡು ಬಂದು

"ಅಪ್ಪಾ ಮಿಡಿ ಆಗಿದೆ" ಎಂದನು. ಮತ್ತೆರಡು ದಿನದ ಮೇಲೆ ಕಾಯಿ ಆಗಿದೆಯಾ ಎಂದು ನೋಡಿಕೊಂಡು ಬಾ ಎಂದನು. ಆಗ ಅವನು ನೋಡಿಕೊಂಡು ಬಂದನು. ಮತ್ತೆ ಸ್ವಲ್ಪ ದಿನದ ನಂತರ ಹಣ್ಣಾಗಿದೆಯಾ ಎಂದು ನೋಡಿಕೊಂಡು ಬಾ ಎಂದನು. ಆಗ ಮಾಣಿಯು ಹೋದನು. ಅದು ಹಣ್ಣಾಗಿತ್ತು. ಅವನು ಯಾರಿಗೂ ಹೇಳದೆ ಮನೆಗೆ ಬಂದು ಸಣ್ಣ ಚೂಳಿಯನ್ನು ತೆಗೆದುಕೊಂಡು ಮರವನ್ನು ಹತ್ತಿ ಹಣ್ಣನ್ನು ಕೊಯ್ಯಲು ಸುರುಮಾಡಿದನು. ಹಾಗೆ ಕೊಯ್ಯುತ್ತಾ ಮೇಲೆ ಹೋದನು. ಆಗ ಅದೇ ದಾರಿಯಲ್ಲಿ ಒಬ್ಬಳು ಬೇಡುವ ಮುದುಕಿ ಬಂದಳು. ಅವನನ್ನು ನೋಡಿಕೊಂಡು "ತಮ್ಮಾ ತಮ್ಮಾ ನನಗೊಂದು ಸುಟ್ಟೆವು ಕೊಡುತ್ತಿಯಾ" ಎಂದು ಕೇಳಿದಳು. ಆಗ ಆ ಮಾಣಿ ಒಗೆದನು. "ತಮ್ಮಾ ತಮ್ಮಾ ಅದು ಹಳ್ಳದಲ್ಲಿ ಬಿದ್ದು ಹೋಯಿತು. ಮತ್ತೊಂದು ಒಗೆ"ಎಂದಳು. ಆಗ "ತಮ್ಮಾ ಅದು ಮುಳ್ಳಿನ ಹಿಂಡಿನಲ್ಲಿ ಬಿದ್ದುಹೋಯಿತು ಇನ್ನೊಂದು ಒಗೆ" ಎಂದಳು. ಆಗ ಇನ್ನೊಂದು ಒಗೆದನು. ಆಗಲೂ ಆ ಅಜ್ಜಿ "ತಮ್ಮಾ ಎಲ್ಲಿ ಬಿದ್ದಿದೆ ಅಂತಾನೆ ತಿಳಿಯುತ್ತಿಲ್ಲ" ಎಂದಳು. ಹೀಗೆ ಎರಡು ಮೂರು ಸಲ ಒಗೆದರೂ "ಕಾಣುತ್ತಿಲ್ಲ" ಎಂದೇ ಹೇಳುತ್ತಿದ್ದಳು. "ಈ ಸಲ ಹೇಗಾದರೂ ಮಾಡಿ ನಿನ್ನ ಜನಿವಾರಕ್ಕೆ ಕಟ್ಟಿ ಕೆಳಗೆ ಬಿಡು. ನಾನು ಸುಟ್ಟೆವನ್ನು ತೆಗೆದುಕೊಂಡು ನಿನ್ನ ಜನಿವಾರವನ್ನು ನಿನಗೆ "ಕೊಡುತ್ತೇನೆ" ಎಂದಳು. ಆಗ ಆ ಪೆದ್ದ ಮಾಣಿಯು ತನ್ನ ಜನಿವಾರದಲ್ಲಿ ಸುಟ್ಟೆವನ್ನು ಕಟ್ಟಿ ಕೆಳಗೆ ಬಿಟ್ಟನು. ಆಗ ಅಜ್ಜಿ ಜನಿವಾರ ಹಿಡಿದುಕೊಂಡು ಅವನನ್ನು ಎಳೆದು ಬಿಟ್ಟಳು. ನಂತರ ತನ್ನ ಬೂತದ ಆಕಾರದ ಪೆಟ್ಟಿಗೆಯಲ್ಲಿ ಅವನನ್ನು ತುಂಬಿ ತಲೆಯ ಮೇಲಿಟ್ಟುಕೊಂಡು ನಡೆದಳು. ಸ್ವಲ್ಪ ದೂರ ಹೋದ ನಂತರ ಒಂದು ಗದ್ದೆ ಸಿಕ್ಕಿತು. ಆ ಗದ್ದೆಯಲ್ಲಿ ಗದ್ದೆ ನೆಟ್ಟಿ ಮಾಡುವ ಆಳುಗಳು ಇದ್ದರು. ಆಗ ಅಜ್ಜಿಗೆ ಅಲ್ಲಿಯೇ ನೆಂಟರ ಮನೆಗೆ ಹೋಗಬೇಕಾಗಿತ್ತು. ಆಗ ಅಜ್ಜಿ ಆಳುಗಳ ಹತ್ತಿರ "ನಾನು ನನ್ನ ನೆಂಟರ ಮನೆ ಗಾಣಗೆರೆ ಮಂಜು ಭಟ್ಟರ ಮನೆಗೆ ಹೋಗಬೇಕಾಗಿತ್ತು. ಅವರ ಮನೆಗೆ ಹೋಗುವ ದಾರಿ ಯಾವುದು?" ಎಂದು ಆಳುಗಳನ್ನು ಕೇಳಿದಳು. ಆ ಗದ್ದೆ ನೆಟ್ಟಿಯ ಹೆಂಗಸರು "ಆಚೆ ಗುಡ್ಡವನ್ನು ದಾಟಿ ಮತ್ತೊಂದು ಗುಡ್ಡ ದಾಟಿ, ಮಕ್ಕಿ ಮರಗು ದಾಟಿ ಹೋಗು. ಅಲ್ಲಿಯೇ ನಿನ್ನ ನೆಂಟರ ಮನೆ" ಎಂದರು. ಆ ಅಜ್ಜಿಯು ತನ್ನ ಪೆಟ್ಟಿಗೆಯನ್ನು ಅಲ್ಲಿಯೇ ಬಿಟ್ಟು ಹೋದಳು. ಆ ಗದ್ದೆ ನೆಟ್ಟಿ ಹೆಂಗಸರಿಗೆಲ್ಲಾ ಬಹಳ ಹಸಿವೆಯಾಯಿತು. ಅವರು ಆ ಪೆಟ್ಟಿಗೆಯನ್ನು ತೆಗೆದು ನೋಡಿದರು. ಆಗ ಅದರಲ್ಲಿ ಮಾಣಿ ಇದ್ದನು. ಅವನು ಬಡ ಭಟ್ಟರ ಮನೆಯ ಮಾಣಿ ಎಂದು ತಿಳಿದು ಅವನನ್ನು ಹೊರಗೆ ಹಾಕಿ ಪೆಟ್ಟಿಗೆಯ ಒಳಗೆ ಗದ್ದೆಯ ಕೆಸರು ಮಣ್ಣನ್ನು ತುಂಬಿಟ್ಟರು.

ಸ್ವಲ್ಪ ಸಮಯದ ನಂತರ ಅಜ್ಜಿ ಬಂದು ಪೆಟ್ಟಿಗೆಯನ್ನು ತೆಗೆದುಕೊಂಡು ಹೋದಳು. ಹೋಗುವಾಗ ಆ ಪೆಟ್ಟಿಗೆಯಿಂದ ಕೆಸರು ಬೀಳುತ್ತಿತ್ತು. ಆಗ ಅಜ್ಜಿ ಮಾಣಿ ಎಂಜಲನ್ನು ಉಗುಳುತ್ತಿದ್ದಾನೆ ಎಂದು ತಿಳಿದುಕೊಂಡು "ಏ ಮಾಣಿ ಎಂಜಲನ್ನು ಉಗುಳುತ್ತೀಯಾ"

ಎಂದು ಕೇಳಿದಳು. ತುಸು ಹೊತ್ತಿನ ನಂತರ ನೀರು ಬೀಳಲು ಸುರು ಆಯಿತು. ಆಗ ಅಜ್ಜಿಯು "ಏ ಮಾಣಿ ಸ್ಹುಂಬಳ ಸುರಿಸುತ್ತೀಯಾ?" ಎಂದು ಕೇಳಿದಳು. ಮತ್ತೆ ದೂರ ಹೋದ ಮೇಲೆ ಮತ್ತೆ ನೀರು ಬಿದ್ದಿತು. ಆಗ "ಏ ಮಾಣಿ ಉಚ್ಚಿ ಹೊಯ್ಯುತ್ತಿಯಾ?" ಎಂದು ಕೇಳಿದಳು. ನಂತರ ಮನೆಗೆ ಹೋಗಿ ಯಾರಿಗೂ ಹೇಳದೆ ಒಲೆ ಮೇಲಿನ ಅಟ್ಟದ ಮೇಲೆ ಇಟ್ಟಳು.

ಒಂದು ದಿನ ಊಟ ಮಾಡಲು ಕುಳಿತುಕೊಂಡಾಗ ಎಲೆಯ ಮೇಲೆ ಕೆಸರು ಬಿದ್ದಿತು. ಆಗ ಅಜ್ಜಿ ಉಪ್ಪಿನಕಾಯಿ ಅಂತ ತಿಳಿದು ಅದನ್ನು ತಿಂದಳು. ನಂತರ ನೀರು ಬಿದ್ದಿತು. ಅದು ತುಪ್ಪವೆಂದು ತಿಳಿದು ತಿಂದಳು. ಹೀಗೆಯೆ ಊಟ ಮಾಡುವ ವರೆಗೂ ಬಾಳೆ ಎಲೆಯಲ್ಲಿ ಕೆಸರು, ನೀರು ಬೀಳುತ್ತಲೇ ಇತ್ತು. ಅಜ್ಜಿ ಅದನ್ನು ತಿನ್ನುತ್ತಲೇ ಇದ್ದಳು.

ಕೊನೆಗೆ ಸಂಶಯ ಬಂದಿತು. ಇಷ್ಟು ದಿನ ಬೀಳದೆ ಇರುವುದು ಈ ದಿನ ಹೇಗೆ ಬಿದ್ದಿತು ಎಂದು ಆಲೋಚನೆ ಮಾಡಿದಳು. ಕೊನೆಗೆ ಅಟ್ಟ ಹತ್ತಿ ಬೆತ್ತದ ಪೆಟ್ಟಿಗೆಯ ಬಾಗಿಲು ತೆಗೆದಳು. ಅದರಲ್ಲಿ ಇರುವುದು ಬರೀ ಕೆಸರಾಗಿತ್ತು. ಇದರಿಂದ ಅಜ್ಜಿ ತಾನು ಎಂತ ಮೂರ್ಖತನದ ಕೆಲಸ ಮಾಡಿದೆ ಎಂದುಕೊಂಡಳು. "ನಿಜವಾಗಿಯೂ ಆ ಮಾಣಿ ಬಹಳ ಬುದ್ಧಿವಂತನಿದ್ದಾನೆ".

□□

೩೨

ನಡೆ ಕುಂಬಳವೇ ಟರ್ರಾ ಪುರ್ರಾ

ಒಂದು ಊರಿನಲ್ಲಿ ಒಬ್ಬ ಅಜ್ಜಿಯಿದ್ದಳು. ಅಜ್ಜಿಯು ಒಂದು ಚಿಕ್ಕ ಗಣಪತಿಯ ಪೂಜೆ ಮಾಡುತ್ತಿದ್ದಳು. ಒಂದು ದಿನ ಅಜ್ಜಿಗೆ ಮಗಳ ಮನೆಗೆ ಹೋಗಬೇಕು ಎಂದು ಮನಸ್ಸು ಆಯಿತು. ಗಣಪತಿಯ ಹತ್ತಿರ ಹೇಗೆ ಹೋಗಬೇಕು? ಎಂದು ಪ್ರಾರ್ಥನೆ ಮಾಡಿಕೊಂಡಳು. ಅದೇ ದಿನ ರಾತ್ರಿಯಾಗುವಾಗ(ಅಪ್ಪಾಗ–ಆಗುವಾಗ) ಗಣಪತಿಯು ಸ್ವಪ್ನದಲ್ಲಿ ಕಾಣುತ್ತಾನೆ. "ನಿಮ್ಮ ಮನೆಯಲ್ಲಿ ಬೆಳೆದ ಕುಂಬಳ ಋಕಾಯಿಯನ್ನು ಕೊಯ್ದು ನಾಳೆ ದೊಡ್ಡಾಗು ಎಂದರೆ ಅದು ದೊಡ್ಡದಾಗುತ್ತದೆ. ಅದರಲ್ಲಿ ಕುಳಿತುಕೊಂಡು 'ನಡೆ ಕುಂಬಳವೇ ಟರ್ರಾಪುರ್ರಾ'ಎಂದು ಹೇಳು ಅದು ಮುಂದೆ ಹೋಗುತ್ತದೆ. ನೀನು ಮಗಳ ಮನೆಗೆ ಹೋಗಿ ಬಾ"(ಎಂದು) ಹೇಳಿ ಮಾಯವಾಗಿ ಹೋಗುತ್ತಾನೆ.

ಮರುದಿನ ಅಜ್ಜಿ ಕುಂಬಳಕಾಯಿ ಕೊಯ್ದುಕೊಂಡು ಬಂದಳು "ಕುಂಬಳಕಾಯಿ ದೊಡ್ಡವಾಗೇ" ಎಂದಳು. ಕುಂಬಳಕಾಯಿಯು ದೊಡ್ಡದಾಯಿತು. ಆ ಕುಂಬಳ ಕಾಯಿಯಲ್ಲಿ ಕುಳಿತುಕೊಂಡು "ನಡೆ ಕುಂಬಳವೆ ಟರ್ರಾ ಪುರ್ರಾ" ಎಂದಳು. ಕುಂಬಳಕಾಯಿ ನಡೆಯಿತು.

ಹೋಗುವಾಗ ದಾರಿಯ ಮೇಲೆ ಒಂದು ಕಾಡು ಸಿಕ್ಕಿತ್ತು. ಅಲ್ಲೊಂದು ಹುಲಿ ಬಂದಿತ್ತು. "ಅಜ್ಜೀ ಅಜ್ಜೀ ಕೆಳಗೆ ಇಳಿ. ನನಗೆ ಹಸಿವೆಯಾಗಿ ಹೋಗಿದೆ ನಿನ್ನನ್ನು ತಿನ್ನುತ್ತೇನೆ" ಎಂದಿತು. ಆಗ ಅಜ್ಜಿಯು "ನಾನು ಸೊರಗಿ ಹೋಗಿದ್ದೇನೆ. ಎಲುವು ಚರ್ಮ ಎರಡೇ ಇವೆ. ಮಗಳ ಮನೆಗೆ ಹೋಗಿ ಗಟ್ಟಿ ಆಗಿ ಬರುತ್ತೇನೆ" ಎಂದು ಹೇಳಿ ಹೋದಳು. ದಾರಿಯ ಮೇಲೆ ಒಂದು ಕರಡಿ ಸಿಕ್ಕಿತು. "ಅಜ್ಜೀ ಅಜ್ಜೀ ನನಗೆ ಹಸಿವೆಯಾಗಿದೆ ನಿನ್ನನ್ನು ತಿನ್ನುತ್ತೇನೆ" ಎಂದಿತು. ಆಗ ಅಜ್ಜಿಯು "ನಾನು ಸೊರಗಿ ಹೋಗಿದ್ದೇನೆ. ಮಗಳ ಮನೆಗೆ ಹೋಗಿ ಗಟ್ಟಿಯಾಗಿ ಬರುತ್ತೇನೆ" ಎಂದು ಹೇಳಿ ಹೋದಳು. ಮತ್ತೆ ತುಸು ದೂರ ಹೋದಾಗ ಒಂದು ನರಿ ಸಿಕ್ಕಿತು. "ಅಜ್ಜೀ ನನಗೆ ಹಸಿವೆಯಾಗಿದೆ ನಿನ್ನನ್ನು ತಿನ್ನುತ್ತೇನೆ" ಎಂದಿತು. ಅಗ ಅಜ್ಜಿ "ನಾನು ಸೊರಗಿ ಹೋಗಿದ್ದೇನೆ. ಎಲುವು ಚರ್ಮ ಎರಡೇ ಇದೆ. ಮಗಳ ಮನೆಗೆ ಹೋಗಿ ಗಟ್ಟಿ ಆಗಿ ಬರುತ್ತೇನೆ" ಎಂದು ಹೇಳಿ ಹೋದಳು. ಅಜ್ಜಿ ಮಗಳ ಮನೆ ಮುಟ್ಟಿದಳು. ಮಗಳ

ಮನೆಗೆ ಹೋಗಿ ಒಂದು ತಿಂಗಳಾಯಿತು. ಒಂದು ತಿಂಗಳದ ಮೇಲೆ ಅಜ್ಜಿ ಹೊರಟಳು. ಹೋಗುವಾಗ ಮಗಳ ಹತ್ತಿರ ಒಂದಿಷ್ಟು ಮೆಣಸಿನ ಹಿಟ್ಟನ್ನು ತೆಗೆದುಕೊಂಡಳು. ಕುಂಬಳವನ್ನು ಹೊಕ್ಕು "ನಡೆ ಕುಂಬಳವೆ ಟರ್ರಾ ಪುರ್ರಾ" ಎಂದಳು. ಕುಂಬಳವು ನಡೆಯಿತು. ಕಾಡಿನಲ್ಲಿ ನರಿ ಮುಂದೆ ಬಂದಿತು. "ಅಜ್ಜಿ ಅಜ್ಜಿ ಕೆಳಗೆ ಇಳಿ ನನಗೆ ಹಸಿವೆಯಾಗಿದೆ" ಎಂದಿತು. ಅಜ್ಜಿಯು ಬಾಗಿಲ ಬಳಿ ಬಂದುಕೊಂಡು "ಸಾಯುವಾಗಲಾದರೂ ಅರಿಶಿನ ಕುಂಕುಮ ಹಚ್ಚಿ ಸಾಯುತ್ತೇನೆ" ಎಂದಳು. ನರಿಯು "ಅಡ್ಡಿಯಿಲ್ಲ" ಎಂದಿತು. ಅಜ್ಜಿ ಒಂದಿಷ್ಟು ಮೆಣಸಿನ ಹಿಟ್ಟನ್ನು ತೆಗೆದುಕೊಂಡು ನರಿಯ ಮುಖಕ್ಕೆ ಎಸೆದಳು. ನರಿಗೆ ಕಣ್ಣು ಬಾಯಿ ತೆರೆಯಲು ಆಗಲಿಲ್ಲ. ಅಜ್ಜಿಯು ಕುಂಬಳವನ್ನು ಹೊಕ್ಕು "ನಡೆ ಕುಂಬಳವೇ ಟರ್ರಾ ಪುರ್ರಾ" ಎಂದಳು. ಕುಂಬಳವು ನಡೆಯಿತು. ತುಸು ದೂರ ಹೋದಳೆಂದಾಗ ಕರಡಿಯು ಮುಂದೆ ಬಂದಿತು "ಅಜ್ಜೀ ಅಜ್ಜೀ ಕೆಳಗೆ ಇಳಿ. ನನಗೆ ಹಸಿವೆ ಆಗಿದೆ. ನಿನ್ನನ್ನು ತಿನ್ನುತ್ತೇನೆ" ಎಂದಿತು. ಅಜ್ಜಿ ಬಾಗಿಲ ಬಳಿ ಬಂದು "ಸಾಯುವಾಗಲಾದರೂ ಅರಿಶಿಣ ಕುಂಕುಮ ಹಚ್ಚಿ ಸಾಯುತ್ತೇನೆ' ಎಂದಳು. ಕರಡಿಯು "ಅಡ್ಡಿಯಿಲ್ಲ" ಎಂದಿತು. ಅಜ್ಜಿ ಒಂದಿಷ್ಟು ಮೆಣಸಿನ ಹಿಟ್ಟನ್ನು ತೆಗೆದುಕೊಂಡು ಕರಡಿಯ ಮುಖಕ್ಕೆ ಎಸೆದಳು. ಕರಡಿಗೆ ಬಾಯಿ ಕಣ್ಣು ತೆರೆಯಲು ಆಗಲಿಲ್ಲ. ಅಜ್ಜಿ ಕುಂಬಳ ಹೊಕ್ಕು "ನಡೆ ಕುಂಬಳವೇ ಟರ್ರಾ ಪುರ್ರಾ" ಎಂದಳು. ಕುಂಬಳವು ನಡೆಯಿತು. ಮತ್ತೆ ತುಸು ದೂರ ಹೋದಾಗ ಆ ಹುಲಿ ಮುಂದೆ ಬಂದಿತು. "ಅಜ್ಜೀ ಅಜ್ಜೀ ಕೆಳಗೆ ಇಳಿ. ನನಗೆ ಹಸಿವೆ ಆಗಿದೆ. ನಿನ್ನನ್ನು ತಿನ್ನುತ್ತೇನೆ" ಎಂದಿತು. ಅಜ್ಜಿ ಬಾಗಿಲ ಬಳಿ ಬಂದು "ಸಾಯುವಾಗಲಾದರೂ ಅರಿಶಿನ ಕುಂಕುಮ ಹಚ್ಚಿ ಸಾಯುತ್ತೇನೆ" ಎಂದಳು. ಆ ಹುಲಿ "ಅಡ್ಡಿಯಿಲ್ಲ" ಎಂದಿತು. ಅಜ್ಜಿ ಒಂದಿಷ್ಟು ಮೆಣಸಿನ ಹಿಟ್ಟನ್ನು ತೆಗೆದುಕೊಂಡು ಹುಲಿಯ ಮುಖಕ್ಕೆ ಎಸೆದಳು. ಹುಲಿಗೆ ಕಣ್ಣು ಬಾಯಿಯನ್ನು ತೆರೆಯಲು ಆಗಲಿಲ್ಲ. ಅಜ್ಜಿ ಕುಂಬಳವನ್ನು ಹೊಕ್ಕು "ನಡೆ ಕುಂಬಳವೇ ಟರ್ರಾಪುರ್ರಾ" ಎಂದಳು. ಕುಂಬಳವು ನಡೆಯಿತು. ಅಜ್ಜಿ ಊರಿಗೆ ಬಂದು ಸುಖವಾಗಿ ಉಳಿದಳು.

□□

೩೩

ಅತಿ ಆಸೆ

ಒಂದು ಊರಿನಲ್ಲಿ ಬಡವ ಶ್ರೀಮಂತರಿದ್ದರು. ಬಡವನು ದೂರ ಹೋಗಿ ಬಹಳ ಕಬ್ಬನ್ನು ನೆಟ್ಟಿದ್ದನು. ಆ ಕಬ್ಬನ್ನು ತಿನ್ನಲು ಪ್ರತಿ ದಿನ ಆನೆ ಬರುತ್ತಿತ್ತು. ಒಂದು ದಿನ ದೊಡ್ಡ ಹೊಂಡವನ್ನು ತೋಡಿಕೊಂಡು ಅದರಲ್ಲಿ ಕುಳಿತುಕೊಂಡನು. ಆಗ ದೊಡ್ಡ ಆನೆ ಬಂದಿತು. ಕಬ್ಬನ್ನು ತಿಂದುಕೊಂಡು ಹೋಯಿತು ಹಾಗೇ ಹೋಗುತ್ತಿರುವ ಆನೆಯ ಬಾಲವನ್ನು ಈ ಬಡವನು ಹಿಡಿದುಕೊಂಡನು. ಹೋಗುವಾಗ ಅಲ್ಲಿ ಬಹಳ ಚಿನ್ನ, ದುಡ್ಡುಗಳ ರಾಶಿಯೇ ಇದ್ದವು. ಅವನು ಅಲ್ಲಿ ಇಳಿದುಕೊಂಡು ಚಿನ್ನ,ದುಡ್ಡನ್ನು ತನ್ನ ಪಂಜೆಯಲ್ಲಿ ಕಟ್ಟಿಕೊಂಡನು. ಅಲ್ಲಿಯೇ ಉಳಿದನು. ಆನೆ ತಿರುಗಿ ಮತ್ತೆ ಅದೇ ದಾರಿಯಲ್ಲಿ ಬಂದಿತು. ಆ ಬಡವ ಆನೆಯ ಬಾಲವನ್ನು ಹಿಡಿದುಕೊಂಡಿದ್ದನು. ಅದು ಕಬ್ಬಿನ ಗದ್ದೆಗೆ ಹಿಂತಿರುಗಿ ಬಂದಿತು. ಬಡವನು ಆನೆಯ ಬಾಲವನ್ನು ಹಿಡಿದುಕೊಂಡು ಬಂದನು. ಮನೆಗೆ ಬರುವಾಗ ಅವನ ನೆರೆಮನೆಯವನು ಸಿಗುತ್ತಾನೆ. ಬಡವನ ಪಂಜೆಯಲ್ಲಿ ಇರುವ ದುಡ್ಡು ಚಿನ್ನವನ್ನು ನೋಡಿ "ಇದನ್ನು ಎಲ್ಲಿಂದ ತೆಗೆದುಕೊಂಡು ಬಂದೆ" ಎಂದು ಕೇಳಿದನು. ಬಡವನು "ನಾನು ಕಬ್ಬನ್ನು ನೆಟ್ಟಿರುವೆ. ಅಲ್ಲಿಗೆ ಆನೆಯು ಬಂದಿತು. ಅದರ ಜೊತೆಯಲ್ಲಿ ನಾನು ಹೋಗಿದ್ದೆನು. ಅಲ್ಲಿ ತುಂಬಾ ಚಿನ್ನ, ದುಡ್ಡುಗಳು ಇದ್ದವು. ಅವೆಲ್ಲವನ್ನೂ ನಾನು ತೆಗೆದುಕೊಂಡು ಬಂದೆನು" ಎಂದು ಹೇಳಿದನು. ಆಗ ಆ ಶ್ರೀಮಂತನು ಚಿನ್ನ ತರಬೇಕು ಎಂದು ಕೊಳ್ಳುತ್ತಾನೆ. ಒಬ್ಬನೇ ಹೋದರೆ ಹೆಚ್ಚು ತರಲು ಆಗುವುದಿಲ್ಲ ಎಂದು ತನ್ನ ಮನೆಯ ಕೆಲಸಗಾರರನ್ನು ಕೂಡ ತನ್ನ ಜೊತೆಯಲ್ಲಿ ಕರೆದುಕೊಂಡು ಹೋದನು. ಆ ಆನೆಯು ಬರುತ್ತದೆ. ಎಲ್ಲರೂ ಆನೆಯ ಬಾಲವನ್ನು ಹಿಡಿದುಕೊಂಡರು. ಹೀಗೆ ಹೋಗುವಾಗ ಸಾಹುಕಾರನ ತನ್ನ ಕೆಲಸಗಾರರ ಹತ್ತಿರ ಯಾವ ರೀತಿ ಚಿನ್ನವನ್ನೆಲ್ಲ ತುಂಬಿಸಿಕೊಳ್ಳಬೇಕು ಎಂದು ಹೇಳುತ್ತಿದ್ದನು. ಆ ಆನೆ ಮೇಲೆ ಮೇಲೆ ಹಾರುತ್ತಾ ಹೋಗುತ್ತಿತ್ತು. ಅದಕ್ಕೆ ರೆಕ್ಕೆಯೂ ಸಹ ಇದ್ದವು. ಆಮೇಲೆ ಶ್ರೀಮಂತನೂ ಚಿನ್ನ ಇರುವ ಊರನ್ನು ನೋಡಿದನು. ಅದನ್ನು ನೋಡಿಕೊಂಡು ಸಾಹುಕಾರನಿಗೆ ತುಂಬಾ ಗಡಿಬಿಡಿ ಆಗಲು ಸುರುವಾಯಿತು. ಆಗ ತನ್ನ ಕೆಲಸಗಾರರ ಹತ್ತಿರ ಚಿನ್ನವನ್ನು ಹೇಗೆ ತೆಗೆದುಕೊಳ್ಳುವುದು ಎಂದು ತೋರಿಸಬೇಕು ಎಂದು ತನ್ನ ಎರಡು ಕೈಯನ್ನು ಬಿಟ್ಟು ಹೀಗೆ ಎಂದು ಅಗಲ ಮಾಡಿ ತೋರಿಸಿದನು. ಆಗ ಮೂರು ಜನ(ಸಾಹುಕಾರ ಮತ್ತು ಆತನ ಇಬ್ಬರು ಕೆಲಸಗಾರರು)ರು ಕೆಳಗೆ ಬಿದ್ದು ಸತ್ತು ಹೋದರು.

□□

೩೪

ಹಿರಿರಾಣಿ ಕತೆ

ಒಂದು ಊರಿನಲ್ಲಿ ಒಬ್ಬ ರಾಜನಿದ್ದನು. ಅವನಿಗೆ ಎರಡು ಜನ ಹೆಂಡತಿಯರು ಇದ್ದರು. ಮೊದಲನೇ ಹೆಂಡತಿ ನೋಡಲು ಕುರೂಪಿಯಾಗಿದ್ದಳು. ಎರಡನೇ ಹೆಂಡತಿ ಸುಂದರವಾಗಿದ್ದಳು. ಆದಕಾರಣ ರಾಜ ಎರಡನೇ ಹೆಂಡತಿಯನ್ನು ತುಂಬಾ ಪ್ರೀತಿ ಮಾಡುತ್ತಿದ್ದನು. ಮೊದಲನೇ ಹೆಂಡತಿಯನ್ನು ಕಂಡರೆ ಸಿಡಿಮಿಡಿಗೊಳ್ಳುತ್ತಿದ್ದನು. ಮೊದಲನೆಯ ಹೆಂಡತಿಯನ್ನು ಮನೆಯಿಂದ ಹೊರಗೆ ಹಾಕಿದನು. ಅವಳು ಅಳುತ್ತಾ ಮನೆ ಬಿಟ್ಟು ಹೊರಟಳು.

ಎಲ್ಲಿಗೆ ಹೋಗಬೇಕು ಎಂದು ತಿಳಿಯದೇ ಹೋಗುತ್ತಾ ಇರುವಾಗ ಆ ದಾರಿಯ ಬದಿಯಲ್ಲಿ ಒಂದು ಪೇರಲೆ ಗಿಡವು ಸಿಕ್ಕಿತು. ಆ ಪೇರಲೆ ಗಿಡವು "ಅಮ್ಮಾ ನನಗೆ ಸ್ವಲ್ಪ ನೀರು ಹಾಕಿ ಹೋಗು ನೀನು ಬರುವ ಹೊತ್ತಿಗೆ ನಿನಗೆ ತುಂಬಾ ಚಿನ್ನವನ್ನು ಕೊಡುತ್ತೇನೆ" ಎಂದಿತು. ಆಗ ಇವಳು ಪೇರಲೆ ಗಿಡಕ್ಕೆ ನೀರನ್ನು ಹಾಕಿದಳು ಹಾಗೆಯೆ ಮತ್ತೆ ಮುಂದೆ ಹೋದಳು. ಅಲ್ಲಿ ಒಂದು ಹಲಸಿನ ಮರ ಸಿಕ್ಕಿತು. ಆಗ ಇವಳ ಹತ್ತಿರ "ನನಗೆ ನೀರನ್ನು ಹಾಕಿ ಹೋಗು ನಿನಗೆ ತುಂಬಾ ಪಟ್ಟೆ ಪೀತಾಂಬರವನ್ನು ಕೊಡುತ್ತೇನೆ" ಎಂದಿತು. ಆಗ ಆ ಹಲಸಿನ ಮರಕ್ಕೆ ನೀರನ್ನು ಹಾಕಿ ಮುಂದಕ್ಕೆ ಹೋದಳು. ಮುಂದೆ ಹೋಗುವಾಗ ಒಂದು ಬಾವಿ ಸಿಕ್ಕಿತು. ಆ ಬಾವಿ ಹಾರಿ ಸಾಯಬೇಕು ಎಂದು ಯೋಚಿಸಿ ರಾಣಿಯು ಆ ಬಾವಿ ಕಟ್ಟೆಯ ಮೇಲೆ ಕುಳಿತು ಕೊಂಡಳು. ಇನ್ನೇನು ಹಾರಬೇಕು ಎನ್ನುವ ಸಮಯದಲ್ಲೇ ಒಬ್ಬ ಸನ್ಯಾಸಿ ಬಂದನು. "ನೀನು ಯಾಕೆ ಬಾವಿಯನ್ನು ಹಾರುತ್ತಿರುವೆ" ಎಂದು ಕೇಳಿದನು. ಆ ರಾಣಿಯು ಹೇಳಿದಳು "ನಾನು ಕುರೂಪಿಯೆಂದು ನನ್ನನ್ನು ಮನೆಯಿಂದ ಹೊರಗೆ ಹಾಕಿದರು. ಆದ್ದರಿಂದ ನಾನು ಸಾಯುತ್ತೇನೆ" ಎಂದಳು. ಆಗ ಸಾದು "ನೀನು ಈ ಬಾವಿಯನ್ನು ಮೂರು ಸುತ್ತು ತಿರುಗು ನೀನು ಸುಂದರಿಯಾಗುತ್ತೀಯಾ" ಎಂದನು. ರಾಣಿಯು ಹಾಗೆಯೆ ಮಾಡಿದಳು. ಅವಳು ತುಂಬ ಸುಂದರವಾದಳು. ಅವಳನ್ನು ನೋಡಿದರೆ ದೇವಲೋಕದ ಊರ್ವಶಿ ಕಂಡ ಹಾಗೆ ಕಾಣುತ್ತಿದ್ದಳು. ಆದರೆ ಆ ಸನ್ಯಾಸಿ ಮಾಯವಾಗಿ ಹೋಗಿದ್ದನು. ರಾಣಿಯು ತಿರುಗಿ ಮನೆಗೆ ಬಂದಳು. ಬರುವಾಗ

ಪೇರಲೆ ಗಿಡ ಸಿಕ್ಕಿತು. ಅದು ರಾಣಿಗೆ ಚಿನ್ನವನ್ನು ಕೊಟ್ಟಿತು. ಹಲಸಿನ ಮರ ಪಟ್ಟೆ ಪೀತಾಂಬರವನ್ನು ನೀಡಿತು, ಅದನ್ನೆಲ್ಲ ಹಾಕಿಕೊಂಡು ಮನೆಗೆ ಬಂದಳು. ಆಗ ರಾಜನಿಗೆ ತುಂಬ ಸಂತೋಷವಾಗಿ ತನ್ನ ಎರಡನೆಯ ಹೆಂಡತಿಯನ್ನು ಮನೆಯಿಂದ ಹೊರಗೆ ಹಾಕಿದನು. ಆಗ ಎರಡನೆಯ ಹೆಂಡತಿ ಬಾವಿಯನ್ನು ಹಾರಲು ಹೋದಳು. ಆಗ ಸನ್ಯಾಸಿ ಬಂದನು. "ನೀನು ಯಾಕೆ ಬಾವಿಯನ್ನು ಹಾರಲು ಹೋಗುತ್ತಿಯಾ?" ಎಂದು ಕೇಳಿದನು. ಆಗ ಆ ರಾಣಿಯು "ಅವಳು ಬಂದಳು ಸುಂದರವಾಗಿ ಹೋದಳು. ನಾನು ಹಾಗೆಯೆ ಆಗಬೇಕು ಎಂದು ಬಂದಿದ್ದೇನೆ" ಎಂದಳು. ಆಗ ಸಾದುವು "ನೀನು ಈ ಬಾವಿಯನ್ನು ಮೂರು ಸುತ್ತು ಹಾಕು" ಎಂದನು. ರಾಣಿಯು ಹಾಗೆಯೆ ಮಾಡಿದಳು. ಬಹಳ ಸುಂದರವಾದಳು. ಆದರೆ ಅವಳಿಗೆ ದುರಾಲೋಚನೆ ಬಂದು ಇನ್ನೊಂದು ಸಲ ಸುತ್ತಿ ಹಾಕಿದರೆ ಮತ್ತೂ ಸುಂದರವಾಗಬಹುದೆಂದು ತಿಳಿದು ಇನ್ನೊಂದು ಸುತ್ತು ಹಾಕಿದಳು. ಆಗ ಅವಳು ನೋಡಲು ಅಸಹ್ಯವಾಗುವ ರೀತಿಯಲ್ಲಿ ಅವಳು ಕುರೂಪಿಯಾದಳು.

"ಅತಿ ಹೆಚ್ಚಾದರೆ ಅಮೃತವು ವಿಷವಾಗುವುದು"

□□

೩೫

ನುಚ್ಚಕ್ಕಿ ನುರಿಯಕ್ಕಿ ಕತೆ

ಒಂದು ಊರಿನಲ್ಲಿ ಗಂಡ, ಹೆಂಡತಿ, ಮಗು ಇದ್ದರು. ಎರಡು ವರ್ಷ ಆದ ಮೇಲೆ ಅವನ ಹೆಂಡತಿ ಸತ್ತು ಹೋದಳು. ಚಿಕ್ಕ ಮಗು ಇದ್ದಾಳೆಯೆಂದು ಎರಡನೇ ಮದುವೆಯಾದನು. ಎರಡನೇ ಹೆಂಡತಿಗೂ ಒಂದು ಮಗುವಾಯಿತು. ಮಕ್ಕಳಿಬ್ಬರು ದೊಡ್ಡವರಾದರು.

ಒಂದು ದಿನ ತಾಯಿಯು ಮಕ್ಕಳ ಹತ್ತಿರ ಕೆರೆಗೆ ಹೋಗಿ ಅಕ್ಕಿಯನ್ನು ತೊಳೆದುಕೊಂಡು ಬನ್ನಿ ಎಂದು ಹೇಳಿದಳು. ಸವತಿಯ ಮಗಳಿಗೆ ಹರಿದ ಚೀಲದಲ್ಲಿ ಮತ್ತು ತನ್ನ ಮಗಳಿಗೆ ಒಳ್ಳೆಯ ಚೀಲದಲ್ಲಿ ಅಕ್ಕಿಯನ್ನು ಹಾಕಿಕೊಟ್ಟಳು. ಅಕ್ಕ–ತಂಗಿ ಇಬ್ಬರು ಅಕ್ಕಿ ತೊಳೆಯಲು ಕೆರೆಗೆ ಹೋದರು. ಅಕ್ಕ ಅಕ್ಕಿಯನ್ನು ತೊಳೆಯುವಾಗ ಅಕ್ಕಿಯೆಲ್ಲ ನೀರಿನಲ್ಲಿ ಬಳಿದು ಹೋಯಿತು. ಆಗ ತಂಗಿ ಅಕ್ಕಿಯನ್ನು ತೊಳೆದುಕೊಂಡು ಅಕ್ಕನನ್ನು ಬಿಟ್ಟು ಹೋದಳು. ಅಕ್ಕನಿಗೆ ಭಯವಾಯಿತು ಮನೆಗೆ ಹೋದರೆ ಚಿಕ್ಕಮ್ಮ ಬಯ್ಯುತ್ತಾಳೆ ಎಂದುಕೊಂಡು "ನುಚ್ಚಕ್ಕಿ ನುರಿಯಕ್ಕಿ" ಎಂದು ಹೇಳುತ್ತಾ ನಿಂತುಕೊಂಡಳು. ತಂಗಿ ಮನೆಗೆ ಹೋಗಿ ಅಮ್ಮನ ಹತ್ತಿರ "ಅಕ್ಕನ ಅಕ್ಕಿ ಬಳಿದುಹೋಯಿತು ಅಕ್ಕ ಅಲ್ಲೇ ಇದ್ದಾಳೆ"ಎಂದಳು. ಆಗ ಅಮ್ಮ "ಅವಳು ಅಲ್ಲಿಯೇ ಸಾಯಲಿ" ಎಂದು ಹೇಳಿದಳು.

ಅಕ್ಕ ಕೆರೆಯ ಬಳಿಯಲ್ಲಿ ನಿಂತುಕೊಂಡಿದ್ದಳು. ಅಲ್ಲಿಗೆ ಒಬ್ಬಳು ಅಜ್ಜಿ ಬಟ್ಟೆ ಒಗೆಯಲು ಬಂದಳು. ಅಜ್ಜಿಯು ಈ ಹುಡುಗಿಯನ್ನು ಕರೆದು "ತಂಗಿ ತಂಗೀ ಎಲ್ಲಿಗೆ ಹೋಗುವೆ?" ಎಂದು ಕೇಳಿದಳು. ಆಗ ಅವಳು "ಅಕ್ಕಿಯೆಲ್ಲ ಬಳಿದು ಹೋಯಿತು. ಅಕ್ಕಿಯನ್ನು ತೆಗೆದುಕೊಂಡು ಹೋಗದೆ ಇದ್ದರೆ ಚಿಕ್ಕಮ್ಮ ಬಯ್ಯುತ್ತಾಳೆ" ಎಂದು ಹೇಳಿದಳು. ಆಗ ಅಜ್ಜಿಯು "ಹಾಗಾದರೆ ನಮ್ಮ ಮನೆಗೆ ಬಾ" ಎಂದು ಅವಳನ್ನು ಕರೆದುಕೊಂಡು ಹೋದಳು. ಅಕ್ಕ ಅಜ್ಜಿಯ ಜೊತೆಯಲ್ಲಿ ನಡೆದಳು. ಅವಳು ಅಜ್ಜಿಯ ಮನೆಯಲ್ಲಿ ಉಳಿದಳು. ಸ್ವಲ್ಪ ದಿನದ ನಂತರ "ಅಜ್ಜೀ ನಾನು ಮನೆಗೆ ಹೋಗುತ್ತೇನೆ. ಹೋಗದಿದ್ದರೆ ಚಿಕ್ಕಮ್ಮ ನನಗೆ ಬಯ್ಯುತ್ತಾಳೆ" ಎಂದು ಹೇಳಿದಳು. ಆಗ ಅಜ್ಜಿ "ಹಾಗಾದರೆ ಆ ತೋಟದಲ್ಲಿ ತುಂಬಾ ಹೂವು ಇದೆ ನಿನಗೆ ಯಾವ ಹೂವು ಬೇಕು ಅದನ್ನು ಕೊಯ್ದುಕೊಂಡು ಬಾ" ಎಂದಳು. ಅವಳು

ಹೋಗಿ ತನಗೆ ಬೇಕಾದ ಹೂವನ್ನು ಕೊಯ್ದುಕೊಂಡು ಬಂದಳು. ಅಜ್ಜಿ ಅವಳಿಗೆ ಹೂವನ್ನು ಮುಡಿಸಿದಳು. ಅಜ್ಜಿ ಅವಳ ಹತ್ತಿರ "ನಮ್ಮ ಮನೆಯ ಕೋಣೆಯಲ್ಲಿ ತುಂಬಾ ಪೆಟ್ಟಿಗೆ ಇದೆ. ನಿನಗೆ ಬೇಕಾದ ಪೆಟ್ಟಿಗೆಯನ್ನು ತೆಗೆದುಕೊಂಡು ಹೋಗು" ಎಂದಳು. ಅವಳು ಒಂದು ಪೆಟ್ಟಿಗೆಯನ್ನು ತೆಗೆದುಕೊಂಡು ಮನೆಗೆ ಬಂದಳು. ಬಂದವಳೇ ತನ್ನ ಅಪ್ಪನ ಬಲ ಕಾಲಿನ ಮೇಲೆ ಕುಳಿತುಕೊಂಡಳು.ಅವಳ ಅಪ್ಪ ಪೆಟ್ಟಿಗೆಯನ್ನು ತೆಗೆದು ನೋಡಿದನು. ಅದರಲ್ಲಿ ಬಹಳ ಚಿನ್ನ ಇತ್ತು. ಅದನ್ನು ನೋಡಿ ಅವಳ ಚಿಕ್ಕಮ್ಮನಿಗೆ ಬಹಳ ಹೊಟ್ಟೆಕಿಚ್ಚು ಆಯಿತು. ತನ್ನ ಮಗಳಿಗೂ ಚಿನ್ನ ಸಿಗಲಿ ಎಂದು ಒಂದು ಉಪಾಯ ಮಾಡಿದಳು.

ಮರುದಿನ ಅಕ್ಕಿ ತೊಳೆಯಲು ಇಬ್ಬರನ್ನು ಕೆರೆಗೆ ಕಳುಹಿಸಿದಳು. ತನ್ನ ಮಗಳಿಗೆ ಹರಿದ ಚೀಲದಲ್ಲಿ ಹಾಕಿದಳು. ತನ್ನ ಸವತಿಯ ಮಗಳಿಗೆ ಒಳ್ಳೆಯ ಚೀಲದಲ್ಲಿ ಅಕ್ಕಿಯನ್ನು ಹಾಕಿಕೊಟ್ಟಳು. ಅಕ್ಕ ತಂಗಿ ಇಬ್ಬರೂ ಅಕ್ಕಿ ತೊಳೆಯಲು ಕೆರೆಗೆ ಹೋದರು ತಂಗಿಯ ಚೀಲದಲ್ಲಿ ಇದ್ದ ಅಕ್ಕಿ ಬಳಿದು ಹೋಯಿತು. ಅಕ್ಕ ಅಕ್ಕಿಯನ್ನು ತೊಳೆದುಕೊಂಡು ಮನೆಗೆ ಬಂದಳು. ಮನೆಗೆ ಬಂದು ಚಿಕ್ಕಮ್ಮನ ಹತ್ತಿರ ತಂಗಿಯ ಚೀಲದಲ್ಲಿ ಇದ್ದ ಅಕ್ಕಿಯೆಲ್ಲ ಬಳಿದು ಹೋಯಿತು ಎಂದಳು. ಅಲ್ಲಿ ತಂಗಿ ಒಬ್ಬಳೆ ಕೆರೆಯ ಹತ್ತಿರ ನಿಂತು ಕೊಂಡಿದ್ದಳು. ಅಲ್ಲಿ ಬಟ್ಟೆ ತೊಳೆಯಲು ಬಂದ ಅಜ್ಜಿಯು "ತಂಗಿ ಎಲ್ಲಿಗೆ ಹೋಗುವೆ" ಎಂದು ಕೇಳಿದಳು. ಆಗ ತಂಗಿ "ನನ್ನ ಚೀಲದಲ್ಲಿ ಇದ್ದ ಅಕ್ಕಿ ಬಳಿದು ಹೋಯಿತು"? ಎಂದಳು. ಆಗ ಅಜ್ಜಿಯು "ನೀನು ನಮ್ಮ ಮನೆಗೆ ಬಾ"ಎಂದು ಕರೆದುಕೊಂಡು ಹೋದಳು. ನಾಲ್ಕೈದು ದಿನದ ನಂತರ ಅಜ್ಜಿಯ ಹತ್ತಿರ "ನಾನು ಮನೆಗೆ ಹೋಗುತ್ತೇನೆ" ಎಂದಳು. ಅಜ್ಜಿಯು "ತೋಟಕ್ಕೆ ಹೋಗಿ ನಿನಗೆ ಬೇಕಾದ ಹೂವನ್ನು ಕೊಯ್ದುಕೊಂಡು ಬಾ" ಎಂದಳು. ಆಗ ಅವಳು ಚಂದ ಚಂದವಾದ ಹೂವನ್ನು ಕೊಯ್ದುಕೊಂಡು ಬಂದಳು. ಅಜ್ಜಿ ಹೂವನ್ನು ಕಟ್ಟಿ ಮುಡಿಸಿದಳು. "ಒಳಗೆ ಹೋಗಿ ನಿನಗೆ ಬೇಕಾದ ಪೆಟ್ಟಿಗೆಯನ್ನು ತೆಗೆದುಕೊಂಡು ಹೋಗು" ಎಂದು ಹೇಳಿದಳು. ಇವಳು ಹೋಗಿ ಬಹಳ ಭಾರವಾದ ಪೆಟ್ಟಿಗೆಯನ್ನು ತೆಗೆದುಕೊಂಡು ಮನೆಗೆ ಬಂದಳು. ಬಂದವಳೇ ತಾಯಿಯ ಕಾಲಿನ ಮೇಲೆ ಕುಳಿತುಕೊಂಡಳು. ತಾಯಿ ಪೆಟ್ಟಿಗೆಯನ್ನು ತೆಗೆದುಕೊಂಡು ಮಗಳ ಜೊತೆ ಮನೆಯ ಒಳಗೆ ಹೋದಳು. ತಾಯಿ ಮಗಳು ಇಬ್ಬರು ಸೇರಿ ಪೆಟ್ಟಿಗೆಯ ಮುಚ್ಚಳವನ್ನು ತೆಗೆದರು. ಅದರೆ ಅದರಲ್ಲಿ ಚಿನ್ನದ ಬದಲು ಹಾವು ಕಪ್ಪೆ ಇದ್ದವು. ಹಾವು ಮಗಳನ್ನು ನುಂಗಿತು. ಕಪ್ಪೆ ತಾಯಿಯನ್ನು ನುಂಗಿತು. ಕೊನೆಯಲ್ಲಿ ಅಪ್ಪ ಮಗಳು ಸಂತೋಷದಲ್ಲಿ ಉಳಿದರು.

□□

೩೬

ಕೆಸುವಿನ ಸೊಪ್ಪಿನ ಕೂಸು

ಒಂದು ಊರಿನಲ್ಲಿ ಸುಬ್ಬಕ್ಕ ಗುಬ್ಬಕ್ಕ ಇದ್ದರು. ಸುಬ್ಬಕ್ಕನಿಗೆ ಒಬ್ಬಳು ಮಗಳು ಇದ್ದಳು. ಗುಬ್ಬಕ್ಕನಿಗೂ ಒಬ್ಬಳು ಮಗಳಿದ್ದಳು. ಸುಬ್ಬಕ್ಕನ ಮಗಳ ಹೆಸರು ದೊಡ್ಡಕ್ಕ. ಗುಬ್ಬಕ್ಕನ ಮಗಳ ಹೆಸರು ಸಣ್ಣಕ್ಕ. ಒಂದು ದಿನ ಸುಬ್ಬಕ್ಕನ ಮನೆಯಲ್ಲಿ ಸಾರು ಮಾಡಲು ಏನೂ ತರಕಾರಿ ಇದ್ದಿರಲಿಲ್ಲ. ಅದಕ್ಕಾಗಿ ಅವಳು ತನ್ನ ಮಗಳ ಹತ್ತಿರ "ತೋಟಕ್ಕೆ ಹೋಗಿ ಸ್ವಲ್ಪ ಕೆಸುವನ್ನು ಕೊಯ್ದುಕೊಂಡು ಬಾ" ಎಂದಳು. ಆಗ ಮಗಳು(ದೊಡ್ಡಕ್ಕ) ಕೆಸುವನ್ನು ಕೊಯ್ಯಲು ತೋಟಕ್ಕೆ ಹೋದಳು. ಅವಳು ಕೆಸುವಿನ ಸೊಪ್ಪನ್ನು ಕೊಯ್ಯುತ್ತಿರುವಾಗ ಒಂದು ದೊಡ್ಡ ಹಾವು ಬಂದಿತು. ಅದಕ್ಕೆ ಬಾವು ಎದ್ದಿತ್ತು. ಅದು ಅಲ್ಲಿಯೇ ಮಲಗಿತ್ತು. ಆ ಹಾವು ಇವಳ ಹತ್ತಿರ "ಮಗಳೇ ನಿನಗೆ ತುಂಬಾ ಚಿನ್ನವನ್ನು ಕೊಡುತ್ತೇನೆ ನನಗೆ ಬಾವು ಎದ್ದಿದೆ ಅದನ್ನು ಒಡೆದು ಹಾಕು"ಎಂದಿತು. ಆಗ ಅವಳು ತಾನು ತಂದ ಕತ್ತಿಯಲ್ಲಿಯೇ ಹಾವಿನ ಬಾವನ್ನು ಒಡೆದಳು. ಹಾಗೆಯೆ ಮುಂದೆ ಹೋದಳು. ಅಲ್ಲಿ ಒಂದು ಹಾಳು ಬಾವಿ ಇತ್ತು. ಆ ಬಾವಿಯಲ್ಲಿ ಒಂದು ಆಕಳು ಬಿದ್ದುಕೊಂಡಿತ್ತು. ಆ ಆಕಳು "ತಂಗಿ ನನ್ನನ್ನು ಮೇಲಕ್ಕೆ ಏಳಿಸು. ನಿನಗೆ ತುಂಬಾ ಕರುವನ್ನು ಹಾಕಿ ಕೊಡುತ್ತೇನೆ" ಎಂದಿತು. ಅದು ಆಕಳನ್ನು ಏಳಿಸಿದಳು. ದೊಡ್ಡಕ್ಕ ಮುಂದಕ್ಕೆ ಹೋದಳು. ಅಲ್ಲಿ ಒಂದು ತೆಂಗಿನ ಮರವು ಇತ್ತು. ಆ ತೆಂಗಿನ ಮರವು "ತಂಗೀ ನನಗೆ ಸ್ವಲ್ಪ ನೀರನ್ನು ಹಾಕು ನಿನಗೆ ತೆಂಗಿನಕಾಯಿಯನ್ನು ಕೊಡುತ್ತೇನೆ" ಎಂದಿತು. ದೊಡ್ಡಕ್ಕ ಅದಕ್ಕೆ ನೀರನ್ನು ಹಾಕಿ ಮುಂದೆ ಹೋದಳು. ಅಲ್ಲಿ ಒಬ್ಬ ಅಜ್ಜಿಯ ಮನೆ ಇತ್ತು. ಅಜ್ಜಿಯು ಭಿಕ್ಷೆ ಬೇಡಲು ಹೋಗಿದ್ದಳು. ದೊಡ್ಡಕ್ಕ ಮನೆಗೆ ಒಳಗೆ ಹೋಗಿ ಅಲ್ಲಿಯ ಕಸವನ್ನು ಗುಡಿಸಿ, ರಂಗೋಲಿಯನ್ನು ಹಾಕಿ. ಅಡುಗೆಯನ್ನು ಮಾಡಿ ಕದದ ಮೂಲೆಯಲ್ಲಿ ಕುಳಿತುಕೊಂಡಳು. ಸ್ವಲ್ಪ ಸಮಯದ ನಂತರ ಅಜ್ಜಿಯು ಬಂದಳು. ಮನೆಯನ್ನೆಲ್ಲ ನೋಡಿ ಅವಳಿಗೆ ಆಶ್ಚರ್ಯವಾಯಿತು. ಅವಳು ಬಂದು ತುಳಸಿ ಕಟ್ಟೆಯ ಮೇಲೆ ಕುಳಿತುಕೊಂಡು "ಇದು ಯಾರು ಈ ರೀತಿ ಮಾಡಿದವರು" ಭಾಗ್ಯದ ಲಕ್ಷ್ಮಿಯಾದರೆ ಬಲ ತೊಡೆ ಮೇಲೆ ಕುಳಿತುಕೊಳ್ಳಲಿ. ದರಿದ್ರ ಲಕ್ಷ್ಮಿಯಾದರೆ ಎಡತೊಡೆಯ ಮೇಲೆ ಕುಳಿತುಕೊಳ್ಳಲಿ" ಎಂದಳು. ದೊಡ್ಡಕ್ಕ ಓಡಿ ಬಂದು ಅಜ್ಜಿಯ ಬಲ ತೊಡೆಯ ಮೇಲೆ ಕುಳಿತುಕೊಂಡಳು. ಆಗ ಅಜ್ಜಿಯು

ಅವಳನ್ನು ಒಳಗೆ ಕರೆದುಕೊಂಡು ಹೋದಳು. ಎರಡು ಮೂರು ದಿನ ತನ್ನ ಮನೆಯಲ್ಲಿಯೇ ಅವಳನ್ನು ಉಳಿಸಿಕೊಂಡಳು. ಸ್ವಲ್ಪ ದಿನದ ನಂತರ ಅವಳು ಮನೆಗೆ ಬರಲು ತಯಾರಾದಳು. ಆಗ ಅಜ್ಜಿ ಅವಳಿಗೆ ಒಂದು ಗಾಡಿಯನ್ನು ಮಾಡಿಕೊಟ್ಟಳು. ತೆಂಗಿನ ಮರ ಅವಳಿಗೆ ತುಂಬಾ ತೆಂಗಿನ ಕಾಯಿಯನ್ನು ಕೊಟ್ಟಿತು. ಅದನ್ನು ಗಾಡಿಯಲ್ಲಿ ತುಂಬಿಕೊಂಡು ಮುಂದೆ ನಡೆದಳು. ಆಕಳು ಕರುಗಳನ್ನು ಕೊಟ್ಟಿತು. ಆಕಳು ಕೊಟ್ಟ ಕರುಗಳನ್ನು ಗಾಡಿಗೆ ಕಟ್ಟಿಕೊಂಡು ಮುಂದೆ ನಡೆದಳು. ಹಾವಿನ ಹತ್ತಿರ ಬಂದಳು. ಹಾವು ಅದಕ್ಕೆ ಚಿನ್ನವನ್ನು ಕೊಟ್ಟಿತು. ಚಿನ್ನವನ್ನು ತುಂಬಿಕೊಂಡು ಮನೆಗೆ ಬಂದಳು. ಮನೆಗೆ ಬಂದ ಕೂಡಲೇ ತಾಯಿಗೆ ಇದನ್ನೆಲ್ಲ ನೋಡಿ ತುಂಬಾ ಸಂತೋಷವಾಯಿತು. ಹಣವನ್ನು ಅಳೆಯಲು ಗುಬ್ಬಕ್ಕನ ಮನೆಯಿಂದ ಕೊಳಗವನ್ನು ತಂದಳು. ಗುಬ್ಬಕ್ಕ ಕೊಳಗಕ್ಕೆ ಅಂಟನ್ನು ಹಾಕಿ ಕೊಟ್ಟಳು. ಚಿನ್ನವನ್ನು ಅಳೆದು ಆದ ಮೇಲೆ ದೊಡ್ಡಕ್ಕ ಕೊಳಗವನ್ನು ಕೊಟ್ಟು ಬಂದಳು.

ಆ ಕೊಳಗಕ್ಕೆ ಚಿನ್ನ ಹಿಡಿದುಕೊಂಡಿತ್ತು. ಅದನ್ನು ನೋಡಿ ಗುಬ್ಬಕ್ಕನಿಗೆ ಹೊಟ್ಟೆಕಿಚ್ಚು ಬಂದಿತು. ತನ್ನ ಮಗಳ ಹತ್ತಿರ "ಸುಬ್ಬಕ್ಕನ ಮಗಳು ತುಂಬಾ ಚಿನ್ನ ತಂದಿದ್ದಾಳೆ. ನೀನೂ ಹೋಗಿ ಕೆಸುವಿನ ಸೊಪ್ಪನ್ನು ಕೊಯ್ದುಕೊಂಡು ಬಾ" ಎಂದಳು. ಆಗ ಅವಳ ಮಗಳು (ಸಣ್ಣಕ್ಕ) ಅಳುತ್ತಾ ಕೆಸುವಿನ ಸೊಪ್ಪನ್ನು ಕೊಯ್ಯಲು ಹೋದಳು. ಆಗ ಅಲ್ಲಿ ಒಂದು ಹಾವು ಮಲಗಿಕೊಂಡಿತ್ತು. ಅದಕ್ಕೆ ಬಾವು ಎದ್ದಿತ್ತು. ಅವಳ ಹತ್ತಿರ ಆ ಹಾವು "ನನ್ನ ಬಾವನ್ನು ಒಡೆ" ಎಂದಿತು. ಆಗ ಅವಳು "ನಿನ್ನ ಬಾವನ್ನು ಒಡೆಯುವುದಿಲ್ಲ ಅದರ ಬದಲು ಇನ್ನೊಂದು ಬಾವನ್ನು ಏಳಿಸುತ್ತೇನೆ" ಎಂದು. ಮುಂದೆ ಹೋದಳು. ಆಕಳು ಬಾವಿಯಲ್ಲಿ ಬಿದ್ದುಕೊಂಡಿತ್ತು. "ನನ್ನನ್ನು ಮೇಲೆ ಏಳಿಸು ನಿನಗೆ ತುಂಬಾ ಕರುವನ್ನು ಹಾಕಿ ಕೊಡುತ್ತೇನೆ" ಎಂದಿತು. ಆಗ ಅವಳು "ನಿನ್ನ ಏಳಿಸುವುದಿಲ್ಲ ನಿನ್ನ ತಲೆಯ ಮೇಲೆ ಇನ್ನೊಂದು ಕಲ್ಲನ್ನು ಹಾಕುತ್ತೇನೆ" ಎಂದಳು. ಆಗ ಆಕಳು ಸುಮ್ಮನಾಯಿತು. ಹಾಗೆ ಮುಂದೆ ಹೋದಳು ಅಲ್ಲಿ ಒಂದು ತೆಂಗಿನ ಮರ ಇತ್ತು. ಅವಳ ಹತ್ತಿರ "ನನಗೆ ನೀರನ್ನು ಹಾಕಿ ಹೋಗು ನಾನು ನಿನಗೆ ತೆಂಗಿನ ಕಾಯಿಯನ್ನು ಕೊಡುತ್ತೇನೆ" ಎಂದಳು. ಮತ್ತೆ ಸ್ವಲ್ಪ ಮುಂದೆ ಹೋದಳು. ಅಲ್ಲಿ ಒಂದು ಅಜ್ಜಿ ಮನೆ ಇತ್ತು. ಆ ಮನೆ ನೆಲವನ್ನು ಅಗೆದು ಗಿಡವನ್ನೆಲ್ಲ ಮುರಿದು ಹಾಕಿ ಕದದ ಮೂಲೆಯಲ್ಲಿ ಕುಳಿತುಕೊಂಡಳು. ಅಜ್ಜಿ ಬಂದು ನೋಡಿದಳು. ಮನೆಯು ಬೀಳುವ ಹಾಗೇ ಅಗಿತ್ತು. ಅಜ್ಜಿ ತುಳಸಿ ಕಟ್ಟೆಯ ಮೇಲೆ ಕುಳಿತುಕೊಂಡು "ಭಾಗ್ಯದ ಲಕ್ಷ್ಮಿಯಾದರೆ ಬಲ ತೊಡೆ ಮೇಲೆ ಕುಳಿತುಕೊಳ್ಳಲಿ ದರಿದ್ರ ಲಕ್ಷ್ಮಿಯಾದರೆ ಎಡ ತೊಡೆಯ ಮೇಲೆ ಕುಳಿತುಕೊಳ್ಳಲಿ" ಎಂದಳು. ಆಗ ಸಣ್ಣಕ್ಕ ಬಂದು ಎಡತೊಡೆಯ ಮೇಲೆ ಕುಳಿತಳು. ಅಜ್ಜಿ ಅವಳಿಗೆ ಹೊಡೆದು ಅವಳನ್ನು ಚುಟಿ ಕಳುಹಿಸಿದಳು. ಸಣ್ಣಕ್ಕ ಅಳುತ್ತಾ ಮನೆಗೆ ಬಂದಳು. ಆಗ ಅವಳ ಅಮ್ಮ ಮಗಳನ್ನು ನೋಡಿ ಸ್ನಾನ ಮಾಡಿಸಿ ಎಣ್ಣೆ ಹಚ್ಚಿ ಗುಣ ಮಾಡಿದಳು.

□□

೩೭

ಕೆಸುವಿನ ಸೊಪ್ಪು

ಒಂದು ಊರಿನಲ್ಲಿ ಬಡವರು ಮತ್ತು ಶ್ರೀಮಂತರು ಇದ್ದರು. ಬಡವರ ಮನೆಯಲ್ಲಿ ಅಜ್ಜಿ ಮೊಮ್ಮಗಳು ಇದ್ದರು. ದೊಡ್ಡವರ ಮನೆಯಲ್ಲಿ ಬಹಳ ಜನ ಇದ್ದರು. ಒಂದು ದಿನ ಬಡವರ ಮನೆ ಹುಡುಗಿ ಮತ್ತು ಶ್ರೀಮಂತರ ಮನೆಯ ಹುಡುಗಿ ಇಬ್ಬರು ಕೆಸುವಿನ ಸೊಪ್ಪನ್ನು ಕೊಯ್ಯಲು ಹೊಳೆಯ ಬದಿಗೆ ಹೋದರು. ಬಡವರ ಮನೆ ಹುಡುಗಿಯು ತಮ್ಮ ಮನೆಯಲ್ಲಿ ಕಡಿಮೆ ಜನರಿದ್ದಾರೆ ಎಂದು ಸ್ವಲ್ಪ ಕೆಸುವಿನ ಸೊಪ್ಪನ್ನು ಕೊಯ್ದಳು. ಶ್ರೀಮಂತರ ಮನೆ ಹುಡುಗಿಯು ತಮ್ಮ ಮನೆಯಲ್ಲಿ ಬಹಳ ಜನರಿದ್ದಾರೆ ಎಂದುಕೊಂಡು ಬಹಳ ಸೊಪ್ಪನ್ನು ಕೊಯ್ದಳು. ಇಬ್ಬರು ಮನೆಗೆ ಬಂದರು. ಅಜ್ಜಿಯು ತನ್ನ ಮೊಮ್ಮಗಳು ಕಡಿಮೆ ಸೊಪ್ಪು ತಂದಿದ್ದಾಳೆ" ಎಂದು ಮನೆಯಿಂದ ಹೊರಗೆ ಹಾಕಿದಳು. ಆ ಮೊಮ್ಮಗಳು ನಡೆಯುತ್ತಾ ಕಾಡಿಗೆ ಹೋದಳು. ಆಗ ಅಲ್ಲಿ ಒಂದು ಬಾಳೆಮರ ಇತ್ತು. ಆ ಬಾಳೆಮರವು "ನನಗೆ ಸ್ವಲ್ಪ ನೀರು ಹಾಕು" ಎಂದಿತು. ಆಗ ಅವಳು ತನ್ನ ಸೀರೆಯನ್ನು ಒದ್ದೆ ಮಾಡಿಕೊಂಡು ಬಾಳೆ ಗಿಡಕ್ಕೆ ನೀರನ್ನು ಹಾಕಿದಳು. ಸ್ವಲ್ಪ ಮುಂದೆ ಹೋದ ಕೂಡಲೇ ಒಂದು ಹೂವಿನ ಗಿಡ ಸಿಕ್ಕಿತ್ತು. ಅವಳ ಹತ್ತಿರ "ನನಗೆ ಸ್ವಲ್ಪ ನೀರನ್ನು ಹಾಕು" ಎಂದಿತು. ಅದಕ್ಕೆ ನೀರನ್ನು ಹಾಕಿ ಮುಂದೆ ಹೋದಳು. ಅಲ್ಲಿ ಒಂದು ಹಾವು ಸಿಕ್ಕಿತು. ಅವಳ ಹತ್ತಿರ "ನನಗೆ ಬಾವು ಎದ್ದಿದೆ. ಕಬ್ಬಿಣ ಕಾಯಿಸಿ ಬಾವಿನ ಮೇಲೆ ಇಡು" ಎಂದಿತು. ಅವಳು ಹಾಗೆ ಮಾಡಿದಳು. ಹಾಗೆ ಮುಂದೆ ಹೋಗಿ ಒಬ್ಬ ರಾಜನ ಮನೆಗೆ ಹೋದಳು. ರಾಜನು "ಬಲ ತೊಡೆಯ ಮೇಲೆ ಕುಳಿತರೆ ಭಾಗ್ಯದಲಕ್ಷ್ಮಿ, ಎಡತೊಡೆಯ ಮೇಲೆ ಕುಳಿತರೆ ದರಿದ್ರ ಲಕ್ಷ್ಮಿ" ಎಂದನು. ಅವಳು ಬಲ ತೊಡೆಯ ಮೇಲೆ ಕುಳಿತಳು. ರಾಜನು ಅವಳಿಗೆ ಬಹಳ ದುಡ್ಡು, ಚಿನ್ನ ಬೇಕಾದ ವಸ್ತುವನ್ನು ಕೊಟ್ಟನು. ಅವಳು ತಿರುಗಿ ಬರುವಾಗ ಅವಳಿಗೆ ಹಾವು ಸಿಕ್ಕಿತು. ಅದು ಆ ಹುಡುಗಿಯನ್ನು ಗುರುತು ಹಿಡಿಯಿತು. ಅವಳಿಗೆ ಬೇಕಾದಷ್ಟು ಬಂಗಾರವನ್ನು ಕೊಟ್ಟಿತು. ಹಣದ ಪಾತ್ರೆಯನ್ನು ತೋರಿಸಿಕೊಟ್ಟಿತು. ಹಾಗೆ ಹೂವನ್ನು ಕೊಟ್ಟಿತು. ಬಾಳೆಯ ಮರವು ಬಾಳೆಹಣ್ಣನ್ನು ಕೊಟ್ಟಿತು. ಇದನ್ನೆಲ್ಲವನ್ನೂ ತೆಗೆದುಕೊಂಡು ಸಣ್ಣಕ್ಕ ಮನೆಗೆ ಬಂದಳು. ಆಗ ಅಜ್ಜಿ ಅವಳನ್ನು ತುಂಬಾ ಚೆನ್ನಾಗಿ ನೋಡಿಕೊಂಡಳು

ಬಡವರ ಮನೆ ಹುಡುಗಿ ತುಂಬಾ ಚಿನ್ನವನ್ನು ತಂದ ಸುದ್ದಿ ಶ್ರೀಮಂತರ ಮನೆ ಹುಡುಗಿಯ ತಾಯಿಗೆ ತಿಳಿಯಿತು. ಅವಳು ತನ್ನ ಮಗಳನ್ನು ಹೊರಗೆ ಹಾಕಿದಳು. ಅವಳು ಅಳುತ್ತಾ ಕಾಡಿಗೆ ಹೋದಳು. ಹೋಗುಘಾಗ ಬಾಳೆಯ ಮರ ಸಿಕ್ಕಿತು. ಹುಡುಗಿಯ ಹತ್ತಿರ ನನಗೆ ಸ್ವಲ್ಪ ನೀರನ್ನು ಹಾಕು" ಎಂದಿತು. ಆಗ ಆ ಹುಡುಗಿಯು "ನನಗೆ ಬಹಳ ಹಸಿವೆಯಾಗಿದೆ ನಾನು ನಿನಗೆ ನೀರನ್ನು ಹಾಕುವುದಿಲ್ಲ" ಎಂದಳು. ಸ್ವಲ್ಪ ಮುಂದೆ ಹೋದ ಕೂಡಲೇ ಹೂವಿನ ಗಿಡ ಸಿಕ್ಕಿತು. ಅದು ತನಗೆ ಸ್ವಲ್ಪ ನೀರನ್ನು ಹಾಕು" ಎಂದಿತು. ಆಗ ಆ ಹುಡುಗಿ "ನನಗೆ ತುಂಬ ಹಸಿವೆಯಾಗಿದೆ ನಾನು ನಿನಗೆ ನೀರನ್ನು ಹಾಕುವುದಿಲ್ಲ"ಎಂದಳು. ಅವಳು ಸ್ವಲ್ಪ ಮುಂದೆ ಹೋದಳು. ಆಗ ಅಲ್ಲಿ ಒಂದು ಹಾವು ಸಿಕ್ಕಿತು. ಅದು ಹುಡುಗಿಯ ಹತ್ತಿರ "ನನಗೆ ಬಾವು ಎದ್ದಿದೆ. ಕಬ್ಬಿಣವನ್ನು ಕಾಯಿಸಿ ಇಡು" ಎಂದಿತು. ಆಗ ಹುಡುಗಿ "ನನಗೆ ತುಂಬಾ ಹೆದರಿಕೆಯಾಗುತ್ತದೆ" ಎಂದು ಅಡ್ಡ ದಾರಿಯಲ್ಲಿ ಓಡಿ ಹೋದಳು. ಮುಂದೆ ರಾಜನ ಮನೆಗೆ ಬಂದಳು. ರಾಜನು "ಬಲತೊಡೆ ಮೇಲೆ ಕುಳಿತುಕೊಂಡರೆ ಭಾಗ್ಯಲಕ್ಷ್ಮಿ ಎಡತೊಡೆಯ ಮೇಲೆ ಕುಳಿತುಕೊಂಡರೆ ದರಿದ್ರ ಲಕ್ಷ್ಮಿ" ಎಂದನು. ಆ ಹುಡುಗಿ ಹೋಗಿ ಎಡ ತೊಡೆಯ ಮೇಲೆ ಕುಳಿತುಕೊಂಡಳು. ರಾಜನಿಗೆ ಸಿಟ್ಟು ಬಂದಿತು. ಆ ಹುಡುಗಿ ದರಿದ್ರ ಲಕ್ಷ್ಮಿ ಎಂದು ಅವಳನ್ನು ದೂಡಿ ಹಾಕಿದನು. ಅವಳಿಗೆ ಒಂದು ಹನಿಯೂ ನೀರು ಸಿಗದೆ ಅಳುತ್ತಾ ಮನೆಗೆ ಬಂದಳು.

□□

೩೮

ಮಲಮಗಳು

ಒಂದು ಊರಿನಲ್ಲಿ ಒಬ್ಬಳು ಹುಡುಗಿ ಇದ್ದಳು. ಅವಳಿಗೆ ಅಪ್ಪ ಅಮ್ಮ ಇರಲಿಲ್ಲ. ಒಬ್ಬಳು ಚಿಕ್ಕಮ್ಮ ಇದ್ದಳು. ಆ ಚಿಕ್ಕಮ್ಮನಿಗೆ ಒಬ್ಬಳು ಮಗಳಿದ್ದಳು. ಚಿಕ್ಕಮ್ಮನಿಗೆ ಈ ಹುಡುಗಿಯನ್ನು ಕಂಡರೆ ಆಗುತ್ತಿರಲಿಲ್ಲ. ಅವಳ ಹತ್ತಿರ ಎಲ್ಲಾ ಕೆಲಸವನ್ನು ಮಾಡಿಸುತ್ತಿದ್ದಳು. ಒಂದು ದಿನ ಆ ಹುಡುಗಿ ಹತ್ತಿಯನ್ನು ಒಣಗಿಸುತ್ತಾ ಕುಳಿತ್ತಿದ್ದಳು. ಆಗ ಜೋರಾಗಿ ಗಾಳಿ ಬೀಸುತ್ತಿತ್ತು. ಎಲ್ಲ ಹತ್ತಿಯೂ ಗಾಳಿಯಲ್ಲಿ ಹಾರಿ ಹೋಯಿತು. ಈ ಹುಡುಗಿಯು "ಗಾಳಿ ಗಾಳಿ ನನ್ನ ಹತ್ತಿಯನ್ನು ಹಾರಿಸಬೇಡ. ಹತ್ತಿಯನ್ನು ಕೊಡು ಇಲ್ಲದಿದ್ದರೆ ನನ್ನ ಚಿಕ್ಕಮ್ಮ ನನ್ನನ್ನು ಕೊಂದು ಬಿಡುತ್ತಾರೆ" ಎಂದಳು. ಹಾಗೆ ಹೇಳುತ್ತಾ ಗಾಳಿಯ ಹಿಂದೆ ಓಡಿದಳು. ಆಗ ದಾರಿಯಲ್ಲಿ ಒಂದು ಬೂರಲ ಹತ್ತಿ ಮರ ಸಿಕ್ಕಿತು. ಆ ಮರವು ಹುಡುಗಿಯ ಹತ್ತಿರ "ನನ್ನ ಬುಡದಲ್ಲಿರುವ ಕಲ್ಲು ಮುಳ್ಳನ್ನು ತೆಗೆಯುತ್ತೀಯಾ"? ಎಂದು ಕೇಳಿತು. ಅವಳು ಮುಳ್ಳನ್ನು ತೆಗೆದು ಮುಂದೆ ಹೋದಳು. ಅಲ್ಲಿ ಒಂದು ಕೊಟ್ಟಿಗೆ ಸಿಕ್ಕಿತು. ಆಗ ಅದರಲ್ಲಿದ್ದ ಆಕಳು "ತಂಗಿ ನನ್ನ ಕೊಟ್ಟಿಗೆಯ ಸಗಣಿ ಸ್ವಲ್ಪ ತೆಗೆದು ಹಾಕು" ಎಂದು ಕೇಳಿತು. ಕೊಟ್ಟಿಗೆಯ ಸಗಣಿಯನ್ನು ತೆಗೆದು ಮುಂದೆ ಇವಳು ನಡೆದಳು. ಅಲ್ಲಿ ಒಂದು ಅಜ್ಜಿಯ ಮನೆ ಕಂಡಿತು. ಅಜ್ಜಿಯು ಅಂಗಳದಲ್ಲಿ ಕುಳಿತುಕೊಂಡು ನೂಲನ್ನು ತೆಗೆಯುತ್ತಿದ್ದಳು. ಈ ಹುಡುಗಿಯನ್ನು ನೋಡಿ "ಮಗಳೆ ನನಗೆ ಸ್ವಲ್ಪ ಸಹಾಯ ಮಾಡು" ಎಂದಳು. ಆ ಹುಡುಗಿ ಆಯಿತು ಎಂದು ಅಜ್ಜಿಗೆ ನೂಲನ್ನು ತೆಗೆಯಲು ಕೊಡದೆ ತಾನೇ ನೂಲನ್ನು ತೆಗೆದುಕೊಟ್ಟಳು. ಇದರಿಂದ ಅಜ್ಜಿಗೆ ಬಹಳ ಸಂತೋಷವಾಯಿತು. ಆಗ ಅಜ್ಜಿ ಹುಡುಗಿಯ ಹತ್ತಿರ "ಆ ಕೋಣೆಗೆ ಹೋಗು ಅಲ್ಲಿ ಬಹಳ ಸೀರೆ ಇದೆ ನಿನಗೆ ಯಾವ ಸೀರೆ ಬೇಕು ಎಂದು ತೆಗೆದುಕೊಂಡು ಹಾಗೆ ಆ ನದಿಯಲ್ಲಿ ಸ್ನಾನ ಮಾಡಿಕೊಂಡು ಬಾ" ಎಂದಳು. ಹುಡುಗಿಯು ಕೋಣೆಗೆ ಅಲ್ಲಿರುವ ನೂಲಿನಿಂದ ಮಾಡಿದ ಒಂದು ಸೀರೆಯನ್ನು ತೆಗೆದುಕೊಂಡು ಅಲ್ಲಿಯೇ ಇರುವ ನದಿಗೆ ಹೋಗಿ ಸ್ನಾನ ಮಾಡಿದಳು. ಆ ನದಿಯಲ್ಲಿ ಸ್ನಾನ ಮಾಡಿದ್ದೇ ತಡ ಅವಳು ಬಹಳ ಸುಂದರಿ ಯಾದಳು. ಅವಳು ಸ್ನಾನ ಆದ ಕೂಡಲೇ ಅಜ್ಜಿಯು ಅವಳನ್ನು ಇನ್ನೊಂದು

ಕೋಣೆಗೆ ಕರೆದುಕೊಂಡು ಹೋದಳು. ಅವಳ ಹತ್ತಿರ ನಿನಗೆ ಬೇಕಾದ ಪೆಟ್ಟಿಗೆಯನ್ನು ತೆಗೆದುಕೊಂಡು ಹೋಗು ಎಂದಳು. ಅವಳು ಒಂದು ಸಣ್ಣ ಪೆಟ್ಟಿಗೆಯನ್ನು ತೆಗೆದುಕೊಂಡು ಮನೆಗೆ ಹೊರಟಳು. ಹೋಗುವ ದಾರಿಯ ಮಧ್ಯೆ ಅವಳಿಗೆ ಆಕಳು ಕೊಡದ ತುಂಬಾ ತುಪ್ಪವನ್ನು ನೀಡಿತು. ಬೂರಲ ಹತ್ತಿ ಮರ ಅವಳಿಗೆ ತುಂಬಾ ಹತ್ತಿಯನ್ನು ಕೊಟ್ಟಿತು. ಎಲ್ಲವನ್ನು ತೆಗೆದುಕೊಂಡು ಮನೆಗೆ ಬಂದಳು. ಮನೆಗೆ ಬಂದು ಪೆಟ್ಟಿಗೆಯನ್ನು ತೆಗೆದು ನೋಡಿದಳು. ಆ ಪೆಟ್ಟಿಗೆಯಿಂದ ಒಬ್ಬ ರಾಜಕುಮಾರ ಬಂದು ಅವಳನ್ನು ಮದುವೆ ಮಾಡಿಕೊಂಡು ನಡೆದನು. ಇದನ್ನು ನೋಡಿ ಅವಳ ಚಿಕ್ಕಮ್ಮನಿಗೆ ತುಂಬಾ ಹೊಟ್ಟೆಕಿಚ್ಚು ಬಂದಿತು. ತನ್ನ ಮಗಳನ್ನು ಕಳುಹಿಸಿದಳು. ದಾರಿಯಲ್ಲಿ ಬೂರಲ ಹತ್ತಿ ಮರ ಸಿಕ್ಕಿತು. ಮೊದಲನೇ ಹುಡುಗಿಯ ಹತ್ತಿರ ಹೇಳಿದ ಹಾಗೆ ಇವಳ ಹತ್ತಿರವೂ ಹೇಳಿತು. ಆದರೆ ಇವಳು ನನ್ನ ಹತ್ತಿರ ಆಗುವುದಿಲ್ಲ ಎಂದಳು. ಹಾಗೆ ಮುಂದೆ ಹೋದಳು. ಮುಂದೆ ಹೋದ ಹಾಗೆ ಅಲ್ಲಿ ಒಂದು ಆಕಳು ಸಿಕ್ಕಿತು. ಆಕಳು ಸ್ವಲ್ಪ ನನ್ನ ಕೊಟ್ಟಿಗೆಯ ಸಗಣಿಯನ್ನು ತೆಗೆದು ಹಾಕಿ ಹೋಗು ಎಂದಿತು. ಆಗ ಈ ಹುಡುಗಿ ನನ್ನ ಹತ್ತಿರ ಆಗುವುದಿಲ್ಲ ಎಂದಳು. ಮುಂದೆ ಅಜ್ಜಿ ಮನೆ ಸಿಕ್ಕಿತು. ಆ ಅಜ್ಜಿಯ ಹತ್ತಿರ ಹೋಗಿ ನನಗೆ ಒಂದು ಪೆಟ್ಟಿಗೆ ಕೊಡು ಎಂದಿತು. ಆ ಅಜ್ಜಿ "ಆ ಕೋಣೆಯಲ್ಲಿ ಬಹಳ ಸೀರೆಯಿದೆ ನಿನಗೆ ಬೇಕಾದ್ದನ್ನು ತೆಗೆದುಕೊಂಡು ನದಿಯಲ್ಲಿ ಸ್ನಾನ ಮಾಡಿ ಬಾ" ಎಂದಳು. ಅವಳು ಹೋಗಿ ನದಿಯಲ್ಲಿ ಸ್ನಾನ ಮಾಡಿದಳು. ಆದರೆ ಸುಂದರಿಯಾಗುವ ಬದಲು ಕುರೂಪಿಯಾದಳು. ನಂತರ ಸೀರೆಯನ್ನು ಉಟ್ಟುಕೊಂಡು ಬಂದು ಅಜ್ಜಿ ಹತ್ತಿರ ನನಗೆ ಪೆಟ್ಟಿಗೆಯನ್ನು ಕೊಡು ಎಂದು ಪೆಟ್ಟಿಗೆಯನ್ನು ತೆಗೆದುಕೊಂಡು ಮನೆಗೆ ಹೊರಟಳು. ದಾರಿಯ ಮೇಲೆ ಆಕಳು ಅಟ್ಟಿಸಿಕೊಂಡು ಬಂದಿತು. ಬೂರಲ ಹತ್ತಿ ಮರ ತನ್ನ ಕೊಂಬೆಯಿಂದ ಅವಳಿಗೆ ಪಟ ಪಟ ಎಂದು ಹೊಡೆದಳು. ಮನೆಗೆ ಬಂದು ಪೆಟ್ಟಿಗೆಯನ್ನು ತೆಗೆದಳು ಅದರಲ್ಲಿ ಹಾವು ಚೇಳುಗಳು ಇದ್ದವು. ಅವು ಎಲ್ಲಾ ಹೊರಗೆ ಬಂದು ಅಮ್ಮ ಮಗಳಿಗೆ ಕಚ್ಚಿ ಸಾಯಿಸಿದವು.

□□

೩೯

ಹಿರಿಯ ಹೆಂಡತಿಯ ಮಗಳು

ಒಂದು ಊರಿನಲ್ಲಿ ಒಂದು ರಾಜ ರಾಣಿ ಇದ್ದರು. ರಾಣಿಗೆ ಒಂದು ಮಗು ಹುಟ್ಟಿತು. ಸ್ವಲ್ಪ ದಿನದ ನಂತರ ಆ ಹೆಂಡತಿ ಸತ್ತು ಹೋದಳು. ರಾಜನು ಎರಡನೇ ಮದುವೆಯಾದನು. ಎರಡನೇ ಹೆಂಡತಿಗೆ ಒಂದು ಮಗುವಾಯಿತು. ರಾಜನ ಎರಡನೇ ಹೆಂಡತಿ ಮೊದಲನೇ ಹೆಂಡತಿಯ ಮಗುವನ್ನು ಕಂಡರೆ ಉರಿದು ಬೀಳುತ್ತಿದ್ದಳು. ಅವಳಿಗೆ ಅನ್ನ ಮಾಡಿದ ತಿಳಿಯನ್ನು ಕುಡಿಯಲು ಕೊಡುತ್ತಿದ್ದಳು. ರಾಜನ ಮನೆಯಲ್ಲಿ ಒಂದು ಆಕಳು ಇತ್ತು. ಅದು ಒಂದು ಕರುವನ್ನು ಹಾಕಿತು. ಮೊದಲನೇ ಹೆಂಡತಿಯ ಮಗಳು ಆ ಆಕಳ ಹಾಲನ್ನು ಗುಡ್ಡದ ಮೇಲೆ ತೆಗೆದುಕೊಂಡು ಹೋಗಿ ಕಲ್ಲಿನ ಹೊಂಡದಲ್ಲಿ ಹಾಲನ್ನು ಹಾಕಿ ಅದಕ್ಕೆ ಹುಳಿ ಹಾಕಿ ಮೊಸರನ್ನು ಮಾಡಿ ತಿನ್ನುತ್ತಿದ್ದಳು. ಹೀಗೆ ಒಂದು ದಿನ ಮೊಸರು ಕುಡಿಯುವಾಗ ಎರಡನೇ ಹೆಂಡತಿಯ ಮಗಳು ನೋಡಿದಳು. ಮನೆಗೆ ಹೋಗಿ ತಾಯಿಯ ಹತ್ತಿರ ಹೇಳಿದಳು "ಅಮ್ಮಾ ಅಮ್ಮಾ ಅಕ್ಕ ನಮ್ಮ ಮನೆ ಕವಲು ಆಕಳಿನ ಹಾಲನ್ನು ಕರೆದು ಅದನ್ನು ಗುಡ್ಡದ ಮೇಲೆ ಕಲ್ಲಿನ ಹೊಂಡದಲ್ಲಿ ಹೆಪ್ಪಿಗೆ ಹಾಕಿ ಅದು ಮೊಸರಾದ ಮೇಲೆ ಅದನ್ನು ತಿನ್ನುತ್ತಿದ್ದುದನ್ನು ನಾನು ನೋಡಿದೆ" ಎಂದಳು.

ಒಂದು ದಿನ ರಾಣಿಯು ಅನಾರೋಗ್ಯದ ನೆಪ ಹೇಳಿ ಮಲಗಿಕೊಂಡಳು. ರಾಜನಿಗೆ ಇವಳು ನಾಟಕ ಮಾಡುತ್ತಿದ್ದಾಳೆ ಎಂದು ತಿಳಿಯಲಿಲ್ಲ. ನಿಜವಾಗಿಯೂ ಅವಳಿಗೆ ಅನಾರೋಗ್ಯ ಎಂದು ತಿಳಿದು ಹೇಗೆ ಗುಣ ಮಾಡುವುದು ಎಂದು ರಾಣಿಯನ್ನೇ ಕೇಳಿದ. ಆಗ ರಾಣಿಯು ನಮ್ಮ ಮನೆಯ ಕವಲು ಆಕಳನ್ನು ಕಡಿದು ರಕ್ತ ಬಿಟ್ಟರೆ ಮಾತ್ರ ಗುಣವಾಗುತ್ತದೆ ಎಂದಳು. ಆಗ ರಾಜ ಆಕಳಿನ ತಲೆಯನ್ನು ಕಡಿದು ಅದರ ರಕ್ತವನ್ನು ಹೆಂಡತಿಯ ತಲೆಯ ಮೇಲೆ ಬಿಟ್ಟನು. ನಂತರ ಆ ಆಕಳನ್ನು ಕಾಡಿನಲ್ಲಿ ಹುಗಿದು ಬರುವ ಅಂತ ಕಾಡಿಗೆ ತೆಗೆದುಕೊಂಡು ಹೋದನು. ಎರಡನೇ ಹೆಂಡತಿ ಅವನ ಹಿಂದೆ ಸುಮ್ಮನೆ ಹೋದಳು. ರಾಜನು ಹುಗಿಯುವುದನ್ನು ನೋಡಿದ ಮೇಲೆಯೇ ಮನೆಗೆ ಹೋದಳು.

ಕವಲು ಆಕಳನ್ನು ಹುಗಿದ ಜಾಗದಲ್ಲಿ ಒಂದು ತೆಂಗಿನ ಮೊಳಕೆ ಎದ್ದಿತು. ಅದು ಸಸಿಯಾಗಿ ಗಿಡವಾಯಿತು. ಕೊನೆಗೆ ಅದಕ್ಕೆ ಎಳೆನೀರು ಆಯಿತು. ಮೊದಲನೇ ಹೆಂಡತಿ ಮಗಳು ಪ್ರತಿ ದಿನ ಅಲ್ಲಿಗೆ ಹೋಗಿ ನೋಡಿಕೊಂಡು ಬರುತ್ತಿದ್ದಳು. ಒಂದು

ದಿನ ಎಳೆನೀರು ಬಿದ್ದಿತ್ತು. ಅದನ್ನು ಅವಳು ತೆಗೆದುಕೊಂಡು ತಿಂದಳು. ಮತ್ತೊಂದು ದಿನ ಹೋದಳು. ಮತ್ತೊಂದು ಎಳೆನೀರು ಬಿದ್ದಿತ್ತು. ಅದನ್ನೂ ತಿಂದಳು. ಹೀಗೆ ಪ್ರತಿ ದಿನ ಒಂದೊಂದು ಎಳೆನೀರು ಬೀಳುತ್ತಿತ್ತು. ಹೀಗೆ ಇವಳು ತಿನ್ನುತ್ತಿದ್ದುದನ್ನು ಎರಡನೇ ಹೆಂಡತಿಯ ಮಗಳು ನೋಡಿದಳು. ಮನೆಗೆ ಹೋಗಿ ತಾಯಿಯ ಹತ್ತಿರ ಹೇಳಿದಳು. "ಅಮ್ಮಾ ಅಮ್ಮಾ ನಮ್ಮ ಮನೆಯ ಕವಲು ಆಕಳನ್ನು ಹುಗಿದ ಜಾಗದಲ್ಲಿ ಒಂದು ತೆಂಗಿನ ಮರಕ್ಕೆ ಎಳೆನೀರು ಆಗಿದೆ. ಪ್ರತಿದಿನ ಎಳೆನೀರು ಬೀಳುತ್ತದೆ. ಅಕ್ಕ ಅದನ್ನು ತಿನ್ನುತ್ತಾಳೆ" ಎಂದಳು. ಮೊದಲನೇ ಹೆಂಡತಿಯ ಮಗಳು ಮನೆಗೆ ಬಂದ ಕೂಡಲೆ ರಾಣಿಯು ಅವಳಿಗೆ ಬಯ್ದಳು.

ಒಂದು ದಿನ ರಾಜನ ಎರಡನೇ ಹೆಂಡತಿ ತನ್ನ ಪಕ್ಕದ ಮನೆಯ ಅಕ್ಕನ ಹತ್ತಿರ "ನನ್ನ ಮಗಳು ದಪ್ಪ ಆಗುವುದಿಲ್ಲ. ಏನು ಮಾಡುವುದು"ಎಂದು ಕೇಳಿದಳು. ಆಗ ನೆರೆಮನೆಯವಳು "ಅವಳಿಗೆ ಅನ್ನದಲ್ಲಿ ಬೆಣ್ಣೆ ಮುದ್ದೆ ಹಾಕಿ ಕೊಡು" ಎಂದಳು. ರಾಣಿ ಹಾಗೆಯೆ ಮಾಡಿದಳು. ಆದರೂ ಅವಳು ದಪ್ಪ ಆಗಲೇ ಇಲ್ಲ. ಮೊದಲನೇ ಹೆಂಡತಿಯ ಮಗಳು ತಿಳಿಯನ್ನು ಕುಡಿದು ದಪ್ಪವಾದಳು. ಇದನ್ನು ನೋಡಿ ರಾಣಿಗೆ ಮತ್ತೂ ಹೊಟ್ಟೆಕಿಚ್ಚು ಆಯಿತು. ಕೊನೆಗೆ ಅವಳನ್ನು ಒಂದು ಬಾವಿಯಲ್ಲಿ ದೂಡಿದಳು. ಆದರೆ ಅವಳನ್ನು ಒಂದು ಕುಂಬಾಳಬ್ಬೆ ಕರೆದುಕೊಂಡು ಹೋಗಿ ಸಾಕಿತು. ಎರಡನೇ ಹೆಂಡತಿಯ ಮಗಳನ್ನು ಮದುವೆ ಮಾಡಿದರು. ಅವಳು ಗಂಡನ ಮನೆಯಲ್ಲೂ ತನ್ನ ಹುಳುಕು ಬುದ್ಧಿಯನ್ನು ತೋರಿಸಿದಳು. ಅದಕ್ಕಾಗಿ ಅವಳನ್ನು ಪಾಯಿಖಾನೆ ಹೊಂಡದಲ್ಲಿ ಹಾಕಿದರು. ಒಂದು ದಿನ ರಾಣಿ ತನ್ನ ಮಗಳನ್ನು ನೋಡಲು ಹೋದಳು. ಅವಳು ಪಾಯಿಖಾನೆ ಹೊಂಡಕ್ಕೆ ಹೋದಳು. ಅಲ್ಲಿ ಅವಳ ಮಗಳು "ಅಮ್ಮಾ ಅಮ್ಮಾ ಎಲ್ಲರೂ ಬಂದು ನನ್ನ ಮೇಲೆ ಸಂಡಾಸು ಮಾಡಿ ಹೋಗುತ್ತಾರೆ ನೀನು ಹಾಗೆ ಮಾಡುತ್ತಿಯಾ" ಎಂದು ಕೇಳಿದಳು. ಆಗ ಅಮ್ಮ "ನಿನಗೆ ಯಾಕೆ ಇಂಥ ಗತಿ ಬಂತು. ನೀನು ಏನು ಕೆಟ್ಟ ಕೆಲಸ ಮಾಡಿದೆ"ಎಂದು ಮಗಳನ್ನು ಕೇಳಿದಳು. ಆಮೇಲೆ ಅವಳನ್ನು ಕರೆದುಕೊಂಡು ಒಂದು ನದಿಯ ಹತ್ತಿರ ಬಂದಳು. ಅಲ್ಲಿ ಒಬ್ಬ ಮಡಿವಾಳ ಬಟ್ಟೆ ತೊಳೆಯುತ್ತಾ ಇದ್ದನು. ಅವನ ಹತ್ತಿರ ಕೇಳಿದಳು "ಮಡಿವಾಳ ನನ್ನ ಮಗಳು ಹೊಲಸು ಆಗಿದ್ದಾಳೆ. ಸ್ವಚ್ಛ ಆಗಲು ಏನು ಮಾಡಬೇಕು" ಎಂದು ಕೇಳಿದಳು. ಆಗ ಮಡಿವಾಳನು "ಕಾಲು ಹಿಡಿದುಕೊಂಡು ಕಲ್ಲಿಗೆ ಬಡಿಯಬೇಕು" ಎಂದನು. ರಾಣಿಯು ಹಾಗೆ ಮಾಡಿದಳು. ಮಗಳ ತಲೆ ಒಡೆದು ಎರಡು ಹೋಳಾಗಿ ಹೋಯಿತು. ಅವಳ ಮಗಳು ಸತ್ತು ಹೋದಳು. ಇಲ್ಲಿ ಮೊದಲನೆಯ ಹೆಂಡತಿಯ ಮಗಳು ಮದುವೆಯಾಗಿ ಸುಖವಾಗಿ ಇದ್ದಳು.

□□

೪೦

ಚಿನ್ನದ ಕುಂಕುಮದ ಕೂಸು

ಒಂದು ಊರಿನಲ್ಲಿ ಗಂಡ ಹೆಂಡತಿ ಇದ್ದರು. ಅವರಿಗೆ ಇಪ್ಪತ್ತು ಜನ ಹೆಣ್ಣು ಮಕ್ಕಳು ಇದ್ದರು. ಅವರಲ್ಲಿ ಕಿರಿಯ ಮಗಳ ಹೆಸರು ಗುಬ್ಬಿ. ಅವಳು ನೋಡಲು ತನ್ನ ಅಕ್ಕಂದಿರಿಗಿಂತ ಸುಂದರವಾಗಿದ್ದಳು. ಅವಳ ಅಕ್ಕಂದಿರಿಗೆ ಗುಬ್ಬಿಯನ್ನು ಕಂಡರೆ ಆಗುತ್ತಿರಲಿಲ್ಲ. ಯಾವಾಗಲೂ ಗುಬ್ಬಿಗೆ ಬಯ್ಯುತ್ತಾ ಇದ್ದರು. ಒಂದು ದಿನ ಹತ್ತೊಂಬತ್ತು ಜನ ಹೆಣ್ಣು ಮಕ್ಕಳು ಕಾಡಿಗೆ ಹೋಗಲು ತಯಾರಾದರು. ಗುಬ್ಬಿಯನ್ನು ಕರೆದುಕೊಂಡು ಹೋಗಲು ಅವರಿಗೆ ಮನಸ್ಸಿರಲಿಲ್ಲ. ಆದರೂ ಗುಬ್ಬಿ ಅವರ ಹಿಂದೆ ಹೋದಳು. ಹೀಗೆ ಕಾಡಿಗೆ ಹೋಗುವಾಗ ದಾರಿಯಲ್ಲಿ ಹೂವನ್ನು ಕೊಯ್ಯುತ್ತಾ ಹೋಗುತ್ತಿದ್ದರು. ಗುಬ್ಬಿಗೆ ಹೂವನ್ನು ಕೊಯ್ಯಲು ಕೊಡುತ್ತಿರಲಿಲ್ಲ. ಅವಳು ಹೂವು ಕೊಯ್ದರೂ ಅವಳಿಂದ ಕಸಿದುಕೊಳ್ಳುತ್ತಿದ್ದರು. ಆಮೇಲೆ ಗುಬ್ಬಿಯು ಒಂದು ಕಲ್ಲು ಬಂಡೆಯ ಮೇಲೆ ಕುಳಿತುಕೊಂಡಳು. ಉಳಿದವರೆಲ್ಲ ಹೂವು ಕೊಯ್ಯುತ್ತಿದ್ದರು. ಕತ್ತಲು ಆಗುತ್ತಾ ಬಂದಿತು. ಇವರಿಗೆ ಮನೆಗೆ ಹೋಗುವ ನೆನಪೇ ಇರಲಿಲ್ಲ. ಆಗ ಗುಬ್ಬಿಯು "ಕತ್ತಲಾಯಿತು ಮನೆಗೆ ಹೋಗುವ" ಎಂದಳು. ಆಗ ಅವರೆಲ್ಲ "ನೀನು ಬೇಕಾದರೆ ಹೋಗು. ನಿನ್ನ ಹತ್ತಿರ ಬಾ ಎಂದು ಯಾರು ಹೇಳಲಿಲ್ಲ" ಎಂದರು. ಪಾಪ ಗುಬ್ಬಿ ಸುಮ್ಮನೆ ಕುಳಿತುಕೊಂಡಳು. ಹೀಗೆ ಹೂವು ಕೊಯ್ಯುತ್ತಾ ಇರುವಾಗಲೇ ಕತ್ತಲಾಗುತ್ತ ಬಂದಿತು. ಆಗ ಅವರೆಲ್ಲ ಮನೆಗೆ ಹೋಗುವ ಎಂದರು. ಆದರೆ ಹೋಗುವ ದಾರಿ ತಿಳಿದಿರಲಿಲ್ಲ. ಆಗ ಗುಬ್ಬಿಯ ಹತ್ತಿರ ಮನೆಗೆ ಹೋಗುವುದು ಹೇಗೆ ಎಂದು ಕೇಳಿದರು. ಗುಬ್ಬಿಯು ದಾರಿಯಲ್ಲಿ ನಡೆಯುತ್ತಾ ಹೋದಳು.

ಅವಳ ಅಕ್ಕಂದಿರೆಲ್ಲ ಅವಳ ಹಿಂದೆಯೇ ಹೋದರು. ಆಗ ಹೇಳಿದರು "ನಾವು ಗುಬ್ಬಿ ಹೋದ ದಾರಿಯಲ್ಲಿ ಹೋಗೋಣ. ಪಾಪ ಗುಬ್ಬಿ ಕರೆದುಕೊಂಡು ಹೋಗುತ್ತಾಳೆ" ಎಂದರು. ಎಷ್ಟು ಮುಂದೆ ಹೋದರು ಮನೆಯು ಕಾಣಲಿಲ್ಲ. ಆಗ ಇವರೆಲ್ಲ ಗುಬ್ಬಿಗೆ ಬಯ್ದರು. "ಇನ್ನೂ ಮನೆಯ ಕಾಣುವುದಿಲ್ಲ. ಮನೆ ಕಾಣದೆ ಹೋದರೆ ನಿನ್ನನ್ನು ಇಲ್ಲಿಯೇ ಕೊಂದು ಹಾಕುತ್ತೇವೆ" ಎಂದರು. ಆದರೂ ಗುಬ್ಬಿ ಮಾತನಾಡಲಿಲ್ಲ ಸುಮ್ಮನೆ ಹೋದಳು. ಸ್ವಲ್ಪ ಮುಂದೆ ಹೋದ ಕೂಡಲೇ ಒಂದು ದೀಪ ಕಾಣುತ್ತಿತ್ತು.

ಅಲ್ಲಿ ಒಂದು ದೊಡ್ಡ ಮನೆ ಕಾಣುತ್ತಿತ್ತು. ಆ ಮನೆಯಲ್ಲಿ ಇಪ್ಪತ್ತು ಕೋಣೆಗಳು ಇದ್ದವು. ಎಲ್ಲರೂ ಒಂದ್ಹೊಂದು ಕೋಣೆಯನ್ನು ತೆಗೆದುಕೊಂಡರು. ಆದರೆ ಗುಬ್ಬಿಗೆ ಹಾಳು ಕೋಣೆಯನ್ನು ಕೊಟ್ಟರು. ಅವಳು ಅಲ್ಲಿಯೇ ದೀಪ ಹಚ್ಚಿಕೊಂಡು ಮಲಗಿಕೊಂಡಳು. ಅವರಿಗೆ ಮನೆಗೆ ಹೋಗುವ ಆಲೋಚನೆಯೇ ಇದ್ದಿರಲಿಲ್ಲ. "ಗುಬ್ಬಿಗೆ ಹಾಳು ಕೋಣೆ ನಮಗೆಲ್ಲ ಒಳ್ಳೆಯ ಕೋಣೆ" ಎಂದು ಸಂತೋಷ ಪಡುತ್ತಾ ಮಲಗಿದರು. ಪಾಪ ಗುಬ್ಬಿಗೆ ನಿದ್ರೆಯೇ ಬರಲಿಲ್ಲ. ಮನೆಯ ಬಗ್ಗೆಯೇ ಆಲೋಚನೆ, ಅಲ್ಲದೆ ಅವಳ ಕೋಣೆಯಲ್ಲಿ ಒಂದು ಕಡೆ ಮಣ್ಣಿನ ರಾಶಿ, ಇನ್ನೊಂದು ಕಡೆ ಹೊಯಿಗೆ ರಾಶಿ, ಇನ್ನೊಂದು ಕಡೆಗೆ ಕಲ್ಲಿನ ರಾಶಿ. ಹೀಗೆ ಮೂರು–ನಾಲ್ಕು ರಾಶಿಯೇ ಇತ್ತು. ಹೀಗಿರುವಾಗ ಅವಳಿಗೆ ಮಲಗಲು ಹೇಗೆ ಸಾಧ್ಯ? ಆದರೂ ಅವಳು ರಾತ್ರಿಯೆಲ್ಲಾ ಸ್ವಚ್ಛ ಮಾಡುತ್ತಾ ಕುಳಿತಳು. ಒಂದು ರಾಶಿಯಲ್ಲಿ ಚಿನ್ನದ ಪೆಟ್ಟಿಗೆ. ಅದರಲ್ಲಿ ಬರೀ ಚಿನ್ನವೇ ಇದ್ದವು. ಮತ್ತೊಂದು ರಾಶಿಯಲ್ಲಿ ಮತ್ತೊಂದು ಪೆಟ್ಟಿಗೆ ಅದರಲ್ಲಿ ಸೀರೆ ಕುಪ್ಪಸ ಎಲ್ಲ ಇದ್ದವು. ಇನ್ನೊಂದು ರಾಶಿಯಲ್ಲಿ ಮತ್ತೊಂದು ಪೆಟ್ಟಿಗೆ ಇತ್ತು. ಅದರಲ್ಲಿ ಹಣದ ಕಟ್ಟುಗಳು ಇದ್ದವು. ಮತ್ತೊಂದು ಪೆಟ್ಟಿಗೆಯಲ್ಲಿ ಚಿನ್ನದ ಕುಂಕುಮ, ಚಿನ್ನದ ಚಪ್ಪಲಿಗಳಿದ್ದವು. ಆದರೂ ಅದನ್ನೆಲ್ಲಾ ನೋಡಿದರೂ ಅಲ್ಲಿಯೇ ಇಟ್ಟು ತನಗೆ ಮಲಗಲು ಬೇಕಾದ ಜಾಗವನ್ನು ಮಾತ್ರ ಸ್ವಚ್ಛ ಮಾಡಿದಳು. ಮರುದಿನ ಅವಳ ಅಕ್ಕಂದಿರು "ಗುಬ್ಬಿ ನಿನ್ನೆ ರಾತ್ರಿ ನಿದ್ರೆ ಬಂದಿತೇ" ಎಂದು ಕೇಳಿದರು. ಆಗ ಗುಬ್ಬಿ"ಹೌದು ನಿಮ್ಮದೇ ಯೋಗ. ನಿಮಗೆ ಎಲ್ಲರಿಗೂ ಒಳ್ಳೆಯ ಕೋಣೆ. ನನಗೆ ಮಾತ್ರ ಹಾಳು ಕೋಣೆ ನಾನು ನನಗೆ ಮಲಗಲು ಬೇಕಾದ ಜಾಗವನ್ನಷ್ಟೇ ಸ್ವಚ್ಛ ಮಾಡಿಕೊಂಡೆ" ಎಂದಳು. ಆಗ ಅವರೆಲ್ಲ "ಹೌದು, ಪಾಪ ನಮ್ಮ ಗುಬ್ಬಿಗೆ ಮಲಗಲು ಜಾಗವೇ ಇದ್ದಿರಲಿಲ್ಲ. ಆದರೂ ಅದನ್ನೆಲ್ಲಾ ಸ್ವಚ್ಛ ಮಾಡಿಕೊಂಡು ಅವಳು ಮಲಗಿದಳು"ಎಂದು ಮನಸ್ಸಿನಲ್ಲಿಯೇ ನಗುತ್ತಿದ್ದರು. ಹೀಗೆ ಎರಡು–ಮೂರು ದಿನಗಳು ಕಳೆದವು. ಅಲ್ಲಿ ಒಂದು ದೊಡ್ಡ ಜಾತ್ರೆ ನಡೆಯುತ್ತಿತು. ಹತ್ತೊಂಬತ್ತು ಜನರು ಜಾತ್ರೆಗೆ ಹೋಗೋಣ ಎಂದು ನಿಶ್ಚಯಿಸಿದರು. ಎಲ್ಲರೂ ಹೋಗಲು ತಯಾರಾದರು. ಆಗ ಗುಬ್ಬಿಯ ಹತ್ತಿರ ಬರುತ್ತೀಯಾ ಎಂದು ಕೇಳಿದರು. ಆಗ ಗುಬ್ಬಿ ನಿಮಗೆಲ್ಲ ಒಳ್ಳೆಯ ಬಟ್ಟೆ ಇದೆ. ಆದರೆ ನನಗೆ ಮಾತ್ರ ಕೊಳಕು ಬಟ್ಟೆ ಎಂದಳು. ಆಗ ಹತ್ತೊಂಬತ್ತನೆಯವಳು "ನಾನು ಹಾಕಿ ಬಿಟ್ಟ ಬಟ್ಟೆ ಇದೆ ಅದನ್ನು ಕೊಡುತ್ತೇನೆ" ಎಂದಳು. ಆಗ ಗುಬ್ಬಿ "ನೀನು ಬಿಟ್ಟ ಬಟ್ಟೆ ನನಗೆ ಬೇಡ ನನ್ನ ಹತ್ತಿರ ದುಡ್ಡು, ಚಿನ್ನ, ಸೀರೆ ಇಲ್ಲ ಆದ್ದರಿಂದ ನಾನು ಬರುವುದಿಲ್ಲ" ಎಂದಳು.

ಅವರೆಲ್ಲ ತಯಾರಾಗಿ ಜಾತ್ರೆಗೆ ಹೋದರು. ಆಗ ಗುಬ್ಬಿಯೂ ತಯಾರಾದಳು. ಚಿನ್ನದ ಕುಂಕುಮ ಇಟ್ಟುಕೊಂಡು, ಚಿನ್ನದ ಚಪ್ಪಲಿ ಹಾಕಿಕೊಂಡು. ಪಟ್ಟೆ ಸೀರೆ ಉಟ್ಟುಕೊಂಡು ತಯಾರಾದಳು. ಅಷ್ಟು ಹೊತ್ತಿಗೆ ಮಾಯದ ಕುದುರೆ ಬಂದಿತು. ಆ

ಕುದುರೆಗೆ ಬಂಗಾರದ ಪದಕ ಇತ್ತು. ಆ ಕುದುರೆಯು "ಅವರೆಲ್ಲ ನಿನ್ನನ್ನು ಬಿಟ್ಟು ಹೋದರು. ನಾನು ನಿನ್ನನ್ನು ಕರೆದುಕೊಂಡು ಹೋಗುತ್ತೇನೆ" ಎಂದಿತು. ಗುಬ್ಬಿಯು ಕುದುರೆಯನ್ನು ಏರಿ ಹೋದಳು. ಕುದುರೆ ಹೋಗಿ ಜಾತ್ರೆ ಆಗುವ ಬಯಲಿನಲ್ಲಿ ಗುಬ್ಬಿಯನ್ನು ಬಿಟ್ಟು ಮಾಯವಾಗಿ ಹೋಯಿತು. ಕೊನೆಗೆ ಅವರು ಕುಳಿತ ಅಂಗಡಿಯಲ್ಲಿ ಹೋಗಿ ಕುಳಿತಳು. ಆಗ ಅವಳ ಅಕ್ಕಂದಿರು "ಅವಳು ರಾಜಕುಮಾರನ ಹೆಂಡತಿ' ಇರಬೇಕು" ಎಂದು ತಮ್ಮ ತಮ್ಮಲ್ಲೇ ಮಾತನಾಡಿಕೊಂಡರು. ಆಗ ಹತ್ತೊಂಬನೆಯವಳು "ಅವಳು ನಮ್ಮ ಗುಬ್ಬಿ" ಎಂದು ಹೇಳಿದಳು. ಆಗ ಉಳಿದವರು "ಅವಳು ನಮ್ಮ ಗುಬ್ಬಿಯಲ್ಲ, ಅದು ಅಲ್ಲದೆ ನಮ್ಮ ಗುಬ್ಬಿಯ ಹತ್ತಿರ ಈ ರೀತಿಯ ಬಟ್ಟೆಯೇ ಇಲ್ಲ. ಚಿನ್ನದ ಬಳೆಯು ಇಲ್ಲ. ಅಷ್ಟೊಂದು ಚಂದವಾದ ಸೀರೆಯು ಇಲ್ಲ" ಎಂದರು. ಆಗ ಗುಬ್ಬಿ ಅಲ್ಲಿಯೇ ನಿಂತುಕೊಂಡಳು. ಅವಳಿಗೆ ಏನು ಹೇಳಬೇಕು ಎಂದು ತಿಳಿಯಲಿಲ್ಲ. ಅದು ತನಗೆ ಬೇಕಾದ ಸಾಮಾನುಗಳನ್ನು ಮಿಠಾಯಿಗಳನ್ನು ತೆಗೆದುಕೊಂಡಳು. ಬಳಿಕ ಪೇಟೆಯ ತುದಿಗೆ ಬಂದಳು. ಬಂದ ಕೂಡಲೇ ಮಾಯದ ಕುದುರೆ ಬಂದು ಇವಳನ್ನು ಕರೆದುಕೊಂಡು ಹೋಯಿತು. ಗುಬ್ಬಿ ಮನೆಗೆ ಬಂದು ಮುಟ್ಟಿದಳು. ಬಂದ ಕೂಡಲೇ ಚಿನ್ನ, ಬಟ್ಟೆ ಚಿನ್ನದ ಕುಂಕುಮ ಎಲ್ಲವನ್ನೂ ಅಳಿಸಿಕೊಂಡು ಮೊದಲು ಹೇಗೆ ಇದ್ದಳೋ ಹಾಗೆ ಮಾಡಿಕೊಂಡು ಕುಳಿತಳು. ಅಕ್ಕಂದಿರೆಲ್ಲ ಬಂದರು. ಬಂದವರೇ ಗುಬ್ಬಿಯ ಹತ್ತಿರ "ಗುಬ್ಬಿ ಗುಬ್ಬಿ ಅಲ್ಲಿ ಒಬ್ಬಳು ಹೆಂಗಸು ಬಂದಿದ್ದಳು. ಎಷ್ಟೊಂದು ಸುಂದರವಾಗಿದ್ದಳು. ಚಿನ್ನದ ಬಳೆ, ಚಿನ್ನದ ಕುಂಕುಮ ಚಿನ್ನದ ಚಪ್ಪಲಿ ಹಾಕಿಕೊಂಡಿದ್ದಳು. ಅವಳ ಮುಂದೆ ನಾವು ನಿಂತುಕೊಂಡರೇ ಮಳ್ಳಿಯ ತರಹ ಕಾಣುತ್ತಿದ್ದೆವು" ಎಂದರು. "ಗುಬ್ಬಿ ನಿನಗೆ ನೋಡುವ ಅವಕಾಶವೇ ಇಲ್ಲ" ಎಂದು ಹೇಳಿದರು. ಆದರೂ ಅವಳು ನಗಲಿಲ್ಲ. ಅವಳು ಅದು ನಾನು ತಾನೆ ಎಂದು ಹೇಳಲಿಲ್ಲ. "ಹೌದು ನನಗೆ ನೋಡುವ ಯೋಗವೇ ಇಲ್ಲ ಏನೂ ಮಾಡಲಿಕ್ಕೆ ಆಗುವುದಿಲ್ಲ" ಎಂದಳು. ಅವರು ತಂದ ಮಿಠಾಯಿಯನ್ನು ಕೊಟ್ಟಾಗ ಅವಳು ತೆಗೆದುಕೊಂಡಳು ತಾನು ಹೋಗಿದ್ದೆ ತನಗೆ ಬೇಡಾ ಎನ್ನದೆ ತೆಗೆದುಕೊಂಡಳು. ಹೀಗೆ ಐದಾರು ದಿನಗಳು ಕಳೆದವು. ಒಂದು ದಿನ ರಾತ್ರಿ ಯಾವ ಯಾವ ತರಹದ ಕುಂಕುಮ ಇದೆ ಅಂತ ನೋಡುತ್ತಾ ಇದ್ದಳು. ಆಗ ಒಂದು ಚಿನ್ನದ ಕುಂಕುಮ ಇಟ್ಟುಕೊಂಡಳು. ಆಮೇಲೆ ಅದನ್ನು ತೆಗೆಯಲು ಅವಳಿಗೆ ನೆನಪೇ ಆಗಲಿಲ್ಲ. ಮರುದಿನ ಅವಳ ಅಕ್ಕಂದಿರು ಅವಳ ಹಣೆಯನ್ನು ನೋಡಿ "ಗುಬ್ಬಿ ಗುಬ್ಬಿ ಇದೇನು ಇಟ್ಟುಕೊಂಡಿರುವೆ?" ಎಂದು ಕೇಳಿದರು. ಅವಳು ಇಟ್ಟುಕೊಂಡ ಕುಂಕುಮ ಪಳ ಪಳ ಹೊಳೆಯುತ್ತಿತ್ತು. ಆಗ ಗುಬ್ಬಿಯು "ಉರಿಯುವ ಬೆಂಕಿಯನ್ನು ಇಟ್ಟುಕೊಂಡಿದ್ದೆ" ಎಂದಳು. ಅವರೆಲ್ಲ ಅದು ನಿಜ ಎಂದು ನಂಬಿದ್ದರು. ನಂತರ ಅವರು ಕೂಡ ಉರಿಯುವ ಬೆಂಕಿಯನ್ನು ಹಣೆಗೆ ಇಟ್ಟುಕೊಂಡರು. ಆಗ ಎಲ್ಲರೂ "ಅಯ್ಯೋ ಉರಿಯುತ್ತದೆ" ಎಂದು ಕೂಗಿದರು. ಆಗ ಗುಬ್ಬಿ "ಇಲ್ಲ ಉರಿಯುವುದಿಲ್ಲ ಸರಿಯಾಗಿ

ಹಾಕಿಕೊಳ್ಳಿ" ಎಂದಳು. ಎಲ್ಲರೂ ಬೆಂಕಿ ಕೆಂಡವನ್ನು ಹಣೆಗೆ ಒತ್ತಿಕೊಂಡರು. ಉರಿಯನ್ನು ತಡೆಯಲು ಆಗದೆ ಸತ್ತು ಹೋದರು. ಕೊನೆಗೆ ಗುಬ್ಬಿ ಒಬ್ಬಳೇ ಇದ್ದಳು. ಅದೇ ಹೊತ್ತಿನಲ್ಲಿ ಅಲ್ಲಿಗೆ ಒಬ್ಬ ರಾಜನು ಬಂದನು. ಅವನು ಬೇಟೆಯಾಡಲು ಬಂದಿದ್ದನು. ಸಂಜೆಯಾಯಿತು ಎಂದು ಎಲ್ಲಿಯಾದರೂ ಮನೆ ಇದೆಯೇನೋ ಎಂದು ಹುಡುಕುತ್ತಾ ಬಂದನು. ಆಗ ಗುಬ್ಬಿ ದೀಪ ಹಚ್ಚಿಕೊಂಡು ಅಳುತ್ತಾ ಕುಳಿತ್ತಿದ್ದಳು. ರಾಜನ ಮಗನು ದೀಪವನ್ನು ಹಚ್ಚಿಕೊಂಡು ಇರುವುದನ್ನು ನೋಡಿ ಆ ಮನೆಗೆ ಬಂದನು. ಗುಬ್ಬಿಯ ಹತ್ತಿರ "ಯಾಕೆ ಅಳುತ್ತಿದ್ದೀಯಾ?" ಎಂದು ಕೇಳಿದ. ಆಗ ಅವಳು "ತನ್ನ ಅಕ್ಕಂದಿರು ಉರಿಯುವ ಬೆಂಕಿಯನ್ನು ಹಣೆಗೆ ಇಟ್ಟುಕೊಂಡು ಸತ್ತುಹೋದರು"ಎಂದು ಹೇಳಿ,ಮೂಲೆಯಲ್ಲಿದ್ದ ಪೆಟ್ಟಿಗೆಯನ್ನು ತೋರಿಸಿದಳು. ಆಗ ಅವನು "ನನ್ನನ್ನು ಮದುವೆಯಾಗುತ್ತೀಯಾ" ಎಂದು ಕೇಳಿದನು. ಇವಳು ಒಪ್ಪಿಕೊಂಡಳು. ಎಲ್ಲ ಪೆಟ್ಟಿಗೆಯನ್ನು ತೆಗೆದುಕೊಂಡು ಕುದುರೆಯ ಮೇಲೆ ಕುಳಿತುಕೊಂಡು ಗುಬ್ಬಿಯು ರಾಜನ ಜೊತೆಯಲ್ಲಿ ಆತನ ರಾಜ್ಯಕ್ಕೆ ಹೋದಳು. ಅಲ್ಲಿ ಅವರಿಬ್ಬರೂ ಸುಖದಿಂದ ಜೀವನ ಮಾಡಿದರು.

□□

೪೧

ದನ ಕಾಯುವವಳ ಕತೆ

ಒಂದು ಊರಿನಲ್ಲಿ ಒಬ್ಬ ಅರಸನಿದ್ದನು. ಅವನಿಗೆ ಹೆಂಡತಿ, ಒಂದು ಮಗುವಿತ್ತು. ಅರಸನ ಹೆಂಡತಿ ಸತ್ತು ಹೋದಳು. ಅರಸು ಇನ್ನೊಂದು ಮದುವೆಯಾದನು. ಎರಡನೇ ಹೆಂಡತಿಗೆ ಒಂದು ಮಗು ಹುಟ್ಟಿತು. ಎರಡನೇ ಹೆಂಡತಿ ಮೊದಲನೇ ಹೆಂಡತಿಯ ಕೂಸನ್ನು ದನ ಕಾಯಲು ಕಳುಹಿಸುತ್ತಿದ್ದಳು. ಆ ಹುಡುಗಿ ಪ್ರತಿ ದಿನ ದನ ಕಾಯಲು ಹೋಗುತ್ತಿದ್ದಳು. ಅವಳ ಚಿಕ್ಕಮ್ಮ(ಎರಡನೇ ಹೆಂಡತಿ) ತನ್ನ ಮಗಳಿಗೆ ಮಾತ್ರ ತುಪ್ಪ ಮೊಸರನ್ನು ಕೊಡುತ್ತಿದ್ದಳು. ಈ ಹುಡುಗಿಗೆ (ಮೊದಲನೇ ಹೆಂಡತಿ ಮಗಳು) ಅನ್ನದ ತಿಳಿಯನ್ನು ಕೊಡುತ್ತಿದ್ದಳು. ಅರಸನ ಮನೆಯಲ್ಲಿ ಮಾತು ಬರುವ ಆಕಳು ಇತ್ತು. ಆ ದನ ಈ ಹುಡುಗಿಯ ಹತ್ತಿರ "ನೀನು ನಾಳೆ ಬರುವಾಗ ಒಂದು ಮಡಕೆಯನ್ನು ತೆಗೆದುಕೊಂಡು ಬಾ" ಎಂದಿತು. ಮಾರನೆಯ ದಿನ ಆ ಹುಡುಗಿ ಮಡಕೆಯನ್ನು ತೆಗೆದುಕೊಂಡು ಬಂದಳು. ಆ ದನ ಅವಳ ಹತ್ತಿರ ಹಾಲನ್ನು ಕರೆದು ಆ ಮಡಕೆಯಲ್ಲಿ ಹಾಕು ಎಂದಿತು. ಸೊಪ್ಪನ್ನು ತೆಗೆದುಕೊಂಡು ಬಂದು ಆ ಸೊಪ್ಪನ್ನು ಹಾಲಿಗೆ ಹಾಕಿ ಮಡಕೆಯನ್ನು ಮರಕ್ಕೆ ಕಟ್ಟು ಎಂದಿತು. ಅವಳು ಹಾಗೆ ಮಾಡಿದಳು. ಪ್ರತಿದಿನ ಅವಳು ಹಾಗೆ ಮಾಡುತ್ತಿದ್ದಳು. ದಿನಾ ಹಾಗೆ ಮಾಡಿ ಮೊಸರು ತಿಂದು ಬರುತ್ತಿದ್ದಳು. ದಿನ ಕಳೆದಂತೆ ಅವಳು ದಪ್ಪವಾಗುತ್ತ ಬಂದಳು. ಅವಳ ಚಿಕ್ಕಮ್ಮನ ಮಗಳು ದಿನ ಕಳೆದಂತೆ ಸಪೂರವಾಗುತ್ತ ಬಂದಳು. ಅವಳ ಚಿಕ್ಕಮ್ಮನಿಗೆ ತನ್ನ ಸವತಿಯ ಮಗಳು ದಪ್ಪವಾಗುತ್ತ ಬರುತ್ತಿದ್ದಾಳೆ ಹೇಗೆ? ಎಂದು ಅವಳಿಗೆ ಅನುಮಾನ ಬಂದು ತನ್ನ ಮಗಳನ್ನು ಅವಳ ಹಿಂದೆ ಕಳುಹಿಸಿದಳು.

ಇನ್ನೊಂದು ದಿನ ಈ ಹುಡುಗಿಯು ಮೊಸರನ್ನು ತಿನ್ನುತ್ತಿರುವುದನ್ನು ಅವಳ ತಂಗಿ(ಎರಡನೇ ಹೆಂಡತಿಯ ಮಗಳು) ನೋಡಿದಳು. ಆದರೆ ಇವಳು ಅವಳಿಗೂ ಮೊಸರನ್ನು ನೀಡಿದಳು. ಆದರೆ ಅವಳ ತಂಗಿ ಮನೆಗೆ ತನ್ನ ಅಮ್ಮನ ಹತ್ತಿರ ಹೇಳಿಕೊಟ್ಟಳು. ಆಗ ಅವಳ ಅಮ್ಮನಿಗೆ ಹೊಟ್ಟೆಕಿಚ್ಚು ಬಂದಿತು. ಅರಸು ನೋಟಗಾರನ್ನು ಕರೆಸಿದ. ಅರಸು ಒಳಗೆ ಹೋದ ಕೂಡಲೆ ರಾಣಿಯು ಆ ನೋಟಗಾರನ ಹತ್ತಿರ ನಿಮ್ಮ ಮನೆಯಲ್ಲಿರುವ ಮಾತು ಬರುವ ದನವನ್ನು ಮೂರು ದಾರಿ ಕೂಡುವಲ್ಲಿ

ಕಡಿದು ಹಾಕಿದರೆ ಮಾತ್ರ ಗುಣ ಆಗುತ್ತದೆ ಹೇಳು ಎಂದು ಆ ನೋಟಗಾರನ ಹತ್ತಿರ ಹೇಳಿದಳು. ಆಗ ನೋಟ್ಗಾರನು ಆಯ ಹಾಕಿ (ಕವಡೆ ಹಾಕುವುದು) ನೋಡಿದನು. ಅರಸನ ಹೆಂಡತಿ ಹೇಳಿಕೊಟ್ಟ ಹಾಗೆ ಹೇಳಿದ. ಇದನ್ನು ಕೇಳಿ ಆ ಹುಡುಗಿಯು ಆಕಳಿನ ಹತ್ತಿರ ಹೋಗಿ ಅಳುತ್ತಾ ಕುಳಿತುಕೊಂಡಳು. ಆಗ ಆಕಳು ಹೇಳಿತು "ನೀನು ನನ್ನ ಎಲುಬು ಚರ್ಮವನ್ನು ಹುಗಿದು ಹಾಕು. ನಾನು ತೆಂಗಿನ ಮರವಾಗಿ ಹುಟ್ಟುತ್ತೇನೆ. ನೀನು ಬಂದ ಕೂಡಲೇ ತೆಂಗಿನ ಮರ ಬಾಗಿ ಕೆಳಗೆ ಬರುತ್ತದೆ. ಆಗ ನೀನು ನಿನಗೆ ಎಷ್ಟು ಎಳೆನೀರು ಬೇಕೊ ಅಷ್ಟನ್ನು ಕೊಯ್ದು ತಿನ್ನು' ಎಂದಿತು. ಹೀಗೆ ಪ್ರತಿ ದಿನ ಆ ಹುಡುಗಿ ಪ್ರತಿದಿನ ಒಂದೊಂದೇ ಎಳೆನೀರನ್ನು ಕೊಯ್ದು ತಿನ್ನುತ್ತಿದ್ದಳು. ದಿನ ದಿನಕ್ಕೆ ಹುಡುಗಿ ದಪ್ಪ ಆಗುತ್ತ ಬಂದಳು. ಹೇಗೆ ಇವಳು ದಪ್ಪವಾಗುತ್ತಾಳೆ ಎಂದು ಚಿಕ್ಕಮ್ಮನಿಗೆ ಅನುಮಾನ ಬಂದು ತನ್ನ ಮಗಳ ಹತ್ತಿರ ನೋಡಿಕೊಂಡು ಬಾ ಎಂದು ಕಳುಹಿಸಿದಳು. ಈ ಹುಡುಗಿಯು ತನ್ನ ತಂಗಿಗೂ ಒಂದು ಎಳೆನೀರನ್ನು ಕೊಯ್ದು ಕೊಟ್ಟಳು. ತಂಗಿಯು ಮನೆಗೆ ಬಂದು ತನ್ನ ತಾಯಿಯ ಹತ್ತಿರ ಹೇಳಿಕೊಟ್ಟಳು. ಮತ್ತೆ ಅರಸ ನೋಟಗಾರನ ಕರೆಸಿದನು. ಆ ನೋಟಗಾರನ ಹತ್ತಿರ ಅರಸನ ಹೆಂಡತಿ ತೆಂಗಿನ ಮರವನ್ನು ಕಡಿಯಬೇಕು ಹೇಳು ಎಂದಳು. ಅವನು ಅರಸನ ಹೆಂಡತಿ ಹೇಳಿ ಕೊಟ್ಟ ಹಾಗೇ ಹೇಳಿದನು. ಆಗ ಆ ಹುಡುಗಿ ತೆಂಗಿನ ಮರದ ಹತ್ತಿರ ಹೋಗಿ ಅಳುತ್ತಿದ್ದಳು. ಆಗ ತೆಂಗಿನ ಮರ "ನನ್ನನ್ನು ಕಡಿದ ಚೂರನ್ನು ನೆಲದ ಅಡಿಯಲ್ಲಿ ಹುಗಿದು ಹಾಕು. ನಿನಗೆ ಏನು ಬೇಕಾದರೂ ಅಲ್ಲಿಗೆ ಬಾ" ಎಂದಿತು. ತೆಂಗಿನ ಮರವನ್ನು ಕಡಿದ ಮೇಲೆ ಅದರ ಚೂರನ್ನೆಲ್ಲಾ ನೆಲದಲ್ಲಿ ಹುಗಿದು ಹಾಕಿದರು.

ಹೀಗೆ ಒಂದು ದಿನ ಒಬ್ಬ ಅರಸನ ಮನೆಯಲ್ಲಿ ಸಮಾರಾಧನೆ ಇತ್ತು. ಅದರ ಚಿಕ್ಕಮ್ಮ ಮಗಳು ಚೆಂದದ ಸೀರೆಯನ್ನು ಉಟ್ಟುಕೊಂಡು ಸಮಾರಾಧನೆಗೆ ಹೋದರು. ಈ ಹುಡುಗಿಗೆ ಏನು ಇರಲಿಲ್ಲವಾಗಿತ್ತು. ಅದಕ್ಕಾಗಿ ಅವಳು ತೆಂಗಿನ ಮರದ ಹತ್ತಿರ ಬಂದು ಅಳುತ್ತಾ ಕುಳಿತಳು. ಆಗ ತೆಂಗಿನ ಮರ ಸೀರೆ, ಬಳೆ, ಚಿನ್ನ ಎಲ್ಲವನ್ನೂ ಕೊಟ್ಟಿತು. ಆ ಹುಡುಗಿ ಅದನ್ನು ಹಾಕಿಕೊಂಡು ಕುದುರೆ ಹತ್ತಿಕೊಂಡು ಸಮಾರಾಧನೆಗೆ ಹೋದಳು. ಆ ಹುಡುಗಿಯನ್ನು ನೋಡಿ ಆ ಅರಸನ ಮನೆಯವರು ಅವಳು ದೊಡ್ಡ ಅರಸನ ಮಗಳು ಎಂದು ತಿಳಿದ. ಆ ಹುಡುಗಿಯ ಕೈ ಕಾಲು ತೊಳೆಸಿಕೊಂಡು ಮಂಚದ ಮೇಲೆ ಕುಳ್ಳಿಸಿದರು. ಊಟ ಉಪಚಾರ ಮಾಡಿ ಕೈಯನ್ನು ತೊಳೆಸಿದರು. ಕೈಯನ್ನು ತೊಳೆಯುವಾಗ ಅವಳ ಒಂದು ಬಳೆ ಕೆಳಗೆ ಬಿತ್ತು. ಚಿಕ್ಕಮ್ಮನಿಗೆ ಚಿಕ್ಕಮ್ಮನ ಮಗಳಿಗೆ ತಿಳಿದು ಹೋಯಿತು ಎಂದುಕೊಂಡು ಬಳೆಯನ್ನು ಬಿಟ್ಟು ಬಂದಳು.

ಆಗ ಆ ಬಳೆಯು ಅರಸನ ಮಗನಿಗೆ ಸಿಕ್ಕಿತು. ಅವನು ಈ ಬಳೆ ಯಾರಿಗೆ ಆಗುತ್ತದೆಯೊ ಅವಳನ್ನೇ ನಾನು ಮದುವೆಯಾಗುತ್ತೇನೆ ಎಂದನು. ಅರಸನ ಸೇವಕರು

ಅವಳನ್ನು ಹುಡುಕುತ್ತಾ ಹುಡುಗಿಯ ಮನೆಗೆ ಬಂದರು. ಆ ಬಳೆಯನ್ನು ಅವಳ ಚಿಕ್ಕಮ್ಮನ ಮಗಳಿಗೆ ಹಾಕಿದರು. ಅದು ಅವಳಿಗೆ ಆಗಲಿಲ್ಲ. ಕೊನೆಗೆ ಇವಳ ಕೈಗೆ ಹಾಕಿದರು. ಅವಳ ಕೈಗೆ ಸರಿಯಾಯಿತು. ಆ ಅರಸನ ಮಗ ಅವಳನ್ನು ಮದುವೆಯಾಗಿ ಕರೆದುಕೊಂಡು ಹೋದನು. ಹೋಗುವಾಗ ತೆಂಗಿನ ಮರ ಹುಗಿದ ಜಾಗಕ್ಕೆ ಹೋದಳು. ತೆಂಗಿನ ಮರವು ಅವಳಿಗೆ ಸೀರೆ, ಬಳೆ, ಚಿನ್ನ, ಕುದುರೆ ಎಲ್ಲವನೂ ಕೊಟ್ಟಿತು. ಅದನ್ನು ತೆಗೆದುಕೊಂಡು ಆ ಅರಸನ ಮನೆಗೆ ಹೋಗಿ ರಾಜಕುಮಾರನ ಮದುವೆಯಾಗಿ ಸುಖವಾಗಿ ಉಳಿದಳು.

□□

೪೨

ಏಳು ಜನ ಹೆಣ್ಣುಮಕ್ಕಳು

ಊರಿನಲ್ಲಿ ಒಬ್ಬ ರಾಜನು ಇದ್ದನು. ಅವನಿಗೆ ಏಳು ಜನ ಹೆಣ್ಣು ಮಕ್ಕಳಿದ್ದರು. ಒಂದು ದಿನ ಅವನು ತನ್ನ ಏಳು ಜನ ಹೆಣ್ಣು ಮಕ್ಕಳನ್ನು ಕರೆದುಕೊಂಡು ಅವರ ಹತ್ತಿರ "ಅಪ್ಪನು ಹೆಚ್ಚಿನವನೋ ತಾಯಿಯು ಹೆಚ್ಚಿನವಳೋ" ಎಂದು ಕೇಳಿದನಂತೆ. ಆಗ ಹಿರಿಯ ಮಗಳು "ನನಗೆ ಅಪ್ಪನು ಹೆಚ್ಚಿನವನು"ಎಂದಳು. ಉಳಿದ ಐದು ಜನರೂ ಹಾಗೆಯೇ ಹೇಳಿದರು. ನಂತರ ಹಾಗೆಯೇ ಏಳನೆಯ ಮಗಳು "ತಂದೆ ತಾಯಿಗಳಿಗಿಂತಲೂ ಹೆಣ್ಣು ಮಕ್ಕಳಿಗೆ ಗಂಡನೇ ಹೆಚ್ಚಿನವನು" ಅಂದಳು. ಆಗ ರಾಜನಿಗೆ ಸಿಟ್ಟು ಬಂದು ಕಿರಿಯ ಮಗಳಿಗೆ ಬೇರೆ ಮನೆ ಕಟ್ಟಿಸಿಕೊಟ್ಟನು. ಅವಳು ಒಬ್ಬಳೇ ಆ ಮನೆಯಲ್ಲಿ ಉಳಿದಳು. ಒಂದು ದಿನ ಆ ರಾಜನು ಬೇರೆ ಒಂದು ರಾಜ್ಯಕ್ಕೆ ಹೋದನು. ಹೋಗುವಾಗ ಎಲ್ಲ ಹೆಣ್ಣು ಮಕ್ಕಳಿಗೆ ಏನೇನು ಬೇಕು ಎಂದು ಕೇಳಿಕೊಂಡು ಹೋದನು. ಆರು ಜನ ಹೆಣ್ಣು ಮಕ್ಕಳು "ತನಗೆ ಚಿನ್ನ ಬೇಕು, ಬಳೆ ಬೇಕು,ಸೀರೆ ಬೇಕು" ಅಂದರು. ಕಿರಿಮಗಳಿಗೆ ಏನನ್ನೂ ಕೇಳಲಿಲ್ಲ. ತಿರುಗಿ ಬರುವಾಗ ರಾಜನು ಆರು ಜನ ಮಕ್ಕಳಿಗೆ ಬೇಕಾದದ್ದನ್ನೆಲ್ಲವನ್ನೂ ತಂದು ಕೊಟ್ಟನು. ಕಿರಿಮಗಳಿಗೆ ದಾರಿಯ ಮೇಲೆ ಬಿದ್ದ ಬಿದಿರ ತುಂಡನ್ನು ತೆಗೆದುಕೊಂಡು ಬಂದನು. ಆ ಬಿದಿರ ತುಂಡನ್ನು ಅವಳಿಗೆ ಕಳಿಸಿಕೊಟ್ಟನು. ಒಂದು ದಿನ ಕಿರಿಮಗಳು ಒಲೆಗೆ ಬೆಂಕಿ ಮಾಡಲು ಏನೂ ಇಲ್ಲವೆಂದು ಆ ಬಿದಿರನ್ನು ನಾಲ್ಕು ತುಂಡು ಮಾಡಿ ಸೀಳು ಮಾಡಿದಳು. ಆಗ ಏನೋ ಒಂದು ಸಪ್ಪಳವು ಆಯಿತು. "ತಂ ತಂ ತರಿಂದ್ರೆ ಬಾ ಎಂದರೆ ಬರುತ್ತೇನೆ. ತಂ ತಂ ತರಿಂದ್ರೆ ಹೋಗು ಎಂದರೆ ಹೋಗುತ್ತೇನೆ" ಎಂದು ಹೇಳಿ ಅವಳಿಗೆ ಕೇಳಿಸಿತು. ಆಗ ಆ ಕಿರಿ ಮಗಳು "ತಂ ತಂ ತರಿಂದ್ರೆ ಬಾ" ಅಂದಳು. ಆಗ ಒಬ್ಬನು ರಾಜಕುಮಾರನು ಅವಳ ಬದಿಯಲ್ಲಿ ಬ್ಬಂದು ನಿಂತನು. ಅವಳು ಅವನನ್ನು ಕರೆದುಕೊಂಡು ಹೋದಳು. ಅವನು ಒಳ ಹೊಕ್ಕ ಕೂಡಲೇ ಹಳೆಯ ಮನೆ ಹೊಸ ಮನೆಯಾಗಿ ದೊಡ್ಡ ಅರಮನೆಯಾಗಿ ಹೋಯಿತು. ರಾಜಕುಮಾರ ಮತ್ತು ಆ ಕಿರಿ ಮಗಳು ಗಂಡ ಹೆಂಡಿರಾಗಿ ಉಳಿದರು. ಈ ಸುದ್ದಿಯು ಅಕ್ಕಂದಿರಿಗೆ ತಿಳಿಯಿತು. ಅವರು ಹೊಟ್ಟೆಕಿಚ್ಚು ಪಟ್ಟುಕೊಂಡು ತಮ್ಮ ತಂಗಿಯ ಗಂಡನನ್ನು

ಕೊಲ್ಲಬೇಕೆಂದು ಆಲೋಚನೆ ಮಾಡಿದರು. ಆಗ ಅಕ್ಕಂದಿರು ತಂಗಿ ಮನೆಗೆ ಬಂದರು. ತಂಗಿಯು ಅಕ್ಕಂದಿರು ಬಂದರೆಂದು ಒಳ್ಳೆಯ ರೀತಿಯಿಂದ ಒಳಗೆ ಕರೆದುಕೊಂಡು ಬಾಯಾರಿಕೆಗೆಲ್ಲ ಕೊಟ್ಟಳು. ಹಾಗೆಯೇ ತನ್ನ ಕೋಣೆಗೆ ಕರೆದುಕೊಂಡು ಬಂದು ಅಕ್ಕಂದಿರಿಗೆ ತೋರಿಸಿದಳು. ಆಗ ಅಕ್ಕಂದಿರು ಬಾಟಲಿಯ ಚೂರನ್ನು ಅವಳ ಗಂಡನ ಕಣ್ಣಿಗೆ ಎಸೆದು ಹೋದರು. ಇವನಿಗೆ ಹಾಗೆಯೇ ಕಣ್ಣು ಕುರುಡಾಗಿ ಹೋಯಿತು. ಪಾಪ ಏನು ಮಾಡುತ್ತಾನೆ. ಅವನ ಹೆಂಡತಿಯು ಹಾಗೆಯೇ ಔಷಧ ಮಾಡಿದಳು. ಆದರೂ ಗುಣವಾಗಲಿಲ್ಲ. ಹಾಗೆಯೇ ಇವಳು ಬಿದಿರನ್ನು ಸೀಳುವಾಗ ಹೇಳಿದ ಮಾತನ್ನು ನೆನಪು ಮಾಡಿಕೊಂಡು "ತಂ ತಂ ತರಿಂದ್ರೆ ಹೋಗು" ಎಂದಳು. ಆಗ ಅವಳ ಗಂಡ, ಅರಮನೆ ಹೋಗಿ ಹಾಳು ಮನೆ ಆಯಿತು. ಇವಳು ಗಂಡು ವೇಶ ಹಾಕಿಕೊಂಡು ಬಿದಿರ ರಾಜ್ಯಕ್ಕೆ ಹೋದಳು. ಅಲ್ಲಿ ಅವಳ ಗಂಡ ಕಣ್ಣು ಬಂದು ಸುಖವಾಗಿ ಇದ್ದನು. ಹೆಂಡತಿಯನ್ನು ಕಂಡು ಅರಮನೆಗೆ ಕರೆದುಕೊಂಡು ಹೋದನು. ಗಂಡ ಹೆಂಡತಿ ಸುಖವಾಗಿದ್ದರು.

□□

೪೩

ಸುಂಟಿ ಕೊಂಬಿನ ಆಟ

ಒಂದು ಊರಿನಲ್ಲಿ ಒಬ್ಬನು ರಾಜನಿದ್ದನು. ಅವನಿಗೆ ಏಳು ಜನ ಹೆಣು ಮಕ್ಕಳು ಇದ್ದರು. ಅವರೆಲ್ಲ ಒಂದು ದಿನ ಸುಂಟಿಕೊಂಬಿನ ಆಟ ಆಡುತ್ತಿದ್ದರು. ಅದರಲ್ಲಿ ಕಿರಿ ತಂಗಿಯ ಸುಂಟಿ ಕೊಂಬು ಕಾಣೆಯಾಗಿ ಹೋಯಿತು. ಎಷ್ಟು ಹುಡುಕಿದರೂ ಸಿಗಲಿಲ್ಲ. ಎಲ್ಲರಿಗೂ ಸಿಟ್ಟು ಬಂದು "ನೀನು ಇಲ್ಲಿಯೇ ಇರು ನಾವು ಅಪ್ಪನಿದ್ದಲ್ಲಿ ಹೋಗುತ್ತೇವೆ" ಎಂದು ಅವಳನ್ನು ಬಿಟ್ಟು ಹೋದರು. ಅಪ್ಪನ ಹತ್ತಿರ ವಿತಂಗಿ ಸುಂಟಿ ಕೊಂಬು ಕಾಣೆ ಮಾಡಿದ್ದಾಳೆ" ಎಂದು ಹೇಳಿದರು. ಕಿರಿ ತಂಗಿ ಸುಂಟಿ ಕೊಂಬನ್ನು ಕಾಣೆ ಮಾಡಿದ್ದಾಳೆ, ಅದನ್ನು ಹುಡುಕಿ ಕೊಡಲಿಲ್ಲ ಎಂದು ಅವಳನ್ನು ಒಬ್ಬ ಬಡ ಭಟ್ಟನಿಗೆ ಮದುವೆ ಮಾಡಿ ಕೊಡಬೇಕು ಎಂದರು. ಒಂದು ಅಂಗಡಿಯಲ್ಲಿ ಒಬ್ಬ ಬೇಡುವ ಭಟ್ಟನಿದ್ದನು. ಅವನನ್ನು ಕರೆದುಕೊಂಡು ಬಂದು ಕಿರಿ ತಂಗಿಗೆ ಮದುವೆ ಮಾಡಿದರು. ಅವಳು ಹೋಗುವಾಗ ಅಳುತ್ತಾ ಹೋದಳು. ಅವಳಿಗೆ ಒಂದು ಮಗು ಹುಟ್ಟಿತು. ಸುಮಾರು ಐದು ವರುಷವಾಯಿತು. ಅವನ ಉಪನಯನ ಮಾಡಬೇಕು ಎಂದು ಅಜ್ಜಿಯ ಮನೆಗೆ(ಕಿರಿ ತಂಗಿಯ ತಾಯಿಯ ಮನೆ) ಕಾಯಿ ಇಡಲು ಬಂದರು. ಕಿರಿ ತಂಗಿ ದೇವರಿಗೆ ನಮಸ್ಕಾರ ಮಾಡಿ ಅಪ್ಪ ಅಮ್ಮ ಅಕ್ಕಂದಿರ ಹತ್ತಿರ ಹೇಳಿ ಹೋದಳು. ಆಗ ಅಕ್ಕಂದಿರು ನಿನ್ನಂತಹ ಬೇಡು ಭಟ್ಟನ ಮನೆಗೆ ಯಾರು ಬರುತ್ತಾರೆ" ಎಂದರು. ಅವಳು ಅಳುತ್ತಾ ಸುಮ್ಮನೆ ಹೋದಳು. ಅವರು ಮೂರು ಜನರು ಅರ್ಧ ದಾರಿಗೆ ಹೋದ ಕೂಡಲೇ ಸಂಜೆಯಾಯಿತು. ಅಲ್ಲಿ ಒಂದು ಅಶ್ವತ್ಥಮರ ಇತ್ತು. ಅವರು ಅಲ್ಲಿಯೇ ಮಲಗಿಕೊಂಡರು. ರಾತ್ರಿ ಅವಳಿಗೆ ನಿದ್ರೆಯೆ ಬರಲಿಲ್ಲ. ಅಶ್ವತ್ಥ ಮರದ ಪೊಟರೆಯಲ್ಲಿದ್ದ ಹಾವು ಅದರ ಗಂಡನ ಹೊಟ್ಟೆಯಲ್ಲಿ ಇರುವ ಹಾವು ಎರಡೂ ಮಾತನಾಡಲು ಶುರು ಮಾಡಿದವು. ಪೊಟರೆಯಲ್ಲಿದ್ದ ಹಾವು ಹೊಟ್ಟೆಯಲ್ಲಿ ಇರುವ ಹಾವಿನ ಹತ್ತಿರ ಹೇಳಿತು. "ನಿನಗೆ ಒಂದು ಸಿದ್ದೆ ಹುರುಳಿಯನ್ನು ಬೇಯಿಸಿಕೊಟ್ಟರೆ ನೀನು ಸಾಯುತ್ತೀಯಾ"ಎಂದಿತು. ಆಗ ಹೊಟ್ಟೆಯಲ್ಲಿ ಇರುವ ಹಾವು "ಈ ಮರಕ್ಕೆ ಬೆಂಕಿ ಇಟ್ಟರೆ ನೀನು ಸತ್ತು ಹೋಗುತ್ತೀಯಾ. ಪೊಟರೆಯಲ್ಲಿದ್ದ ಚಿನ್ನ, ದುಡ್ಡು ಬೇರೆಯವರಿಗೆ ಸಿಗುತ್ತದೆ"ಎಂದು

ಹೇಳಿತು. ಕಿರಿತಂಗಿ ಇದನ್ನೆಲ್ಲ ಕೇಳಿಸಿಕೊಂಡು ಮಲಗಿದಳು. ಕಿರಿ ತಂಗಿಯು ಮುಂಜಾನೆ ಎದ್ದುಕೊಂಡು ಅಶ್ವತ್ಥ ಮರಕ್ಕೆ ಬೆಂಕಿ ಇಟ್ಟಳು. ಆಗ ಪೊಟರೆಯಲ್ಲಿ ಇರುವ ಹಾವು ಬಂದು "ತಂಗಿ ನಾನು ಈಗ ಸಾಯುತ್ತೇನೆ. ನಿನಗೇನು ಬೇಕು ಕೇಳು" ಎಂದಿತು. ಆಗ ತಂಗಿ "ನನಗೆ ಮನೆ ಇಲ್ಲ ನಾನು ಬೇಡಿಕೊಂಡು ಹೊಟ್ಟೆ ತುಂಬಿಸಿಕೊಳ್ಳಬೇಕು" ಎಂದಳು. ಆಗ ಆ ಹಾವು "ನೀನು ಹೋಗುವ ದಾರಿಯಲ್ಲಿ ಏಳು ಉಪ್ಪರಿಗೆಯ ಮನೆ ಸಿಗುತ್ತದೆ. ಆ ಮನೆಯಲ್ಲಿ ಬೇಕಾದದ್ದು ಇರುತ್ತದೆ. ನೀನು ಹೋಗಿ ಅಲ್ಲಿ ಉಳಿಯಬೇಕು" ಎಂದಳು. ಹೋಗುವಾಗ ಪೊಟರೆಯಲ್ಲಿ ಇರುವ ಹಾವು ಚಿನ್ನ, ದುಡ್ಡು ಕೊಟ್ಟಿತು. ಒಂದು ಸಿದ್ದೆ ಹುರುಳಿಯನ್ನು ಕೊಟ್ಟಿತು. ಅದನ್ನೆಲ್ಲ ತೆಗೆದುಕೊಂಡು ಏಳು ಉಪ್ಪರಿಗೆಯ ಮನೆಗೆ ಗಂಡ ಮತ್ತು ಮಗನನ್ನು ಕರೆದುಕೊಂಡು ಹೋದಳು. ಗಂಡನಿಗೆ ಹುರುಳಿಯನ್ನು ಬೇಯಿಸಿಕೊಟ್ಟಳು. ಅವಳ ಗಂಡ ದಪ್ಪವಾದನು. ಅದೇ ಮನೆಯಲ್ಲಿ ಉಪನಯನ ಮಾಡಲು ತಯಾರಿ ಮಾಡಿದರು. ಆ ದಿನ ಅವಳ ಅಕ್ಕಂದಿರು ಅಪ್ಪ, ಅಮ್ಮ ಬಂದು ಮನೆಯ ಹೊರಗೆ ನಿಂತಿದ್ದರು. ತಂಗಿಯನ್ನು ಕರೆದರೂ ಅವಳು ಹೊರಗೆ ಬರಲಿಲ್ಲ. ಕೊನೆಗೆ ಅಪ್ಪ, ಅಮ್ಮ ಬಂದು ಉಡುಗೊರೆ ಮಾಡಿ ಹೋದರು. ಅವರು ಹಿಂತಿರುಗಿ ತಮ್ಮ ಮನೆಗೆ ಹೋದರು. ಆದರೆ ಅಲ್ಲಿ ಅವರ ಮನೆಯೇ ಇರಲಿಲ್ಲ. ಪುನಃ ಬಂದು ತಂಗಿಯ ಮನೆಯಲ್ಲಿ ಸುಖವಾಗಿ ಉಳಿದರು.

□□

೪೪

ಆಮೆ

ಒಂದು ಊರಿನಲ್ಲಿ ಒಬ್ಬ ರಾಜನಿದ್ದನು. ಅವನಿಗೆ ಒಬ್ಬ ಮಗನಿದ್ದನು. ಅವನು ಋಷಿ ಶಾಪದಿಂದ ಆಮೆ ಆಗಿದ್ದನು. ಆ ರಾಜನಿಗೆ ತನ್ನ ಮಗ ಆಮೆ ಎಂದು ಗೊತ್ತಿರಲಿಲ್ಲ. ಒಂದು ದಿನ ಮಗನು ರಾಜನ ಹತ್ತಿರ ಬಂದು ತನ್ನ ಮದುವೆ ಮಾಡು ಎಂದನು. ಅಪ್ಪನು "ನನ್ನ ಹತ್ತಿರ ಆಗುವುದಿಲ್ಲ" ಎಂದನು.

ಮತ್ತೊಂದು ರಾಜ್ಯದಲ್ಲಿ ಒಬ್ಬ ರಾಜನಿದ್ದನು. ಅವನಿಗೆ ಒಬ್ಬ ಮಗಳು ಇದ್ದಳು. ಈ ಆಮೆಯು ಅವಳಿದ್ದಲ್ಲಿಗೆ ಹೋಗಿ "ನಾನು ನಿನ್ನನ್ನು ಮದುವೆ ಆಗುತ್ತೇನೆ" ಎಂದಿತು. ಆಗ ಅವಳು "ನೀನು ಏಳು ಸಮುದ್ರವನ್ನು ದಾಟಿ ಕೆಂಡ ಸಂಪಿಗೆ ಹೂವನ್ನು ತಂದರೆ ನಿನ್ನನ್ನು ಮದುವೆಯಾಗುತ್ತೇನೆ" ಎಂದಳು. ಆಗ ಆ ಆಮೆ ರಾಜನ ಹತ್ತಿರ ಹೋಗಿ ಆ ಹುಡುಗಿ ಹೇಳಿದ ಸಂಗತಿಯನ್ನು ಹೇಳಿತು. ರಾಜನು "ಆಯಿತು" ಎಂದನು. ಆಮೆಯು ಸಮುದ್ರ ದಾಟಿ ಹೋಯಿತು. ಹೂವನ್ನು ಕೊಯ್ಯಲು ಹೋದಾಗ ಅಲ್ಲಿ ಒಬ್ಬ ಋಷಿಯು ಇದ್ದನು. ಅವನ ಮನೆಯಲ್ಲಿ ದೇವತೆಗಳು ಇದ್ದರು. ಆ ದೇವತೆಗಳು ಒಂದು ಗೆಜ್ಜೆಯನ್ನು ಕೊಟ್ಟರು "ಈ ಗೆಜ್ಜೆಯನ್ನು ನೀನು ನಿನಗೆ ಬೇಕಾದಲ್ಲಿ ಯಾವುದೇ ಹೊತ್ತಿನಲ್ಲಿ ಅಲುಗಾಡಿಸಿದರೂ ಆಗ ಅಲ್ಲಿ ಒಂದು ದೊಡ್ಡ ಮನೆ ಆಗುತ್ತದೆ. ಆ ಮನೆಗೆ ನಾವು ಎಲ್ಲರೂ ಬರುತ್ತೇವೆ. ನಿನಗೆ ಊಟ ಉಪಚಾರ ಮಾಡಿಕೊಟ್ಟು ನಾವು ಊಟ ಮಾಡಿ ಹೋಗುತ್ತೇವೆ. ಕೊನೆಗೆ ಮನೆ ಮಾಯವಾಗಿ ಹೋಗುತ್ತದೆ' ಎಂದರು. ಆಮೆಯು ಸಂಪಿಗೆ ಹೂವನ್ನು ಕೊಯ್ದುಕೊಂಡು ಸಮುದ್ರ ದಾಟಿ ಆ ಋಷಿ ಇರುವಲ್ಲಿಗೆ ಬಂದಿತು. ಋಷಿಯ ಹತ್ತಿರ "ನಾನು ಸಂಪಿಗೆ ಹೂವನ್ನು ತೆಗೆದುಕೊಂಡು ಬಂದಿದ್ದೇನೆ" ಎಂದಿತು. ಆಗ ಋಷಿ "ಒಳ್ಳೆಯದೇ ಆಯಿತು" ಎಂದನು. ಆಮೆಗೆ ತುಂಬಾ ಹಸಿವೆ ಆಯಿತು. ಮುಂದೆ ಹೋಗಿ ಗೆಜ್ಜೆಯನ್ನು ಅಲುಗಾಡಿಸಿತು. ಆಗ ದೊಡ್ಡ ಮನೆ ಆಯಿತು. ದೇವತೆಗಳು ಬಂದರು. ಊಟ ಉಪಚಾರ ಮಾಡಿ ತಾವು ಊಟ ಮಾಡಿಕೊಂಡು ಮಾಯವಾಗಿ ಹೋದರು. ಮನೆಯೂ ಕೂಡ ಮಾಯವಾಗಿ ಹೋಯಿತು. ಋಷಿಗೆ ಇದನ್ನು ನೋಡಿ ಆಶ್ಚರ್ಯವಾಯಿತು. ಆಮೆಯ ಹತ್ತಿರ ಆ ಋಷಿ "ಆ ಗೆಜ್ಜೆಯನ್ನು

ನನಗೆ ಕೊಡು" ಎಂದು ಕೇಳಿದನು. ಆಗ ಆಮೆ "ನೀನು ನನಗೆ ಏನು ಕೊಡುತ್ತೀಯಾ?" ಎಂದು ಕೇಳಿತು. ಆಗ ಋಷಿಯು "ಕಟ್ಬಗ್ಗಾ ಹೊಯ್ದೊಣ್ಣೆಯನ್ನು ಕೊಡುತ್ತೇನೆ" ಎಂದಿತು. ಆಗ ಆಮೆಯು "ಆಯಿತು" ಎಂದು ಗೆಜ್ಜೆಯನ್ನು ಕೊಟ್ಟಿತು. ಋಷಿಯು ಗೆಜ್ಜೆಯನ್ನು ತೆಗೆದುಕೊಳ್ಳಲಿಲ್ಲ. "ಅದು ತನಗೆ ಬೇಡ ತಮಾಷೆಗೆ ಹೇಳಿದೆ" ಎಂದು ಆಮೆಗೆ ಕಟ್ಬಗ್ಗಾ ಹೊಯ್ದೊಣ್ಣೆಯನ್ನು ಕೊಟ್ಟನು. ಆಮೆ ಗೆಜ್ಜೆ,ಕಟ್ಬಗ್ಗಾ ಹೊಯ್ದೊಣ್ಣೆಯನ್ನು ತೆಗೆದುಕೊಂಡು ಮನೆಗೆ ಬಂದಿತು. ರಾಜನ ಹತ್ತಿರ ಸಂಪಿಗೆ ಹೂವನ್ನು ಕೊಟ್ಟಿತು. ರಾಜನು ಆ ಸಂಪಿಗೆ ಹೂವನ್ನು ತೆಗೆದುಕೊಂಡು ಹೋಗಿ ಆ ಹುಡುಗಿಗೆ ಕೊಡು ಎಂದನು. ಆಮೆ ಹೋಗಿ ಆ ಕೆಂಡ ಸಂಪಿಗೆಯನ್ನು ಹುಡುಗಿಗೆ ಕೊಟ್ಟಿತು. ಅವಳಿಗೆ ಕೊಟ್ಟ ಮಾತನ್ನು ಮೀರಲು ಆಗದೆ ಮದುವೆಯಾಗಿ ಆಮೆಯ ಮನೆಗೆ ಬಂದಿತು.

ಒಂದು ದಿನ ಆಮೆಯು ಸ್ನಾನ ಮಾಡುತ್ತಿರುವಾಗ ಆಮೆಯ ಹೆಂಡತಿ ನೀರು ಬಹಳ ಬಿಸಿ ಎಂದು ಹೇಳಲು ಹೋಯಿತು. ಅಲ್ಲಿಯ ದೃಶ್ಯವನ್ನು ನೋಡಿ ಅವಳಿಗೆ ಆಶ್ಚರ್ಯವಾಯಿತು. ಏಕೆಂದರೆ ಅವಳ ಗಂಡ ಆಮೆಯಾಗಿರದೆ ಮನುಷ್ಯನಾಗಿದ್ದನು. "ಈ ವಿಷಯವನ್ನು ಯಾರಿಗೂ ಹೇಳಬೇಡ ಹೇಳಿದರೆ ಆಮೆ ಚಿಪ್ಪು ಸುಟ್ಟು ಹೋಗುತ್ತದೆ" ಎಂದಿತು. ಹೀಗೆಯೆ ದಿನ ಕಳೆಯಿತು. ಒಂದು ದಿನ ಆಮೆಯ ಹೆಂಡತಿಯ ಅಕ್ಕನ ಗಂಡಂದಿರು ಮೂರು ಜನರು ಇದ್ದರು. ಅವರೆಲ್ಲ ಬೇರೆ ಊರಿನಲ್ಲಿ ಇದ್ದರು, ಅವರು ಬೇಟೆ ಆಡಲು ಕಾಡಿಗೆ ಹೋದರು. ಅವರು ಹೋದ ಸುದ್ದಿ ಆಮೆಗೆ ತಿಳಿಯಿತು. ನಾನು ಹೋಗುತ್ತೇನೆ ಎಂದಿತು. ಆಗ ಮನೆಯವರು ಬೇಡ ಎಂದರು. "ಇಲ್ಲ ನಾನು ಹೋಗುತ್ತೇನೆ" ಎಂದನು. ಆಗ ಆಮೆ ಹೆಂಡತಿಯು ಒಂದು ಕುಂಟ ಕುದುರೆಯ ಮೇಲೆ ಆಮೆಯನ್ನು ಕಟ್ಟಿ ಬಿಟ್ಟಳು.

ಆಮೆ ಹೋಗುವಾಗ ಕಟ್ಬಗ್ಗಾ ಹೊಯ್ದೊಣ್ಣೆ ಕೋಲು ಗೆಜ್ಜೆ ತೆಗೆದುಕೊಂಡು ಹೋಯಿತು. ಆಮೆಗೆ ಹಸಿವೆ ಆಯಿತು. ಅದು ಗೆಜ್ಜೆಯನ್ನು ಅಲುಗಾಡಿಸಿತು. ಆಗ ದೊಡ್ಡ ಮನೆ ಆಯಿತು. ದೇವತೆಗಳು ಬಂದರು. ಆಮೆ ಚಿಪ್ಪಿನಿಂದ ಹೊರ ಬಂದು ಮನುಷ್ಯ ರೂಪ ಆಯಿತು. ಕಟ್ಬಗ್ಗಾ ಹೊಯ್ದೊಣ್ಣೆ ಹತ್ತಿರ "ಅಡವಿಯಲ್ಲಿದ್ದ ಎಲ್ಲಾ ಪ್ರಾಣಿಗೆ ಕಟ್ಬಗ್ಗಾ ಹೊಯ್ದೊಣ್ಣೆ ಎಲ್ಲ ಪ್ರಾಣಿಯನ್ನು ನನ್ನ ಮನೆ ಎದುರಿಗೆ ತಂದು ಹಾಕು" ಎಂದಿತು. ಕಟ್ಬಗ್ಗಾ ಹೊಯ್ದೊಣ್ಣೆಯು ಎಲ್ಲಾ ಪ್ರಾಣಿಗಳನ್ನು ಮನೆಯ ಎದುರಿಗೆ ತಂದು ಹಾಕಿತು. ಆಗ ಅವನ ಹೆಂಡತಿಯ ಬಾವಂದಿರು ಬೇಟೆ ಆಡಲು ಬಂದರು. ಬೇಟೆ ಸಿಗದೆ ಆಮೆ ಮನೆ ಹತ್ತಿರ ಬಂದರು. ನೋಡಿದರೆ ಅಲ್ಲಿ ದೊಡ್ಡ ಮನೆ ಆಗಿತ್ತು. ಅಬ್ಬಾ! ಅಡವಿಯಲ್ಲಿ ಮನೆ ಹೇಗೆ ಬಂದಿತು? ಎಂದು ಎಲ್ಲರಿಗೂ ಆಶ್ಚರ್ಯವಾಯಿತು. ಅವರೆಲ್ಲರಿಗೂ ಬಾಯಾರಿಕೆಯಾಗಿತ್ತು. ಆ ಮನೆಯ ಹತ್ತಿರ ಬಂದು ನೀರನ್ನು ಕೇಳಿದರು. ಮನುಷ್ಯನಾಗಿದ್ದ ಆಮೆ ನೀರನ್ನು ತಂದುಕೊಟ್ಟಿತು. ಅವರಿಗೆ ಪ್ರಾಣಿಗಳನ್ನು ನೋಡಿ ಬಹಳ ಆಸೆಯಾಯಿತು. "ಒಂದೆರಡು ಪ್ರಾಣಿಗಳನ್ನು ನಮಗೆ ಕೊಡುತ್ತೀರಾ" ಎಂದು ಆಮೆಯ ಹತ್ತಿರ ಕೇಳಿದರು. ಆಗ ಆಮೆ ಮನುಷ್ಯನ

"ಆಯಿತು ಕೊಡುತ್ತೇನೆ ಆದರೆ ಎಲ್ಲರಿಗೂ ತೊಡೆಯ ಮೇಲೆ ಒಂದು ಬರೆ ಹಾಕುತ್ತೇನೆ" ಎಂದಿತು. ಆಗ ಎಲ್ಲರೂ "ಆಯಿತು ನೀನು ಏನು ಬೇಕಾದರೂ ಮಾಡು ಆದರೆ ನಮಗೆ ಪ್ರಾಣಿಗಳನ್ನು ಕೊಟ್ಟರೆ ಸಾಕು" ಎಂದರು. ಆಗ ಆಮೆ ಮನುಷ್ಯ ಅವರಿಗೆ ತೊಡೆಯ ಮೇಲೆ ಬರೆಯನ್ನು ಹಾಕಿತು. ನಿಮಗೆ ಎಷ್ಟು ಬೇಕಾದರೂ ಪ್ರಾಣಿಗಳನ್ನು ತೆಗೆದುಕೊಂಡಿ ಹೋಗಿ ಎಂದಿತು. ಅವರು ಪ್ರಾಣಿಗಳನ್ನು ತೆಗೆದುಕೊಂಡು ಮನೆಗೆ ಬಂದು ರಾಜನ ಹತ್ತಿರ ಹೇಳಿದರು "ನಾವು ಎಷ್ಟೆಲ್ಲಾ ಬೇಟೆಯನ್ನು ಆಡಿಕೊಂಡು ಬಂದಿದ್ದೇವೆ ನೋಡಿ" ಎಂದರು. ಆಗ ರಾಜನಿಗೆ ಸಂತೋಷವಾಯಿತು. ಆಮೆ ಮನುಷ್ಯ ತನ್ನ ಮನೆಗೆ ಬಂದಿತು. ಸ್ವಲ್ಪ ದಿನದ ನಂತರ ಬೇರೆ ರಾಜ್ಯದವರು ಆಮೆ ಮಾವನ ರಾಜ್ಯಕ್ಕೆ ಯುದ್ಧ ಮಾಡಲು ಬಂದರು. ಆ ರಾಜನ ಹತ್ತಿರ ಕಡಿಮೆ ಸೈನಿಕರು ಇದ್ದರು. ಆಗ ಆ ಮೂರು ಮಂದಿ ವೈರಿಯನ್ನು ಓಡಿಸುತ್ತೇವೆ ಎಂದು ಬಂದರು. ರಾಜ ಆಯಿತು" ಎಂದನು. ಆ ಆಮೆ ಮನುಷ್ಯ ಸುದ್ದಿ ತಿಳಿದು ಯುದ್ಧಕ್ಕೆ ಹೋಯಿತು. ಆಗ ಆ ಮೂರು ಜನರನ್ನು ವೈರಿಯ ಕಡೆಯವರು ಕಟ್ಟಿಹಾಕಿದ್ದರು.

ಆಮೆ ಮನುಷ್ಯ ಹೋಗಿ ತನ್ನ ಕಡೆಯವರ ಹತ್ತಿರ ಯುದ್ಧವನ್ನು ನಿಲ್ಲಿಸಿ ಎಂದಿತು. "ಕಟ್ಟಗ್ಗಾ ಹೊಯ್ದೊಣ್ಣೆ ಕೋಲು ಎಲ್ಲ ಜನರನ್ನು ಕಟ್ಟಿಹಾಕಿ ಆ ಮೂರು ಮಂದಿಯನ್ನು ಬಿಡಿಸಿಕೊಂಡು ಬನ್ನಿ"ಎಂದನು. ಕಟ್ಟಗ್ಗಾ ಹೊಯ್ದೊಣ್ಣೆ ಹಾಗೆಯೆ ಮಾಡಿತು. ಆಗ ಆ ಮೂರು ಮಂದಿ "ನಿನಗೆ ಏನು ಬೇಕು ಎಂದು ಹೇಳು" ಎಂದರು. ಆಗ ಅವನು "ನನಗೆ ನಿಮ್ಮ ಕೈಯಲ್ಲಿರುವ ಮುದ್ರೆ ಉಂಗುರ ಮತ್ತು ಕತ್ತಿ ಬೇಕು" ಎಂದನು. ಅವರು ಅದನ್ನು ತೆಗೆದುಕೊಟ್ಟರು. ಅವನು ಮುದ್ರೆ ಉಂಗುರ, ಕತ್ತಿಯನ್ನು ತೆಗೆದುಕೊಂಡು ಹೋದನು.

ಇವರು ಮೂರು ಜನ ರಾಜನ ಹತ್ತಿರ ಬಂದು "ನಾವು ವೈರಿಗಳನ್ನು ಸೋಲಿಸಿ ಬಂದಿದ್ದೇವೆ" ಎಂದರು. ರಾಜನಿಗೆ ಸಂತೋಷವಾಗಿ ಇವರಿಗೆ ಬಹುಮಾನ ಕೊಡಬೇಕು ಎಂದು ಎಲ್ಲರನ್ನೂ ಸಭೆಗೆ ಕರೆಸಿದನು. ಆ ಸಭೆಯಲ್ಲಿ ಈ ಮೂರು ಜನ ತಮ್ಮ ಸಾಹಸವನ್ನು ಹೇಳಿದರು. ಆಗ ಆಮೆ ಮನುಷ್ಯನ ರೂಪವನ್ನು ಪಡೆದಿತ್ತು. "ಪ್ರಾಣಿಯನ್ನು ಕೊಟ್ಟಿದ್ದು ನಾನು. ವೈರಿಯನ್ನು ಸೋಲಿಸಿದ್ದು ನಾನು" ಎಂದಿತು. ಆಗ ರಾಜ ಅದಕ್ಕೆ ಸಾಕ್ಷಿ ಏನು? ಎಂದು ಕೇಳಿದ. ಆಗ ಆಮೆ ಮನುಷ್ಯನು "ಆ ಮೂವರ ತೊಡೆ ಮೇಲೆ ಬರೆ ಹಾಕಿದ್ದು ಮತ್ತು ಕತ್ತಿ ಉಂಗುರ ತೆಗೆದುಕೊಂಡಿದ್ದು" ಎಂದನು. ಆಗ ಆ ಮೂವರಿಗೂ ನಾಚಿಕೆ ಆಯಿತು. ಎಲ್ಲರೂ ಮನೆಗೆ ಬಂದರು.

ಒಂದು ದಿನ ಆಮೆ ಮನುಷ್ಯ ಸ್ನಾನಕ್ಕೆ ಹೋದಾಗ ಆಮೆಮನುಷ್ಯನ ಹೆಂಡತಿ ರಾಜನ ಹತ್ತಿರ ಹೋಗಿ ತನ್ನ ಗಂಡ ಆಮೆ ಅಲ್ಲ, ಮನುಷ್ಯ ಎಂದಳು. ಆಗ ಆಮೆಯ ಚಿಪ್ಪು ಸುಟ್ಟಿ ಹೋಯಿತು. ಆಗ ಆಮೆ ಮನುಷ್ಯನ ರೂಪದಲ್ಲೇ ಇದ್ದನು.

□□

೪೫

ನೂರಾ ಒಂದು ತಲೆ ಬೊಂಡಾ

ಒಂದು ಊರಲ್ಲಿ ರಾಜ ರಾಣಿ ಇದ್ದರು. ಒಂದು ದಿನ ಒಬ್ಬ ಸನ್ಯಾಸಿ ಭಿಕ್ಷೆ ಬೇಡುತ್ತ ಬಂದನು. ಆಗ ರಾಜನ ಹೆಂಡತಿ ಒಂದು ಬಟ್ಟಲಲ್ಲಿ ಒಂದು ಸಿದ್ದೆ ಕಾಯಿ, ಒಂದು ರೂಪಾಯಿ ಹಾಕಿಕೊಂಡು ಆ ಸನ್ಯಾಸಿಗೆ ಕೊಟ್ಟಳು. ಆಗ ಆ ಸನ್ಯಾಸಿಯು "ನೀನು ಹುಟ್ಟುತ್ತಲೇ ಬಂಜೆಯಾಗಿ ಹುಟ್ಟಿರುವೆ ನಿನ್ನ ಕೈಯಿಂದ ನಾನು ಭಿಕ್ಷೆ ತೆಗೆದುಕೊಳ್ಳುವುದಿಲ್ಲ" ಎಂದನು. ಆಗ ರಾಣಿಯು ಅಳುತ್ತಾ ಮಲಗಿಕೊಂಡಳು. ಆಗ ರಾಜ ಬಂದನು. "ಯಾಕೆ ಅಳುತ್ತಿದ್ದೀಯಾ?" ಎಂದು ಕೇಳಿದ. ಆಗ ರಾಣಿಯು ಒಬ್ಬ "ಸನ್ಯಾಸಿ ಬಂದಿದ್ದನು. ಆಗ ನಾನು ಒಂದು ಬಟ್ಟಲಲ್ಲಿ ಒಂದು ರೂಪಾಯಿ, ಒಂದು ಸಿದ್ದೆ ಅಕ್ಕಿ ತೆಗೆದುಕೊಂಡು ಕೊಡಲು ಬಂದೆ ಆಗ ಆ ಭಿಕ್ಷುಕ ನೀನು ಹುಟ್ಟುತ್ತಾ ಬಂಜೆಯಾಗಿಯೇ ಹುಟ್ಟಿರುವೆ ನಿನ್ನ ಕೈಯಿಂದ ನಾನು ಭಿಕ್ಷೆಯನ್ನು ತೆಗೆದುಕೊಳ್ಳುವುದಿಲ್ಲ ಎಂದು ಬಿಟ್ಟನು. ಅದಕ್ಕಾಗಿ ನಾನು ಅಳುತ್ತಾ ಮಲಗಿದ್ದೇನೆ" ಎಂದಳು. ಆಗ ರಾಜ ಕುದುರೆ ಹತ್ತಿಕೊಂಡು ಹೋದನು. ಸುಮಾರು ಎರಡು ಮೈಲು ದೂರ ಹೋದ ಕೂಡಲೇ ಆ ಸನ್ಯಾಸಿ ಸಿಕ್ಕಿದನು. ಆಗ ರಾಜ ತನ್ನ ಹೆಂಡತಿ ಹೇಳಿದ ವಿಷಯವನ್ನು ಸನ್ಯಾಸಿಯ ಹತ್ತಿರ ಕೇಳಿದನು. ಆಗ ಸನ್ಯಾಸಿ "ನಾನು ಹೇಳಿದ್ದು ನಿಜ, ನಿನ್ನ ಹೆಂಡತಿ ಹುಟ್ಟು ಬಂಜೆ" ಎಂದು ಹೇಳಿದನು. ಆಗ ರಾಜ "ನೀನು ನಮಗೆ ಮಕ್ಕಳನ್ನು ಕೊಡು"ಎಂದು ಕೇಳಿದನು. ಆಗ ಸನ್ಯಾಸಿ "ಆಯಿತು ಆದರೆ ಮೊದಲು ಹುಟ್ಟಿದ ಮಗುವನ್ನು ನೀನು ನನಗೆ ಕೊಡಬೇಕು"ಎಂದನು. ಆಗ ರಾಜ "ಆಯಿತು" ಎಂದನು. ಆಗ ಸನ್ಯಾಸಿಯು ಹೇಳಿದ "ನಿಮ್ಮ ಮನೆಯ ಮುಂದೆ ಒಂದು ಮಾವಿನ ಮರವು ಇದೆ. ನಿನಗೆ ಮೂರು ಕಲ್ಲನ್ನು ಮಂತ್ರಿಸಿ ಕೊಡುತ್ತೇನೆ. ಮೂರು ಕಲ್ಲನ್ನು ತೆಗೆದುಕೊಂಡು ಹೋಗಿ ಮಾವಿನ ಮರಕ್ಕೆ ಹೊಡೆ. ನಿನಗೆ ಒಂದು ಮಾವಿನ ಹಣ್ಣು ಸಿಗುತ್ತದೆ. ತೆಗೆದುಕೊಂಡು ಹೋಗಿ ನೀನು ನಿನ್ನ ಹೆಂಡತಿ ಇಬ್ಬರು ತಿನ್ನಬೇಕು" ಎಂದು ರಾಜನಿಗೆ ಮೂರು ಕಲ್ಲನ್ನು ಮಂತ್ರಿಸಿ ಕೊಟ್ಟನು. ದಾರಿಯಲ್ಲಿ ಬರುವಾಗ ರಾಜನು ಯೋಚಿಸುತ್ತಾನೆ. ಆ ಮಾವಿನ ಮರಕ್ಕೆ ಹಳೆ ಕಾಲದಿಂದಲೂ ಮಾವಿನ ಕಾಯಿ ಆಗುತ್ತಿಲ್ಲ. ಸನ್ಯಾಸಿ ಹೇಳಿದ್ದು ಬರೀ ಸುಳ್ಳು ಎಂದುಕೊಳ್ಳುತ್ತಾನೆ.

ರಾಜನು ನೋಡುವ ಎಂದು ಸನ್ಯಾಸಿ ಕೊಟ್ಟ ಕಲ್ಲನ್ನು ತೆಗೆದುಕೊಂಡು ಮರಕ್ಕೆ ಹೊಡೆದನು. ಆಗ ಮಾವಿನ ಹಣ್ಣನ್ನು ಕಂಡನು. ಇನ್ನೊಂದು ಕಲ್ಲನ್ನು ಹೊಡೆದನು ಆಗ ಮಾವಿನಕಾಯಿ ಬಿದ್ದಿತು. ಅದನ್ನು ತೆಗೆದುಕೊಂಡು ಹೋಗಿ ಹೆಂಡತಿಯ ಹತ್ತಿರ ಕೊಟ್ಟು ಅದನ್ನು ಹಣ್ಣು ಮಾಡಲು ಇಡಿಸು ಎಂದನು. ರಾಣಿಯು ಹಣ್ಣು ಮಾಡಲು ಇಟ್ಟಳು. ಸ್ವಲ್ಪ ದಿನದ ನಂತರ ಹಣ್ಣು ಆಯಿತು. ಹಣ್ಣನ್ನು ರಾಣಿ–ರಾಜ ಇಬ್ಬರೂ ತಿಂದರು. ಅಂತೂ ರಾಣಿಗೆ ಒಂದು ಗಂಡು ಮಗು ಹುಟ್ಟಿತು. ಆಗ ಸನ್ಯಾಸಿ ಬಂದನು. "ಮಗನನ್ನು ಕೊಡು" ಎಂದನು. ಆಗ ರಾಜ "ನಾಲ್ಕು ಐದು ವರ್ಷದ ನಂತರ ಕೊಡುತ್ತೇನೆ" ಎಂದನು. ನಂತರ ಇನ್ನೊಂದು ಮಗು ಹುಟ್ಟಿತು. ಸನ್ಯಾಸಿ ಬಂದು ಮಗುವನ್ನು ಕೊಡು ಎಂದನು. ರಾಜನು ಮನಸ್ಸಿಲ್ಲದ ಮನಸ್ಸಿನಲ್ಲಿ ಮಗನನ್ನು ಸನ್ಯಾಸಿಗೆ ಕೊಟ್ಟನು. ಸನ್ಯಾಸಿ ಆ ಮಗುವನ್ನು ತೆಗೆದುಕೊಂಡು ಬೆಟ್ಟದಲ್ಲಿ ಕರೆದುಕೊಂಡು ಹೋಗುವಾಗ ಆ ಹುಡುಗನ ಹತ್ತಿರ "ನಾನು ನಿನ್ನನ್ನು ತಿನ್ನುತ್ತೇನೆ ಎಂದು ಹೇಳಿದರೆ ನೀನು ಒಪ್ಪುತ್ತೀಯಾ" ಎಂದು ಕೇಳಿದ. ಆ ಹುಡುಗ ಏನನ್ನೂ ಹೇಳಲಿಲ್ಲ. ನಂತರ ದೇವಸ್ಥಾನಕ್ಕೆ ಕರೆದುಕೊಂಡು ಹೋದನು. "ಆ ದೇವರ ಮನೆಯಲ್ಲಿ ಯಾವ ಬಾಗಿಲು ತೆಗೆದರೂ ತೊಂದರೆಯಿಲ್ಲ, ಆದರೆ ಹನ್ನೆರಡನೆಯ ಬಾಗಿಲನ್ನು ತೆಗೆಯಬೇಡ" ಎಂದನು. ಕೊನೆಗೆ ಆ ಸನ್ಯಾಸಿ ಈ ಹುಡುಗನನ್ನು ಹುರಿದುಕೊಂಡು ತಿನ್ನಬೇಕು ಎಂದು ತುಪ್ಪ ತರಲು ಹೋದನು. ಸನ್ಯಾಸಿ ಹೋದ ಕೂಡಲೇ ಈ ಹುಡುಗ ಹನ್ನೆರಡನೆಯ ಬಾಗಿಲನ್ನು ತೆಗೆದನು. ತೆಗೆದ ಕೂಡಲೇ ಅಲ್ಲಿ ನೂರಾ ಒಂದು ತಲೆಯ ಬುರುಡೆಗಳು ನಗೆಯಾಡುತ್ತಿದ್ದವು. "ನಿನ್ನ ಸತ್ಯಕ್ಕೆ ಮೆಚ್ಚಿದೆ ಸನ್ಯಾಸಿ ನಿನ್ನನ್ನು ಹುರಿದುಕೊಂಡು ತಿನ್ನಲು ತುಪ್ಪ ತರಲು ಹೋಗಿದ್ದಾನೆ. ಅವನು ಬಂದ ಕೂಡಲೇ ನಿನ್ನ ಹತ್ತಿರ ಸ್ನಾನ ಮಾಡಲು ಹೇಳುತ್ತಾನೆ. ಆಗ ನೀನು ನನ್ನ ಅಪ್ಪ ಅಮ್ಮ ಕಲಿಸಿ ಕೊಡಲಿಲ್ಲ ನೀನು ಸ್ನಾನ ಮಾಡಿ ತೋರಿಸು ಎಂದು ಹೇಳು. ನಂತರ ದೇವರ ಪೂಜೆ ಮಾಡು ಎನ್ನುತ್ತಾನೆ. ಆಗ ನೀನು ಅಪ್ಪ ಅಮ್ಮ ಕಲಿಸಿ ಕೊಡಲಿಲ್ಲ ನೀನು ಮಾಡಿ ತೋರಿಸು ಎಂದು ಹೇಳು. ನಂತರ ಮಲಗಿಕೊಂಡು ಕೈ ಮುಗಿ ಎಂದು ಹೇಳುತ್ತಾನೆ ಆಗಲೂ ನೀನು ಹೀಗೆಯೆ ಹೇಳು ನಂತರ ಕಪಾಟಿನಲ್ಲಿ ಪಟರ ಗತ್ತಿ ಇರುತ್ತದೆ. ಅದನ್ನು ತೆಗೆದುಕೊಂಡು ಸನ್ಯಾಸಿಯ ಕುತ್ತಿಗೆಯ ಮೇಲೆ ಹೊಡಿ ಅವನು ಸತ್ತು ಹೋಗುತ್ತಾನೆ. ಆಗ ಅಲ್ಲಿ ನೀರು ಇರುತ್ತದೆ. ಆ ನೀರನ್ನು ತಂದು ನಮಗೆಲ್ಲ ಚಿಮುಕಿಸಬೇಕು. ಕೊನೆಗೆ ಒಬ್ಬಳು ರಾಕ್ಷಸಿ ಬರುತ್ತಾಳೆ. ನನ್ನ ಅಣ್ಣನನ್ನು ಏಕೆ ಕೊಂದೆ ಎಂದು ಕೇಳುತ್ತಾಳೆ. ನಿನಗೆ ನಾನು ಕಲ್ಲನ್ನು ಮಂತ್ರಿಸಿ ಕೊಡುತ್ತೇನೆ. ನೀನು ಒಂದು ಕಲ್ಲನ್ನು ಒಗೆಯಬೇಕು. ಅಲ್ಲಿ ಮಹಾ ದೊಡ್ಡ ಬೆಟ್ಟ ಆಗುತ್ತದೆ. ಆ ಬೆಟ್ಟ ಹಾರಿ ಬರುತ್ತದೆ. ಮತ್ತೊಂದು ಕಲ್ಲನ್ನು ಒಗಿ. ಆಗ ಮಹಾದೊಡ್ಡ ಹೊಳೆ ಆಗುತ್ತದೆ. ಆ ಹೊಳೆಯು ಹಾರಿ ಬರುತ್ತದೆ. ಮತ್ತೊಂದು ಕಲ್ಲನ್ನು ಒಗಿ

ಬೆಂಕಿ ಆಗುತ್ತದೆ. ಆ ಬೆಂಕಿಯು ಹಾರಿ ಬರುತ್ತದೆ. ಹಾಗೆ ಮುಂದೆ ಹೋಗು ಅಲ್ಲೊಂದು ಹೆಬ್ಬಾವು ಸತ್ತು ಬಿದ್ದಿರುತ್ತದೆ. ಅದರ ಚರ್ಮವನ್ನು ಸುಲಿದುಕೊಂಡು ಆ ಚರ್ಮದ ಅಂಗಿಯನ್ನು ಹಾಕಿಕೊಂಡು ನಡಿ"ಎಂದು ಹೇಳಿತು.

ನಂತರ ಸನ್ಯಾಸಿ ಬಂದು ಆ ಹುಡುಗನ ಹತ್ತಿರ ಸ್ನಾನ ಮಾಡು ಎಂದನು. ಆಗ ಹುಡುಗನು "ನನಗೆ ಅಪ್ಪ ಅಮ್ಮ ಕಲಿಸಿಕೊಟ್ಟಿಲ್ಲ ನೀನು ಸ್ನಾನ ಮಾಡಿಸಿ ತೋರಿಸಿದರೆ ನಾನು ಮಾಡುತ್ತೇನೆ" ಎಂದನು. ಸನ್ಯಾಸಿ ತೋರಿಸಿಕೊಟ್ಟ ಮೇಲೆ ಸ್ನಾನ ಮಾಡಿದನು. ನಂತರ ದೇವರ ಪೂಜೆಯನ್ನು ಮಾಡು ಎಂದನು. ಆಗ ಹುಡುಗನು "ನನಗೆ ಅಪ್ಪ ಅಮ್ಮ ಕಲಿಸಿಕೊಟ್ಟಿಲ್ಲ ನೀನು ಮಾಡಿ ತೋರಿಸಿದರೆ ನಾನು ಮಾಡುತ್ತೇನೆ" ಎಂದನು. ನಂತರ ಸನ್ಯಾಸಿ ಮಾಡಿ ತೋರಿಸಿದ ಮೇಲೆ ಇವನು ಹಾಗೆ ಮಾಡಿದ. "ಮಲಗಿಕೊಂಡು ನಮಸ್ಕಾರ ಮಾಡು" ಎಂದನು ಆಗ ಹುಡುಗ "ನನಗೆ ಅಪ್ಪ ಅಮ್ಮ ಕಲಿಸಿಕೊಟ್ಟಿಲ್ಲ ನೀನು ಮಾಡಿ ತೋರಿಸಿದರೆ ನಾನು ಮಾಡುತ್ತೇನೆ" ಎಂದನು. ಸನ್ಯಾಸಿ ಮಲಗಿಕೊಂಡು ನಮಸ್ಕಾರ ಮಾಡುತ್ತಾ ಇದ್ದನು. ಆಗ ಹುಡುಗನು ಕಪಾಟಿನಲ್ಲಿ ಇರುವ ಪಟರಗತ್ತಿಯನ್ನು ತೆಗೆದುಕೊಂಡು ಸನ್ಯಾಸಿಯ ಕುತ್ತಿಗೆಯ ಮೇಲೆ ಹೊಡೆದ. ಸನ್ಯಾಸಿ ಸತ್ತು ಹೋದನು. ಕಪಾಟಿನಲ್ಲಿ ನೀರು ಇತ್ತು. ಅದನ್ನು ತೆಗೆದುಕೊಂಡು ಹೋಗಿ ನೂರಾ ಒಂದು ತಲೆಯ ಬುರುಡೆಯ ಮೇಲೆ ಚಿಮುಕಿಸಿದನು. ಕಪಾಟಿನಲ್ಲಿ ಇರುವ ಪಟರಗತ್ತಿಯನ್ನು ತೆಗೆದುಕೊಂಡು ಒಂದು ರಾಕ್ಷಸಿ ಬಂದಳು. "ನನ್ನ ಅಣ್ಣನನ್ನು ಯಾಕೆ ಕೊಂದೆ"? ಎಂದು ಕೇಳಿದಳು. ಆಗ ಹುಡುಗ ಒಂದು ಕಲ್ಲನ್ನು ಒಗೆದನು ಅದು ದೊಡ್ಡ ಬೆಟ್ಟವಾಯಿತು. ಆ ಬೆಟ್ಟ ಹಾರಿ ಬಂತು. ಇನ್ನೊಂದು ಕಲ್ಲನ್ನು ಒಗೆದನು ಅದು ಮಹಾದೊಡ್ಡ ನದಿಯಾಯಿತು. ಆ ನದಿಯು ಹಾರಿ ಬಂದಿತು. ಮತ್ತೊಂದು ಕಲ್ಲನ್ನು ಒಗೆದನು ಬೆಂಕಿ ಆಯಿತು. ಬೆಂಕಿಯು ಹಾರಿ ಬಂದಿತು. ಅಲ್ಲಿ ಒಂದು ಹೆಬ್ಬಾವು ಸತ್ತು ಬಿದ್ದುಕೊಂಡಿತ್ತು. ಅದನ್ನು ಸುಲಿದುಕೊಂಡು ಅಂಗಿಯನ್ನು ಮಾಡಿ ಹಾಕಿಕೊಂಡು ಒಬ್ಬ ರಾಜನ ಮನೆಗೆ ಹೋದನು. ರಾಜನ ಹತ್ತಿರ "ನನಗೊಂದು ಕೆಲಸವನ್ನು ಕೊಡು" ಎಂದನು. ಆಗ ರಾಜನು "ನೀನು ಹೀಗೆ ಹೆಬ್ಬಾವನ್ನು ಸುಲಿದುಕೊಂಡು ಅಂಗಿ ಹಾಕಿಕೊಂಡು ಬಂದರೆ ನಿನಗೆ ಏನು ಕೆಲಸ ಕೊಡುವುದಿಲ್ಲ" ಎಂದನು. ಆಗ ಆ ಹುಡುಗ "ನಾನು ಕುದುರೆ ಸಗಣಿಯನ್ನಾದರೂ ತೆಗೆಯುತ್ತೇನೆ" ಎಂದನು. ಆಗ ರಾಜ ಆಯಿತು ಎಂದನು. ಆ ಹುಡುಗ ಅಲ್ಲಿಯೇ ಉಳಿದನು.

ಒಂದು ದಿನ ರಾಜನ ಮಗಳು ದೇವಸ್ಥಾನದಲ್ಲಿ ಏಳು ಉಪ್ಪರಿಗೆಯ ಮೇಲೆ ಕನ್ನಡಿ ನೋಡುತ್ತಾ ಕೂದಲು ಬಾಚುತ್ತಿದ್ದಳು. ಇವನು ಹಾವಿನ ಚರ್ಮವನ್ನು ತೆಗೆದುಕೊಂಡು ಸ್ನಾನ ಮಾಡುತ್ತಾ ಇದ್ದನು. ಇದನ್ನು ರಾಜನ ಕಿರಿಯ ಮಗಳು ನೋಡಿದಳು. ರಾಜನ ಹತ್ತಿರ ಹೋಗಿ "ಅಪ್ಪ ನಾನು ಆ ಹುಡುಗನನ್ನೇ

ಮದುವೆಯಾಗುತ್ತೇನೆ" ಎಂದಳು. ಆಗ ರಾಜ "ಅವನು ಹಾವಿನ ಅಂಗಿಯನ್ನು ಹಾಕಿಕೊಂಡಿದ್ದಾನೆ ಅವನೊ ನಿನಗೆ ಬೇಡಾ"ಎಂದನು.

ಆದರೂ ಅವಳು ಅವನೇ ಬೇಕು ಎಂದಳು. ಇವನು ದಿಬ್ಬಣವನ್ನು ತರಲು ಅವನಿಗೆ ಹೇಳಿ ಕಳುಹಿಸಿದ. ಅವನು ದಿಬ್ಬಣವನ್ನು ತೆಗೆದುಕೊಂಡು ಬಂದನು. ಮದುವೆ ಆಯಿತು. ಮದುವೆ ಊಟಕ್ಕೆ ಎಂದು ಬೇಟೆಗೆ ಹೋಗಿ ಪ್ರಾಣಿ ತರಲು ರಾಜ ಅಳಿಯಂದಿರಿಗೆ ಒಂದೊಂದು ಬಂದೂಕನ್ನು ಕೊಟ್ಟನು. ತನ್ನ ಗಂಡನಿಗೂ ಬಂದೂಕು ಬೇಕು ಎಂದು ಕಿರಿ ತಂಗಿ ಕೇಳಿದಳು. ಒಂದು ಹಾಳಾದ ಬಂದೂಕನ್ನು ಆರಿಸಿಕೊಟ್ಟನು. ಇವನು ಬಂದೂಕನ್ನು ತೆಗೆದುಕೊಂಡು ಕಾಡಿಗೆ ಹೋದನು. ಕಾಡಿನಲ್ಲಿ ಇರುವ ಪ್ರಾಣಿಗಳು ಎಲ್ಲ ಇಲ್ಲಿಗೆ ಬರಲಿ ಎಂದು ನಾಗ ಬೆತ್ತವನ್ನು ತೆಗೆದುಕೊಂಡು ಜಪ್ಪಿದನು. ಆಗ ಕಾಡಿನಲ್ಲಿ ಇರುವ ಎಲ್ಲ ಪ್ರಾಣಿಗಳು ಬಂದು ಸೇರಿದವು. ನನಗೆ ಕುಳಿತುಕೊಳ್ಳಲು ಒಂದು ಕುರ್ಚಿಯಾಗಲಿ ಎಂದು ನಾಗಬೆತ್ತವನ್ನು ಜಪ್ಪಿದನು. ಕುರ್ಚಿಯಾಯಿತು ಕುರ್ಚಿಯ ಮೇಲೆ ಕುಳಿತುಕೊಂಡನು. ಆಗ ಅಳಿಯಂದಿರು ಒಂದು ಪ್ರಾಣಿ ಸಿಗದೇ ಹುಡುಕುತ್ತಾ ಕಿರಿ ಅಳಿಯನ ಹತ್ತಿರ ಬಂದರು. ಆಗ ಕಿರಿ ಅಳಿಯ ಒಬ್ಬೊಬ್ಬರಿಗೆ ತನ್ನ ಉಂಗುರವನ್ನು ತೆಗೆದು ತೊಡೆಯ ಮೇಲೆ ಒಂದೊಂದು ಬರೆಯನ್ನು ಕೊಟ್ಟನು. ಹಾಗೆಯಾ ಒಬ್ಬೊಬ್ಬರಿಗೆ ಒಂದೊಂದು ಪ್ರಾಣಿಗಳನ್ನು ಕೊಟ್ಟನು. ಅವರು ಪ್ರಾಣಿಗಳನ್ನು ತೆಗೆದುಕೊಂಡು ಮನೆಗೆ ಹೋದರು. ಎಲ್ಲರೂ ಊಟಕ್ಕೆ ಬಂದರು. ಊಟ ಆದ ಮೇಲೆ ನಿಮ್ಮ ಅಳಿಯಂದಿರ ತೊಡೆ ನೋಡಿ ಎಂದನು. ತೊಡೆಯೆಲ್ಲಾ ಬಾತುಕೊಂಡಿತ್ತು. ರಾಜ ಕಿರಿ ಅಳಿಯನಿಗೆ ಅರಸನನ್ನಾಗಿ ಮಾಡಿಕೊಂಡು ಮನೆಯಲ್ಲಿ ಇಟ್ಟುಕೊಂಡನು.

□□

೪೬

ಮಾತನಾಡುವ ಗಿಳಿ ಚಿನ್ನದ ಬಾವಿ

ಒಂದು ಊರಿನಲ್ಲಿ ಒಬ್ಬ ರಾಜನಿದ್ದನು. ಅವನಿಗೆ ಇಬ್ಬರು ಹೆಂಡತಿಯರು ಇದ್ದರು. ಅವರಿಗೆ ಮಕ್ಕಳು ಇರಲಿಲ್ಲ. ಅದಕ್ಕಾಗಿ ರಾಜನು ಮತ್ತೊಂದು ಮದುವೆಯಾದನು. ಮೂರನೇ ಹೆಂಡತಿ ಗರ್ಭಿಣಿಯಾದಳು. ಅವಳಿಗೆ ಒಂದು ಗಂಡು ಮಗು ಹುಟ್ಟಿತು. ಆಗ ಅದರ ದೊಡ್ಡ ಅಕ್ಕ ಆ ಮಗುವನ್ನು ತೆಗೆದುಕೊಂಡು ಹೋಗಿ ಒಂದು ನದಿಯಲ್ಲಿ ಬಿಟ್ಟು ಬಂದಳು. ನಂತರ ಅದರ ಹತ್ತಿರ ಒಂದು ಗುಂಡುಕಲ್ಲನ್ನು ಇಟ್ಟಳು. ಗುಂಡು ಕಲ್ಲು ನೋಡಿ ರಾಜ ರಾಣಿಗೆ ದುಃಖವಾಯಿತು. ಇನ್ನೊಂದು ಮಗು ಹುಟ್ಟಿತು. ಆ ಮಗುವನ್ನು ಕೂಡ ಇನ್ನೊಂದು ಅಕ್ಕ ತೆಗೆದುಕೊಂಡು ಹೋಗಿ ನದಿಯಲ್ಲಿ ಬಿಟ್ಟು ಬಂದಳು. ನಂತರ ಅವಳ ಹತ್ತಿರ ಒಂದು ಗುಂಡುಕಲ್ಲನ್ನು ತಂದು ಇಟ್ಟಳು. ಹೀಗೆ ಮತ್ತೆರಡು ವರ್ಷ ಕಳೆಯಿತು. ರಾಣಿ ಮತ್ತೆ ಗರ್ಭಿಣಿಯಾದಳು. ಆಗ ಹೆಣ್ಣು ಮಗು ಹುಟ್ಟಿತು. ಆ ಮಗುವನ್ನು ಹೊಳೆಯಲ್ಲಿ ಬಿಟ್ಟು ಬಂದರು. ಆ ಜಾಗದಲ್ಲಿ ಒಂದು ಪೊರಕೆಯನ್ನು ತಂದು ಇಟ್ಟರು. ಈ ಮೂರು ಮಕ್ಕಳು ಒಬ್ಬ ಮಡಿವಾಳನಿಗೆ ಸಿಕ್ಕಿದವು. ಅವನು ಆ ಮೂವರನ್ನು ಅತ್ಯಂತ ಪ್ರೀತಿಯಿಂದ ಸಾಕಿದನು. ಮಕ್ಕಳು ಬೆಳೆಯುತ್ತಾ ಬಂದರು. ಒಂದು ದಿನ ಮಡಿವಾಳನ ಹೆಂಡತಿ ಸತ್ತು ಹೋದಳು.

ಹೀಗೆ ಒಂದು ದಿನ ಅಣ್ಣ ತಮ್ಮ ಇಬ್ಬರು ಬೇಟೆ ಆಡಲು ಹೋಗಿದ್ದರು. ತಂಗಿ ಒಬ್ಬಳೇ ಮನೆಯಲ್ಲಿ ಇದ್ದಳು. ಆಗ ಒಬ್ಬ ಸನ್ಯಾಸಿ ಬಂದನು. ಮನೆಯ ಮುಂದೆ ನಿಂತುಕೊಂಡು "ಆಚೆಯ ಗುಡ್ಡದ ಮೇಲೆ ಮಾತನಾಡುವ ಗಿಳಿ, ಚಿನ್ನದ ಬಾವಿ ಇದೆ. ಅದನ್ನು ಯಾರ ಹತ್ತಿರವೂ ತರಲು ಆಗಲಿಲ್ಲ. ನೀನು ಹೋದರೆ ಮಾತ್ರ ಅದನ್ನು ತರಲು ಸಾಧ್ಯ" ಎಂದು ಹೇಳಿ ಹೋದನು.

ಅವಳ ಅಣ್ಣಂದಿರು ಬೇಟೆಗೆ ಹೋದವರು ಬಂದರು. ಆಗ ಅವಳು "ಆಚೆಯ ಗುಡ್ಡದ ಮೇಲೆ ಮಾತನಾಡುವ ಗಿಳಿ ಚಿನ್ನದ ಬಾವಿ ಇದೆಯೆಂದು ಒಬ್ಬ ಸನ್ಯಾಸಿ ಹೇಳಿ ಹೋದನು" ಎಂದಳು. ಆಗ ದೊಡ್ಡ ಅಣ್ಣ "ನಾನು ಹೋಗಿ ತರುತ್ತೇನೆ"ಎಂದನು. ತುಳಸಿ ಕಟ್ಟೆಗೆ ಹೂವನ್ನು ಇಟ್ಟು "ಇದು ಬಾಡದೆ ಇದ್ದರೆ ನಾನು ಬರುತ್ತೇನೆ, ಬಾಡಿದರೆ ನಾನು ಬರುವುದಿಲ್ಲ" ಎಂದು ಹೇಳಿ ಹೋದನು. ಅವನು ಹೋಗಿ

ಎರಡು ಮೂರು ದಿನವಾದ ಮೇಲೆ ಆ ಹೂವು ಬಾಡಿ ಹೋಯಿತು. ನಂತರ ಇನ್ನೊಬ್ಬ ಅಣ್ಣ ನಾನು ಹೋಗುತ್ತೇನೆಂದು ಒಂದು ಹೂವನ್ನು ತುಳಸಿ ಕಟ್ಟೆಯ ಮೇಲೆ ಹೂವನ್ನು ಇಟ್ಟು "ಇದು ಬಾಡದೆ ಇದ್ದರೆ ನಾನು ಬರುತ್ತೇನೆ, ಬಾಡಿದರೆ ನಾನು ಬರುವುದಿಲ್ಲ" ಎಂದು ಹೇಳಿ ಹೋದನು. ಅವನು ಹೋಗಿ ಎರಡು ಮೂರು ದಿನ ಆದರೂ ಹಿಂತಿರುಗಿ ಬರಲಿಲ್ಲ. ಹೂವು ಬಾಡಿ ಹೋಯಿತು. ಕೊನೆಗೆ ಇವಳೇ ಹೋದಳು. ಅವಳು ಹೋಗುವ ದಾರಿಯಲ್ಲಿ ಒಬ್ಬ ಸನ್ಯಾಸಿ ಕೈಮುಗಿದುಕೊಂಡು ಕುಳಿತುಕೊಂಡಿದ್ದನು. ಅವಳು ಸನ್ಯಾಸಿ ಹತ್ತಿರ ಹೋಗಿ ಕೈ ಮುಗಿದಳು. ನಂತರ ಗುಡ್ಡ ಹತ್ತಿಕೊಂಡು ಹೋದಳು. ಅಲ್ಲಿ ಅವಳಿಗೆ ಚಿನ್ನದ ಬಾವಿ ಸಿಕ್ಕಿತು. ಆ ಬಾವಿಗೆ ಹೋಗಿ ನೀರನ್ನು ತೆಗೆದುಕೊಂಡು ಬಂದು ದಾರಿಯ ಮೇಲೆ ಚಿಮುಕಿಸುತ್ತಾ ಬಂದಳು. ಸತ್ತವರೆಲ್ಲಾ ಎದ್ದು ಬಂದರು, ಅಣ್ಣಂದಿರು ಎದ್ದು ಬಂದರು. ಆಗ ಮಾತನಾಡುವ ಗಿಳಿ ಬಂದುಕೊಂಡು ಅವರ ಅಂಗೈ ಮೇಲೆ ಕುಳಿತುಕೊಂಡಿತು. ಅಣ್ಣಂದಿರನ್ನು ಕರೆದುಕೊಂಡು ಗಿಳಿಯನ್ನು ತೆಗೆದುಕೊಂಡು ಮನೆಗೆ ಬಂದಳು.

ಒಂದು ದಿನ ರಾಜ ಬೇಟೆಗೆ ಹೋದನು. ಅಣ್ಣಂದಿರನ್ನು ನೋಡಿಕೊಂಡು ಮಾತನಾಡಿದನು. ಅವರ ಜೊತೆ ನಮ್ಮ ಮನೆಗೆ ಬನ್ನಿ ಎಂದನು. ಆಗ ಅವರು "ನೀವೆ ಮಧ್ಯಾಹ್ನ ನಮ್ಮ ಮನೆಗೆ ಬನ್ನಿ"ಎಂದರು. ಆಗ ರಾಜ 'ಆಯಿತು' ಎಂದನು. ಮಾರನೇ ದಿನ ಅವರ ಮನೆಯ ಊಟಕ್ಕೆ ಹೋದನು. ಇಡ್ಲಿ, ಪಾಯಸ, ಅನ್ನ, ಸಾರನ್ನು ಮಾಡಿ ಬಾಳೆ ಎಲೆಯಲ್ಲಿ ತಂಗಿ ಊಟಕ್ಕೆ ಹಾಕಿದಳು. ಮೂರು ಜನ ಊಟಕ್ಕೆ ಕುಳಿತರು. ಆಗ ಆ ಮಾತನಾಡುವ ಗಿಳಿಯು "ಅಪ್ಪ ಮಕ್ಕಳು ಊಟಕ್ಕೆ ಕುಳಿತಿದ್ದಾರೆ"ಎಂದಿತು. ಗಿಳಿಯ ಮಾತು ರಾಜನಿಗೆ ಕೇಳಿಸಿತು. ಆಗ ರಾಜನು ಅವರ ಹತ್ತಿರ "ನೀವು ನಾಳೆಯೆ ನಮ್ಮ ಮನೆಗೆ ಊಟಕ್ಕೆ ಬರಬೇಕು" ಎಂದನು. ಅವರು "ಆಯಿತು ಬರುತ್ತೇವೆ" ಎಂದರು. ನಂತರ ಮರುದಿನ ಮೂವರು ರಾಜನ ಮನೆಗೆ ಹೋದರು. "ತಾಯಿ ಎಲ್ಲಿಗೆ ಹೋದಳು?" ಎಂದು ಕೇಳಿದರು. ಆಗ ರಾಜನು "ಮಕ್ಕಳು ಎಂಜಲು ಎಲೆ ಒಗೆಯುವಲ್ಲಿ ಇಟ್ಟಿದ್ದೇನೆ"ಎಂದನು. ಇದನ್ನು ಕೇಳಿ ಆ ಮಕ್ಕಳಿಗೆ ತುಂಬಾ ಬೇಸರವಾಯಿತು. ರಾಜನಿಗೂ ಬೇಸರವಾಗುತ್ತದೆ. ಇಬ್ಬರು ಸೇವಕಿಯರನ್ನು ಕರೆದು "ಅವಳನ್ನು ಕರೆದುಕೊಂಡು ಬಂದು ಸ್ನಾನ ಮಾಡಿಸಿ ಸೀರೆಯನ್ನು ಉಡಿಸಿರಿ" ಎಂದನು. ಆಗ ಆ ಸೇವಕಿಯರು ಹಾಗೆಯೇ ಮಾಡಿದರು. ಮಕ್ಕಳಿಗೆ ತಾಯಿಯನ್ನು ನೋಡಿ ತುಂಬಾ ಸಂತೋಷವಾಗುತ್ತದೆ. ತಂದೆ ತಾಯಿಗೆ ನಮಸ್ಕಾರವನ್ನು ಮಾಡಿದರು. ಆಗ ರಾಜ ಚಂಡಾಲರನ್ನು ಕರೆದು ತನ್ನ ಇಬ್ಬರ ಹೆಂಡತಿಯರ ತಲೆಯನ್ನು ಕಡಿಯಿರಿ"ಎಂದನು. ಆ ಚಂಡಾಲರು ಅವರಿಬ್ಬರ ತಲೆಯನ್ನು ಕಡಿದು ಬಂದರು. ರಾಜ ತನ್ನ ಹೆಂಡತಿ ಮಕ್ಕಳೊಂದಿಗೆ ಸಂತೋಷದಿಂದ ಉಳಿದನು.

□□

೪೭

ಅತ್ತೆ ಸೊಸೆ - ೧

ಒಂದು ಊರಿನಲ್ಲಿ ಅತ್ತೆ ಸೊಸೆ ಇದ್ದರು. ಅತ್ತೆ ತುಂಬಾ ಕೆಟ್ಟವಳು. ಸೊಸೆಗೆ ಹೊಡಿಯುವುದು ಬಡಿಯುವುದು ಮಾಡುತ್ತಿದ್ದಳು. ಊಟಕ್ಕೂ ಸರಿಯಾಗಿ ಹಾಕುತ್ತಿರಲಿಲ್ಲ. ಸೊಸೆಗೆ ತುಂಬಾ ಕೆಲಸವನ್ನು ಕೊಡುತ್ತಿದ್ದಳು. ಒಂದು ದಿನ ಸೊಸೆ ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಅವಳನ್ನು ಹೊರಗೆ ಹಾಕಿದಳು. ಸೊಸೆ ಅಳುತ್ತಾ ಹೋದಳು. ಸಮುದ್ರದಲ್ಲಿ ಬಿದ್ದು ಸಾಯಬೇಕು ಎಂದು ಸಮುದ್ರ ದಂಡೆಗೆ ಹೋದಳು. ಸಮುದ್ರದಲ್ಲಿ ಬೀಳಲು ಹೆದರಿಕೆಯಾಗಿ ಅಲ್ಲಿಯೇ ಮರದ ಬುಡದ ಹತ್ತಿರ ಕುಳಿತುಕೊಂಡಳು.

ಸುಮಾರು ಮಧ್ಯರಾತ್ರಿಯ ಹೊತ್ತಿನಲ್ಲಿ ದೆವ್ವಗಳು ಅಲ್ಲಿಗೆ ಬಂದವು. ದೊಡ್ಡ ದೊಡ್ಡ ಬುಟ್ಟಿಯಲ್ಲಿ ಚಿನ್ನವನ್ನು ತುಂಬಿಕೊಂಡು ಬಂದವು. ಬುಟ್ಟಿಯನ್ನು ಸಮುದ್ರ ದಂಡೆಯ ಬದಿಯಲ್ಲಿ ಇಟ್ಟು ಅವರು ಸಮುದ್ರಕ್ಕೆ ಸ್ನಾನ ಮಾಡಲು ಹೋದರು. ಆಗ ಸೊಸೆಯು ಒಂದು ಬುಟ್ಟಿಯನ್ನು ತೆಗೆದುಕೊಂಡು ಮನೆಗೆ ಓಡಿ ಬಂದಳು. ಬುಟ್ಟಿಯನ್ನು ತೆಗೆದುಕೊಂಡು ಬಂದು ಅಂಗಳದಲ್ಲಿ ಇಟ್ಟುಕೊಂಡು ಬಂದು ಕುಳಿತಳು. ಬೆಳಿಗ್ಗೆ ಎದ್ದುಕೊಂಡು ಬುಟ್ಟಿಯನ್ನು ಅತ್ತೆಗೆ ತೋರಿಸಿದಳು. ಅತ್ತೆಯ ಹತ್ತಿರ "ಸಮುದ್ರದಲ್ಲಿ ಸ್ನಾನ ಮಾಡಲು ದೆವ್ವಗಳು ಬಂದಿದ್ದವು ಅವರು ತುಂಬಾ ಚಿನ್ನವನ್ನು ತಂದಿದ್ದರು. ಒಂದು ಬುಟ್ಟಿಯನ್ನು ನಾನು ತೆಗೆದುಕೊಂಡು ಬಂದೆ" ಎಂದಳು.

ಸೊಸೆಯ ಮಾತನ್ನು ಕೇಳಿಕೊಂಡು ಅತ್ತೆಗೆ ತಾನು ಹೋಗಿ ಚಿನ್ನ ತರಬೇಕು ಎಂದು ಮನಸ್ಸಾಯಿತು. "ನಾನು ಹೋಗುತ್ತೇನೆ" ಎಂದು ಹೋದಳು. ಸಮುದ್ರದ ದಂಡೆಯ ಮೇಲೆ ಬುಟ್ಟಿಯನ್ನು ಇಟ್ಟುಕೊಂಡು ಕುಳಿತಳು. ಮಧ್ಯ ರಾತ್ರಿಗೆ ದೆವ್ವಗಳು ಬಂದವು. ಅವರು ಚಿನ್ನದ ಬುಟ್ಟಿಯಲ್ಲಿ ತಂದು ದಂಡೆಯ ಮೇಲೆ ಇಟ್ಟು ಸ್ನಾನಕ್ಕೆ ಹೋದರು. ಅತ್ತೆಯು ಎಲ್ಲ ಚಿನ್ನವನ್ನು ತೆಗೆದುಕೊಂಡು ಬುಟ್ಟಿಯನ್ನು ತುಂಬಲು ಸುರು ಮಾಡಿದಳು. ಎಷ್ಟು ತುಂಬಿದರೂ ಕಡಿಮೆ ಎನಿಸುತ್ತಿತ್ತು. ತುಂಬುತ್ತಾ ಉಳಿದಳು. ಅಷ್ಟೇ ಹೊತ್ತಿನಲ್ಲಿ ಸ್ನಾನಕ್ಕೆ ಹೋದ ದೆವ್ವಗಳು ಬಂದವು. ಆಗ ಅವರಿಗೆ ಇವಳೇ ಚಿನ್ನದ ಬುಟ್ಟಿಯನ್ನು ತೆಗೆದುಕೊಂಡು ಹೋದವಳು ಎಂದುಕೊಂಡು ಅತ್ತೆಯನ್ನು ಮುರಿದುಕೊಂಡು ತಿಂದರು. ಅತ್ತೆಯ ಕಾಟ ತಪ್ಪಿಹೋಯಿತು. ಸೊಸೆಯು ತನ್ನ ಗಂಡನ ಜೊತೆ ಸುಖದಿಂದ ಉಳಿದಳು.

□□

೪೮

ಅತ್ತೆ ಸೊಸೆ - ೨

ಒಂದು ಊರಿನಲ್ಲಿ ಒಂದು ಅಜ್ಜಿ ಇದ್ದಳು. ಅವಳಿಗೆ ಒಂದು ಮಗ ಇದ್ದನು. ಅವರಿಗೆ ಮದುವೆ ಆಯಿತು. ಒಂದು ದಿನ ಅವಳ ಮಗ ಎರಡು ಹಾಗಲ ಕಾಯಿಯನ್ನು ತೆಗೆದುಕೊಂಡು ಬಂದಿದ್ದನು. ಅದನ್ನು ನೋಡಿ ಸೊಸೆಗೆ ಬಾಯಲ್ಲಿ ನೀರು ಬಂದಿತು. ಆಗ ಅವಳು ಅತ್ತೆಯ ಹತ್ತಿರ "ನೀವು ಕಾಡಿಗೆ ಹೋಗಿ ಕಟ್ಟಿಗೆಯನ್ನು ತೆಗೆದುಕೊಂಡು ಬನ್ನಿ" ಎಂದಳು. ಅಮ್ಮ ಮಗ ಇಬ್ಬರು 'ಆಯಿತು' ಎಂದು ಹೇಳಿ ಕಾಡಿಗೆ ಹೋದರು. ಸೊಸೆಯು ಇಲ್ಲಿ ಹಾಗಲಕಾಯಿ ಕೊಯ್ದು ಹಸಿ ಮಾಡಿದಳು. ರುಚಿಯಾಗಿದೆಯಾ ನೋಡೋಣ ಎಂದು ಹೇಳಿ ಒಂದು ಚೂರು ಬಾಯಲ್ಲಿ ಹಾಕಿದಳು. ರುಚಿ ರುಚಿ ನೋಡುತ್ತಾ ಎಲ್ಲವನ್ನೂ ತಿಂದು ಹಾಕಿದಳು. ಕೊನೆಗೆ ಅತ್ತೆ ಗಂಡ ಕಟ್ಟಿಗೆಯನ್ನು ತೆಗೆದುಕೊಂಡು ಬಂದರು. ಅವಳಿಗೆ ಏನು ಮಾಡಬೇಕೆಂದು ತಿಳಿಯದೆ ಅವರು ಬರುವಾಗ ಸತ್ತ ಹಾಗೇ ಮಲಗಿಕೊಂಡಳು.

ಅದೇ ಹೊತ್ತಿನಲ್ಲಿ ಅವಳ ಗಂಡ ಮತ್ತು ಅತ್ತೆ ಇಬ್ಬರು ಬಂದರು. ಪಾಪ ಆ ಅಜ್ಜಿ ಸೊಸೆಯನ್ನು ಕರೆಯುತ್ತಾ ಒಳಗೆ ಬಂದಳು. ಬರುವುದರೊಳಗೆ ಸೊಸೆ ಬಿದ್ದಿಕೊಂಡಿ ರುವುದನ್ನು ನೋಡಿದಳು. ಆಗ ಮಗನನ್ನು ಕರೆದಳು. ಆ ಸೊಸೆ ಇಬ್ಬರು ಬಂದ ಕೂಡಲೇ ಉಸಿರನ್ನು ಕಟ್ಟಿಕೊಂಡಳು. ಅವರು ಅವಳು ಸತ್ತು ಹೋಗಿದ್ದಾಳೆ ಎಂದು ಸ್ಮಶಾನಕ್ಕೆ ತೆಗೆದುಕೊಂಡು ಹೋದಳು.

ಆಗ ಅಮ್ಮ ಮಗ ಇಬ್ಬರೂ ಬೆಂಕಿಪೆಟ್ಟಿಗೆ ತೆಗೆದುಕೊಂಡು ಬರಲು ಮರೆತು ಹೋಗಿದ್ದರು. ಆಗ ಅಮ್ಮ ಮಗನ ಹತ್ತಿರ "ಬೆಂಕಿಪೆಟ್ಟಿಗೆ ತೆಗೆದುಕೊಂಡು ಬಾ" ಎಂದಳು. ಅವನು "ನನಗೆ ಹೆದರಿಕೆ ನೀನು ಹೋಗಿ ತೆಗೆದುಕೊಂಡು ಬಾ" ಎಂದನು. ಆಗ ಅವಳು ನನಗೂ ಹೆದರಿಕೆ ಇಬ್ಬರೂ ಹೋಗಿ ತೆಗೆದುಕೊಂಡು ಬರುವ ಎಂದು ಹೋದರು.

ಆಗ ಸೊಸೆ ಸಾವಕಾಶ ಅಲ್ಲಿಂದ ಎದ್ದುಕೊಂಡು ಹೆಣದ ಬದಲು ಅದರಲ್ಲಿ ಕಲ್ಲು ರಾಶಿಯನ್ನು ತುಂಬಿ ಓಡಿ ಹೋದಳು. ಅಮ್ಮ ಮಗ ಇಬ್ಬರೂ ಬೆಂಕಿಪೆಟ್ಟಿಗೆ ತೆಗೆದುಕೊಂಡು ಬಂದು ಆ ಕಲ್ಲಿನ ರಾಶಿಗೆ ಬೆಂಕಿಯನ್ನು ಇಟ್ಟರು.

ಸೊಸೆ ಒಂದು ದೇವಸ್ಥಾನದ ಹತ್ತಿರ ಹೋಗಿ ಮುಟ್ಟಿದಳು. ಅಲ್ಲಿ ನಾಲ್ಕು ಜನ ಚಿನ್ನವನ್ನು ತೆಗೆದುಕೊಂಡು ಬಂದು ಅದನ್ನು ಹಂಚಿಕೊಳ್ಳುತ್ತಾ ಇದ್ದರು. ಆಗ ಅವಳು ಆ ಚಿನ್ನವನ್ನು ತಾನು ಪಡೆದುಕೊಳ್ಳಬೇಕು ಎಂದು ದೇವಸ್ಥಾನದ ಹಿಂದೆ ಹೋಗಿ ದೊಡ್ಡಕ್ಕೆ ಕೂಗಿದಳು. ಆ ಕಳ್ಳರು ಯಾರೋ ಬಂದಿದ್ದಾರೆ ಎಂದು ಚಿನ್ನವನ್ನು ಬಿಟ್ಟು ಓಡಿ ಹೋದರು.

ಆಗ ಅದು ಸುಮ್ಮನೆ ಅಲ್ಲಿ ಬಂದು ಚಿನ್ನವೆಲ್ಲವನ್ನೂ ತೆಗೆದುಕೊಂಡು ಹೊರಟಳು. ಅವಳ ಅತ್ತೆ ಮತ್ತು ಗಂಡ ಅವಳನ್ನು ಕಂಡು ಓಡಿ ಹೋದರು. ಅವಳು ಅವರಿಗೆ ಚಿನ್ನವನ್ನು ತೋರಿಸಿದಳು. ಅತ್ತೆ ಸಂತೋಷದಿಂದ ಯಾರು ಕೊಟ್ಟರು ಎಂದು ಕೇಳಿದಳು. ಸೊಸೆ ಮಾವ ಕೊಟ್ಟನು ಎಂದಳು. ಆಗ ಅಜ್ಜಿ ತನ್ನ ಗಂಡ ಚಿನ್ನವನ್ನು ಕೊಟ್ಟನು ನಾನು ತರಬೇಕು ಎಂದು ಅವಳಿಗೆ ಮನಸ್ಸಾಯಿತು. ಆಗ ಅಜ್ಜಿ ತನ್ನ ಮಗನ ಹತ್ತಿರ ತನ್ನನ್ನು ಸುಟ್ಟು ಹಾಕು ಎಂದಳು.

ಆಗ ಮಗ ಸೊಸೆ ಸೇರಿ ಅಜ್ಜಿಯನ್ನು ಸುಟ್ಟು ಹಾಕಿದರು. ಅತ್ತೆಯು ಬೆಂಕಿಯಲ್ಲಿ ಬೇಯುತ್ತಾ ಕೂಗಿ ಕೂಗಿ ಸತ್ತು ಹೋದಳು.

ಅತ್ತೆ ಸತ್ತು ಹೋದ ಕೂಡಲೇ ಸೊಸೆಯು ಗಂಡನ ಹತ್ತಿರ ನಡೆದ ಸಂಗತಿಯನ್ನು ಹೇಳಿದಳು. ಇದನ್ನು ಕೇಳಿ ಗಂಡನಿಗೆ ತುಂಬಾ ದುಃಖವಾಯಿತು.

□□

೪೯

ಉಪ್ಪಿನಕಾಯಿಯ ಕತೆ

ಒಂದು ಊರಿನಲ್ಲಿ ಅಮ್ಮ ಮಗ ಸೊಸೆ ಇದ್ದರು. ಆ ಅತ್ತೆ ಸೊಸೆಗೆ ಹೊಡೆಯುವುದು ಬಡಿಯುವುದು ಬಯ್ಯುವುದು ಮಾಡುತ್ತಿದ್ದಳು. ಅವಳಿಗೆ ಸರಿಯಾಗಿ ಊಟವನ್ನು ಹಾಕುತ್ತಿರಲಿಲ್ಲ. ಒಂದು ದಿನ ಅತ್ತೆ ಉಪ್ಪಿನಕಾಯಿ ಮಾಡುತ್ತಿದ್ದಳು. ತಾಯಿ ಮತ್ತು ಮಗ ಇಬ್ಬರೂ ಉಪ್ಪಿನಕಾಯಿಯನ್ನು ತಿಂದರು. ಸೊಸೆಗೆ ಒಂದು ಹನಿಯೂ ಉಪ್ಪಿನಕಾಯಿಯನ್ನು ಕೊಡಲಿಲ್ಲ. ಒಂದು ದಿನ ಸೊಸೆ ಒಂದು ಹನಿ ಉಪ್ಪಿನಕಾಯಿಯನ್ನು ಬಾಳೆ ಎಲೆಯ ಮೇಲೆ ಹಾಕಿಕೊಂಡು ತಿನ್ನುತ್ತಾ ಇದ್ದಳು. ಅತ್ತೆಯು ಅದನ್ನು ನೋಡಿ ಮಗನ ಹತ್ತಿರ "ಈಗ ನಿನ್ನ ಹೆಂಡತಿಯನ್ನು ಜೀವಂತ ಸುಡಬೇಕು"ಎಂದಳು. ಸೊಸೆಯನ್ನು ಸುಡಲು ಕಟ್ಟಿಗೆ ತಂದು ಹಾಕಿದಳು. ಇಬ್ಬರೂ ಸೊಸೆಯನ್ನು ಗೋಣಿ ಚೀಲದಲ್ಲಿ ಕಟ್ಟಿಗೆ ರಾಶಿಯ ಮೇಲೆ ಮಲಗಿಸಿದರು. ಆದರೆ ಬೆಂಕಿ ಮಾಡಲು ಅವರು ಬೆಂಕಿಪೆಟ್ಟಿಗೆಯನ್ನೇ ತಂದಿರಲಿಲ್ಲ.

ಹಾಗೆ ಬೆಂಕಿ ತರಲು ಇಬ್ಬರು ಮನೆಗೆ ಹೋದರು. ಆಗ ಸೊಸೆ ಎದ್ದು ಗೋಣಿ ಚೀಲವನ್ನು ಬಿಡಿಸಿಕೊಂಡು ಅದರಲ್ಲಿ ಕಲ್ಲು ಮಣ್ಣು ತುಂಬಿಟ್ಟು ಹೊರ ಬಿದ್ದು ಓಡಿ ನಡೆದಳು. ಅಲ್ಲಿ ಒಂದು ಕಾಳಿಕಾದೇವಿ ಮನೆ ಇದ್ದಿತ್ತು. ಅದರ ಹಿಂದೆ ಹೋಗಿ ಅವಳು ಅಡಗಿಕೊಂಡಳು. ಇಲ್ಲಿ ತಾಯಿ ಮಗ ಬೆಂಕಿಯನ್ನು ತಂದು ಬೆಂಕಿ ಮಾಡಿದರು. ಬೆಂಕಿ ಕೊಟ್ಟ ಕೂಡಲೇ ಪಟಾ ಪಟಾ ಶಬ್ದ ಆಯಿತು. ಆಗ ಅತ್ತೆ "ಸತ್ತೆಯಾ ಸತ್ತೆಯಾ"ಎನ್ನುತ್ತ ಸೊಸೆಗೆ ತುಂಬಾ ಬಯ್ದಳು. ಕಡೆಗೆ ಅವರು ಮನೆಗೆ ಹೋದರು. ಸೊಸೆ ನಿಂತುಕೊಂಡಿದ್ದ ದೇವರ ಮನೆಗೆ ನಾಲ್ಕೈದು ಜನ ಕಳ್ಳರು ಬಂದಿದ್ದರು. ಅವರು ಕಾಳಿಕಾದೇವಿಯ ಹತ್ತಿರ "ನಮಗೆ ತುಂಬಾ ಚಿನ್ನ ಸಿಕ್ಕಿದೆ, ನಾಳೆಯೂ ಹೀಗೆ ಚಿನ್ನ ಸಿಕ್ಕಲಿ ನಿನಗೂ ಸರಿ ಪಾಲನ್ನು ಕೊಡುತ್ತೇವೆ" ಎಂದರು. ಆಗ ಹಿಂದೆ ಇದ್ದ ಸೊಸೆ 'ತಥಾಸ್ತು' ಅಂದಳು. ಆಗ ಕಳ್ಳರು ಅರ್ಧ ಸಂಪತ್ತನ್ನೆಲ್ಲ ಕಾಳಿಕಾ ದೇವಿಯ ಮುಂದೆ ಇಟ್ಟು ಹೋದರು. ಬೆಳಿಗ್ಗೆ ಆದ ಕೂಡಲೇ ಈ ಎಲ್ಲಾ ಚಿನ್ನವನ್ನು ಹಾಕಿಕೊಂಡು ಸೊಸೆ ಮನೆಗೆ ಬಂದು "ಅತ್ತೆ ಅತ್ತೆ ಬಾಗಿಲನ್ನು ತೆಗೆಯಿರಿ"

ಎಂದಳು. ಆಗ ಅತ್ತೆ ತೆಗೆದಳು. ಸೊಸೆ ತುಂಬ ಚಿನ್ನವನ್ನು ಹಾಕಿಕೊಂಡಿದ್ದನ್ನು ನೋಡಿ ಅತ್ತೆಗೆ ಸಂತೋಷವಾಯಿತು. "ಹೇಗೆ ತಂದೆ?" ಎಂದು ಕೇಳಿದಳು. ಆಗ ಸೊಸೆ ನನಗೆ ದೇವರು ಕೊಟ್ಟಿದ್ದು ಎಂದಳು ಅತ್ತೆಗೆ ಆಸೆಯಾಗಿ "ನನ್ನನ್ನು ಸುಟ್ಟು ಹಾಕು" ಎಂದಳು. ಹಾಗೆ ಗಂಡ ಹೆಂಡತಿ ಇಬ್ಬರೂ ಕೂಡಿ ಕಟ್ಟಿಗೆಯನ್ನು ಒಟ್ಟು ಗೂಡಿಸಿದರು. ಈ ಬಾರಿ ಬೆಂಕಿಯನ್ನು ಒಯ್ಯಲು ಅವರು ಮರೆಯಲಿಲ್ಲ. ಅತ್ತೆಯನ್ನು ಸುಟ್ಟು ಮನೆಗೆ ಬಂದರು. ಗಂಡ ಹೆಂಡತಿ ಸುಖದಿಂದ ಉಳಿದರು.

□□

೫೦

ಅತ್ತೆಯ ಕಾಟ

ಒಂದು ಊರಿನಲ್ಲಿ ರಾಜ ರಾಣಿ ಇದ್ದರು. ಅವರಿಗೆ ಒಬ್ಬಳು ಮಗಳಿದ್ದಳು. ಅವಳು ನೋಡಲು ತುಂಬಾ ಸುಂದರವಾಗಿದ್ದಳು. ಅವಳ ಮದುವೆ ನಿಶ್ಚಯವಾಯಿತು. ಒಬ್ಬ ರಾಜನ ಮಗನಿಗೆ ಅವಳನ್ನು ಕೊಟ್ಟು ಮದುವೆ ಮಾಡಿದರು. ಅವಳು ಗಂಡನ ಮನೆಗೆ ಹೋದಳು. ಅವಳ ಗಂಡ ಬರೀ ದಡ್ಡನಾಗಿದ್ದನು. ಅವನಿಗೇನೂ ತಿಳಿಯುತ್ತಿರಲಿಲ್ಲ. ಸೊಸೆಯನ್ನು ಕಂಡರೆ ಮಾವನಿಗೆ ಆಗುತ್ತಿರಲಿಲ್ಲ. ಅವಳಿಗೆ ಬಹಳ ಬಯ್ಯುತ್ತಿದ್ದರು. ಅವಳಿಗೆ ಬಹಳ ಕೆಲಸವನ್ನು ಕೊಟ್ಟು ಬೇಗ ಮಾಡು ಎನ್ನುತ್ತಿದ್ದರು. ಅವಳು ಎಲ್ಲಾ ಕೆಲಸವನ್ನು ಮಾಡುತ್ತಿದ್ದಳು.

ಅತ್ತೆಯ ಕಾಟವನ್ನು ತಡೆಯಲು ಆಗದೆ ಅವಳು ಸಾಯಲು ಹಾವಿನ ಹುತ್ತಕ್ಕೆ ಹೋಗಿ ಕೈಯನ್ನು ಹಾಕಿದಳು. ಆ ಹಾವಿನ ಗಂಟಲಿಗೆ ಬಾವು ಎದ್ದಿತ್ತು. ಇವಳು ಕೈ ಹಾಕಿದ್ದರಿಂದ ಅದು ಆ ಹಾವಿನ ಬಾವಿಗೆ ತಾಗಿ ಅದು ಒಡೆದು ಹೋಯಿತು. ಆ ಹಾವಿಗೆ ಸಂತೋಷವಾಯಿತು. "ಆ ಹಾವು ಇದರ ಹತ್ತಿರ ನೀನು ಏಕೆ ಇಲ್ಲಿ ಕೈ ಹಾಕಿದೆ?" ಎಂದು ಕೇಳಿತು. ನನಗೆ ಅತ್ತೆ ಕಾಟ ಕೊಡುತ್ತಾಳೆ. ಅದಕ್ಕಾಗಿ ಸಾಯಬೇಕು ಎಂದು ಇಲ್ಲಿ ಬಂದು ಕೈ ಹಾಕಿದೆ ಎಂದಳು. ಆ ಹಾವು ಮೂರು ಕಲ್ಲನ್ನು ಕೊಟ್ಟಿತು. "ಈ ಮೂರು ಕಲ್ಲನ್ನು ಒಂದೊಂದಾಗಿ ಒಗೆ, ಒಂದು ಕಲ್ಲು ಒಗೆದರೆ ನಿನ್ನ ಅತ್ತೆ ಮಾವನಿಗೆ ಒಳ್ಳೆಯ ಗುಣ ಬರುತ್ತದೆ. ನಿನ್ನ ಗಂಡ ಬುದ್ಧಿವಂತನಾಗುತ್ತಾನೆ. ಮತ್ತೊಂದು ಕಲ್ಲನ್ನು ಒಗೆ ಅರಮನೆಯಾಗುತ್ತದೆ. ಮತ್ತೊಂದು ಕಲ್ಲನ್ನು ಒಗೆದರೆ ದವಸ ಧಾನ್ಯ ಹೆಚ್ಚಾಗುತ್ತದೆ" ಎಂದಿತು. ಅವಳು ಹಾಗೆಯೆ ಮಾಡಿದಳು. ಅತ್ತೆ ಮಾವ ಅವಳಿಗೆ ಪ್ರೀತಿ ಮಾಡಿದರು. ಗಂಡನು ಬುದ್ಧಿವಂತನಾದನು. ಮತ್ತೊಂದು ಕಲ್ಲನ್ನು ಒಗೆದಳು ದೊಡ್ಡ ಅರಮನೆಯಾಯಿತು. ಮತ್ತೊಂದು ಕಲ್ಲನ್ನು ಒಗೆದಳು ದವಸ, ಧಾನ್ಯ ದನಕರುಗಳು ಆಯಿತು. ಅವರು ಸುಖದಿಂದ ಜೀವನ ನಡೆಸಿದರು.

□□

೫೧

ದಡ್ಡ ಪಂಡಿತ

ಒಂದು ಕಾಲದಲ್ಲಿ ಒಂದು ಊರಿನಲ್ಲಿ ನಾಲ್ಕು ಜನ ಭಟ್ಟರು ಇದ್ದರು. ಅವರು ದೊಡ್ಡ ಪಂಡಿತರಾಗಿದ್ದರು. ಅವರಲ್ಲಿ ತಿಮ್ಮಪ್ಪ ಬಟ್ಟನು ಬರೀ ದಡ್ಡನಾಗಿದ್ದನು. ಪಂಡಿತ ಭಟ್ಟರು ಅವನನ್ನು ಕಂಡರೆ ನಗುತ್ತಿದ್ದರು. "ನಾವು ಹೋಗುವಲ್ಲಿ ನೀವು ಬರುವುದು ಬೇಡ. ನಮಗೆಲ್ಲಾ ನಾಚಿಕೆಯಾಗುತ್ತದೆ. ನಿನಗೆ ಏನು ಬರುವುದಿಲ್ಲ ನೀನು ಬರಬೇಡ" ಎಂದರು. ಅದಕ್ಕಾಗಿ ಅವನು ತಪಸ್ಸನ್ನು ಮಾಡಬೇಕೆಂದು ಒಂದು ದೊಡ್ಡ ಕಾಡಿಗೆ ಹೋದನು. ಅಲ್ಲಿ ಒಂದು ದೊಡ್ಡ ಮರದ ಕೆಳಗೆ ಕುಳಿತುಕೊಂಡನು. ಸುಮಾರು ಹೊತ್ತಿನ ನಂತರ ಒಂದು ಹುಲಿ ಬಂದು ಅದರ ಕುತ್ತಿಗೆಯನ್ನು ಮರಕ್ಕೆ ತಿಕ್ಕುತ್ತಿತ್ತು. ಆಗ ಆ ಬಟ್ಟನಿಗೆ ಇದನ್ನು ನೋಡಿ "ಗಸ್ ಗಸಂತಿ" ಎಂದನು. ಆಗ ಅದು ಅವನ ಕಡೆ ನೋಡಿತು. ಆಗ ಅವನು "ದಿಶ್ ದಿಶಂತಿ"ಎಂದನು. ಹಾಗೆ ಹೇಳಿದ ಕೂಡಲೇ ಇದನ್ನು ಕೇಳಿದ ಹುಲಿಯು ಓಡಿ ನಡೆಯಿತು. ಆಗ "ಪಲಾಯಂತಿ" ಎಂದನು. ಇದರಿಂದ ಅವನಿಗೆ ತಾನು ಬುದ್ಧಿವಂತ ಎಂದುಕೊಂಡನು. ಕೂಡಲೇ ಮನೆಗೆ ಓಡಿ ಬಂದನು. ಹೆಂಡತಿಯ ಹತ್ತಿರ "ನಾನು ಮಂತ್ರವನ್ನು ಕಲಿತುಕೊಂಡು ಬಂದೆನು. ಇನ್ನು ನಾನು ಎಲ್ಲರ ಜೊತೆಯಲ್ಲಿ ಹೋಗುತ್ತೇನೆ" ಎಂದನು.

ಮರುದಿನ ಆ ಊರಿನ ರಾಜನ ಮನೆಯಲ್ಲಿ ದೊಡ್ಡ ಉತ್ಸವ ಆಗಿತ್ತು. ಆಗ ಎಲ್ಲಾ ಭಟ್ಟರು ಹೋದರು. ಈ ತಿಮ್ಮಪ್ಪ ಭಟ್ಟನು ಹೋದನು. ಎಲ್ಲರೂ ಅವನಿಗೆ ಬಯ್ದರು. ಆದರೂ ಕೇಳದೆ ಹೋದನು. ಅಲ್ಲಿ ದೊಡ್ಡ ಪಂಡಿತರು, ವಿದ್ವಾಂಸರು ಎಲ್ಲಾ ಬಂದಿದ್ದರು. ಊಟ ಆಯ್ತು, ಚಹಾವನ್ನು ಕುಡಿದರು. ಕುಡಿದಾದ ಮೇಲೆ ಮಂತ್ರಾಕ್ಷತೆ ಆಯಿತು. ಎಲ್ಲ ಭಟ್ಟರೂ ತಮ್ಮ ತಮ್ಮ ಮಂತ್ರವನ್ನು ಹೇಳಿ ಮುಗಿಸಿದರು. ಅವರೆಲ್ಲರ ಮಂತ್ರ ಮುಗಿದ ಮೇಲೆ ತಿಮ್ಮಪ್ಪ ಭಟ್ಟ ತನ್ನ ಮಂತ್ರವನ್ನು ಸುರು ಮಾಡಿದನು. "ಗಸ್‌ಗಸಂತಿ", "ದಿಶ್‌ದಿಶಂತಿ", "ಪಲಾಯಂತಿ" ಎಂದು ಹೇಳಿ ತನ್ನ ಮಂತ್ರವನ್ನು ಮುಗಿಸಿದನು. ಆ ರಾಜನು ಇವನ ಮಂತ್ರವನ್ನು ನೆನೆಪಿಟ್ಟುಕೊಂಡನು. ಎಲ್ಲ ಭಟ್ಟರಿಗೂ ಉಡುಗೊರೆ ಉಪಚಾರ ಮಾಡಿ ಆಯಿತು. ಎಲ್ಲ ಭಟ್ಟರೂ ಉಡುಗೊರೆ ದುಡ್ಡನ್ನು ತೆಗೆದುಕೊಂಡು ತಮ್ಮ ತಮ್ಮ ಮನೆಗೆ ಹೋದರು.

ಆ ದಿನ ರಾತ್ರಿ ಹೊತ್ತಿಗೆ ಕಳ್ಳರು ಅರಮನೆಗೆ ಬಂದರು. ಆಗ ರಾಜ ನಿದ್ರೆಗಣ್ಣಿನಲ್ಲಿ ತಿಮ್ಮಪ್ಪ ಭಟ್ಟ ಹೇಳಿದ ಮಂತ್ರವನ್ನು ಕನವರಿಸುತ್ತಾ ಇದ್ದನು. ಮಲಗಿದಲ್ಲಿಯೇ "ಗಸ್ ಗಸಂತಿ" ಎಂದನು. ಆ ಕಳ್ಳರು ಇವನಿಗೆ ಎಚ್ಚರವಿದೆ ಎಂದುಕೊಂಡು ರಾಜನನ್ನು ನೋಡಿದರು. ಆಗ ರಾಜ "ದಿಶ್‌ದಿಶಂತಿ" ಎಂದನು. ಆಗ ಕಳ್ಳರು ಮತ್ತೂ ಗಾಬರಿಯಾದರು. ಆಗ ಓಡಲು ಸುರುಮಾಡಿದರು. ಆಗ ರಾಜ ಪಲಾಯಂತಿ ಎಂದು ದೊಡ್ಡದಾಗಿ ಕೂಗಿದನು. ಆಗ ಅವರಿಗೆ ಎಚ್ಚರವಾಯಿತು. ಕಳ್ಳರು ಓಡಿದನ್ನು ನೋಡಿದರು. ಆಗ ರಾಜನು ತನ್ನ ಹೆಂಡತಿಯನ್ನು ಎಬ್ಬಿಸಿದನು. "ಆ ಭಟ್ಟ ಬಂದು ನಮಗೆ ದೊಡ್ಡ ಉಪಕಾರ ಮಾಡಿದ್ದಾನೆ. ಇಲ್ಲದಿದ್ದರೆ ಇವತ್ತು ರಾತ್ರಿ ನಮ್ಮ ಮನೆಯನ್ನು ಕದ್ದುಕೊಂಡು ಹೋಗುತ್ತಿದ್ದರು. ಅದಕ್ಕಾಗಿ ಆ ಬಟ್ಟನನ್ನು ಕರೆದುಕೊಂಡು ಬಂದು ಅವನಿಗೆ ಉಪಚಾರ ಮಾಡಿ ಅವನನ್ನು ತಮ್ಮಲ್ಲೇ ಇಟ್ಟುಕೊಳ್ಳೋಣ. ಯಾಕೆಂದರೆ ಅವನು ದೊಡ್ಡ ಪಂಡಿತ ಎಲ್ಲಾ ವಿದ್ಯೆಯನ್ನು ಬಲ್ಲವನು"ಎಂದನು. ನಂತರ ತನ್ನ ಸೇವಕರನ್ನು ಕಳುಹಿಸಿದನು. ಸೇವಕರು ತಿಮ್ಮಪ್ಪ ಭಟ್ಟನನ್ನು ಕರೆಯಲು ಹೋದರು. ಭಟ್ಟನಿಗೆ ಹೆದರಿಕೆಯಾಗಿ ಬಾಯಿ ಒಣಗಿ ಹೋದ ಹಾಗೆ ಆಯಿತು. ಅವನು ಹೆಂಡತಿಯ ಹತ್ತಿರ ಒಳಗೆ ಕುಳಿತುಕೊಂಡು ಹೇಳಿದನು. "ನಾನು ಮನೆಯಲ್ಲಿ ಇಲ್ಲ ಎಂದು ಹೇಳು" ಎಂದನು. ಅವಳು ಹಾಗೆ ಹೇಳಿದಳು. ಸೇವಕರು ಹೋಗಿ ರಾಜನಿಗೆ ಹಾಗೆಯೆ ಹೇಳಿದರು. ರಾಜ ಮತ್ತೆ ಸೇವಕರನ್ನು ಕಳುಹಿಸಿದ. ಆಗ ಬಟ್ಟ ಹೆಂಡತಿಯ ಹತ್ತಿರ "ಬಿದ್ದು ಎರಡು ಕಾಲು ನೋವಾಗಿದೆ. ನಡೆಯಲು ಆಗುವುದಿಲ್ಲ" 'ಹೇಳು' ಎಂದನು. ಆಗ ಸೇವಕರು ರಾಜನ ಹತ್ತಿರ ಹಾಗೆಯೆ ಹೇಳಿದರು. ಆಗ ರಾಜ ಒಂದು ರಥ. ನಾಲ್ಕು ಆಳುಗಳನ್ನು ಕಳುಹಿಸಿದನು. ಆ ಮಂಟಪದ ಮೇಲೆ ಕುರಿಸಿಕೊಂಡು ವಾಲಗದ ಮೆರವಣಿಗೆಯ ಮೂಲಕ ತಿಮ್ಮಪ್ಪ ಭಟ್ಟನನ್ನು ರಾಜನ ಮನೆಗೆ ಕರೆದುಕೊಂಡು ಬಂದರು. ಅವನನ್ನು ಬರಮಾಡಿಕೊಳ್ಳಲು ಊರಿನ ಜನರೆಲ್ಲಾ ಬಂದಿದ್ದರು. ಆಗ ರಾಜ ತಿಮ್ಮಪ್ಪ ಭಟ್ಟನ ಕೈಯನ್ನು ಹಿಡಿದುಕೊಂಡು ಅರಮನೆಯೆ ಒಳಗೆ ಹೋಗಿ ಅವನನ್ನು ಕೂರಿಸಿಕೊಂಡು "ನೀನು ನಮ್ಮ ಮನೆಯಲ್ಲಿ ದೇವರ ಪೂಜೆಯನ್ನು ಮಾಡಿಕೊಂಡು ಇರಬೇಕು. ನಿನಗೆ ಪ್ರತಿದಿನ ಹರಿವಾಣ ತುಂಬಿ ದುಡ್ಡನ್ನು ಕೊಡುತ್ತೇನೆ. ನೀನು ನಮ್ಮಲ್ಲೆ ಆರಾಮಾಗಿ ಇರಬೇಕು"ಎಂದನು. ಆಗ ತಿಮ್ಮಪ್ಪ ಭಟ್ಟನಿಗೆ ಸಂತೋಷವಾಯಿತು. ಅವನಿಗೆ ಪಂಡಿತ ಎಂದು ಬಿರುದನ್ನು ಕೊಟ್ಟರು. ಅಲ್ಲಿರುವ ಪಂಡಿತರು ತಮಗೆ ಈ ಭಾಗ್ಯ ಇಲ್ಲ ಎಂದರು. ಢಡ್ಡ ಪಂಡಿತ ಅವನ ಹೆಂಡತಿಯೊಡನೆ ಸುಖವಾಗಿ ಉಳಿದನು.

□□

೫೨

ಮಂತ್ರ ಕಲಿಯುವ ಮಾಣಿ - ೧

ಒಂದು ಊರಿನಲ್ಲಿ ಒಬ್ಬ ಭಟ್ಟ, ಅವನ ಹೆಂಡತಿ ಮತ್ತು ಒಬ್ಬ ಮಗನಿದ್ದನು. ಬಟ್ಟನು ಒಂದು ದಿನ ಮಗನ ಹತ್ತಿರ "ನೋಡು ಮಾಣಿ ನಿನಗೆ ಇಷ್ಟು ವರುಷವಾದರೂ ನಿನಗೆ ಕಾಳು ಅಕ್ಷರ ಬರುವುದಿಲ್ಲ. ರಾಜನ ಮನೆಗೆ ಹೋಗಿ ಮಂತ್ರವನ್ನಾದರೂ ಕಲಿತುಕೊಂಡು ಬಾ" ಎಂದನು. ಅವನಿಗೆ ಐದು ರೊಟ್ಟಿಯನ್ನು ಕಟ್ಟಿಕೊಟ್ಟು ಕಳುಹಿಸಿದನು. ಹೋಗುವಾಗ ಒಂದು ಹೆಗ್ಗಣ ಸಿಕ್ಕಿತು. "ಭಟ್ಟಾ ಭಟ್ಟಾ ಎಲ್ಲಿಗೆ ಹೋಗುತ್ತೀಯಾ?" ಎಂದು ಕೇಳಿತು. ಆಗ ಅವನು ಮಂತ್ರ ಕಲಿಯಲು ಹೋಗುತ್ತೇನೆ ಎಂದನು. ಆಗ ಹೆಗ್ಗಣ "ನಾನು ಮಂತ್ರ ಹೇಳಿ ಕೊಡುತ್ತೇನೆ ನನಗೆ ಒಂದು ಚೂರು ರೊಟ್ಟಿಯನ್ನು ಕೊಡು"ಎಂದು ಕೇಳಿತು. ಇವನು ರೊಟ್ಟಿಯನ್ನು ಕೊಟ್ಟು "ಮಂತ್ರವನ್ನು ಹೇಳಿ ಕೊಡು" ಎಂದನು. ಆಗ ಹೆಗ್ಗಣವು "ಹೆಗ್ಗಣ ಬಿಲ ಕೆರೆಯಿತು ಕೆರೆಯಿತು"ಎಂದು ಹೇಳಿತು. ಮಾಣಿ ಅದನ್ನು ಬಾಯಿಪಾಠ ಮಾಡು ಎಂದು ಹೇಳಿತು. ಮಾಣಿಯು ಹಾಗೆಯೆ ಮುಂದೆ ಹೋದನು. ಒಂದು ಹುಲಿ ಸಿಕ್ಕಿತು. ಅದು "ಭಟ್ಟ ಭಟ್ಟ ಎಲ್ಲಿಗೆ ಹೋಗುತ್ತಿಯಾ?" ಎಂದು ಕೇಳಿತು. ಅವನು ಮಂತ್ರ ಕಲಿಯಲು ಎಂದನು. ಆಗ ಹುಲಿ "ಆ ಚೀಲದಲ್ಲಿ ಏನು ಇದೆ" ಎಂದು ಕೇಳಿತು. ಆಗ ಅವನು ಅದರಲ್ಲಿ "ರಾಗಿ ರೊಟ್ಟಿ, ಗೋಧಿ ರೊಟ್ಟಿ ಇದೆ" ಎಂದನು. ಆಗ ಅದು "ನನಗೊಂದು ಚೂರು ಕೊಡು ನಾನು ನಿನಗೆ ಮಂತ್ರ ಕಲಿಸಿಕೊಡುತ್ತೇನೆ"ಎಂದಿತು. "ಹೆಬ್ಬೂರ ಹುಲಿ ನಿಂತಂತೆ ನಿಂತ"ಎಂದು ಹೇಳಿತು. ಮಾಣಿ ಅದನ್ನು ಬಾಯಿಪಾಠ ಮಾಡು ಎಂದು ಹೇಳಿ ಹೋಯಿತು. ಇವನು ಹಾಗೆಯೆ ಮುಂದೆ ಹೋದನು. ಅಲ್ಲಿ ಒಂದು ಕರಡಿ ಸಿಕಿತು. ಅದು "ಭಟ್ಟಾ ಭಟ್ಟ ಎಲ್ಲಿಗೆ ಹೋಗುತ್ತೀಯಾ?"ಎಂದು ಕೇಳಿತು. ಆಗ ಮಾಣಿಯು "ನಾನು ಮಂತ್ರ ಕಲಿಯಲು ಹೋಗುತ್ತೇನೆ" ಎಂದನು. ಆಗ ಕರಡಿಯು "ಚೀಲದಲ್ಲಿ ಏನು ಇದೆ" ಎಂದು ಕೇಳಿತು. ಇವನು "ರಾಗಿ ರೊಟ್ಟಿ, ಗೋಧಿ ರೊಟ್ಟಿ"ಎಂದನು. ಆಗ ಕರಡಿ "ಕರಡಿ ಪೂತಾ ಕೂತಂತೆ ಕುಳಿತ"ಎಂದು ಹೇಳಿತು. ಮಾಣಿ ಅದನ್ನು ಬಾಯಿಪಾಠ ಮಾಡು ಎಂದು ಹೇಳಿ ಹೋಯಿತು. ಹಾಗೆ ಮುಂದೆ ಹೋದನು. ಅಲ್ಲಿ ಒಂದು ಮೊಲ ಸಿಕ್ಕಿತು. ಅದು ಮಾಣಿಯ ಹತ್ತಿರ "ಎಲ್ಲಿಗೆ

ಹೋಗುತ್ತೀಯಾ" ಎಂದು ಕೇಳಿತು. ಆಗ ಮಾಣಿಯು ಮಂತ್ರ ಕಲಿಯಲು ಎಂದನು. ಆಗ ಮೊಲ "ಚೀಲದಲ್ಲಿ ಏನಿದೆ"ಎಂದು ಕೇಳಿತು. ಆಗ ಅವನು "ರಾಗಿ ರೊಟ್ಟಿ, ಗೋಧಿ ರೊಟ್ಟಿ" ಎಂದನು. ಆಗ ಮೊಲವು "ನನಗೆ ಒಂದು ಚೂರು ಕೊಡು ನಾನು ಮಂತ್ರ ಹೇಳಿ ಕೊಡ್ತಿನಿ" ಎಂದಿತು. ಆಗ ಅವನು ಮೊಲಕ್ಕೆ ಒಂದು ಚೂರು ಕೊಟ್ಟನು. ಆಗ ಮೊಲವು "ಉದ್ದು ತಿಂಬು ಮೊಲ ಬಿಟ್ಟು ಓಡಿದಂತೆ ಓಡಿತು" ಎಂದು ಹೇಳಿತು. ಮಾಣಿ ಅದನ್ನು ಬಾಯಿ ಪಾಠ ಮಾಡು" ಎಂದು ಹೇಳಿ ಓಡಿಹೋಯಿತು.

ಅವನು ಅದನ್ನು ಬಾಯಿಪಾಠ ಮಾಡುತ್ತಾ ಹೋದನು. ಹಾಗೆಯೆ ಅವನು ರಾಜನ ಮನೆಗೆ ಹೋಗಿ ಮುಟ್ಟಿದನು. ರಾಜನ ಮನೆಯಲ್ಲಿ ಊಟ ಮಾಡಿಕೊಂಡು ಮಲಗಿಕೊಂಡನು. ಸುಮಾರು ಹನ್ನೆರಡು ಗಂಟೆಗೆ ಅವರ ಮನೆಯನ್ನು ಲೂಟಿ ಮಾಡಲು ಕಳ್ಳರು ಬಂದರು ಮನೆ ಗೋಡೆಯನ್ನು ಕೊರೆಯಲು ಸುರುಮಾಡಿದರು. ಅದೇ ಸಮಯದಲ್ಲಿ ಮಾಣಿಯು "ಹೆಗ್ಗಣ ಬಿಲ ಕೆರಿತು"ಎಂದು ಹೇಳಿದನು. ಆಗ ಕಳ್ಳರು 'ಇವನಿಗೆ ತಿಳಿದು ಹೋಯಿತು' ಎಂದು ಸುಮ್ಮನೆ ನಿಂತರು. ಆಗ ಇವನು "ಹೆಬ್ಬೂರ ಹುಲಿ ನಿಂತಂತೆ ನಿಂತ"ಎಂದು ಬಾಯಿಪಾಠ ಮಾಡುತ್ತಿದ್ದನು. ಆಗ ಕಳ್ಳರು 'ಇವನಿಗೆ ನಾವು ನಿಂತಿರುವುದು ತಿಳಿದು ಹೋಯಿತಲ್ಲಾ' ಎಂದು ಓಡಲು ಸುರು ಮಾಡಿದರು. ಆಗ ಇವನು "ಉದ್ದು ತಿನ್ನವ ಮೊಲ ಬಿಟ್ಟುಕೊಟ್ಟು ಓಡಿದಂತೆ ಓಡಿದರು"ಎಂದನು. ಅಯ್ಯಯ್ಯೋ ಓಡಿದ್ದು ತಿಳಿಯಿತು ಹೇಳಿ ದೊಡ್ಡಕ್ಕೆ ಕಳ್ಳರು ಕೂಗಿದರು. ಆಗ ಮಾಣಿ ಇದನ್ನು ನೋಡಿದನು. ಇವನು ಮನೆಯವರನ್ನೆಲ್ಲ ಎಬ್ಬಿಸಿ ಕಳ್ಳರು ಓಡಿದ ದಾರಿಯನ್ನು ತೋರಿಸಿದನು. ರಾಜನ ಸೇವಕರು ಕಳ್ಳರನ್ನು ಹಿಡಿದು ಕೊಂಡು ಬಂದರು. ರಾಜನು ಮನೆಯ ಗೋಡೆಯನ್ನು ಕೊರೆದದ್ದನ್ನು ನೋಡಿದನು. ರಾಜನು ಮಾಣಿಯೇ ನಿಜವಾದ ಪಂಡಿತನೆಂದು ಅವನಿಗೆ ತುಂಬಾ ಚಿನ್ನ ದುಡ್ಡನ್ನು ಕೊಟ್ಟನು.

□□

೫೩

ಮಂತ್ರ ಕಲಿಯುವ ಮಾಣಿ - ೨

ಒಂದು ಊರಿನಲ್ಲಿ ಒಬ್ಬ ಅಜ್ಜಿ ಮೊಮ್ಮಗ ಇದ್ದರು. ಅಜ್ಜಿಯು ಒಂದು ದಿನ ಮೊಮ್ಮಗನನ್ನು ಕರೆಯಿತು. "ಪಾಠವನ್ನು ಕಲಿಯಲು ಹೋಗು. ನಿನಗೆ ಏನೂ ಕೆಲಸವು ಬರುವುದಿಲ್ಲ" ಎಂದಳು. ಆಗ ಮೊಮ್ಮಗ "ನನಗೆ ಪ್ರತಿ ದಿನ ಉಂಡೆ ಮಾಡಿಕೊಡು" ಎಂದು ಹೇಳಿದನು. ಆಗ ಅಜ್ಜಿ ಒಂದು ದಿನ ಉಂಡೆಯನ್ನು ಮಾಡಿಕೊಟ್ಟಳು. ಉಂಡೆಯನ್ನು ತೆಗೆದುಕೊಂಡು ಹೋಗುವಾಗ ಒಂದು ಇಲಿಯು ಸಿಕ್ಕಿತು. "ಮಾಣಿ ಮಾಣಿ ಎಲ್ಲಿಗೆ ಹೋಗುತ್ತೀಯಾ?" ಎಂದು ಕೇಳಿತು. ಆಗ ಮಾಣಿಯು "ನಾನು ಮಂತ್ರವನ್ನು ಕಲಿಯಲು ಹೋಗುತ್ತೇನೆ" ಆಗ ಇಲಿಯು ನನಗೊಂದು ಉಂಡೆಯನ್ನು ಕೊಟ್ಟರೆ ನಿನಗೆ ಮಂತ್ರವನ್ನು ಹೇಳಿಕೊಡುತ್ತೇನೆ" ಎಂದಿತು. ಆಗ ಮಾಣಿ ಒಂದು ಉಂಡೆಯನ್ನು ಕೊಟ್ಟನು. ಆಗ "ಇಲಿ ಕೆರೆದಂತೆ ಕೆರೆದ" ಎಂದಿತು. ಹಾಗೆ ಮುಂದೆ ಹೋದನು. ಅಲ್ಲಿ ಒಂದು ಕೊಕ್ಕಾನ ಹಕ್ಕಿ ಸಿಕ್ಕಿತು. "ಮಾಣಿ ಎಲ್ಲಿಗೆ ಹೋಗುತ್ತೀಯಾ?" ಎಂದು ಕೇಳಿತು. ಆಗ ಮಾಣಿ "ಮಂತ್ರವನ್ನು ಕಲಿಯಲು ಹೋಗುತ್ತೇನೆ" ಎಂದನು. ಆಗ ಕೊಕ್ಕಾನ ಹಕ್ಕಿಯು "ನನಗೆ ಒಂದು ಉಂಡೆಯನ್ನು ಕೊಡು ನಾನು ನಿನಗೆ ಒಂದು ಮಂತ್ರವನ್ನು ಕಲಿಸಿಕೊಡುತ್ತೇನೆ" ಎಂದಿತು. ಆಗ ಮಾಣಿಯು ಒಂದು ಉಂಡೆಯನ್ನು ಕೊಟ್ಟನು. ಆಗ ಕೊಕ್ಕನಹಕ್ಕಿಯು "ಕೊಕ್ಕನ ಹಕ್ಕಿ ಕೂತಂತೆ ಕೂತನು" ಎಂದಿತು. ಹಾಗೆ ಮಾಣಿಯು ಮುಂದೆ ಹೋದನು. ಅಲ್ಲಿ ಅವನಿಗೆ ಒಂದು ಹೆಬ್ಬಾವು ಸಿಕ್ಕಿತು. ಅದು ಮಾಣಿಯ ಹತ್ತಿರ "ಮಾಣಿ ಮಾಣಿ ಎಲ್ಲಿಗೆ ಹೋಗುತ್ತೀಯಾ?" ಎಂದು ಕೇಳಿತು. ಆಗ ಮಾಣಿ "ಮಂತ್ರವನ್ನು ಕಲಿಯಲು ಹೋಗುತ್ತೇನೆ" ಎಂದನು. ಆಗ ಹೆಬ್ಬಾವು "ನನಗೆ ಒಂದು ಉಂಡೆಯನ್ನು ಕೊಡು ನಾನು ನಿನಗೆ ಮಂತ್ರವನ್ನು ಕಲಿಸಿ ಕೊಡುತ್ತೇನೆ" ಎಂದಿತು. ಆಗ ಮಾಣಿ ಒಂದು ಉಂಡೆಯನ್ನು ಕೊಟ್ಟನು. ಆಗ ಹೆಬ್ಬಾವು "ಹೆಬ್ಬಾವು ಬಿದ್ದಂತೆ ಬಿದ್ದ" ಎಂದಿತು. ಮುಂದೆ ಹೋದ ಹಾಗೆ ಒಂದು ಮೊಲ ಸಿಕ್ಕಿತು. ಅದು "ಮಾಣಿ ಎಲ್ಲಿಗೆ ಹೋಗುತ್ತಿಯಾ?" ಎಂದು ಕೇಳಿತು. ಆಗ ಮಾಣಿ ಮಂತ್ರವನ್ನು ಕಲಿಯಲು ಹೋಗುತ್ತೇನೆ" ಎಂದನು. ಆಗ ಮೊಲವು "ನನಗೆ ಒಂದು ಉಂಡೆಯನ್ನು

ಕೊಡು ನಾನು ನಿನಗೆ ಮಂತ್ರವನ್ನು ಹೇಳಿ ಕೊಡುತ್ತೇನೆ" ಎಂದಿತು. ಆಗ ಮಾಣಿ ಆ ಮೊಲಕ್ಕೆ ಒಂದು ಉಂಡ್ಲೆಯನ್ನು ಕೊಟ್ಟನು. ಆಗ ಮೊಲವು "ಕೆಸರು ಗದ್ದೆಯಲ್ಲಿ ಓಡಿದಂತೆ ಓಡಿದನು" ಎಂದಿತು. ಹೀಗೆ ಮಾಣಿಯು ಇದನ್ನೆಲ್ಲ ಬಾಯಿ ಪಾಠ ಮಾಡುತ್ತಾ ಹೋದನು. ಹೋಗುವವರೆಗೆ ರಾತ್ರಿಯಾಯಿತು.

ಮಾಣಿ ಒಬ್ಬ ರಾಜನ ಮನೆಯಲ್ಲಿ ಉಳಿದನು. ರಾತ್ರಿ ಊಟ ಮಾಡಿ ಮಲಗಿಕೊಂಡನು. ಅದೇ ದಿನ ರಾತ್ರಿ ರಾಜನ ಮನೆಗೆ ಕಳ್ಳರು ಬಂದರು. ಮಧ್ಯರಾತ್ರಿ ಕಳ್ಳರು ಲೂಟಿ ಹೊಡೆಯಲು ಗೋಡೆ ಕೆರೆಯಲು ಸುರು ಮಾಡಿದರು. ಆಗ ಮಾಣಿ ಕನವರಿಸುತ್ತಿದ್ದನು. "ಇಲಿ ಕೆರೆದಂತೆ ಕೆರೆದ" ಎಂದನು. ಇದನ್ನು ಕೇಳಿದ ಕಳ್ಳರು 'ಅಯ್ಯೋ ಲೂಟಿ ಹೊಡೆಯುವುದು ತಿಳಿಯಿತು' ಎಂದು ಅಲ್ಲಿಯೇ ಕುಳಿತು ಕೊಂಡರು. ಆಗ ಮಾಣಿ "ಕೊಕ್ಕನ ಹಕ್ಕಿ ಕೂತಂತೆ ಕೂತ" ಎಂದನು. ಆಗ ಕಳ್ಳರು ಅಲ್ಲಿಯೇ ಮಲಗಿಕೊಂಡರು. ಆಗ ಮಾಣಿಯು "ಹೆಬ್ಬಾವು ಬಿದ್ದಂತೆ ಬಿದ್ದ" ಎಂದು ಹೇಳಿದನು. ಕಳ್ಳರು ಮನೆಯವರಿಗೆ ತಿಳಿಯಿತು ಎಂದು ಹೇಳಿ ಓಡಿ ನಡೆದರು. ಆಗ ಮಾಣಿ "ಕೆಸರು ಗದ್ದೆಯಲ್ಲಿ ಮೊಲ ಓಡಿದಂತೆ ಓಡಿದರು" ಎಂದು ದೊಡ್ಡದಾಗಿ ಕೂಗಿದನು. ಆಗ ಎಲ್ಲರಿಗೂ ಎಚ್ಚರವಾಗಿ ಎಲ್ಲ ಮನೆಯಲ್ಲೂ ದೀಪವನ್ನು ಹಚ್ಚಿ ಓಡಿ ಬಂದು ನೋಡಿದರು ಕಳ್ಳರು ಮಾಡಿದ ಗೋಡೆಯ ತೂತನ್ನು ಕಂಡರು. ಆಗ ರಾಜನು ಮಾಣಿಯ ಹತ್ತಿರ "ಯಾವ ಪದವನ್ನು ಹೇಳುತ್ತಿರುವೆ" ಎಂದು ಕೇಳಿದನು. ಆಗ ಮಾಣಿಯು "ಇಲಿ ಕೆರೆದಂತೆ ಕೆರೆದರು", "ಕೊಕ್ಕನಹಕ್ಕಿ ಕೂತಂತೆ ಕೂತರು", "ಹೆಬ್ಬಾವು ಬಿದ್ದಂತೆ ಬಿದ್ದರು", "ಮೊಲವು ಕೆಸರು ಗದ್ದೆಯಲ್ಲಿ ಓಡಿದಂತೆ ಓಡಿದರು" ಎಂದು ಪದವನ್ನು ಹೇಳಿದನು. ಆಗ ರಾಜನಿಗೆ ಈ ಪದವನ್ನು ಕೇಳಿ ನಗು ಬಂದಿತು. ಇದು ಎಂಥ ಪಾಠ ಎಂದು ಕೇಳಿದನು. ಆಗ ಮಾಣಿ "ಇದು ಪ್ರಾಣಿ ಪಾಠ" ಎಂದನು. ರಾಜನಿಗೆ ತುಂಬಾ ಸಂತೋಷವಾಯಿತು. ಅವನಿಗೆ ಒಂದು ಕೊಳಗ ಚಿನ್ನವನ್ನು ಕೊಟ್ಟನು. ಮಾಣಿ "ಇದನ್ನೆಲ್ಲವನ್ನು ತೆಗೆದುಕೊಂಡು ಹೇಗೆ ಹೋಗುವುದು" ಎಂದು ಕೇಳಿದನು. ಆಗ ರಾಜ ಚಿನ್ನವನ್ನು ಚೀಲದಲ್ಲಿ ತುಂಬಿ ಕುದುರೆ ಮೇಲೆ ಕಟ್ಟಿ ಕುದುರೆಯನ್ನು ಮಾಣಿಗೆ ಕೊಟ್ಟನು.

ಮಾಣಿ ಕುದುರೆ ತೆಗೆದುಕೊಂಡು ಹಾಗೆ ಮನೆಗೆ ಹೋದನು. ಮನೆಗೆ ಹೋಗಿ ಅಜ್ಜಿಯನ್ನು ಕರೆದನು "ಅಜ್ಜಿ ಅಜ್ಜಿ ಬಾಗಿಲನ್ನು ತೆಗೆ" ಎಂದನು. ಆಗ ಅಜ್ಜಿ ಬಂದು ಬಾಗಿಲನ್ನು ತೆಗೆದಳು. ಆಗ ಮಾಣಿ ಚೀಲದಲ್ಲಿದ್ದ ಚಿನ್ನವನ್ನು ತೆಗೆದು ಕೆಳಗೆ ಹಾಕಿದನು. ಆಗ ಅಜ್ಜಿ ಇದನ್ನು ಎಲ್ಲಿಂದ ತಂದೆ ಎಂದು ಕೇಳಿದಳು. ಆಗ ಮಾಣಿ "ರಾಜರು ಕೊಟ್ಟಿದ್ದಾರೆ" ಎಂದನು. ಆಗ ಅಜ್ಜಿ "ಯಾಕೆ ಕೊಟ್ಟರು" ಎಂದು

ಕೇಳಿದಳು. ಆಗ ಮಾಣಿಯು "ನಾನು ಪಾಠವನ್ನು ಹೇಳಿದೆ ಅದಕ್ಕಾಗಿ ಇದನ್ನು ಕೊಟ್ಟರು"ಎಂದನು. ಅಜ್ಜಿಯು ಆ ಪಾಠವನ್ನು ಹೇಳು ಎಂದಳು. ಆಗ ಮಾಣಿಯು ಹೇಳಲು ಸುರು ಮಾಡಿದನು "ಇಲಿ ಕೆರೆದಂತೆ ಕೆರೆದರು" ಎಂದು ಹೇಳಲು ಸುರು ಮಾಡಿದನು. ಆಗ ಅಜ್ಜಿಗೆ ಸಿಟ್ಟು ಬಂದು "ಇದೆಂಥಾ ಮಂತ್ರ" ಎಂದು ಕೇಳಿದಳು. ಮಾಣಿಯು "ಇದೇ ಮಂತ್ರದಿಂದ ಚೀಲ ತುಂಬಾ ಚಿನ್ನವನ್ನು ತಂದಿದ್ದೇನೆ ನನಗೆ ಅಷ್ಟೆ ಸಾಕು" ಎಂದನು. ಆಗ ಅಜ್ಜಿಗೂ ಸಂತೋಷವಾಯಿತು. ಅಜ್ಜಿ ಮೊಮ್ಮಗ ಸುಖವಾಗಿ ಉಳಿದರು.

□□

೫೪

ಜೋಳದ ಕಾಳಿನ ಕತೆ

ಒಂದು ಊರಿನಲ್ಲಿ ಅಣ್ಣ ತಮ್ಮ ಇದ್ದರು. ಅವರು ಜಾತ್ರೆಗೆ ಹೋಗಬೇಕು ಎಂದುಕೊಳ್ಳುತ್ತಿದ್ದರು. ಜಾತ್ರೆ ದಿನ ಹತ್ತಿರ ಬಂತು. ಅಣ್ಣ ತಮ್ಮ ಇಬ್ಬರೂ ಜಾತ್ರೆಗೆ ಹೋದರು. ಅಣ್ಣ ಮೂರು ಸಿದ್ದಿ ಜೋಳದ ಕಾಳನ್ನು ತೆಗೆದುಕೊಂಡನು. ತಮ್ಮನೂ ಮೂರು ಸಿದ್ದಿ ಜೋಳದ ಕಾಳನ್ನು ತೆಗೆದುಕೊಂಡನು. ಅಣ್ಣ ಬೇಗ ತಿಂದು ಮುಗಿಸಿಬಿಟ್ಟನು. ಆದರೆ ತಮ್ಮ ನಿಧಾನವಾಗಿ ತಿನ್ನುತ್ತಾ ಬಂದನು. ಅಣ್ಣ ತಮ್ಮನ ಹತ್ತಿರ "ನನಗೆ ಸ್ವಲ್ಪ ಜೋಳದ ಕಾಳನ್ನು ಕೊಡು" ಎಂದನು. ತಮ್ಮನು ಕೊಟ್ಟನು. ಅದೇ ಸಮಯದಲ್ಲಿ ಒಂದು ಹಂಡೆ ಬಂತು. ಆಗ ತಮ್ಮ ಅಣ್ಣನ ಹತ್ತಿರ "ಅಣ್ಣ ಹಂಡೆ ತೆಗೆದುಕೊ" ಎಂದನು. ಅಣ್ಣನು "ನಾನು ತೆಗೆದುಕೊಳ್ಳುವುದಿಲ್ಲ"ಎಂದನು. ಆಗ ತಮ್ಮ ಹಾಗಾದರೆ ನಾನು ಕೊಟ್ಟ ಜೋಳದ ಕಾಳನ್ನು ನನಗೆ ವಾಪಸ್ ಕೊಡು" ಎಂದನು. ಅಣ್ಣನು ಹಂಡೆಯನ್ನು ತೆಗೆದುಕೊಂಡನು. ಹಾಗೆ ಮುಂದೆ ಹೋದರು. ಅಲ್ಲಿ ಒಂದು ಹಂದಿ ಮರಿ ಬಂದಿತು. ತಮ್ಮ ಅಣ್ಣನ ಹತ್ತಿರ "ಅದನ್ನು ತೆಗೆದುಕೊ" ಎಂದನು. ಆಗ ಅಣ್ಣನು "ನಾನು ತೆಗೆದುಕೊಳ್ಳುವುದಿಲ್ಲ" ಎಂದನು. ಆಗ ತಮ್ಮ ಹಾಗಾದರೆ ನಾನು ಕೊಟ್ಟ ಜೋಳದ ಕಾಳನ್ನು ನನಗೆ ವಾಪಸ್ ಕೊಡು" ಎಂದನು. ಆಗ ಅಣ್ಣನು ಆ ಹಂದಿಮರಿಯನ್ನು ತೆಗೆದುಕೊಂಡನು. ಮುಂದೆ ಹೋದ ಕೂಡಲೇ ಅಲ್ಲಿ ಒಂದು ಹಗ್ಗ ಬಂದಿತು. ಆಗ ತಮ್ಮ ಅಣ್ಣನ ಹತ್ತಿರ "ನನ್ನ ಜೋಳದ ಕಾಳನ್ನು ಕೊಡು" ಎಂದನು. ಆಗ ಅಣ್ಣನು ಹಗ್ಗವನ್ನು ತೆಗೆದುಕೊಂಡನು. ಅಣ್ಣನು "ಮನೆಗೆ ಹೋಗೋಣ" ಎಂದನು. ತಮ್ಮ ಆಯಿತು ಎಂದನು. ಇಬ್ಬರೂ ಮನೆಗೆ ಹೋದರು. ಹೋಗುವಾಗ ದಾರಿಯಲ್ಲಿ ಕತ್ತಲಾಯಿತು. ಅಲ್ಲಿ ಒಬ್ಬ ರಾಕ್ಷಸನ ಮನೆಯಿತ್ತು. ಇಬ್ಬರೂ ಆ ಮನೆಗೆ ಹೋದರು. ರಾಕ್ಷಸನ ಮಗಳಿಗೆ ಇಬ್ಬರಲ್ಲಿ ಒಬ್ಬನನ್ನು ಮದುವೆ ಯಾಗಲು ಮನಸ್ಸಾಯಿತು. ಆಗ ಅವಳು ಅವರ ಹತ್ತಿರ "ನೀವು ಬೇಗ ಊಟ ಮಾಡಿಕೊಂಡು ಮಾಳಿಗೆಯ ಮೇಲೆ ಕುಳಿತುಕೊಳ್ಳಿ. ಇಲ್ಲದಿದ್ದರೆ ನನ್ನ ಅಪ್ಪ ಬಂದು ನಿಮ್ಮನ್ನು ತಿನ್ನುತ್ತಾನೆ" ಎಂದಳು.

ಅದೇ ಸಮಯದಲ್ಲಿ ರಾಕ್ಷಸನು ಬಂದನು. ಇವರು ಊಟ ಮಾಡಿಕೊಂಡು ಮಾಳಿಗೆಯನ್ನು ಹತ್ತಿಕೊಂಡು ಕುಳಿತರು. ಆಗ ರಾಕ್ಷಸನು ದೂರದಿಂದ ಕೂಗುತ್ತಾ ಓಡಿ ಬಂದನು. "ತಂಗಿ ತಂಗಿ ನರಮನುಷ್ಯರ ವಾಸನೆ ಬರುತ್ತಿದೆ" ಎಂದನು. ಆಗ ಅವಳು 'ಇಲ್ಲ' ಎಂದಳು. ಅವನು ಒಳಗೆ ಬಂದ ಕೂಡಲೇ ಮಾಳಿಗೆಯ ಮೇಲೆ ಕುಳಿತ ಇವರನ್ನು ನೋಡಿ "ನೀವು ಯಾರು" ಎಂದು ರಾಕ್ಷಸ ಕೇಳಿದನು.

ಆಗ ಅಣ್ಣನು ಹೇಳಿದನು "ನಾನು ನಿನಗಿಂತ ದೊಡ್ಡ ರಾಕ್ಷಸರು" ಎಂದರು. "ಹಾಗಾದರೆ ನಿನ್ನ ತಲೆಯನ್ನು ತೋರಿಸು" ಎಂದನು. ಆಗ ಹಂಡೆಯನ್ನು ಹಿಡಿದು ತೋರಿಸಿದರು. "ಅಯ್ಯಯ್ಯೋ" ಎಂದು ಹೇಳಿ ಕೂಗಿದನು. ನಂತರ "ನಿನ್ನ ಹೇನನ್ನು ತೋರಿಸಿ" ಎಂದನು. ಆಗ ಹಂದಿ ಮರಿಯನ್ನು ತೋರಿಸಿದರು. ಆಗ ರಾಕ್ಷಸ ಹೆದರಿದನು. 'ನಿನ್ನ ದೇಹವನ್ನು ತೋರಿಸು" ಎಂದನು. ಆಗ ಹಗ್ಗವನ್ನು ಕೆಳಗೆ ಬಿಟ್ಟನು. ಆಗ ರಾಕ್ಷಸನು ಹೆದರಿ ದೂರ ಓಡಲು ಸುರು ಮಾಡಿದನು. ಆಗ ತಮ್ಮ ಎನ್ನುವವನು ಒಂದು ನಾಯಿಗೆ ಗರಟೆಯನ್ನು ಕುತ್ತಿಗೆಗೆ ಕಟ್ಟಿ ಆ ನಾಯಿಗೆ ಅದು ಗರಟೆ ಎಂದು ತಿಳಿಯಲಿಲ್ಲ. ಅದು ರಾಕ್ಷಸನ ಹತ್ತಿರ 'ಓಡು ಓಡು' ಎಂದಿತು. ರಾಕ್ಷಸ ಓಡಿದನು. ತಮ್ಮ ಇನ್ನೊಂದು ಕುನ್ನಿಗೆ ಹತ್ತಿಯನ್ನು ಕಟ್ಟಿ ಕಳುಹಿಸಿದನು. ಆಗ ಅದು ರಾಕ್ಷಸನ "ಹತ್ತಿರ ಹತ್ತು ಹತ್ತು" ಎಂದಿತು. ಅವನು ಒಂದು ದೊಡ್ಡ ಮರವನ್ನು ಹತ್ತಿದನು. ಆಗ ತಮ್ಮ ಮತ್ತೊಂದು ನಾಯಿಗೆ ಕೆಸುವಿನ ಬೀಣನ್ನು ಕಟ್ಟಿದನು. ಅದು ರಾಕ್ಷಸನ ಹತ್ತಿರ "ಬೀಳೊ ಬೀಳೋ" ಎಂದಿತು. ಅವನು ಕೆಳಗೆ ಬಿದ್ದು ಸತ್ತು ಹೋದನು. ಮರದ ಕೆಳಗೆ ಒಂದು ಕೊಪ್ಪರಿಗೆ ಇತ್ತು. ರಾಕ್ಷಸನು ಆ ಕೊಪ್ಪರಿಗೆಯ ಮೇಲೆ ಬಿದ್ದು ಸತ್ತು ಹೋದನು. ಆಗ ಆ ಊರಿನ ರಾಜ ಈ ಅಣ್ಣ ತಮ್ಮನಿಗೆ ರಾಕ್ಷಸನನ್ನು ಕೊಂದದ್ದಕ್ಕಾಗಿ ಬಹುಮಾನವನ್ನು ಕೊಟ್ಟರು. ಅವರು ಮದುವೆಯಾಗಿ ಸುಖದಿಂದ ಉಳಿದರು.

□□

೫೫

ರಾಜನ ಮಗ ಮತ್ತು ಪ್ರಧಾನಿಯ ಮಗ

ಒಂದು ಊರಿನಲ್ಲಿ ಒಬ್ಬ ಪ್ರಧಾನಿ ಮಗ, ರಾಜನ ಮಗ ಇದ್ದರು. ಇಬ್ಬರೂ ಪ್ರಾಣ ಸ್ನೇಹಿತರಾಗಿದ್ದರು. ರಾಜನ ಮಗನಿಗೆ ಮದುವೆಯಾಗಿತ್ತು. ಒಂದು ಸಲ ರಾಜನ ಮಗ ಮಾವನ ಮನೆಗೆ ಹೋಗಿ ಬರುತ್ತೇನೆ ಎಂದನು. ಆಗ ಪ್ರಧಾನಿ ಮಗ ನಾನು ಬರುತ್ತೇನೆ ಎಂದನು. ಆಗ ಇಬ್ಬರು ಬುತ್ತಿಯನ್ನು ಕಟ್ಟಿಕೊಂಡು ಕುದುರೆಯ ಮೇಲೆ ಹೊರಟರು. ಹೋಗುತ್ತಿರುವಾಗ ಸಂಜೆ ಆಯಿತು. ಆಗ ಇಬ್ಬರು ಒಂದು ಮರದ ಕೆಳಗೆ ಮಲಗಿಕೊಂಡರು. ರಾಜನ ಮಗನಿಗೆ ನಿದ್ರೆ ಬಂದಿತು. ಆದರೆ ಪ್ರಧಾನಿ ಮಗನಿಗೆ ನಿದ್ರೆಯೆ ಬರಲಿಲ್ಲ. ಆಗ ಆ ಮರದ ಮೇಲೆ ಗಂಡು ಪಕ್ಷಿ ಹೆಣ್ಣು ಪಕ್ಷಿಯ ಹತ್ತಿರ "ನೋಡು ಈ ಮರದ ಕೆಳಗೆ ಮಲಗಿಕೊಂಡ ರಾಜನ ಮಗನಿಗೆ ನಾಲ್ಕು ಅಪಾಯವಿದೆ. ಈಗ ನಾವು ಹಾರಿ ಹೋದ ಮೇಲೆ ಈ ಅಶ್ವತ್ಥ ಮರದ ರೆಂಬೆ ಮುರಿದು ಬಿದ್ದು ರಾಜನ ಮಗ ಸಾಯುತ್ತಾನೆ" ಎಂದಿತು. ಆಗ ಹೆಣ್ಣು ಪಕ್ಷಿ "ಅದು ತಪ್ಪಿದರೆ" ಎಂದು ಕೇಳಿತು. ಆಗ ಗಂಡು ಪಕ್ಷಿ ಹೇಳಿತು. "ಇವನ ಮಾವನ ಮನೆಯ ಬಾಗಿಲಿಗೆ ಹೋದಾಗ ಮುಂದಿನ ಬಾಗಿಲು ಕುಸಿದು ಬಿದ್ದು ಇವನು ಸಾಯುತ್ತಾನೆ" ಎಂದಿತು. ಆಗ ಹೆಣ್ಣು ಪಕ್ಷಿ "ಇದು ತಪ್ಪಿದರೆ" ಎಂದಿತು. ಆಗ ಗಂಡು ಪಕ್ಷಿ ಹೇಳಿತು "ಮಾವನ ಮನೆಯಲ್ಲಿ ಊಟ ಮಾಡುವಾಗ ಮೂರು ತುತ್ತಿನಲ್ಲಿ ಮೂರು ಸೂಜಿ ಸಿಕ್ಕಿ ಇವನು ಸಾಯುತ್ತಾನೆ" ಎಂದಿತು. ಆಗ "ಇದು ತಪ್ಪಿದರೆ" ಎಂದು ಹೆಣ್ಣು ಪಕ್ಷಿ ಕೇಳಿತು.

ಆಗ ಗಂಡು ಪಕ್ಷಿ "ಇವನು ರಾತ್ರಿ ಹೆಂಡತಿಯ ಜೊತೆಗೆ ಮಲಗಿಕೊಂಡಾಗ ಹಾವು ಕಚ್ಚಿ ಸಾಯುತ್ತಾನೆ"ಎಂದು ಹೇಳಿ ಕೊನೆಗೆ "ಇದನ್ನು ಯಾರಾದರೂ ಕೇಳಿದರೆ ಅವರು ರಾಜನ ಮಗನ ಹತ್ತಿರ ಹೇಳಿದರೆ ಅವರು ಶಿಲೆಯಾಗಿ ಹೋಗುತ್ತಾರೆ" ಎಂದು ಹೇಳಿ ಅಲ್ಲಿಂದ ಹಾರಿ ಹೋದವು. ಇದನ್ನು ಪ್ರಧಾನಿ ಮಗ ಕೇಳಿಸಿಕೊಳ್ಳುತ್ತಾ ಇದ್ದನು. ಅವನು ಹೇಗಾದರೂ ಮಾಡಿ ಗೆಳೆಯನನ್ನು ಉಳಿಸಿಕೊಳ್ಳಬೇಕು ಎಂದು ಅವನನ್ನು ಎತ್ತಿಕೊಂಡು ಬೇರೆ ಕಡೆ ತಂದು ಮಲಗಿಸಿದನು. ಕೂಡಲೇ ಅಶ್ವತ್ಥ ಮರದ ರೆಂಬೆ ಮುರಿದು ಬಿತ್ತು. ಒಂದನೇ ಅಪಾಯದಿಂದ ಪಾರು ಮಾಡಿದೆ

ಎಂದು ಪ್ರಧಾನಿ ಮಗ ಸಂತೋಷಪಟ್ಟನು. ಬೆಳಗಾದ ಮೇಲೆ ರಾಜನ ಮಗ "ಯಾಕೆ ನನ್ನನ್ನು ಇಲ್ಲಿ ತಂದು ಮಲಗಿಸಿದೆಯಾ" ಎಂದು ಕೇಳಿದನು. ಆಗ ಪ್ರಧಾನಿ ಮಗ ಹೇಳಿದನು "ನಾವು ಮಲಗಿದ ಅಶ್ವತ್ಥ ಮರದ ರೆಂಬೆ ಮುರಿದು ಬಿತ್ತು. ಇಲ್ಲದಿದ್ದರೆ ನೀನು ಸಾಯುತ್ತಿದ್ದೆ" ಎಂದನು.

ಅವರು ಮುಂದೆ ಹೋದರು ಮುಂದಿನ ಅಪಾಯದಿಂದ ಹೇಗೆ ಪಾರು ಮಾಡುವುದು ಎಂದು ಪ್ರಧಾನಿ ಮಗ ಆಲೋಚನೆ ಮಾಡುತ್ತಿದ್ದನು. ಆಗ ಗೆಳೆಯನ ಹತ್ತಿರ ಹೇಳಿದ "ನಾವು ಒಂದು ಮಜಾ ಮಾಡೋಣ ರಾಜನ ಮನೆಯ ಒಳಗೆ ಕುದುರೆಯ ಮೇಲೆ ಹಾರಿಸಿಕೊಂಡು ಹೋಗುವಾ"ಎಂದನು. ರಾಜನ ಮಗ 'ಆಯಿತು' ಎಂದನು. ಅವರು ಹಾಗೆಯೆ ಮಾಡಿದರು. ಒಳಗೆ ಹೋದ ಕೂಡಲೇ ಮನೆಯ ಮುಂಬಾಗಿಲು ಕುಸಿದು ಬಿದ್ದು ಹೋಯಿತು. ರಾಜನ ಮಗ "ನೀನೆ ನನ್ನ ನಿಜವಾದ ಗೆಳೆಯ ಇಲ್ಲದಿದ್ದರೆ ನಾನು ಈಗ ಸತ್ತು ಹೋಗುತ್ತಿದೆ" ಎಂದನು. ಆಗ ಪ್ರಧಾನಿ ಮಗ ಎರಡನೇ ಅಪಾಯದಿಂದ ಪಾರುಮಾಡಿದೆ ಎಂದು ಮನಸ್ಸಿನಲ್ಲಿಯೇ ಹೇಳಿಕೊಂಡನು.

ಕೊನೆಗೆ ಅವರು ಊಟ ಮಾಡಲು ಕುಳಿತರು. ಮೊದಲ ತುತ್ತಿನಲ್ಲಿಯೇ ರಾಜನ ಮಗನಿಗೆ ಒಂದು ಸೂಜಿ ಸಿಕ್ಕಿತು. ಅವನು ತುತ್ತನ್ನು ಬಾಯಿಗೆ ಹಾಕುತ್ತಿರುವಾಗ ಪ್ರಧಾನಿ ಮಗ ಅದನ್ನು ಹಾರಿಸಿ ಹಾಕಿದನು. ಹೀಗೆ ಮೂರು ತುತ್ತನ್ನು ಹಾರಿಸಿ ಹಾಕಿದನು. ಆಗ ರಾಜನ ಮನೆಯವರಿಗೆ ಸಿಟ್ಟು ಬಂದಿತು. ಆದರೂ ರಾಜನ ಮಗ ಜೀವ ಉಳಿಸಿದ ಗೆಳೆಯ ಎಂದು ಸುಮ್ಮನಿದ್ದನು. ಮೂರನೇ ಕಂಟಕದಿಂದಲೂ ಪಾರು ಮಾಡಿದೆ ಎಂದು ಪ್ರಧಾನಿ ಮಗ ಸಂತೋಷಪಟ್ಟನು. ನಂತರ ನಾಲ್ಕನೆ ಅಪಾಯದಿಂದ ಹೇಗೆ ಪಾರು ಮಾಡುವುದು ಎಂದು ಆಲೋಚನೆ ಮಾಡುತ್ತಿದ್ದನು. ಪ್ರಧಾನಿ ಮಗನು ರಾಜನ ಮಗನ ಹತ್ತಿರ "ನಾನು ನಿನ್ನ ಜೊತೆಯೆ ಮಲಗುತ್ತೇನೆ" ಎಂದನು. ರಾಜನ ಮಗನಿಗೆ ಮನಸ್ಸಿಲ್ಲದಿದ್ದರೂ 'ಆಯಿತು' ಎಂದನು. ಮೂರು ಜನರೂ ಅಂತಪುರದಲ್ಲಿ ಮಲಗಿಕೊಂಡರು. ರಾತ್ರಿ ಪ್ರಧಾನಿ ಮಗನಿಗೆ ನಿದ್ರೆಯೆ ಬರಲಿಲ್ಲ ಎಚ್ಚರವಾಗಿ ಇದ್ದನು. ರಾತ್ರಿ ದೊಡ್ಡ ಹಾವು ಬಂದಿತು. ಅದು ಮಂಚ ಹತ್ತಿ ರಾಜನ ಮಗನ ಹೆಂಡತಿಯ ಮೈಮೇಲೆ ಹತ್ತಿಕೊಂಡಿತು. ಅವನು ತನ್ನ ಕತ್ತಿಯಿಂದ ಹಾವನ್ನು ಚೂರು ಚೂರು ಮಾಡಿದನು. ಆಗ ಗೆಳೆಯನ ಕೈ ರಾಜನ ಮಗನ ಹೆಂಡತಿ ಮೈಗೆ ತಾಗಿತು. ಅವಳು ತಪ್ಪು ತಿಳಿದುಕೊಂಡು ತನ್ನ ಗಂಡನಿಗೆ ಹೇಳಿದಳು. ರಾಜನ ಮಗನು ತನ್ನ ಗೆಳೆಯನಬಗ್ಗೆ ತಪ್ಪು ತಿಳಿದು ಅವನನ್ನು ಗಲ್ಲಿಗೇರಿಸಲು ಆಜ್ಞೆ ಮಾಡಿದನು. ಆಗ ಪ್ರಧಾನಿ ಮಗನಿಗೆ ತುಂಬಾ ಬೇಸರವಾಯಿತು. ಅವನನ್ನು ಗಲ್ಲಿಗೇರಿಸುವ ಮೊದಲು ಅವನ ಆಸೆಯನ್ನು ಕೇಳಿದನು. ಆಗ ಅವನು "ರಾಜನ ಮಗನನ್ನು ನೋಡಬೇಕು" ಎಂದು ಹೇಳಿದನು. ರಾಜನ ಮಗನನ್ನು ಅವನ

ಮುಂದೆ ತಂದು ನಿಲ್ಲಿಸಿದರು. ಆಗ ಅವನು ಗೆಳೆಯನ ಹತ್ತಿರ ಅಶ್ವತ್ಥ ಮರದ ಕೆಳಗೆ ಮಲಗಿಕೊಂಡಿದ್ದಾಗ ಹಕ್ಕಿಗಳು ಹೇಳಿದ ಮಾತನ್ನು ಹೇಳಿದನು. "ನಾನು ಶಿಲೆಯಾಗುತ್ತೇನೆ ಎಂದು ನಿನ್ನ ಹತ್ತಿರ ಹೇಳಿರಲಿಲ್ಲ" ಎಂದನು. ಅವನು ಶಿಲೆಯಾಗಿ ಹೋದನು. ನನ್ನ ಗೆಳೆಯ ನನಗಾಗಿ ಇಷ್ಟೆಲ್ಲಾ ಮಾಡಿ ಈಗ ಶಿಲೆಯಾಗಿ ಹೋದ ಎಂದು ರಾಜನ ಮಗನಿಗೆ ಬೇಸರವಾಯಿತು. ಆ ಶಿಲೆಯನ್ನು ಎತ್ತಿಕೊಂಡು ದೇವಿಯ ಮೂರ್ತಿಯ ಹತ್ತಿರ ಹೋದನು. "ನನ್ನ ಗೆಳೆಯನ ಜೀವವನ್ನು ತಂದು ಕೊಡು, ಇಲ್ಲದಿದ್ದರೆ ನಾನೂ ಈ ಶಿಲೆಗೆ ಜಪ್ಪಿಕೊಂಡು ಸತ್ತು ಹೋಗುತ್ತೇನೆ. ನನ್ನ ಜೀವ ಉಳಿಸಿದ ಗೆಳೆಯ ಕಲ್ಲಾಗಿ ಹೋದನು. ನಾನು ಯಾಕೆ ಬದುಕಿರಬೇಕು ನಾನು ಸಾಯುತ್ತೇನೆ" ಎಂದನು. ಆಗ ದೇವರು ಅವನ ಗೆಳೆಯನ ಜೀವವನ್ನು ತಂದುಕೊಟ್ಟನು. ಅವರು ರಾಜ್ಯಕ್ಕೆ ಬಂದು ಸುಖವಾಗಿದ್ದರು. ರಾಜನ ಮಗನು ತನ್ನ ಗೆಳೆಯನನ್ನು ಕೊನೆಯ ತನಕ ತನ್ನ ಜೊತೆಯಲ್ಲಿಯೇ ಇಟ್ಟುಕೊಂಡನು.

□□

೫೬

ಗಂಡು ಭೇರುಂಡ, ಹೆಣ್ಣು ಭೇರುಂಡ

ಒಂದು ಊರಿನಲ್ಲಿ ಅರಸ ಮತ್ತು ಪ್ರಧಾನಿ ಇದ್ದರು. ಅರಸನಿಗೆ ಒಬ್ಬ ಮಗ, ಪ್ರಧಾನಿಗೆ ಒಬ್ಬ ಮಗನಿದ್ದನು. ಇಬ್ಬರಿಗೂ ಮದುವೆಯಾಗಿತ್ತು. ಒಂದು ದಿನ ಇಬ್ಬರೂ ಮಾವನ ಮನೆಗೆ ಹೊರಟರು. ಹೋಗುವಾಗ ಸಂಜೆ ಆಯಿತು. ಅಲ್ಲಿ ಒಂದು ಅಶ್ವತ್ಥ ಮರವಿತ್ತು. ಅಶ್ವತ್ಥ ಮರದ ಬುಡದಲ್ಲಿ ಮಲಗಿಕೊಂಡರು. ಆ ಮರದ ಮೇಲೆ ಗಂಡ ಭೇರುಂಡ ಮತ್ತು ಹೆಣ್ಣು ಭೇರುಂಡ ಅಶ್ವತ್ಥ ಮರದ ದೊಡ್ಡ ರೆಂಬೆಯ ಮೇಲೆ ಕುಳಿತುಕೊಂಡಿದ್ದವು. ಆ ಹೆಣ್ಣು ಹಕ್ಕಿ ಗಂಡ ಹಕ್ಕಿ ಹತ್ತಿರ ಒಂದು ಕತೆಯನ್ನು ಹೇಳು ಎಂದಿತು. ಆಗ ಗಂಡೂ ಭೇರುಂಡ ಕತೆ ಹೇಳಲು ಶುರು ಮಾಡಿತು "ಇಲ್ಲಿ ಮಲಗಿಕೊಂಡವರು ಒಬ್ಬ ರಾಜನ ಮಗ ಇನ್ನೊಬ್ಬ ಪ್ರಧಾನಿ ಮಗ. ಈ ರಾಜನ ಮಗ ಒಂದು ದೊಡ್ಡ ಹಳ್ಳವನ್ನು ದಾಟುವಾಗ ಸತ್ತು ಹೋಗುತ್ತಾನೆ. ಇಲ್ಲದಿದ್ದರೆ ರಸ್ತೆಯಲ್ಲಿ ಸತ್ತು ಹೋಗುತ್ತಾನೆ ಅಥವಾ ದೊಡ್ಡ ಗುಡ್ಡ ಕುಸಿದು ಬಿದ್ದು ಸತ್ತು ಹೋಗುತ್ತಾನೆ. ಅದು ತಪ್ಪಿದರೂ ಅವನ ಹೆಂಡತಿ ಕೈಯಲ್ಲಿ ಅವನು ಪ್ರಾಣ ಬಿಡುತ್ತಾನೆ. ಇದನ್ನು ಕೇಳಿದವರು ಬೇರೆಯವರಿಗೆ ಹೇಳಿದರೆ ಕಲ್ಲಾಗಿ ಹೋಗುತ್ತಾರೆ" ಎಂದು ಹೇಳಿ ಹಾರಿ ಹೋದವು. ಹಾಗೆ ಬೆಳಗಾಯಿತು. ಮಾವನ ಮನೆಗೆ ಹೋಗುವಾ ಎಂದುಕೊಂಡು ಹೋದರು. ಅಲ್ಲಿ ಒಂದು ದೊಡ್ಡ ಜರಿಯು ಇತ್ತು. ಒಂದು ಬಳ್ಳಿ ಕಡ್ಡಿಯನ್ನು ಆ ಕಡೆ ಈ ಕಡೆ ದಡಕ್ಕೆ ಕಟ್ಟಿದರು. ಪ್ರಧಾನಿ ಮಗ ತಾನು ಕುದುರೆಯನ್ನು ಹಾರಿಸುತ್ತೇನೆ ಎಂದನು. ಆ ಜರಿಯಲ್ಲಿ ಸ್ವಲ್ಪವೂ ನೀರು ಇಲ್ಲವಾಗಿತ್ತು. ಇದಕ್ಕಿದಂತೆ ಭೋರ್ಗರೆಯುತ್ತಾ ನೀರು ಬಂದಿತು. ಹೇಗೊ ಕುದುರೆಯನ್ನು ಹಾರಿಸಿಕೊಂಡು ಹೋದರು. ಸ್ವಲ್ಪ ಮುಂದೆ ಹೋದ ಕೂಡಲೇ ಗುಡ್ಡ ಕುಸಿದು ಬಿತ್ತು. ಹೇಗೋ ಪಾರಾಗಿ ಮಾವನ ಮನೆಗೆ ಹೋಗಿ ಮುಟ್ಟಿದರು. ನೀರನ್ನು ಕುಡಿದರು. ಪ್ರಧಾನಿ ಮಗ ಮೊದಲು ಸ್ನಾನ ಮಾಡಿದನು. ನಂತರ ರಾಜನ ಮಗ ಸ್ನಾನ ಮಾಡಲು ಹೋದನು. ಆಗ ಪ್ರಧಾನಿ ಮಗನು ರಾಜನ ಮಗನ ಹತ್ತಿರ ಒಂದು ಕೊಪ್ಪರಿಗೆಯಲ್ಲಿ ಬೆಂಕಿ ಕೆಂಡ ಹಾಕಿ ಮೆಟ್ಟಿಲ ಬುಡದಲ್ಲಿ ಇಡು ಎಂದನು. ಹಾಗೆ ಒಂದು ಕೊಪ್ಪರಿಗೆಯಲ್ಲಿ ಬೆಂಕಿ ಕೆಂಡವನ್ನು ಬಾಗಿಲ ಮೆಟ್ಟಿಲಿನ ಬುಡದಲ್ಲಿ ಇಟ್ಟನು. ಆಗ ಒಂದು ಸರ್ಪ

ಬೋರಗುಡುತ್ತಾ ಬಂದು ಬೆಂಕಿಯಲ್ಲಿ ಬಿದ್ದು ಸತ್ತು ಹೋಯಿತು. ಆಗ ರಾಜನ ಹುಡುಗ ಸ್ನಾನ ಮಾಡಿ ಸಂಧ್ಯಾವಂದನೆಗೆ ಕುಳಿತನು. ಮಧ್ಯಾಹ್ನ ಊಟ ಆಯಿತು. ಹಾಗೆಯೆ ರಾತ್ರಿಯೂ ಆಯಿತು. ರಾಜನ ಹುಡುಗ ಉಪ್ಪರಿಗೆಯ ಮೇಲೆ ಮಲಗುವುದು ಎಂದು ನಿರ್ಧಾರ ಮಾಡಿದನು. ಪ್ರಧಾನಿ ಹುಡುಗನು ನಾನು ನಿನ್ನ ಹತ್ತಿರ ಮಲಗುತ್ತೇನೆ ಎಂದನು. ಹಾಗೆ ಇಬ್ಬರೂ ಮಲಗಿದರು. ಹಾಗೆಯೆ ರಾಜನ ಮಗನ ಹೆಂಡತಿ ಒಳ್ಳೆಯ ಸೀರೆಯನ್ನು ಉಟ್ಟುಕೊಂಡು ಚಿನ್ನವನ್ನು ಹಾಕಿಕೊಂಡು ಹಾಲು, ಮೊಸರು, ತುಪ್ಪ, ಒಂದು ಬಾಳೆಹಣ್ಣಿನ ಗೊನೆಯನ್ನು ತೆಗೆದುಕೊಂಡು ಕುದುರೆ ಸವಾರನು ಇದ್ದಲ್ಲಿ ಹೋದಳು. ಅವನು ಕುದುರೆಯನ್ನು ಬಾರಿಸುವ ಬಾರುಕೋಲಿನಲ್ಲಿ ಹೊಡೆದನು. ಯಾಕೆ ಇಷ್ಟು ತಡವಾಗಿ ಬಂದೆ ಎಂದು ಕೇಳಿದನು. ಆಗ ಅವಳು ತನ್ನ ಗಂಡ ಬಂದಿದ್ದಾನೆ. ಅದಕ್ಕಾಗಿ ತಡವಾಯಿತು ಎಂದಳು. ಆಗ ಅವನು "ನಾನು ಒಂದು ಚೂರಿಯನ್ನು ಕೊಡುತ್ತೇನೆ. ಅದನ್ನು ನಿನ್ನ ಗಂಡನ ಕುತ್ತಿಗೆಗೆ ಹಾಕು" ಎಂದನು. ಇದನ್ನೆಲ್ಲ ಪ್ರಧಾನಿ ಮಗ ಸುಮ್ಮನೆ ಅಡಗಿಕೊಂಡು ಇವರ ಮಾತನ್ನು ಕೇಳುತ್ತಿದ್ದನು. ಬೆಳಗಾಗಲು ಸ್ವಲ್ಪ ಸಮಯವಿತ್ತು. ಆಗ ರಾಜನ ಮಗನ ಹೆಂಡತಿ ಬಂದಳು. ಬಂದವಳೇ ರಾಜನ ಮಗನ ಕುತ್ತಿಗೆಗೆ ಚೂರಿಯನ್ನು ಹಾಕಿದಳು. ನಂತರ ಪ್ರಧಾನಿ ಮಗನೇ ಕೊಂದ ಎಂದು ಅಳಲು ಸುರು ಮಾಡಿದಳು. ಪ್ರಧಾನಿ ಮಗ ಅಲ್ಲಿ ನಿಲ್ಲದೇ ತನ್ನ ಕುದುರೆಯನ್ನು ತೆಗೆದುಕೊಂಡು ಅದಕ್ಕೆ ರಾಜನ ಮಗನ ಹೆಣವನ್ನು ಬಿಗಿದುಕೊಂಡು ತನ್ನ ಮಾವನ ಮನೆಗೆ ಹೋದನು. ಹೋಗುವಾಗ ಸುಮಾರು ದೂರಹೋದ ಕೂಡಲೇ ಸಂಜೆಯಾಯಿತು. ಹಾಗೆಯೆ ತನ್ನ ಕುದುರೆಯನ್ನು ಒಂದು ಕಡೆ ಕಟ್ಟಿದನು. ನೀರನ್ನು ಕುಡಿದುಕೊಂಡು ಹಾಗೆ ಉಪ್ಪರಿಗೆಯ ಮೇಲೆ ಮಲಗಿದನು. ಅವನ ಹೆಂಡತಿ ತುಂಬಾ ಚಿನ್ನವನ್ನು ಹಾಕಿಕೊಂಡು ಮೊಸರು, ಹಾಲು, ಬಾಳೆಗೊನೆ ತೆಗೆದುಕೊಂಡು ಮಂಕಾಳಮ್ಮನ ದೇವಸ್ಥಾನಕ್ಕೆ ಹೋದಳು. ಇವನು ಅವಳ ಹಿಂದೆಯೆ ಹೋದನು. ಇವಳ ಪೂಜೆ ಆಯಿತು. ಅಮ್ಮನವರು ಎದ್ದು ಬಂದು 'ನಿನಗೆ ಏನು ಬೇಕು?' ಎಂದು ಕೇಳಿತು. ಆಗ ಪ್ರಧಾನಿ ಮಗನ ಹೆಂಡತಿ "ನನಗೆ ಚಿನ್ನ ಬೇಡ, ಹಣ ಬೇಡ, ಸತ್ತವರನ್ನು ಮುಟ್ಟಿದರೆ ಜೀವ ಬರುವ ಹಾಗೆ ವರವನ್ನು ಕೊಡು" ಎಂದಿತು. "ಹಾಗೆ ಆಗಲಿ" ಎಂದು ದೇವರು ವರವನ್ನು ಕೊಟ್ಟಿತು. ಅವಳು ಬರುವ ಮೊದಲೇ ಇವನು ಬಂದು ಮಲಗಿದನು. ಅವನ ಹೆಂಡತಿ ಬಂದಳು. ಆಗ ಪ್ರಧಾನಿಯ ಮಗ ನನಗೆ ಮೂತ್ರ ಮಾಡಲು ಹೋಗಬೇಕು ಆದರೆ ಎಲ್ಲಿ ಎಂದು ತಿಳಿದಿಲ್ಲ ಸ್ವಲ್ಪ ತೋರಿಸು ಎಂದನು. ಕುದುರೆ ಕಟ್ಟಿಹಾಕಿದ್ದ ಸಾಲಿನ ಬುಡದಲ್ಲಿ ಹೋದನು. ಹೋಗುವಾಗ ಅವಳ ಕೈ ಸತ್ತುಹೋದ ಹೆಣಕ್ಕೆ ತಾಗುತ್ತದೆ. ಆಗ ಹೆಣಕ್ಕೆ ಜೀವ ಬರುತ್ತದೆ. ಆಗ ರಾಜನ ಮಗ "ನನ್ನನ್ನು ಏಕೆ ಕಟ್ಟಿಹಾಕಿದ್ದೀರಿ?" ಎಂದು ಕೇಳಿದನು. ಆಗ ಪ್ರಧಾನಿ ಮಗ ನಡೆದ ಸಂಗತಿಯನ್ನು ಹೇಳಿದನು. ಪ್ರಧಾನಿ ಮಗ

ಕಲ್ಲಾಗುತ್ತಾ ಬಂದನು. ಅವನ ಹೆಂಡತಿ ಮೈಯನ್ನು ಮುಟ್ಟಿದಳು. ಆಗ ಅವನಿಗೆ ಜೀವ ಬಂದಿತು. ಪ್ರಧಾನಿ ಹುಡುಗನ ಮಾವನ ಮನೆಯಲ್ಲಿ ಉಪಚಾರ ಮಾಡಿಸಿಕೊಂಡು ರಾಜನ ಮಗನ ಮಾವನ ಮನೆಗೆ ಹೋದರು. ಅಲ್ಲಿ ಯಾರೂ ಇರಲಿಲ್ಲ. ರಾಜನ ಮಗನು ಹೆಂಡತಿಯನ್ನು ಕೊಂದು ಬಾಗಿಲ ಆಚೆ ಬದಿ ಈಚೆ ಬದಿಗೆ ಕಟ್ಟಿದನು. ಎಲ್ಲರೂ ಮನೆಗೆ ಬಂದು ಸಂತೋಷದಿಂದ ಉಳಿದರು.

□□

೫೭

ಹತ್ತುಂಡೆ ಬಿತ್ತುಂಡೆ

ಒಂದಾನೊಂದು ಕಾಲದಲ್ಲಿ ಸೂರ್ಯಶೇಖರ, ಚಂದ್ರಶೇಖರ ಎನ್ನುವ ರಾಜರಿದ್ದರು. ಸೂರ್ಯಶೇಖರನ ಮಗನಿಗೆ ಚಂದ್ರಶೇಖರನ ಮಗಳನ್ನು ಕೊಟ್ಟು ಮದುವೆ ಮಾಡಿದರು. ಸೂರ್ಯಶೇಖರನ ಮಗ ಬೇರೆ ಕಡೆಯಲ್ಲಿ ಕಲಿಯಲು ಹೋಗಿದ್ದನು. ಮದುವೆ ಆದ ಕೂಡಲೇ ಕಲಿಯಲು ಮತ್ತೆ ದೂರ ಹೋದನು. ನಂತರ ದಿಂಡು ಮಾಡಲು ತಯಾರಿ ನಡೆಸಿದರು. ಆಗ ಅವನು ಮನೆಗೆ ಬಂದನು ಅಪ್ಪನ ಹತ್ತಿರ "ನನಗೆ ಮಾವನ ಮನೆಗೆ ಹೋಗುವ ದಾರಿ ಗೊತ್ತಿಲ್ಲ" ಎಂದನು. ಆಗ ಅಪ್ಪ ಹೇಳಿದ "ಕುದುರೆಯ ಮೇಲೆ ಹತ್ತಿ ಹೋಗು ದಾರಿಯಲ್ಲಿ ಯಾರಾದರೂ ಸಿಗಬಹುದು ಅವರ ಹತ್ತಿರ ಕೇಳು" ಎಂದನು. ಹಾಗೆ ಅವನು ಮಾವನ ಮನೆಗೆ ಹೊರಟನು.

ದಾರಿಯ ಮೇಲೆ ಒಬ್ಬ ಕೆಲಶಿ ಸಿಕ್ಕಿದನು. ಅವನ ಹತ್ತಿರ "ನಿನಗೆ ಚಂದ್ರಶೇಖರ ರಾಜನ ಮನೆಗೆ ಹೋಗುವ ದಾರಿ ಗೊತ್ತಿದೆಯಾ? ಎಂದು ಕೇಳಿದನು. ಆಗ ಕೆಲಶಿ ಹೇಳಿದ ನಾನು ಅಲ್ಲಿಗೆ ಹೋಗುತ್ತೇನೆ. ನಿಮ್ಮ ಕುದುರೆಯ ಮೇಲೆಯೆ ಬರುತ್ತೇನೆ ಪರವಾಗಿಲ್ಲವಾ?" ಎಂದು ಕೇಳಿದನು. ಆಗ ರಾಜನ ಮಗ 'ಆಯಿತು' ಎಂದನು. ಆ ಕೆಲಶಿಯನ್ನೂ ಕರೆದುಕೊಂಡು ಹೋದನು.

ಸ್ವಲ್ಪ ಮುಂದೆ ಹೋದ ಕೂಡಲೇ ಆ ಕೆಲಶಿ "ಒಂದು ಸಲ ನೀವು ನಿಮ್ಮ ಬಟ್ಟೆಯನ್ನು ನನಗೆ ಕೊಡಿ"ಎಂದನು. ಆಗ ರಾಜನ ಮಗನು 'ಆಯಿತು'ಎಂದು ತೆಗೆದುಕೊಟ್ಟನು. ನಂತರ "ನಿಮ್ಮ ಕುದುರೆಯನ್ನು ಒಂದು ಸಲ ಹತ್ತಿ ನೋಡುತ್ತೇನೆ" ಎಂದನು. ಆಯಿತು ಎಂದು ರಾಜನ ಮಗನು ಕುದುರೆಯನ್ನು ಕೊಟ್ಟನು. ಆ ಕೆಲಶಿ ಕುದುರೆಯನ್ನು ಹತ್ತಿಕೊಂಡು ಹೋದನು. ಆಗ ರಾಜನ ಮಗ ಖಾಲಿ ಚಡ್ಡಿ ಬನಿಯನ್ ಮೇಲೆ ಉಳಿದನು.

ಆಗ ರಾಜನ ಮಗ ಹಾಗೆ ಓಡಿ ಹೋಗುತ್ತಾನೆ. ಸುಮಾರು ದೂರ ಹೋದ ಕೂಡಲೇ ಒಬ್ಬನು ಸೊಪ್ಪಿನ ಹೊರೆಯನ್ನು ಹೊತ್ತುಕೊಂಡು ಹೋಗುತ್ತಿದ್ದನು. ಆಗ

ಅವನ ಹತ್ತಿರ "ಚಂದ್ರಶೇಖರನ ಮನೆಗೆ ಹೋಗುವ ದಾರಿ ಯಾವುದು"ಎಂದು ಕೇಳಿದನು. ಆಗ ಅವನು ಹೀಗೆಯೆ ಹೋಗಬೇಕು ಎಂದು ಹೇಳಿದನು.

ಅಲ್ಲಿ ಹೋಗಿ ನೋಡಿದರೆ ಆ ಕೆಲಶಿಯೇ ರಾಜನ ಮಗ ಎಂದು ತಿಳಿದುಕೊಂಡು ಅವನಿಗೆ ರಾಜೋಪಚಾರ ಮಾಡಿದರು. ಇದನ್ನೆಲ್ಲ ನೋಡಿದ ಕೂಡಲೇ ರಾಜನ ಮಗನ ವೇಷದಲಿದ್ದ ಕೆಲಶಿಗೆ ಹೊಟ್ಟೆ ಉರಿ ಆದ ಹಾಗೆ ಆಯಿತು. ಆದರೆ ರಾಜನ ಮಗ ಅವರ ಮನೆಯಲ್ಲಿ ಕೆಲಸಕ್ಕೆ ಇರುತ್ತಾನೆ. ಮದುವೆ ಆಗಿ ಎರಡು ಮೂರು ತಿಂಗಳಾಗಿತ್ತು. ದಿಂಡು ಆಗಿರಲಿಲ್ಲ. ದಿಂಡನ್ನು ನಿಶ್ಚಯ ಮಾಡಿದರು. ಆ ದಿನ ರಾಜನ ಮಗನನ್ನು ಕಟ್ಟಿಗೆ ತರಲು ಕಾಡಿಗೆ ಕಳುಹಿಸಿದರು. ಇವನು ಕಾಡಿಗೆ ಹೋದನು. ಅಲ್ಲಿ ಈಶ್ವರನನ್ನು ಕುರಿತು ತಪಸ್ಸನ್ನು ಮಾಡಿದನು. ಆಗ ಈಶ್ವರ ಪ್ರತ್ಯಕ್ಷನಾಗಿ "ನಿನಗೇನು ವರ ಬೇಕು?" ಎಂದು ಕೇಳಿದನು. ಇವನು ಏನೂ ಕೇಳಲಿಲ್ಲ. ಆಗ ಈಶ್ವರನು ಅವನ ಹತ್ತಿರ "ನೀನು ಅತ್ತುಂಡೆ ಹೇಳಿದ ಕೂಡಲೇ ಅದು ಹಿಡಿದುಕೊಳ್ಳುತ್ತದೆ. ಬಿತ್ತುಂಡೆ ಎಂದ ಕೂಡಲೇ ಬಿಡುತ್ತದೆ" ಎಂದು ವರವನ್ನು ಕೊಟ್ಟು ಮಾಯವಾಗಿ ಹೋದನು. ರಾಜನ ಮಗನು 'ಅತ್ತುಂಡೆ' ಎಂದ ಕೂಡಲೇ ತುಂಬಾ ಕಟ್ಟಿಗೆ ಬಿತ್ತು. 'ಬಿತ್ತುಂಡೆ' ಎಂದ ಕೂಡಲೇ ಎಲ್ಲ ಕಟ್ಟಿತು. ಅದನ್ನು ಹೊತ್ತುಕೊಂಡು ಬಂದನು. ಆ ದಿನ ರಾಜನ ಮನೆಯಲ್ಲಿ ದಿಂಡು ಆಗಿತ್ತು. ಅವರ ಮನೆಯ ಹತ್ತಿರ ಒಂದು ಮರವು ಇತ್ತು. ಅದರ ಮೇಲೆ ಹತ್ತಿ ಕುಳಿತುಕೊಂಡನು. ಆಗ ಮದುವೆಯಾದ ಹುಡುಗಿಗೆ ಮದುವೆ ಆದ ಹುಡುಗ ಎಲೆ ಪಟ್ಟಿಯನ್ನು ಕೊಡುವಾಗ ರಾಜನ ಮಗನು ಅತ್ತುಂಡೆ ಎಂದನು. ಇಬ್ಬರ ಕೈ ಹಿಡಿದುಹೋಯಿತು. ಆಗ ರಾಜ ಬಂದನು. ಅವರ ಕೈಯನ್ನು ಬಿಡಿಸಲು ಪ್ರಯತ್ನ ಮಾಡಿದನು. ಆದರೆ ಅವನ ಕೈ ಹಿಡಿದುಹೋಯಿತು. ರಾಣಿ ಬಂದಳು. ಅವಳು ಬಿಡಿಸಲು ನೋಡಿದಳು. ಆದರೆ ಅವಳ ಕೈ ಹಿಡಿದುಹೋಯಿತು. ಹೀಗೆ ಎಲ್ಲರ ಕೈ ಹಿಡಿದುಹೋಯಿತು. ಆಗ ಎಲ್ಲರಿಗೂ ಪೇಚಾಟ ಸುರುವಾಯಿತು. ಆಗ ನೆರೆ ಮನೆಯ ರಾಮ ಭಟ್ಟನನ್ನು ಕರೆಯಲು ಆಳಾಗಿರುವ ರಾಜಕುಮಾರನನ್ನು ಕಳುಹಿಸಿದರು. ದಾರಿಯ ಮೇಲೆ ಬರುವಾಗ ರಾಮ ಭಟ್ಟನು ಮೂತ್ರ ಮಾಡಲು ಕುಳಿತನು. ಆಗ ರಾಜಕುಮಾರ ಅತ್ತುಂಡೆ ಎಂದನು. ಆಗ ರಾಮ ಭಟ್ಟನ ಪಂಜಿ ಹಿಡಿದು ಹೋಯಿತು. ಹಾಗೆಯೆ ರಾಜನ ಮನೆಗೆ ಬಂದ ಕೂಡಲೇ ರಾಜ ಕೇಳಿದನು "ರಾಮ ಭಟ್ಟ ನಿನಗೂ ಇದೇ ಗತಿ ಬಂದಿದೇನು ಎಂದು ಕೇಳಿದನು. ಆಗ ರಾಜ ರಾಜಕುಮಾರನ ಹತ್ತಿರ ಇದನ್ನು ಬಿಡಿಸು ಎಂದು ರಾಜ ಕೇಳಿದನು. ಆಗ ರಾಜಕುಮಾರ "ಆಯಿತು, ಆದರೆ ನನ್ನದೊಂದು ಮಾತಿದೆ ಅದನ್ನು ನೀವು ಒಪ್ಪಿಕೊಳ್ಳಬೇಕು" ಎಂದನು. ರಾಜ 'ಆಗಲಿ' ಎಂದನು. ರಾಜಕುಮಾರ 'ಬಿತ್ತುಂಡೆ' ಎಂದ ಕೂಡಲೇ ಎಲ್ಲರ ಕೈ ಬಿಟ್ಟು

ಹೋಯಿತು. ರಾಮ ಭಟ್ಟನ ಪಂಜಿಯೂ ಬಿಟ್ಟಿತು. ಆಗ ರಾಜಕುಮಾರನು ರಾಜನ ಹತ್ತಿರ "ನೀವು ಅವನ(ಕೆಲ್ಲಶಿ) ಕಾಲನ್ನು ನೋಡಿ" ಎಂದನು. ಆಗ ರಾಜ ತನ್ನ ಸುಳ್ಳು ಅಳಿಯನ ಕಾಲನ್ನು ನೋಡಿದನು. ಆಗ ಇವನು ನನ್ನ ಅಳಿಯನು ಅಲ್ಲ ಎಂದು ತಿಳಿಯಿತು. ಇವನ ತಲೆಯನ್ನು ಕಡಿದುಹಾಕಿ ಎಂದು ತನ್ನ ಸೇವಕರಿಗೆ ಆಜ್ಞೆ ಮಾಡಿದನು. ಆಗ ರಾಜಕುಮಾರ ನಡೆದ ಸಂಗತಿಯನ್ನು ಹೇಳಿದನು. ಆಗ ರಾಜ ಪುನಃ ದಿಂಡನ್ನು ಮಾಡಿದನು. ನಿಜವಾದ ಮದುಮಗನಿಗೆ ದಿಂಡಾಯಿತು. ಆ ಕೆಲಶಿಯನ್ನು ಗಲ್ಲಿಗೆ ಏರಿಸಿದರು.

ಕತೆ ಕಾಶಿಗೆ ಹೋಯಿತು ನಾನು ಮನೆಗೆ ಬಂದೆ.

□□

೫೮

ಪಂಚವರ್ಣದ ಗಿಳಿ

ಒಂದು ಊರಿನಲ್ಲಿ ಒಬ್ಬ ರಾಜನಿದ್ದನು. ಅವನಿಗೆ ಮೂರುಜನ ಗಂಡು ಮಕ್ಕಳಿದ್ದರು. ಒಂದು ರಾತ್ರಿ ಆ ರಾಜನು ಒಂದು ಕನಸು ಕಂಡನು. ಆ ಕನಸಿನಲ್ಲಿ ಅವನು ಬೆಳ್ಳಿಕಟ್ಟೆ, ಚಿನ್ನದಗಿಡ, ನವರತ್ನದ ಕಾಯಿ ಮತ್ತು ನವರತ್ನದ ಕಾಯಿಯನ್ನು ತಿನ್ನುತ್ತಿರುವ ಪಂಚವರ್ಣದ ಗಿಳಿಯನ್ನು ಕಂಡನು.

ರಾಜನು ಆ ದಿನ ಮುಂಜಾನೆ ತನ್ನ ಹಾಸಿಗೆ ಬಿಟ್ಟು ಏಳಲಿಲ್ಲ. ರಾಜನ ಹೆಂಡತಿ ಬಂದು ಗಂಡನನ್ನು ಎಬ್ಬಿಸಿದಳು. ಆದರೂ ಅವನು ಏಳಲಿಲ್ಲ. ರಾಜನ ಹಿರಿಯ ಮಕ್ಕಳು ಬಂದು "ಅಪ್ಪಾ ನಿನಗೇನು ಬೇಕು ನಾವು ತಂದು ಕೊಡುತ್ತೇವೆ", "ಏದ್ದೇಳು" ಎಂದರು. ಆಗ ರಾಜನು ತನ್ನ ಮಕ್ಕಳ ಹತ್ತಿರ ತಾನು ಕಂಡ ಕನಸಿನ ವಿಷಯವನ್ನು ತಿಳಿಸಿದನು. ಮಕ್ಕಳು "ಅಪ್ಪಾ ಚಿಂತೆ ಮಾಡಬೇಡ. ನೀನು ಕನಸಿನಲ್ಲಿ ಕಂಡ ಬೆಳ್ಳಿಕಟ್ಟೆ, ಚಿನ್ನದ ಗಿಡ, ನವರತ್ನದ ಕಾಯಿ ಮತ್ತು ಅದನ್ನು ತಿನ್ನುತ್ತಿರುವ ಪಂಚವರ್ಣದ ಗಿಳಿಯನ್ನು ನಾವು ತಂದು ಕೊಡುತ್ತೇವೆ" ಎಂದರು. ಅವರು ತಮ್ಮ ತಾಯಿಯ ಬಳಿ ಬಂದು ತಮಗೆ ಬುತ್ತಿ ಕಟ್ಟಿಸಿಕೊಂಡರು. ತಮ್ಮ ಅಪ್ಪನು ಕನಸಿನಲ್ಲಿ ಕಂಡ ಬೆಳ್ಳಿಕಟ್ಟೆ, ಚಿನ್ನದ ಗಿಡ, ನವರತ್ನದ ಕಾಯಿ ಮತ್ತು ನವರತ್ನದ ಕಾಯಿಯನ್ನು ತಿನ್ನುತ್ತಿರುವ ಪಂಚವರ್ಣದ ಗಿಳಿಯನ್ನು ತರಲು ತಮ್ಮ ಕುದುರೆಯೇರಿ ಹೊರಟರು. ಇವರ ದಾರಿಯಲ್ಲಿ ರಾಜನ ಕಿರಿಯ ಮಗ ಎದುರಾದನು. ತಮ್ಮ ಅಪ್ಪನು ಕನಸಿನಲ್ಲಿ ಕಂಡ ಬೆಳ್ಳಿಕಟ್ಟೆ, ಚಿನ್ನದ ಗಿಡ, ನವರತ್ನದ ಕಾಯಿ ಮತ್ತು ನವರತ್ನದ ಕಾಯಿಯನ್ನು ತಿನ್ನುತ್ತಿರುವ ಪಂಚವರ್ಣದ ಗಿಳಿಯನ್ನು ತರಲು ಹೋಗುತ್ತಿರುವ ವಿಷಯ ತಿಳಿದು ಕಿರಿತಮ್ಮನು "ನಾನೂ ನಿಮ್ಮ ಜೊತೆ ಬರುತ್ತೇನೆ"ಎಂದನು. ಆದರೆ ಅವನ ಅಣ್ಣಂದಿರು ಅವನನ್ನು ತಮ್ಮ ಜೊತೆ ಕರೆದುಕೊಳ್ಳಲಿಲ್ಲ. ಅವನನ್ನು ಬಿಟ್ಟು ಮುಂದಕ್ಕೆ ಹೋದರು. ಆದರೆ ಕಿರಿಯ ತಮ್ಮ ಅವರ ಹಿಂದೆ ಹಿಂದೆ ನಡೆದನು. ಸಂಜೆಯಾಯಿತು, ಅಣ್ಣಂದಿರು ಅಲ್ಲಿ ಒಂದು ಅಶ್ವತ್ಥ ಕಟ್ಟೆಯ ಮೇಲೆ ಮಲಗಿದರು. ಕಿರಿತಮ್ಮನು ಅಲ್ಲಿಗೇ ಬಂದು ತನ್ನ ಅಣ್ಣಂದಿರ ಜೊತೆ ಮಲಗಿದನು. ಬೆಳಗಾಯಿತು ಕಿರಿತಮ್ಮನು ಎದ್ದು ಅತ್ತಿತ್ತ ನೋಡಿದನು. ಅಣ್ಣಂದಿರು ಕಾಣಲಿಲ್ಲ ಅವರು ಯಾವ ದಾರಿ ಹಿಡಿದು

ಸಾಗಿದರೆಂಬುದು ಅವನಿಗೆ ಗೊತ್ತಾಗಲಿಲ್ಲ. ಅದೇ ಮರದ ಮೇಲೆ ಗಂಡುಬೇರುಂಡ ಹೆಣ್ಣು ಬೇರುಂಡ ಹಕ್ಕಿಗಳು ವಾಸವಾಗಿದ್ದವು. ಅವು ಪ್ರತಿದಿನ ಆಹಾರ ತರಲು ಆ ಮರದಿಂದ ದೂರ ಹೋಗುತ್ತಿದ್ದವು. ಎಂದಿನಂತೆ ಆ ದಿನವೂ ಗಂಡು ಬೇರುಂಡವು ಬೆಳಗಾಗುವ ಮೊದಲೇ ಎದ್ದು ಏಳು ಸಮುದ್ರವನ್ನು ದಾಟಿ ಕೀಳ್ ಸಮುದ್ರಕ್ಕೆ ಹೋಗಿ ಅಮೃತವನ್ನು ತರುತ್ತಿತ್ತು. ಗಂಡುಬೇರುಂಡವು ಮುಂಜಾನೆ ಅಮೃತವನ್ನು ತೆಗೆದುಕೊಂಡು ಅಶ್ವತ್ಥ ಮರಕ್ಕೆ ಬಂದಿತು. ಹೆಣ್ಣುಬೇರುಂಡವು ಅಮೃತವನ್ನು ಹಂಚಲು ಅನುವಾಯಿತು. ಗಂಡು ಬೇರುಂಡವು ಹೆಣ್ಣುಬೇರುಂಡದ ಹತ್ತಿರ "ಊರಲ್ಲೆಲ್ಲ ಏನು ಸುದ್ದಿ ಎಂದು ಕೇಳಿತು?" ಹೆಣ್ಣುಬೇರುಂಡವು ಆ ದಿನ ಮುಂಜಾನೆ ನಡೆದ ಸುದ್ದಿಯನ್ನು ಗಂಡು ಬೇರುಂಡಕ್ಕೆ ಹೇಳತೊಡಗಿತು.

"ಈ ಊರಿನಲ್ಲಿ ಒಬ್ಬ ರಾಜನಿದ್ದಾನೆ. ಅವನು ಕನಸಿನಲ್ಲಿ ಬೆಳ್ಳಿಕಟ್ಟೆ, ಚಿನ್ನದ ಗಿಡ ನವರತ್ನದ ಕಾಯಿ ಮತ್ತು ನವರತ್ನದ ಕಾಯಿಯನ್ನು ತಿನ್ನುತ್ತಿರುವ ಪಂಚವರ್ಣದ ಗಿಳಿಯನ್ನು ಕಂಡಿದ್ದಾನೆ. ಅವುಗಳನ್ನು ತರಲು ಅವನ ಹಿರಿಯ ಗಂಡು ಮಕ್ಕಳು ಹೊರಟಿದ್ದಾರೆ. ಅವರು ರಾಜನ ಕಿರಿಮಗನನ್ನು ಬಿಟ್ಟು ಮುಂದೆ ಹೋಗಿದ್ದಾರೆ. ಇಲ್ಲಿ ಈ ಕಟ್ಟೆಯ ಮೇಲೆ ಕುಳಿತಿರುವವನೇ ರಾಜನ ಕಿರಿಯ ಮಗ ಎಂದಿತು. ಹೆಣ್ಣು ಬೇರುಂಡವು ತನ್ನ ಮಾತನ್ನು ಮುಂದುವರಿಸಿತು. ರಾಜನು ಕನಸಿನಲ್ಲಿ ಕಂಡ ಬೆಳ್ಳಿಕಟ್ಟೆ, ಚಿನ್ನದ ಗಿಡ, ನವರತ್ನದ ಕಾಯಿ ಮತ್ತು ನವರತ್ನದ ಕಾಯಿಯನ್ನು ತಿನ್ನುತ್ತಿರುವ ಪಂಚವರ್ಣದ ಗಿಳಿಯನ್ನು ರಾಜನ ಹಿರಿಯ ಮಕ್ಕಳು ತರುತ್ತಾರೆ. ಕಿರಿಯ ಮಗನಿಗೆ ಅವು ಸಿಗಲಾರವು. ಅವರು ಹೀಗೆ ತಮ್ಮನನ್ನು ಬಿಟ್ಟು ಹೋಗ ಬಾರದಿತ್ತು" ಎಂದಿತು. ಆಗ ಗಂಡು ಬೇರುಂಡವು "ರಾಜನ ಹಿರಿಯ ಮಕ್ಕಳು ಮುಂದೆ ಹೋದರೂ ರಾಜನು ಕನಸಿನಲ್ಲಿ ಕಂಡ ಬೆಳ್ಳಿಕಟ್ಟೆ, ಚಿನ್ನದ ಗಿಡ, ನವರತ್ನದ ಕಾಯಿ ಮತ್ತು ನವರತ್ನದ ಕಾಯಿಯನ್ನು ತಿನ್ನುತ್ತಿರುವ ಪಂಚವರ್ಣದ ಗಿಳಿಯನ್ನು ರಾಜನ ಹಿರಿಯ ಮಕ್ಕಳು ತರುವುದು ಸಾಧ್ಯವಿಲ್ಲ. ಅವು ಸ್ವಾರ್ಥ ಮೋಸ ಗೊತ್ತಿರದ ಇಲ್ಲಿ ಮಲಗಿರುವ ಕಿರಿಯ ಮಗನಿಗೇ ದೊರೆಯುತ್ತವೆ" ಎಂದಿತು. ಹೆಣ್ಣು ಬೇರುಂಡಕ್ಕೆ ರಾಜನ ಕಿರಿಮಗನ ಮೇಲೆ ಕರುಣೆ ಹುಟ್ಟಿತು. ಪ್ರತಿ ದಿನ ಗಂಡು ಬೇರುಂಡ ತರುವ ಅಮೃತವನ್ನು ಹೆಣ್ಣು ಬೇರುಂಡ ಮೂರು ಪಾಲು ಮಾಡುತ್ತಿತ್ತು. ಈ ದಿನ ಅದು ತಂದ ಅಮೃತವನ್ನು ನಾಲ್ಕು ಪಾಲು ಮಾಡಿತು. ತನ್ನ ಗಂಡನಿಗೊಂದು ಪಾಲು ತನ್ನ ಮಗಳಿಗೊಂದು ಪಾಲು, ತನಗೊಂದು ಪಾಲು ತೆಗೆದಿಟ್ಟಿತು. ನಾಲ್ಕನೆಯ ಪಾಲನ್ನು ಕಟ್ಟೆಯ ಮೇಲೆ ಮಲಗಿದವನ ಬಾಯಿಗೆ ಬಿಟ್ಟಿತು ಒಂದು ಹನಿ ಅಮೃತವು ಬಾಯಿಯ ಮೇಲೆ ಬಿದ್ದ ಕೂಡಲೆ ಅವನಿಗೆ ಹೊಟ್ಟೆ ತುಂಬಿ ತೇಗು ಬಂದಿತು. ಅವನು ಎದ್ದು ಕುಳಿತನು. "ಕಿರಿತಮ್ಮನು ಎದ್ದು ಕುಳಿತಿದ್ದಾನೆ. ಈಗ ಇವನು ಏನು ಮಾಡಬೇಕು?" ಕೇಳಿತು ಹೆಣ್ಣು ಬೇರುಂಡ. ಆಗ ಗಂಡುಬೇರುಂಡ ಹೇಳಿತು.

"ಈಗ ಇವನು ಈ ಸಪೂರ ದಾರಿ ಗುಂಟ ಹೋಗಬೇಕು. ಅಲ್ಲಿ ಬಲ ದಿಕ್ಕಿಗೆ ಒಬ್ಬ ಋಷಿ ಕುಳಿತ್ತಿರುತ್ತಾನೆ. ಆ ಋಷಿ ಹೇಳಿದ ಹಾಗೆ ಮಾಡಿದರೆ ರಾಜನು ಕನಸಿನಲ್ಲಿ ಕಂಡ ವಸ್ತುಗಳು ಇವನಿಗೆ ಸಿಗುತ್ತವೆ ಎಂದು ಹೇಳಿದನು. ಇದನ್ನು ಕಿರಿತಮ್ಮ ಕೇಳಿಸಿಕೊಂಡನು ಕಟ್ಟೆಯಿಂದ ಮೇಲೆದ್ದನು. ಗಂಡು ಬೇರುಂಡ ಹೇಳಿದಂತೆ ಸಪೂರ ದಾರಿಗುಂಟ ಬಲಬದಿಗೆ ಹೊರಟನು. ಅಲ್ಲಿ ಋಷಿಯು ಒಂದು ಬದಿಯಲ್ಲಿ ಯಾರಿಗೂ ಕಾಣದಂತೆ ಕುಳಿತಿದ್ದನು. ಕಿರಿತಮ್ಮನು ಅಲ್ಲಿಗೆ ಹೋಗಿ ಒಂದು ಮರೆಯಲ್ಲಿ ಕುಳಿತನು. ಋಷಿಗೆ ಕಾಣದ ಹಾಗೆ ಋಷಿಯ ಪೂಜೆಯ ಹರಿವಾಣ ತಿಕ್ಕಿ[ಬೆಳಗಿ]ಡುತ್ತಿದ್ದನು. ದೇವರ ಪೂಜೆಗೆ ಹೂ ಕೊಯ್ದಿಡುತ್ತಿದ್ದನು. ಇದನ್ನು ನೋಡಿ ಋಷಿಗೆ ಆಶ್ಚರ್ಯವಾಗುತ್ತಿತ್ತು. ಒಂದು ದಿನ ಋಷಿ "ಇದು ಯಾವ ದೇವರ ದಯೆಯೋ ಏನೋ. ದೇವರ ಪೂಜೆಗೆ ಸಹಾಯ ಮಾಡುವವರು ಯಾರೇ ಆಗಿರಲಿ, ಗಂಡಾದರೆ, ಬಂದು ನನ್ನ ಎಡ ತೊಡೆಯ ಮೇಲೆ ಕುಳಿತುಕೊಳ್ಳಲಿ, ಹೆಣ್ಣಾದರೆ, ನನ್ನ ಬಲ ತೊಡೆಯ ಮೇಲೆ ಕುಳಿತುಕೊಳ್ಳಲಿ" ಎಂದು ಕರೆದನು. ಆಗ ಕಿರಿತಮ್ಮನು ಋಷಿಯ ಎಡತೊಡೆಯ ಮೇಲೆ ಕುಳಿತುಕೊಂಡನು. ಆಗ ಋಷಿ "ನಿನಗೆ ಏನು ಬೇಕು" ಎಂದು ಕೇಳಿದನು. ಆಗ ಅವನು "ತನ್ನ ಅಪ್ಪನಿಗೆ ಬೆಳ್ಳಿ ಕಟ್ಟೆ, ಚಿನ್ನದಗಿಡ, ನವರತ್ನದ ಕಾಯಿ, ಅದನ್ನು ತಿನ್ನುತ್ತಿರುವ ಪಂಚವರ್ಣದ ಗಿಳಿಯ ಕನಸು ಬಿದ್ದಿದೆ. ಅದನ್ನು ತರಲು ನಾನು ಹೊರಟಿದ್ದೇನೆ" ಎಂದು ಹೇಳಿದನು. ಅದನ್ನು ತರುವದು ಹೇಗೆ ಹೇಳು ಎಂದು ಕೇಳಿದನು. ಆಗ ಋಷಿ "ನಾನು ನಿನಗೆ ಮೂರು ಹರಳುಗಳನ್ನು ಮಂತ್ರಿಸಿ ಕೊಡುತ್ತೇನೆ. ನಾನು ಹೇಳಿದಂತೆ ಮಾಡು" ಎಂದನು. ಹೀಗೆ ಮುಂದೆ ಹೋಗು, ಅಲ್ಲೊಂದು ಕೆರೆ ಕಾಣುತ್ತದೆ. ಆ ಕೆರೆಯ ಬುಡದಲ್ಲಿ ನಿಂತುಕೊಂಡು ಈ ಕೆರೆ ಬಾಯಿ ತೆಗೆಯಲಿ ಎಂದು ಹೇಳುತ್ತ ಒಂದು ಹರಳನ್ನು ಕೆಳಗೆ ಒಗೆ. ಹರಳನ್ನು ಒಗೆದ ಕೂಡಲೆ ಕೆರೆಯ ಬಾಯಿ ತೆಗೆಯುತ್ತದೆ. ಬಳಿಕ ಅಲ್ಲಿಂದ ನೂರಾಒಂದು ದೈತಿಯರು ಹೊರಬರುತ್ತಾರೆ. ಅವರು ನಾನು ತಿನ್ನುತ್ತೇನೆ, ನಾನು ತಿನ್ನುತ್ತೇನೆ ಎನ್ನುತ್ತ ನಿನ್ನ ಬಳಿ ಬರುತ್ತಾರೆ. ಆಗ ಇವರೆಲ್ಲರೂ ಮಂಗಗಳಾಗಲಿ ಎಂದು ಇನ್ನೊಂದು ಹರಳನ್ನು ಒಗೆ. ದೈತಿಗಳು ಮಂಗಗಳಾಗುತ್ತವೆ. ಆ ಮಂಗಗಳು ನಿನ್ನ ಬಳಿ ಬಂದು ನಮಗೆ ನಮ್ಮ ಹಿಂದಿನ ಜನ್ಮ ಕೊಡು ನಾವು ನೀನು ಹೇಳಿದಂತೆ ಕೇಳುತ್ತೇವೆಂದು ನಿನ್ನನ್ನು ಬೇಡಿಕೊಳ್ಳುತ್ತಾರೆ. ಆಗ ಅವರಿಗೆ ನಿನ್ನ ಕೆಲಸವನ್ನು ಹೇಳಿ ಒಂದು ಹರಳನ್ನು ಒಗೆ ಆಗ ಅವರು ಮತ್ತೆ ಮೊದಲಿನ ಜನ್ಮವನ್ನು ಪಡೆದು ದಯ್ತಿಯರಾಗುತ್ತಾರೆ. ಮುಂದೆ ನೀನು ಏನು ಮಾಡಬೇಕೆಂಬುದನ್ನು ಅವರೇ ಹೇಳಿ ಕೊಡುತ್ತಾರೆ" ಎಂದನು. ಕಿರಿತಮ್ಮನು ಮುಂದಿನ ದಾರಿ ಹಿಡಿದು ನಡೆದನು. ಅಲ್ಲಿ ಒಂದು ಕೆರೆ ಕಂಡಿತು. ಋಷಿಯು ಕೊಟ್ಟ ಒಂದು ಹರಳನ್ನು ಒಗೆದನು. ಕೆರೆ ಬಾಯಿ ತೆಗೆಯಿತು. ಕೆರೆಯೊಳಗಿಂದ ನೂರಾ ಒಂದು ಜನ ದೈತಿಯರು ಹೊರಬಂದರು.

'ಇವನನ್ನು ನಾನು ತಿನ್ನುತ್ತೇನೆ' ಎನ್ನುತ್ತ ಮುಂದೆ ಮುಂದೆ ಬಂದರು. ಆಗ ಕಿರಿತಮ್ಮನು ನೀವೆಲ್ಲ ಮಂಗಗಳಾಗಿರಿ ಎನ್ನುತ್ತ ಒಂದು ಹರಳನ್ನು ಒಗೆದನು. ದೈತಿಯರೆಲ್ಲರೂ ಮಂಗಗಳಾದವು. ಅವು ಕಿರಿತಮ್ಮನ ಬಳಿ ಬಂದು "ನೀನು ಹೇಳಿದ ಕೆಲಸ ಮಾಡಿಕೊಡುತ್ತೇವೆ. ನಮ್ಮ ಈ ಮಂಗನ ಜನ್ಮ ತೆಗೆದು ಹಾಕಿ[ಹೋಗಲಾಡಿಸಿ] ನಮ್ಮ ಮೊದಲಿನ ಜನ್ಮವನ್ನೇ ತಂದುಕೊಡು" ಎಂದು ಬೇಡಿಕೊಂಡವು. ಕಿರಿತಮ್ಮನು ಒಂದು ಹರಳನ್ನು ಒಗೆದನು, ಅವರೆಲ್ಲರೂ ದಯ್ತಿಯರಾದರು. ತನ್ನ ಅಪ್ಪನು ಕಂಡ ಕನಸನ್ನು ಅವರಿಗೆ ತಿಳಿಸಿದನು. ನವರತ್ನದ ಹಣ್ಣು ಮತ್ತು ಪಂಚವರ್ಣದ ಗಿಳಿಯನ್ನು ತರಲು ಏನು ಮಾಡಬೇಕು ಎಂದು ಕೇಳಿದನು. ಆಗ ದಯ್ತಿಯರು "ನೀನು ಹೀಗೆಯೆ ಮುಂದೆ ಹೋಗು. ಅಲ್ಲಿ ನಮ್ಮ ಅಣ್ಣ ಸಿಗುತ್ತಾನೆ. ಅವನು ದೂರದಿಂದ ಬರುವಾಗಲೇ ಮನುಷ್ಯರ ವಾಸನೆ ಬರುತ್ತದೆ ಎನ್ನುತ್ತ ಬರುತ್ತಾನೆ. ಅವನು ದೂರದಲ್ಲಿರುವಾಗಲೇ ಈ ಚೀಟಿಯನ್ನು ಅವನ ಮುಂದೆ ಎಸೆಯಿರಿ. ಅವನು ನಿಮ್ಮ ಮುಂದಿನ ಕೆಲಸ ತಿಳಿಸುತ್ತಾನೆ ಎಂದರು. ಕಿರಿತಮ್ಮನು ಹೊರಡುವಾಗ ದೈತಿಯರು ಅವನಿಗೆ ತಮ್ಮ ಮಗಳನ್ನು ಮದುವೆ ಮಾಡಿಕೊಟ್ಟರು. ಕಿರಿತಮ್ಮನು ಮುಂದೆ ಹೋದನು. ಅಲ್ಲಿ ದೈತಿಯರ ಅಣ್ಣ ರಾಕ್ಷಸನಾಗಿದ್ದನು. ಅವನು ಮನುಷ್ಯರ ವಾಸನೆ ಎನ್ನುತ್ತ ಓಡಿ ಬಂದನು. ಕಿರಿತಮ್ಮನು ದೈತಿಯರು ಕೊಟ್ಟ ಚೀಟಿಯನ್ನು ಅವರ ಅಣ್ಣನ ಮುಂದೆ ಎಸೆದನು[ಹೊತಾಕಿದನು] ರಾಕ್ಷಸನು ಆ ಚೀಟಿಯನ್ನು ಓದಿದನು. ನನ್ನ ನೂರಾಒಂದು ಜನ ತಂಗಿಯರು ಇವನನ್ನು ತಿಂದಿಲ್ಲ. ನಾನು ಯಾಕೆ ತಿನ್ನಬೇಕು ಎಂದುಕೊಂಡನು. ಅವನನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡು ತನ್ನ ಮನೆಗೆ ಕರೆದೊಯ್ದನು. ತನ್ನ ಒಬ್ಬ ಮಗಳನ್ನು ಅವನಿಗೆ ಮದುವೆ ಮಾಡಿ ಕೊಟ್ಟನು. ಅವನಿಗೆ ಮೂರು ಹರಳನ್ನು ಮಂತ್ರಿಸಿ ಕೊಟ್ಟು ಅವನು ಹೇಳಿದ್ದೇನೆಂದರೆ "ನೀನು ಈ ಮೂರು ಹರಳನ್ನು ತೆಗೆದುಕೊಂಡು ಪೂರ್ವದಿಕ್ಕಿಗೆ ಹೋಗು. ಆದರೆ ಪಶ್ಚಿಮ ದಿಕ್ಕಿಗೆ ಮಾತ್ರ ಹೋಗಬೇಡ" ಎಂದು ಹೇಳಿದನು. ಇವನು ರಾಕ್ಷಸನ ಮಾತಿನಂತೆ ಪೂರ್ವ ದಿಕ್ಕಿಗೆ ಹೋದನು. ಆಗ ಅಲ್ಲಿ ಒಂದು ಕಟ್ಟೆಯ ಮೇಲೆ ಅಯ್ದು ಜನ ದಯ್ತಿಯರು ಪಗಡೆ ಆಡುತ್ತ ಕುಳಿತಿದ್ದರು. ಆಗ ಅವನು ಒಂದು ಹರಳನ್ನು ಒಗೆದನು. ಆ ಐಯ್ದು ಜನ ದಯ್ತಿಯರು "ಇವನು ನನ್ನ ಗಂಡ, ನನ್ನ ಗಂಡ" ಎನ್ನುತ್ತ, ಮುಂದೆ ಬರುತ್ತಾರೆ. ಅವನು ನಿಮ್ಮನ್ನು ಮದುವೆಯಾಗುತ್ತೇನೆ. ಆದರೆ ನೀವು ನನಗೆ ಬೇಕಾದದ್ದನ್ನು ತಂದು ಕೊಡಬೇಕು ಎಂದನು, ಅವರು ಅಡ್ಡಿ ಇಲ್ಲ [ಆಯಿತು] ಎಂದರು. ಅವನು ತನ್ನ ಅಪ್ಪನು ಕನಸಿನಲ್ಲಿ ಬೆಳ್ಳಿ ಕಟ್ಟೆ, ಚಿನ್ನದಗಿಡ, ನವರತ್ನದ ಕಾಯಿ, ಅದನ್ನು ತಿನ್ನುತ್ತಿರುವ ಪಂಚವರ್ಣದ ಗಿಳಿಯನ್ನು ಕಂಡಿದ್ದಾನೆ. ಅವು ನನಗೆ ಬೇಕು" ಎಂದು ಅವರಿಗೆ ಹೇಳಿದನು. ಆಗ ಅವರು"ನಾವೆಲ್ಲರೂ ಮಿಂದು ಬರುತ್ತೇವೆ. ನೀನು ನಮ್ಮ ತಲೆಯನ್ನು ಒಂದೊಂದಾಗಿ ಕಡಿ. ಅವಳು

ಚಂದ ಇದ್ದಾಳೆ, ಇವಳು ಚೆಂದ ಇದ್ದಾಳೆ ಎಂದುಕೊಳ್ಳುತ್ತಾ, ನಮ್ಮ ತಲೆ ಕಡಿಯದೆ ಇರಬೇಡ" ಎಂದರು. ಅವರು ಹೇಳಿದ ಮಾತಿನಂತೆ ಕಿರಿತಮ್ಮನು ಒಬ್ಬೊಬ್ಬರಾಗಿ ಅವರ ತಲೆಯನ್ನು ಕಡಿಯುತ್ತಾನೆ. ಒಬ್ಬಳ ತಲೆಯನ್ನು ಕಡಿಯುತ್ತಾನೆ. ಆಗ ಅಲ್ಲಿ ಬೆಳ್ಳಿ ಕಟ್ಟೆ ಆಗುತ್ತದೆ. ಎರಡನೆಯವಳ ತಲೆಯನ್ನು ಕಡಿಯುತ್ತಾನೆ, ಅಲ್ಲಿ ಚಿನ್ನದ ಗಿಡ ಹುಟ್ಟುತ್ತದೆ. ಮೂರನೆಯವಳ ತಲೆಯನ್ನು ಕಡಿಯುತ್ತಾನೆ. ಚಿನ್ನದ ಗಿಡಕ್ಕೆ ನವರತ್ನದ ಕಾಯಿ ಆಗುತ್ತದೆ, ನಾಲ್ಕನೆಯವಳ ತಲೆ ಕಡಿಯುತ್ತಾನೆ. ಪಂಚವರ್ಣದ ಗಿಳಿ ಬರುತ್ತದೆ. ಐಯ್ದನೆಯವಳ ತಲೆ ಕಡಿಯುತ್ತಾನೆ. ಆಗ ತಲೆ ಕಡಿಸಿಕೊಂಡ ಅಯ್ದೂ ಜನರೂ ದೈತಿಯರಾಗುತ್ತಾರೆ.

ಆಗ ಅವರು "ನೀನು ಇವೆಲ್ಲವನ್ನೂ ಹೇಗೆ ತೆಗೆದುಕೊಂಡು ಹೋಗುವೆ? ಕೈಯಲ್ಲಿ ತೆಗೆದುಕೊಂಡು ಹೋಗಲು ಆಗುವುದಿಲ್ಲ, ಗಾಡಿಯ ಮೇಲೆಯೂ ಒಯ್ಯಲು ಆಗುವುದಿಲ್ಲ. ಏನು ಮಾಡುತ್ತೀ?" ಎಂದು ಕೇಳಿದರು. ಅವನು ಸುಮ್ಮನಾದನು. ಆಗ ಅವರೇ ಹೇಳಿದರು, "ನೀನು ಮನೆಗೆ ಹೋಗು ಅಲ್ಲಿ ನಮ್ಮನ್ನು ನೆನೆ. ನಾವು ಅಯ್ದು ಜನರೂ ನಿಮ್ಮ ಮನೆಗೆ ಬಂದು ಒಬ್ಬೊಬ್ಬರಾಗಿ ನಮ್ಮ ತಲೆ ಕೊಡುತ್ತೇವೆ. ನೀನು ನಮ್ಮ ತಲೆಯನ್ನು ಕಡಿ"ಎಂದರು, ಅವನು ಆಯಿತು[ಸರಿ] ಎಂದು ತನ್ನ ಮನೆಯ ಕಡೆ ಹೊರಟನು. ಮನೆಯ ಕಡೆ ಹೊರಟಾಗ ಅವನಿಗೆ ರಾಕ್ಷಸನ ಮಾತು ನೆನಪಾಯಿತು. ಪಶ್ಚಿಮ ದಿಕ್ಕಿಗೆ ಹೋದರೆ ಏನಾಗುತ್ತದೆ ನೋಡಿ ಬರೋಣವೆಂದು ಅತ್ತ ನಡೆದನು.

ಅಲ್ಲಿ ಎಪ್ಪತ್ತೇಳು ಹೆಡೆ [ಮಾಶೇಷ] ಮಹಾಶೇಷವಿತ್ತು. ಕಿರಿತಮ್ಮನು ಅಲ್ಲಿ ಬಗ್ಗುವುದಕ್ಕೂ ಮಹಾಶೇಷವು ಹೆಡೆ ಬಿಚ್ಚುವುದಕ್ಕೂ ಸಮಯಕ್ಕೂ ಸರಿ ಹೋಯಿತು. ಮಹಾಶೇಷವು ಅವನನ್ನು ಕಚ್ಚಿಬಿಟ್ಟಿತು. ಆಗ ಅವನು ಅಲ್ಲಿ ಬಿದ್ದು ಪುಡಿಪುಡಿಯಾದನು. ಆಗ ಪಗಡೆಯಾಡುತ್ತಿದ್ದ ದಯ್ತಿಯರ ತಲೆಯಲ್ಲಿದ್ದ ಹೂವುಗಳು ಬಾಡಿ ಹೋದವು. ಪರಿಮಳವು ನಿಂತು ಹೋಯಿತು. ಏನಾಯಿತು ಎಂಬುದನ್ನು ನೋಡಲು ಅವರು ಮಾಳಿಗೆಯಿಂದ ಕೆಳಗಿಳಿದು ಬಂದರು. ಪಶ್ಚಿಮ ದಿಕ್ಕಿಗೆ ಹೋದರು. ಅಲ್ಲಿ ಅವರ ಗಂಡನು ಪುಡಿಪುಡಿಯಾಗಿ ಬಿದ್ದಿರುವುದನ್ನು ಕಂಡರು. ಈಗೇನು ಮಾಡುವುದು ಎನ್ನುತ್ತ ಗಾಬರಿಗೊಂಡರು. ಆಗ ಮೊದಲನೆಯವಳು 'ಎಲವುಗಳನ್ನೆಲ್ಲ ಒಟ್ಟು ಗೂಡಿಸುತ್ತೇನೆ' ಎಂದಳು. ಎರಡನೆಯವಳು 'ಎಲವುಗಳನ್ನು ಕೂಡಿಸುತ್ತೇನೆ' ಎಂದಳು. ಮೂರನೆಯವಳು 'ತಾನು ದೇಹ[ಮಾಂಸ]ವನ್ನು ಕೂಡಿಸುತ್ತೇನೆ' ಎಂದಳು. ನಾಲ್ಕನೆಯವಳು 'ಚರ್ಮವನ್ನು ಕೂಡಿಸುತ್ತೇನೆ' ಎಂದಳು. ಅಯ್ದನೆಯವಳು ತಾನು 'ತನ್ನ ಅಪ್ಪ ಎಪ್ಪತ್ತೇಳು ಹೆಡೆಯ ಮಾಶೇಷನ ಹತ್ತಿರ ಹೋಗಿ ಹರಳನ್ನು ಮಂತ್ರಿಸಿಕೊಂಡು ಬಂದು ಮೂಗಿಗೆ ಮೂಸಲು ಕೊಡುತ್ತೇನೆ' ಎಂದು ಹೇಳಿದಳು. ಅಪ್ಪನ ಹತ್ತಿರ ಹೋಗಿ ಹರಳನ್ನು ಮಂತ್ರಿಸಿಕೊಂಡು ಬಂದಳು. ಅದನ್ನು ಕಿರಿತಮ್ಮನ ಮೂಗಿಗೆ ಹಿಡಿದಳು. ಆಗ ಅವನಿಗೆ ಜೀವ ಬಂದಿತು.

ಆಗ ಯಾವ ಸಂದರ್ಭದಲ್ಲಿಯೂ ಸಾವು ಬರಬಾರದೆಂದು ಕಿರಿತಮ್ಮನಿಗೆ ಒಂದು ವಿಶೇಷ ಉಂಗುರವನ್ನು ತೊಡಸಿದರು. ಅವನು ಅಲ್ಲಿಂದ ಒಂದು ದೇವಸ್ಥಾನಕ್ಕೆ ಹೋದನು. ದೇವಸ್ಥಾನದ ಎದುರು ಒಂದು ಪಟವನ್ನು ಕಂಡನು. ಪದ್ಮಾವತಿ ಸೂಳೆಯೆಂಬವಳು ಅದನ್ನು ಬರೆಯಿಸಿ ಇಟ್ಟಿದ್ದಳು. ಅದರಲ್ಲಿ ತನ್ನೊಡನೆ ಪಗಡೆ ಆಡಿ ಸೋತವರು ತನ್ನ ಕೈಕೆಳಗೆ ಕೆಲಸ ಮಾಡಬೇಕು. ತಾನು ಸೋತರೆ ಗೆದ್ದವರ ಬಳಿ ಅಡಿಯಾಳಾಗಿ ಕೆಲಸ ಮಾಡುವುದಾಗಿ ಬರೆಸಲಾಗಿತ್ತು. ಒಬ್ಬನು ಚಿನ್ನದ ಡೋಲು ಬಾರಿಸುತ್ತ ಪಟದಲ್ಲಿದ್ದ ವಿಷಯವನ್ನು ಸಾರುತ್ತಿದ್ದನು.

ಪದ್ಮಾವತಿ ಸೂಳೆ ಕಯ್ಯಲ್ಲಿ ಲೆಕ್ಕ ಮಾಡಲು ಆಗದಿರುವಷ್ಟು ದುಡ್ಡು ಇತ್ತು. ತಾನು ಒಳಗೆ ಹೋದನು. ಅವಳು ಪಗಡೆ ಆಡಲು ಕುಳಿತಳು. ರಾಜನ ಕಿರಿಮಗನು ತಾನೂ ಪಗಡೆ ಆಡಲು ಕುಳಿತನು. ಸೂಳೆಯು ತನ್ನ ಬೆಕ್ಕಿನ ತಲೆಯ ಮೇಲೆ ದೀಪ ಹಚ್ಚಿದ ಹಣತೆಯನ್ನಿಟ್ಟು ಪಗಡೆಯಾಡಲು ಕುಳಿತಳು. ಕಿರಿತಮ್ಮ ಬರುವಾಗ ತನ್ನ ಜೋಳಿಗೆಯಲ್ಲಿ ಮೂರು ಇಲಿ, ಮೂರು ಕೋಳಿ ಮೊಟ್ಟೆ ತಂದಿದ್ದನು. ಪದ್ಮಾವತಿ ಸೂಳೆ ಇನ್ನೇನು ಗೆಲ್ಲುತ್ತಾಳೆ, ಎನ್ನುವಾಗ ಕಿರಿತಮ್ಮನು ತನ್ನ ಜೋಳಿಗೆಯಲ್ಲಿದ್ದ ಮೂರು ಇಲಿಗಳನ್ನು ಮೆಲ್ಲಗೆ ಹೊರಬಿಟ್ಟನು. ಬೆಕ್ಕು ಇಲಿಗಳ ಸುಳಿವು ಪಡೆದದ್ದೇ ತಡ ತನ್ನ ತಲೆಯ ಮೇಲಿನ ದೀಪವನ್ನು ಕೆಡವಿ ಇಲಿಯನ್ನು ಹಿಡಿಯಲು ಹೊರಟಿತು. ಪದ್ಮಾವತಿ ಸೂಳೆಯ ಆಟ ಹೋಯಿತು. ಮತ್ತೆ ಅವಳು ಹಾವಿನ ತಲೆ ಮೇಲೆ ದೀಪ ಇಟ್ಟಳು. ಇವನು ಕೋಳಿಮೊಟ್ಟೆ ಬಿಟ್ಟನು. ಆಗ ಹಾವು ದೀಪ ಹೊತ್ತಾಕಿ ಮೊಟ್ಟೆಯನ್ನು ತಿನ್ನಲು ಓಡಿತು. ಇದೇ ರೀತಿ ತುಂಬಾ ಸವಾಲು ಹಾಕಿತು. ಅವನು ಎಲ್ಲಾ ಸವಾಲನ್ನೂ ಗೆಲ್ಲುತ್ತಾನೆ. ಅವಳು ಅವನ ಕೈ ಕೆಳಗೆ ಇರುತ್ತಾಳೆ. ಅವನ ಅಣ್ಣಂದಿರು ಪದ್ಮಾವತಿ ಸೂಳೆಯ ಹತ್ತಿರ ಆಡಲು ಹೋಗಿ ಸೋತು ಹೋಗಿದ್ದರು. ಅವರು ಅವಳ ಕೈ ಕೆಳಗೆ ಇದ್ದರು. ಅವರನ್ನ ಬಿಡಿಸಿಕೊಂಡು ಪದ್ಮಾವತಿ ಸೂಳೆಯನ್ನು ಮತ್ತೆ ಉಳಿದ ಹೆಂಡತಿಯರನ್ನು ಕರೆದುಕೊಂಡು ಮನೆ ದಾರಿ ಹಿಡಿಯುತ್ತಾನೆ.

ಆಗ ದಾರಿ ಮೇಲೆ ಅವನ ಅಣ್ಣಂದಿರಿಗೆ, ಪದ್ಮಾವತಿ ಸೂಳೆಗೆ ಎಲ್ಲರಿಗೂ ಬಾಯಾರಿಕೆ ಆಗುತ್ತೆ ಎಂದು ಹೇಳಿದರು. ಆಗ ಅವನು ಸಿಡಿಲು ಬಿದ್ದ ಕೆರೆಗೆ ಹೋಗುತ್ತಾನೆ. ತನ್ನ ಪಂಜಿಯನ್ನು ಹರಿದು ಕೂಡಿಸಿ ಮತ್ತೆ ಒಂದು ತಂಬಿಗೆಯನ್ನು ಅದಕ್ಕೆ ಕಟ್ಟಿ ಬಿಡುತ್ತಾನೆ ಆಗ ಹಗ್ಗ ಸ್ವಲ್ಪ ಗಿಡ್ಡಾಗಿ ಬಿಟ್ಟಿತು. ಅವನು ಸ್ವಲ್ಪ ಬಗ್ಗುತ್ತಾನೆ. ಆಗ ಅವನ ಅಣ್ಣಂದಿರು ಅವನನ್ನು ಆ ಬಾವಿಯಲ್ಲಿ ದೂಡಿ ಹಾಕಿ ಅದರ ಮೇಲೆ ಮಣ್ಣನ್ನು ಮುಚ್ಚಿ ಇಡುತ್ತಾರೆ.

ಗದ್ದೆ ಬಯಲಲ್ಲಿ ಬರುತ್ತಿರುವ ತನ್ನ ಮಕ್ಕಳನ್ನು ನೋಡಿ ಅಪ್ಪನಿಗೆ ತಾನು ಕಂಡ ಕನಸು ಮರೆತು ಹೋಗುತ್ತದೆ. ಮಕ್ಕಳು ಮನೆಗೆ ಹೋಗುತ್ತಾರೆ. ಪದ್ಮಾವತಿ ಸೂಳೆ ಕಿರಿಯವನ ಹೆಂಡತಿಯರೂ ಗದ್ದೆಯಲ್ಲಿ ನಿಂತುಕೊಳ್ಳುತ್ತಾರೆ. ತಾವು ಮನೆಗೆ ಬರುವುದಿಲ್ಲ

ಎಂದು ಹೇಳುತ್ತಾರೆ. ಕಿರಿತಮ್ಮನ ಕೈಯಲ್ಲಿ ಉಂಗುರ ಇರುತ್ತದೆ. ಸಿಡಿಲು ಬಿದ್ದ ಕೆರೆಯಲ್ಲಿ ಬಿದ್ದರೂ ಆತ ಎದ್ದು ಬರುತ್ತಾನೆ. ಅವನ ಬಟ್ಟೆ ಹರಿದು ಹೋಗಿರುತ್ತದೆ. ಗದ್ದೆ ಬಯಲಲ್ಲಿ ಬರುವಾಗ ಅವನ ಹೆಂಡತಿಯರೂ ಅವನು ಬರುವುದನ್ನು ನೋಡಿ ತಮ್ಮ ಹತ್ತಿರ ಇದ್ದ ಸೀರೆಯನ್ನು ಹರಿದು ಅವನಿಗೆ ಉಡಿಸುತ್ತಾರೆ. ಅವನು ಅವರನ್ನು ಕರೆದುಕೊಂಡು ಮನೆಗೆ ಬರುತ್ತಾನೆ. ಬಂದ ಕೂಡಲೆ ಅವನ ಅಣ್ಣಂದಿರೂ, ಅಪ್ಪಾ "ಅವನು ಯಾರದೋ ಎಂಜಲು ಬಾಳೆ ಹೆಕ್ಕೊಂಡು ತಿನ್ನುವಂತಾ ಕಜ್ಜಿ ಪುಲ್ಲಾ ಅವನನ್ನು ಮುಟ್ಟಿಸಕೊಳ್ಳಬೇಡಿ" ಹೇಳಿ ಅವನಿಗೆ ಒಡೆದ ತಾಟು ಮತ್ತು ಸ್ವಲ್ಪ ಅಕ್ಕಿ ಕೊಟ್ಟು ಅಂಗಳದಲ್ಲಿ ನಿಲ್ಲಿಸುತ್ತಾರೆ. ಆದರೂ ಅವನು ಏನು ಹೇಳದೆ ಸುಮ್ಮನೆ ನಿಂತುಕೊಳ್ಳುತ್ತಾನೆ. ಒಂದು ದಿನ ಅಪ್ಪನ ಹತ್ತಿರ ಹೇಳುತ್ತಾನೆ. "ನಾನು ಕಜ್ಜಿ ಪುಲ್ಲಾ ಎಂಜಲು ಬಾಳೆ ತಿನ್ನುವವನು ಆದರೆ ನಿನ್ನ ಮಕ್ಕಳು ನಿನಗೆ ಸ್ವಪ್ನ ಬಿದ್ದದ್ದನ್ನು ತಂದು ಕೊಟ್ಟರಾ" ಎಂದು ಕೇಳುತ್ತಾನೆ. ಆಗ ಅವನ ಅಪ್ಪನಿಗೆ ಎಚ್ಚರಿಸಿದ ಹಾಗೆ ಆಯಿತು. ಅವನು ಮಕ್ಕಳ ಹತ್ತಿರ ಕೇಳುತ್ತಾನೆ. ಅವರು ಮಾತನಾಡುವುದಿಲ್ಲ. ಆಗ ಕಿರಿತಮ್ಮನು ಮಧ್ಯ ರಾತ್ರಿ ಎದ್ದು ಐದು ಜನ ಹೆಂಡತಿಯರನ್ನು ನೆನಪಿಸಿಕೊಳ್ಳುತ್ತಾನೆ. ಅವರೆಲ್ಲರೂ ಬರುತ್ತಾರೆ. ಒಬ್ಬೊಬ್ಬರೆ ಮಿಂದುಕೊಂಡು ಬಂದು ತಲೆ ಕೊಡುತ್ತಾರೆ. ಮೊದಲನೆಯವಳ ತಲೆ ಕಡಿದಾಗ ಬೆಳ್ಳಿ ಕಟ್ಟೆ ಆಯಿತು. ಎರಡನೆಯವಳ ತಲೆ ಕಡಿದಾಗ ಚಿನ್ನದ ಗಿಡ ಆಯಿತು. ಮೂರನೆಯವಳ ತಲೆ ಕಡಿದಾಗ ನವರತ್ನದ ಕಾಯಿ ಆಯಿತು. ನಾಲ್ಕನೆಯವಳ ತಲೆ ಕಡಿದಾಗ ಪಂಚವರ್ಣದ ಗಿಳಿ ಬರುತ್ತದೆ. ಕಾಯಿ ತಿನ್ನುತ್ತದೆ. ಐದನೆಯವಳ ತಲೆ ಕಡಿದಾಗ ಎಲ್ಲಾ ದೆವ್ವಗಳೂ ಬರುತ್ತದೆ. ಅಪ್ಪನಿಗೆ ಬೆಳಿಗ್ಗೆ ಎದ್ದ ಕೂಡಲೇ ತೋರಿಸುತ್ತಾನೆ. ನಿನಗೆ ಬಿದ್ದ ಕನಸು ಇದೆ ಅಲ್ಲವೇ ಎಂದು ಕೇಳುತ್ತಾನೆ. ಆಗ ಅಪ್ಪನು 'ಹೌದು ಎಂದು ಹೇಳ್ತಾನೆ. ಅವನಿಗೆ ಸಂತೋಷ ಆಗುತ್ತದೆ. ತಾನು ಹೊರಟಾಗಿನಿಂದ ಸ್ವಪ್ನ ಬಿದ್ದಿದ್ದನ್ನು ಮಾಡುವಲ್ಲಿವರೆಗೂ ಕತೆ ಹೇಳುತ್ತಾನೆ. ಆಗ ಅಪ್ಪನು ಅಣ್ಣಂದಿರೂ ಕೆಟ್ಟವರೂ ಎಂದು ತಿಳಿದುಕೊಂಡು ಅವರನ್ನು ಸಿಗಿದು ತೋರಣ ಮಾಡುತ್ತಾನೆ. ಮಗನನ್ನು ಸೊಸೆಯಂದಿರನ್ನೂ ಸುಖದಲ್ಲಿ ಇಡುತ್ತಾನೆ. ಎಲ್ಲರೂ ಸಂತೋಷದಿಂದ ಇರುತ್ತಾರೆ.

□□

೩೯

ಕೆಂಪು ಹರಿಗೆ ಸೊಪ್ಪು

ಒಂದು ದಿನ ಒಂದು ಅಜ್ಜಿ ಮುದುಕಿ ಮತ್ತು ಅದರ ಮೊಮ್ಮಗಳು ಅಡವಿಗೆ ಗಡ್ಡೆ ಗೆಣಸು ಹುಡುಕಲು ಹೋದರು. ಅಲ್ಲಿ ಒಂದು ರಾಜನ ಮನೆ ಆ ಮೊಮ್ಮಗಳಿಗೆ ಸಿಕ್ಕಿತು. ಅಜ್ಜಿ ಮುದುಕಿ ಮೊಮ್ಮಗಳನ್ನು ಹುಡುಕುತ್ತ ಮನೆಗೆ ಹೋದಳು. ಮೊಮ್ಮಗಳು ರಾಜನ ಮನೆ ಹೊಕ್ಕಳು. ಆ ಮನೆಗೆ ಏಳು ಉಪ್ಪರಿಗೆ ಇದ್ದಿತ್ತು. ಮನೆಯಲ್ಲಿ ಯಾರೂ ಇರಲಿಲ್ಲ. ಏಳು ಉಪ್ಪರಿಗೆ ಮೇಲೆ ಒಬ್ಬ ಕೈಕಾಲು, ಮಾತು ಬಾರದಿದ್ದ ಸಣ್ಣ ಮಾಣಿ ಇದ್ದನು. ಅಲ್ಲಿ ಒಂದು ಹಳ್ಳೆಣ್ಣೆ ಕೊಡ ಇಟ್ಟಿದ್ದರು. ಆ ಮೊಮ್ಮಗಳು ದಿನ ಒಂದೊಂದು ಉಪ್ಪರಿಗೆ ಹತ್ತಿ ನೋಡಿದಳು. ಏಳನೆ ಉಪ್ಪರಿಗೆ ಮೇಲೆ ಕೈ ಕಾಲು ಬರದಿದ್ದ ಮಾಣಿ ಮಲಗಿಕೊಂಡಿದ್ದನು. ಒಂದು ದಿವಸ ಮೊಮ್ಮಗಳು ಅವನಿಗೆ ಎಣ್ಣೆ ಹಚ್ಚಿದಳು. ಅವನಿಗೆ ಮಾತು, ಕೈ ಕಾಲು ಬಂತು ಮತ್ತು ಅವನು ದೊಡ್ಡವನಾದನು. ಬಳಿಕ ಅವಳನ್ನು ಮದುವೆಯಾದನು. ಅವಳಿಗೆ ಮಗ ಹುಟ್ಟಿದನು. ಒಂದು ದಿನ ಅವನು ಅಂಗಡಿಗೆ ಸಾಮಾನು ತರಲು ಹೋದವನು ಅಲ್ಲೆ ಪಗಡೆ ಆಟಕ್ಕೆ ಕುಳಿತನು. ಎಷ್ಟು ದಿನವಾದರೂ ಮನೆಗೆ ಬರಲಿಲ್ಲ. ಅವರ ಮನೆಯಲ್ಲಿ ಎರಡು ದೈವ ಹೊಕ್ಕಿಕೊಂಡಿದ್ದವು. ಮೊಮ್ಮಗಳು ಬಟ್ಟೆ ತೊಳೆಯಲು ಕೆರೆಗೆ ಹೋಗಿದ್ದಳು. ಆ ದೈವ ದಿನವೂ ಮಾಣಿಯನ್ನು ತೂಗುತ್ತಿತ್ತು. "ನಾನು ನಿನ್ನ ತಿನ್ನುತ್ತೇನೆ, ನನ್ನ ಅಮ್ಮ ನಿನ್ನ ಅಮ್ಮನನ್ನು ತಿನ್ನುತ್ತದೆ" ಎಂದು ಆ ಸಣ್ಣ ದೈವವು ಹೇಳುತ್ತಿತ್ತು. ಒಂದು ದಿವಸ ಆ ಹೆಂಗಸು ಬಟ್ಟೆ ಒಣಗಿಸುವಾಗ ಆ ದೈವ ಹೇಳುವುದನ್ನು ಕೇಳಿದಳು. ಹಾಗೆ ಒಂದು ದಿನ ಹೆಂಗಸು ಎರಡು ದೈವಗಳು ಉಂಡು ಕೈ ತೊಳೆಯುವಾಗ ಎರಡು ಕಲ್ಲಿನ ಬಾಗಿಲ ತೆಗೆದುಕೊಂಡು ಅವುಗಳ ಮೈಮೇಲೆ ಹಾಕಿದಳು. ಕಡೆಗೆ ಎರಡು ದೈವ ಸತ್ತು ಹೋದವು. ಮತ್ತೊಂದು ದಿವಸ ಒಂದು ಕೋಡಗವು ಬಂದು ಮನೆ ಹೊಕ್ಕಿಕೊಂಡಿತು. ಅದು ಅಡುಗೆ ಮಾಡುತ್ತಿತ್ತು. ಮಾಣಿಗೆ ಹಾಲು ಹೊಯ್ದು ಅಳಸಂದಿ ಕಾಳಿನ ಪದಾರ್ಥ ಮಾಡಿ ಬಾಯಿಗೆ ತುರುಕಿತು. ಅವನಿಗೆ ರುಚಿಸಲಿಲ್ಲ. ಕೋಡನ ಹತ್ತಿರ ಹೆಂಗಸು "ತನ್ನ ಗಂಡ ಪಗಡೆ ಆಟಕ್ಕೆ ಹೋಗಿದ್ದಾನೆ ಹೋಗಿ ಕರೆದುಕೊಂಡು ಬಾ"ಎಂದಳು. ಕೋಡ ಹೋಗಿ ಪಗಡೆ ಆಟದ ಮಧ್ಯದಲ್ಲಿ ಕುಳಿತು ಹೇತಾಕಿದಳು. ಪಗಡೆ ಆಟವನ್ನು ಬಿಟ್ಟು ಎಲ್ಲರು ಹೋದರು. ಅವರ ಗಂಡ ಮನೆಗೆ ಬಂದ. ಹೀಗೆ ಒಂದು ದಿನ ಕೋಡ ಕೆಂಬರಿಗೆ ಸಪ್ಪು ಕೊಯ್ಯಲು ಹೋದದ್ದು ತಿರುಗಿ ಮನೆಗೆ ಬರಲೇ ಇಲ್ಲ. ಗಂಡ ಹೆಂಡತಿ ಸುಖದಿಂದ ಇದ್ದರು.

□□

೬೦

ಅಚ್ಚ ಮುತ್ತೈದೆ

ಒಂದು ಊರಿನಲ್ಲಿ ಅಜ್ಜಿ–ಮೊಮ್ಮಗಳು ಇದ್ದರು. ಅಜ್ಜಿ ಪ್ರತಿ ದಿನ ಭಿಕ್ಷೆ ಬೇಡಲು ಮನೆ ಮನೆಗೆ ಹೋಗುತ್ತಿದ್ದಳು. ಅವರ ಮನೆಗೆ ಒಬ್ಬ ಭಿಕ್ಷೆ ಬೇಡಲು ಬಂದನು. ಅವನು ಮನೆಯ ಬಾಗಿಲಿಗೆ ಬಂದು“ತಂಗಿ ತಂಗಿ ಅಕ್ಕಿಯನ್ನು ಹಾಕು”ಎಂದನು. ಆಗ ಮೊಮ್ಮಗಳು “ನನ್ನ ಅಜ್ಜಿ ಬೇರೆ ಮನೆಗೆ ಬೇಡಲು ಹೋಗಿದ್ದಾಳೆ. ನಾನು ಹೇಗೆ ನಿನಗೆ ಅಕ್ಕಿ ಹಾಕಲಿ”ಎಂದು ಕೇಳಿದಳು. ಆಗ “ಅವನು ಇರುವುದರಲ್ಲೇ ಒಂದು ಮುಷ್ಟಿ ಅಕ್ಕಿ ಹಾಕು” ಎಂದನು. ನಂತರ ನಾನು ನಿನಗೆ ಹೊಸ ಸುದ್ದಿ ಹೇಳುತ್ತೇನೆ. “ನೀನು ಸತ್ತ ಗಂಡನಿಗೆ ಮದುವೆಯಾಗಿ ಅಚ್ ಮುತ್ತೈದೆ ಆಗುತ್ತೀಯಾ”ಎಂದು ಹೇಳಿದನು. ಆಗ ಅವಳು ಈ ವಿಷಯವನ್ನು ಅಜ್ಜಿಗೆ ಹೇಳಬೇಕು ಎಂದು ನೆನಪಿಟ್ಟುಕೊಂಡಳು. ಆದರೆ ಅವಳಿಗೆ ಮರೆತುಹೋಯಿತು. ಮರುದಿನ ಬೇಡುವವನು ಮತ್ತೆ ಬಂದನು. ಮತ್ತೆ ಅದೇ ರೀತಿ ಹೇಳಿದನು. ಅವಳು ಅಜ್ಜಿಯ ಹತ್ತಿರ ಹೇಳಬೇಕೆಂದು ನೆನಪಿಟ್ಟುಕೊಂಡಳು. ಆದರೆ ಅಜ್ಜಿ ಬಂದ ಕೂಡಲೇ ಮರೆತು ಹೋಗುತ್ತಿತ್ತು. ಮತ್ತೆ ಮೂರನೆಯ ದಿನ ಬಂದು ಮೊದಲಿನ ಹಾಗೇ ಹೇಳಿದನು. ಆಗ ಅವಳು ಅಜ್ಜಿ ಬಂದ ಕೂಡಲೇ ಈ ಸುದ್ದಿ ಹೇಳಬೇಕು ಎಂದು ಕೂದಲಿಗೆ ಗಂಟು ಹಾಕಿಕೊಂಡಳು. ಸ್ವಲ್ಪ ಹೊತ್ತಿನ ನಂತರ ಅಜ್ಜಿ ಬಂದಳು. ಮೊಮ್ಮಗಳ ಹತ್ತಿರ ‘ಸ್ನಾನ ಮಾಡಿಸಿಕೊಡುತ್ತೇನೆ ಬಾ’ ಎಂದಳು. ಸ್ನಾನ ಮಾಡಿಸುವಾಗ ಕೂದಲಿಗೆ ಹಾಕಿಕೊಂಡ ಗಂಟನ್ನು ನೋಡಿ “ತಂಗಿ ಯಾಕೆ ಕೂದಲಿಗೆ ಗಂಟನ್ನು ಹಾಕಿಕೊಂಡಿದ್ದೆ” ಎಂದು ಕೇಳಿದಳು. ಆಗ ಮೊಮ್ಮಗಳು “ಅಜ್ಜಿ ನಿನಗೆ ಒಂದು ಸುದ್ದಿಯನ್ನು ಹೇಳುತ್ತೇನೆ” ಎಂದಳು. ಆಗ ಅಜ್ಜಿ ಹೇಳು ಎಂದಳು. “ಒಬ್ಬ ಬೇಡುವವನು ಬಂದಿದ್ದನು. ಅವನು ನನ್ನ ಹತ್ತಿರ ಅಕ್ಕಿಯನ್ನು ಹಾಕು ಎಂದನು. ನಾನು ನಮ್ಮ ಅಜ್ಜಿ ಬೇಡಲು ಹೋಗಿದ್ದಾಳೆ. ನಾನು ಅಕ್ಕಿಯನ್ನು ಹೇಗೆ ಕೊಡಲಿ ಎಂದು ಕೇಳಿದೆ. ಆಗ ಅವನು ನಾನು ನಿನಗೆ ಹೊಸ ಸುದ್ದಿ ಹೇಳುತ್ತೇನೆ ಎಂದನು. ನಾನು ಅಕ್ಕಿಯನ್ನು ಹಾಕಿದೆನು. ಆಗ ಅವನು ನೀನು ಸತ್ತ ಗಂಡನನ್ನು ಮದುವೆಯಾಗಿ ಅಚ್ ಮುತ್ತೈದೆ ಆಗುತ್ತೀಯಾ ಎಂದು ಹೇಳಿದ” ಎಂದಳು. ಆಗ ಅವಳ ಅಜ್ಜಿ “ಹೌದಾ ತಂಗಿ ಹೀಗೆ ಹೇಳಿದನಾ ಅವನು. ಹಾಗಾದರೆ ನಾವು ಇಲ್ಲಿ ಉಳಿಯುವುದು ಬೇಡ ಬೇರೆ ಕಡೆ

ಹೋಗೋಣ" ಎಂದಳು. ಅಜ್ಜಿ ಮೊಮ್ಮಗಳು ಇಬ್ಬರು ಕಾಡಿಗೆ ಹೋದರು. ಆಗ ಅಲ್ಲಿ ಒಂದು ಮನೆ ಸಿಕ್ಕಿತ್ತು. ಅಲ್ಲಿ ಒಂದು ಬಾಳೆಹಣ್ಣಿನ ಗೊನೆ ಇತ್ತು. ಆಗ ಮೊಮ್ಮಗಳು ಅಜ್ಜಿಯ ಹತ್ತಿರ "ಅಜ್ಜಿ ನಾನು ಒಂದು ಬಾಳೆಹಣ್ಣು ತೆಗೆದುಕೊಂಡು ಬರುತ್ತೇನೆ"ಎಂದಳು. ಆಗ ಅಜ್ಜಿ ಬೇಡ ಬೇಡ ಎಂದು ಹೇಳಿದಳು. ಆದರೂ ಕೇಳದೆ ಬಾಳೆಹಣ್ಣನ್ನು ತರಲು ಹೋದಳು. ಆಗ ಒಂದು ಬಾಳೆಹಣ್ಣನ್ನು ತೆಗೆದಳು. ಮತ್ತೊಂದು ಬಾಳೆಹಣ್ಣನ್ನು ಅಜ್ಜಿಗೆ ತರಬೇಕೆಂದು ತೆಗೆಯಲು ಹೋದಳು. ಆಗ ಕಂಚಿನ ಕದ ಬಾಗಿಲ ಹಾಕಿತು. ಎಷ್ಟೇ ಮಾಡಿದರೂ ತೆಗೆಯಲು ಆಗಲಿಲ್ಲ. ಅಜ್ಜಿ ಹೊರಗೆ ಇದ್ದಳು. ಮೊಮ್ಮಗಳು ಒಳಗೆ ಇದ್ದಳು. ಅಜ್ಜಿ ಬಾಯಿ ಬಾಯಿ ಬಡಿದುಕೊಂಡು ಅತ್ತಳು. ಹಾಗೆಯೆ ಹಿಂತಿರುಗಿ ಮನೆಗೆ ಬಂದಳು. ಮೊಮ್ಮಗಳು ಇರುವಲ್ಲಿ ಒಂದು ಹೆಣ ಒಂದು ಕೊಪ್ಪರಿಗೆ ತುಂಬ ಎಣ್ಣೆ ಇತ್ತು. ಮೊಮ್ಮಗಳು ಆ ಹೆಣಕ್ಕೆ ಎಣ್ಣೆ ತಿಕ್ಕುತ್ತಾ ಕುಳಿತುಕೊಂಡಳು. ಮತ್ತೆ ಆ ಹೆಣಕ್ಕೆ ಜೀವ ಬಂದು ಎಚ್ಚರವಾಯಿತು. ಆಗ ಅವರಿಗೆ ಮದುವೆಯಾಯಿತು. ಅವಳು ಕೊನೆಗೆ ಗರ್ಭಿಣಿಯಾದಳು. ಆದರೆ ಅವನು ಮನೆಗೆ ಬರದೇ ಸೂಳೆ ಮನೆಗೆ ಹೋಗುತ್ತಿದ್ದನು. ಎರಡು ಮೂರು ದಿವಸದ ಮೇಲೆ ಮನೆಗೆ ಬರುತ್ತಿದ್ದನು. ಅವಳಿಗೆ ಒಂದು ಮಗು ಹುಟ್ಟಿತು. ಆದರೆ ಅವನಿಗೆ ಮಗು ಹುಟ್ಟಿದ್ದು ತಿಳಿಯಲಿಲ್ಲ. ಮನೆಗೆ ಬರುವುದನ್ನೇ ನಿಲ್ಲಿಸಿದನು. ಮೊಮ್ಮಗಳು ಸ್ವಲ್ಪ ದಿವಸದ ಮೇಲೆ ಬಟ್ಟೆ ತೊಳೆಯಲು ಕೆರೆಗೆ ಹೋದಳು.

ಆಗ ಒಂದು ರಾಕ್ಷಸಿ ಮತ್ತು ಮಗಳು ಬಂದರು. ರಾಕ್ಷಸಿಯ ಮಗಳ ಹತ್ತಿರ "ತಂಗಿ ಸ್ವಲ್ಪ ನನ್ನ ಮಗನನ್ನು ತೂಗು"ಎಂದಳು. ಆಗ ರಾಕ್ಷಸಿ ಹಲ್ಲನ್ನು ಮಸೆಯಲು ಹೋದಳು. ಆ ಅಜ್ಜಿಯ ಮೊಮ್ಮಗಳು ಬಟ್ಟೆಯನ್ನು ತೊಳೆಯಲು ಹೋದಳು. ಆಗ ರಾಕ್ಷಸಿಯ ಮಗಳು ತೊಟ್ಟಿಲು ತೂಗುವಾಗ ಪದ್ಯವನ್ನು ಹೇಳುತ್ತಿದ್ದಳು.

"ವೋ ವೋ ಮಾಣಿ, ಅಳಬೇಡ ಅಳಬೇಡಾ
ನನ್ನ ಅಮ್ಮ ನಿನ್ನ ಅಮ್ಮನನ್ನು ತಿನ್ನುತ್ತದೆ
ನಾನು ನಿನ್ನನ್ನು ತಿನ್ನುತ್ತೇನೆ" ಎಂದಿತು.

ಆಗ ಅದನ್ನು ಕೇಳಿಸಿಕೊಂಡು ಮಗುವಿನ ಅಮ್ಮ ಬಟ್ಟೆ ತೊಳೆಯುವುದನ್ನು ಬಿಟ್ಟು ಓಡಿ ಬಂದಳು. ಆಗ ರಾಕ್ಷಸಿ ಮಗಳ ಹತ್ತಿರ "ಏನು ಹೇಳುತ್ತಿದ್ದೆ, ಇನ್ನೊಂದು ಸಲ ಆ ಹಾಡನ್ನು ಹೇಳು ತುಂಬಾ ಚೆನ್ನಾಗಿದೆ" ಎಂದಿತು.

"ನನ್ನ ಅಮ್ಮ ನಿನ್ನನ್ನು ತಿನ್ನುತ್ತದೆ
ನಾನು ನಿನ್ನ ಮಗನನ್ನು ತಿನ್ನುತ್ತೇನೆ" ಎಂದಿತು.

ಆಗ ಅವಳಿಗೆ ಭಯವಾಯಿತು. ರಾಕ್ಷಸಿ ಅದರ ಮಗಳು ಸೇರಿಕೊಂಡು ನನ್ನ ಮಗುವನ್ನು ತಿನ್ನುತ್ತದೆ ಎಂದುಕೊಂಡು, ರಾಕ್ಷಸಿ ಮತ್ತು ಅದರ ಮಗಳನ್ನು ಒದ್ದು ಹೊರಗೆ ಹಾಕಿ ಬಾಗಿಲನ್ನು ಹಾಕಿದಳು. ಆಗ ರಾಕ್ಷಸಿ ಮತ್ತು ಅದರ ಮಗಳು ಸೇರಿ

ಬಾಗಿಲನ್ನು ತೆಗೆಯಲು ಪ್ರಯತ್ನಿಸಿದರು. ಆದರೂ ಬಾಗಿಲು ತೆಗೆಯಲಿಲ್ಲ. ಹಿಂದೆ ಹೋದರು. ಸ್ವಲ್ಪ ಸಮಯದ ನಂತರ ಅದರ ಅಜ್ಜಿ ಮಂಗನ ರೂಪದಲ್ಲಿ ಬಂದು ಬಾಗಿಲನ್ನು ಬಡಿಯಿತು. ಆದರೂ ಮೊಮ್ಮಗಳು ಬಾಗಿಲು ತೆಗೆಯಲಿಲ್ಲ. ನಾನು ನಿನ್ನ ಅಜ್ಜಿ ಬಾಗಿಲು ತೆಗಿಯೇ ಎಂದು ಹೇಳಿತು. ಆಗ ಬಾಗಿಲನ್ನು ತೆಗೆದಳು. ಅಜ್ಜಿ ಮೊಮ್ಮಗಳ ಹತ್ತಿರ ನಿನ್ನ ಗಂಡ ಸೂಳೆಯ ಮನೆಯಲ್ಲಿ ಇದ್ದಾನೆ ಎಂದು ಹೇಳಿತು. ಆಗ ಮೊಮ್ಮಗಳು ಗಂಡನಿಗೆ ಪತ್ರ ಬರೆದಳು. "ಸೂಳೆಯರ ಮನೆಯ ಎಂಜಲು ಬಾಳೆಯನ್ನು ತಿನ್ನುವವನೇ ನಿನ್ನ ಹೆಂಡತಿ ಮಕ್ಕಳ ಚಿಂತೆ ನಿನಗೆ ಇಲ್ಲವೇನು"ಎಂದು ಪತ್ರ ಬರೆದಳು. ಆ ಚೀಟಿಯನ್ನು ಮಂಗನಾದ ಅಜ್ಜಿ ಹತ್ತಿರ ಕೊಟ್ಟು ಕಳುಹಿಸಿದಳು. ಆ ಮಂಗ ಅದನ್ನು ಸೂಳೆಯ ಮನೆಯಲ್ಲಿ ಮೊಮ್ಮಗಳ ಗಂಡನಿಗೆ ಸಿಗುವ ರೀತಿಯಲ್ಲಿ ಬಿಸಾಕಿದಳು. ಆಗ ಅವನು ತೆಗೆದುಕೊಂಡನು. ನಂತರ ಅದನ್ನು ಓದಿದನು. ಸೂಳೆ ಮತ್ತು ಅವನು ಮಾತನಾಡಿಕೊಂಡರು. ಸೂಳೆ ಹೇಳಿದಳು "ನಾ ಸುಂದರವಾಗಿದ್ದರೆ ನೀನು ನನ್ನ ಕೈಕೆಳಗೆ ಇರಬೇಕು, ನಿನ್ನ ಹೆಂಡತಿ ಸುಂದರವಾಗಿದ್ದರೆ ನಾ ನಿನ್ನ ಕೈ ಕೆಳಗೆ ಇರುತ್ತೇನೆ"ಎಂದಳು. ಈ ಮಾತನ್ನು ಅಜ್ಜಿ ಮರದ ಮೇಲೆ ಕುಳಿತುಕೊಂಡು ಕೇಳುತ್ತಾ ಇದ್ದಳು.

ಮನೆಗೆ ಬಂದವಳೇ ಮೊಮ್ಮಗಳ ಹತ್ತಿರ ಹೇಳಿದಳು. ಮೊಮ್ಮಗಳು ಮತ್ತು ಅದರ ಮಗುವನ್ನು ಶಿಸ್ತಾಗಿ ಅಲಂಕಾರ ಮಾಡಿ ಉಪ್ಪರಿಗೆಯ ಮೇಲೆ ಕುಳ್ಳಿಸಿದಳು. ಅವರು ಮೇಲೆ ಹೋಗಿ ಕುಳಿತುಕೊಂಡರು. ಆಗ ಸೂಳೆಯನ್ನು ಕರೆದುಕೊಂಡು ಗಂಡ ಬಂದನು. ಆಗ ಅಜ್ಜಿ ಕಾಲನ್ನು ತೊಳೆಯಲು ನೀರನ್ನು ಕೊಟ್ಟಿತು. ಅವರು ಕಾಲನ್ನು ತೊಳೆದುಕೊಂಡು ಮನೆಗೆ ಬಂದರು. ಅದರ ಅಜ್ಜಿಯನ್ನು ನೋಡಿ ಸೂಳೆಯು ಅವನ ಹೆಂಡತಿ ಎಂದು ತಿಳಿದುಕೊಂಡು ನಗಲು ಸುರು ಮಾಡಿದಳು. ಆಗ ಅವನ ಮುಖ ಸಪ್ಪೆಯಾಗಿ ಹೋಯಿತು. ನನ್ನ ಹೆಂಡತಿ ಈ ರೀತಿಯಾಗಿ ಹೋಗಿದ್ದಾಳೆ ಎಂದುಕೊಂಡನು. ಅಜ್ಜಿ ಬಾಳೆ ಹಾಕಿ ಊಟ ಬಡಿಸಿ ಅವರನ್ನು ಊಟಕ್ಕೆ ಕರೆದಳು. ಎಲ್ಲರೂ ಊಟಕ್ಕೆ ಕುಳಿತರು. ಆಗ ಅದರ ಅಜ್ಜಿ "ತಂಗಿ ತಂಗಿ ಗೆಜ್ಜೆಕಾಲಿನ ಮಗನನ್ನು ಕರೆದುಕೊಂಡು ತುಪ್ಪದ ಬಟ್ಟಲನ್ನು ತೆಗೆದುಕೊಂಡು ಕೆಳಗೆ ಇಳಿದು ಬಾ"ಎಂದಳು. ಆಗ ಅವಳು ಕೆಳಗೆ ಇಳಿದು ಬಂದಳು. ಆಗ ಅವಳ ಗಂಡನಿಗೆ ಸಂತೋಷವಾಗುತ್ತದೆ. ಆಗ ಸೂಳೆಗೆ ಮುಖ ಸಪ್ಪೆ ಆಗಿ ಹೋಯಿತು. ಆಗ ಸೂಳೆ ಅವರ ಕೈಕೆಳಗೆ ಕೆಲಸ ಮಾಡಿಕೊಂಡು ಉಳಿದಳು.

□□

೬೧

ಸನ್ಯಾಸಿಯ ಕತೆ

ಒಂದು ಊರಿನಲ್ಲಿ ಮೂರು ಜನ ಅಣ್ಣ-ತಮ್ಮಂದಿರು ಇದ್ದರು. ಅವರ ಅಪ್ಪ ಸತ್ತು ಹೋಗಿದ್ದನು. ಆಗ ಅವರು ಏನಾದರೂ ಉದ್ಯೋಗ ಮಾಡಬೇಕು ಎಂದು ಮನೆಯಲ್ಲಿ ಇರುವ ಹಳೆ ತಾಳೆ ಗರಿಯನ್ನು ತೆಗೆದರು. ಅದರ ಮೇಲೆ ಬರೆದುಕೊಂಡಿರುವುದನ್ನು ನೋಡಿದರು. ಅದರಲ್ಲಿ ಮೊಗೆಕಾಯಿ ಎಂದು ಬರೆದುಕೊಂಡಿತ್ತು. ಅದರಂತೆಯೇ ಆ ಮೂರು ಜನ ಸೇರಿಕೊಂಡು ಮೊಗೆ ಬೀಜವನ್ನು ನೆಡಲು ಮನೆಯ ಹತ್ತಿರ ಇರುವ ಹಿತ್ತಲಿನಲ್ಲಿ ಜಾಗವನ್ನು ಗುರುತು ಮಾಡಿದರು. ನಂತರ ಬೀಜವನ್ನು ಬಿತ್ತಲು ಸುರುಮಾಡಿದರು. ಸಸಿ ಹುಟ್ಟಿತು. ಅದಕ್ಕೆ ಚೆನ್ನಾಗಿ ಗೊಬ್ಬರವನ್ನು ಹಾಕಿದರು. ಮೊಗೆಕಾಯಿ ಆಯಿತು. ಮೊಗೆಕಾಯಿಯನ್ನು ಕೊಯ್ಯಲು ಮೂರು ಜನ ಅಣ್ಣ-ತಮ್ಮಂದಿರು ಮೊಗೆ ಹಕ್ಕಲಿಗೆ ಹೋದರು.

ಅದೇ ಸಮಯದಲ್ಲಿ ಒಬ್ಬ ಸಾಧು ಬಂದನು. ಅವನು ಕಳ್ಳ ಸಾಧು ಆಗಿದ್ದನು. ಅವನಿಗೆ ಮಾಯ ಮಂತ್ರವೆಲ್ಲ ತಿಳಿದಿತ್ತು. ಅವನು ಅವರ ಹತ್ತಿರ ನನಗೊಂದು ಮೊಗೆಕಾಯಿಯನ್ನು ಕೊಡು ಎಂದು ಕೇಳಿದನು. ಆಗ ಹಿರಿಯವನು ನಮ್ಮ ಮನೆಗೆ ಹೋಗು ನಮ್ಮ ತಾಯಿಯ ಹತ್ತಿರ ಮೊಗೆಕಾಯಿ ಕೊಡಲು ಹೇಳಿ ಎಂದರು. ಆಗ ಆ ಸಾಧು "ನನಗೆ ಕೇಳಲು ಮರ್ಯಾದೆಯಾಗುತ್ತದೆ. ನೀವೇ ಇಲ್ಲಿಂದ ಕೂಗಿ ಹೇಳಿ" ಎಂದನು. ಆಗ ಅವನು ತಾಯಿಯನ್ನು ಕರೆದು "ಈ ಸಾಧುವಿಗೆ ಒಂದು ಮೊಗೆ ಹಣ್ಣನ್ನು ಕೊಡು"ಎಂದು ಕರೆದು ಹೇಳಿದನು. ಅವನ ತಾಯಿಗೆ ಕಿವಿ ಸರಿಯಾಗಿ ಕೇಳಿಸುತ್ತಿರಲಿಲ್ಲ. ಅವಳಿಗೆ ಕಿರಿಸೊಸೆಯನ್ನು ಕೊಡು ಎಂದು ಕೇಳಿದ ಹಾಗೆ ಆಗುತ್ತದೆ. ಸೊಸೆಗೆ ತಲೆಯನ್ನು ಬಾಚಿ ಸಿಂಗಾರ ಮಾಡಿ ಅಳುತ್ತಾ ಆ ಸಾಧುವಿಗೆ ಕೊಟ್ಟಳು. ಆ ಸಾಧು ಅವಳನ್ನು ಕರೆದುಕೊಂಡು ಬಂದನು. ದಾರಿಯ ಮೇಲೆ ಬರುವಾಗ ಇವರು ಕಾಣುತ್ತಾರೆಂದು ಆ ಸೊಸೆಯನ್ನು ಒಂದು ನಾಯಿ ಮರಿಯನ್ನಾಗಿ ಮಾಡಿ ತೆಗೆದುಕೊಂಡು ಹೋದನು.

ಈ ಮೂರು ಜನ ಅಣ್ಣ ತಮ್ಮಂದಿರು ಆ ನಾಯಿಯನ್ನು ನೋಡಿದರು. ಆ ನಾಯಿಯನ್ನು ನಮಗೆ ಕೊಡು ಎಂದರು. ನಿನಗೆ ಬಹಳ ಮೊಗೆಕಾಯಿಯನ್ನು ಕೊಡುತ್ತೇವೆ. ಆದರೂ ಸಾಧು ನಾಯಿಯನ್ನು ಕೊಡಲಿಲ್ಲ.

ಕೊನೆಗೆ ಮೂರು ಜನ ಅಣ್ಣ ತಮ್ಮ ಮನೆಗೆ ಬಂದರು. ಅವರಿಗೆ ನಡೆದ ಸಂಗತಿ ತಿಳಿಯಿತು. ಮೂರು ಜನ ಕೂಡಲೇ ಹೊರಟರು.

ಕೊನೆಗೆ ಮೂರು ಜನ ಮೂರು ದಾರಿ ಕೂಡುವ ಕಡೆ ಆ ಸಾಧುವನ್ನು ಕಂಡರು. ಈ ಮೂವರನ್ನು ಸಾಧುವು ಮೂರು ಬಂಡೆ ಕಲ್ಲಾಗಿ ಮಾಡಿದನು. ಇದನ್ನು ಆ ನಾಯಿ ನೋಡಿತು. ಅದಕ್ಕೆ ಇವರು ಯಾರು ಎಂದು ತಿಳಿಯಿತು.

ನಾಯಿ ಸನ್ಯಾಸಿ ಮುಂದೆ ಹೋದರು. ಮನೆಯಲ್ಲಿ ಅಮ್ಮ ಮಕ್ಕಳು ಬರಲಿಲ್ಲ ಎಂದು ಅಳುತ್ತಾ ಸತ್ತು ಹೋದಳು. ಸೊಸೆಯು ಸತ್ತು ಹೋದಳು. ಹಿರಿ ಸೊಸೆ ಮಾತ್ರ ಉಳಿದಳು. ಅವಳು ಗರ್ಭಿಣಿಯಾಗಿದ್ದಳು. ಅವಳಿಗೆ ಹೆರಿಗೆಯಾಗಿ ಒಂದು ಗಂಡು ಮಗು ಹುಟ್ಟಿತು. ಹುಟ್ಟಿದ ಕೂಡಲೇ ಅದಕ್ಕೆ ಅಶರೀರವಾಣಿ ಕೇಳಿಸಿತು. "ನೀನು ನೀರನ್ನು ಕಾಯಿಸು ಮಗನಿಗೆ ಸ್ನಾನ ಮಾಡಲು ಹೇಳು. ಆಗ ಅವನು ಹತ್ತು ವರ್ಷದ ಮಗನಾಗಿ ಬಂದು ಸ್ನಾನ ಮಾಡಿ ಹೋಗುತ್ತಾನೆ" ಎಂದಿತು. ನೀರನ್ನು ಕಾಯಿಸಿ ಮಗನನ್ನು ಕರೆದಳು. ಅವನು ಓಡುತ್ತಾ ಬಂದನು. ಸ್ನಾನ ಮಾಡಿದನು. ಆಗ ಅವನು "ಅಮ್ಮಾ ಅಪ್ಪ ಎಲ್ಲಿಗೆ ಹೋಗಿದ್ದಾನೆಂದು ಹೇಳು" ಎಂದು ಕೇಳಿದನು. ಅಮ್ಮ ಅಳುತ್ತಾ ನಡೆದ ಸಂಗತಿಯನ್ನು ಹೇಳಿದಳು. ಅದನ್ನು ಕೇಳಿದ ಕೂಡಲೇ ಆ ಹತ್ತು ವರ್ಷದ ಮಗ ಹೇಳಿದ ವಿಅಮ್ಮಾ ನನಗೆ ಹನ್ನೊಂದು ವರ್ಷ ಆಗುವ ಮೊದಲೆ ಅಪ್ಪ ಮತ್ತು ಚಿಕ್ಕಪ್ಪಂದಿರು, ಚಿಕ್ಕಮ್ಮನನ್ನು ಜೀವಂತವಾಗಿ ಕರೆದುಕೊಂಡು ಬರುತ್ತೇನೆ. ನೀನು ಅಲ್ಲಿಯವರೆಗೆ ಇಲ್ಲಿಯೇ ಇರಬೇಕು"ಎಂದು ಹೇಳಿ ಹೊರಟನು.

ಇಲ್ಲಿ ಆ ಸನ್ಯಾಸಿ ನಾಯಿಯನ್ನು ತಂದು ಅದನ್ನು ಮನೆ ಮಾಳಿಗೆಯ ಮೇಲೆ ಕಟ್ಟಿ ಹಾಕಿದನು. ಅವರ ಮನೆಯ ಬುಡದಲ್ಲಿ ಒಂದು ಅಜ್ಜಿಯ ಮನೆ ಇತ್ತು. ಆ ಹುಡುಗ ಇವರ ಮನೆಗೆ ಬಂದನು. ಅವನನ್ನು ಆ ಮುದುಕಿ ನೋಡಿದಳು.

ಆಗ ಅದು "ತಮ್ಮಾ ನಿನ್ನನ್ನು ನೋಡಿದರೆ ಆ ಕೆಟ್ಟ ಸಾಧು ಬಿಡುವುದಿಲ್ಲ ನೀನು ಇಲ್ಲಿಗೆ ಯಾಕೆ ಬಂದೆ" ಎಂದು ಕೇಳಿತು. ಆಗ ಆ ಅಜ್ಜಿ ಅವನಿಗೆ ಊಟವನ್ನು ಹಾಕಿದಳು. ತಿನ್ನಲು ತಿಂಡಿಯನ್ನು ಕೊಟ್ಟಳು.

ಅಜ್ಜಿಯು "ಆ ಸಾಧುವಿನ ಹತ್ತಿರ ಇರುವ ಸುತ್ತಿಗೆ ಇದ್ದರೆ ಏನಾದರೂ ಮಾಡ ಬಹುದು. ಅದನ್ನು ನೀನು ಹೇಗಾದರೂ ತೆಗೆದುಕೊಂಡು ಬಾ" ಎಂದಳು. "ಆ ಸಾಧು ಮನೆಯಲ್ಲಿ ಇರುವಾಗ ನಾಯಿಯನ್ನು ಹೆಂಗಸನ್ನಾಗಿ ಮಾಡುತ್ತಿದ್ದನು. ಹೊರಗೆ ಹೋಗುವಾಗ ನಾಯಿಯನ್ನಾಗಿ ಮಾಡುತ್ತಿದ್ದನು. ಅವಳು ನೀರಿಗೆ ಬಂದಾಗ ಸಾಧು ಕೈಯಲ್ಲಿರುವ ಸುತ್ತಿಗೆಯನ್ನು ತೆಗೆದುಕೊಂಡು ಬಾ" ಎಂದನು.

ಅವನ ಚಿಕ್ಕಮ್ಮ ಸಾಧು ಕೈಯಲ್ಲಿದ್ದ ಸುತ್ತಿಗೆಯನ್ನು ತೆಗೆದುಕೊಂಡು ಅವನಿಗೆ ಕೊಟ್ಟಳು. ಆ ಹುಡುಗನು ಅಲ್ಲಿಂದ ಮುಂದೆ ಹೋಗುತ್ತಾನೆ. ಅಲ್ಲಿ ಒಬ್ಬ ರಾಜನಿದ್ದನು. ಅವನಿಗೆ ಒಬ್ಬ ಮಗಳಿದ್ದಳು. ಅದು ಈ ಹುಡುಗನನ್ನು ನೋಡಿ. ಅವನನ್ನೇ

ಮದುವೆಯಾಗುತ್ತೇನೆ ಎಂದು ಹಟ ಮಾಡತೊಡಗಿದಳು. ಅವನು ನೋಡಲು ಸುಂದರವಾಗಿದ್ದನು. ಅಂತೂ ಅವನನ್ನೇ ಮದುವೆಯಾದಳು.

ಮದುವೆ ಆಗಿ ಎರಡೂ ಮೂರು ದಿನ ಕಳೆಯಿತು. ಒಂದು ದಿನ ಬಾವಿಗೆ ಮುಖವನ್ನು ತೊಳೆಯಲು ಹೋದನು. ಆ ಬಾವಿಯಲ್ಲಿಯೇ ಆ ಸಾಧುವಿನ ಪ್ರಾಣ ಇರುವುದು ಕಂಡು ಬಂದಿತು. ಆಗ ಅವನು ತನ್ನ ಉಂಗುರ ಬಿದ್ದು ಹೋಗಿದೆ ಎಂದು ಹೇಳಿದನು. ಆ ರಾಜನು ದೇವಲೋಕದಿಂದ ಆನೆಯನ್ನು ಕರೆಸಿ ಬಾವಿಯ ನೀರನ್ನೆಲ್ಲಾ ಆರಿಸಿದ. ನಂತರ ಇವನು ಬಾವಿಯಲ್ಲಿ ಇಳಿದನು. ಅಲ್ಲಿ ಒಂದು ಗಿಳಿಯು ಇತ್ತು. ಅದನ್ನು ಸುಮ್ಮನೆ ತೆಗೆದುಕೊಂಡು ತನ್ನ ಉಂಗುರ ಸಿಕ್ಕಿತು ಎಂದನು.

ಮೇಲೆ ಬಂದವನೇ ಇನ್ನು ಎರಡು ಮೂರು ವರ್ಷದ ಮೇಲೆ ಬಂದು ಹೆಂಡತಿಯನ್ನು ಕರೆದುಕೊಂಡು ಹೋಗುತ್ತೇನೆ ಎಂದನು. ಹೋದವನೇ ಸುತ್ತಿಗೆಯಿಂದ ಆ ಕುನ್ನಿಯ ಮೇಲೆ ಮೂರು ಸುತ್ತು ಎಡಕ್ಕೆ ತಿರುಗಿಸಿದನು. ಆಗ ಅದು ಹೆಂಗಸು ಆಯಿತು. ಅವಳನ್ನು ಕರೆದುಕೊಂಡು ಬರುವಾಗ ಆ ಸಾಧು ದೂರದಿಂದ ಕೂಗುತ್ತಾ ಬಂದನು. ಆಗ ಹುಡುಗನು ತನ್ನ ಕೈಯಲ್ಲಿದ್ದ ಗಿಳಿಯ ಒಂದು ಕಾಲನ್ನು ಮುರಿದನು. ಆಗ ಸಾಧುವಿನ ಕಾಲು ಮುರಿದು ಬಿತ್ತು. ನಂತರ ಗಿಳಿಯ ಕುತ್ತಿಗೆಯನ್ನು ಮುರಿದನು. ಆಗ ಸಾಧುವಿನ ಕುತ್ತಿಗೆ ಮುರಿದು ಬಿತ್ತು. ಆ ಸಾಧು ಸತ್ತು ಹೋದ. ಹಾಗೆ ಮುಂದೆ ಹೋದ ಅಲ್ಲಿ ಮೂರು ಜನ ಅಣ್ಣ ತಮ್ಮಂದಿರು ಕಲ್ಲಾಗಿ ನಿಂತಿರುವುದನ್ನು ನೋಡಿದನು. ಅವರಿಗೆ ಸುತ್ತಿಗೆಯಿಂದ ಮೂರು ಸುತ್ತು ತಿರುಗಿಸಿದ. ಅವರು ಮನುಷ್ಯರಾದರು. ಅವರನ್ನೆಲ್ಲ ಕರೆದುಕೊಂಡು ಮನೆಗೆ ಬಂದನು. ಆ ಹುಡುಗ ತನ್ನ ತಾಯಿಗೆ ಕೊಟ್ಟ ಮಾತು ಮುಗಿದಿತ್ತು. ಎಲ್ಲರಿಗೂ ಸಂತೋಷವಾಯಿತು. ಆಗ ಆ ಹುಡುಗ ತನ್ನ ನಿಜರೂಪವನ್ನು ತೋರಿಸಿದನು. ಅವನು ದೇವರಾಗಿದ್ದನು. ಅವರಿಗೆಲ್ಲ ವರವನ್ನು ಕೊಟ್ಟು ತಾನು ಮಾಯವಾಗಿ ಹೋದನು.

□□

೬೨

ಬಿದಿರ ಚದುರೆ

ಒಂದು ಊರಿನಲ್ಲಿ ಒಬ್ಬ ಪ್ರಧಾನಿ ಇದ್ದನು. ಅವನಿಗೆ ಮೂರು ಜನ ಗಂಡುಮಕ್ಕಳು ಇದ್ದರು. ಇಬ್ಬರಿಗೆ ಮದುವೆಯಾಗಿತ್ತು. ಕಿರಿಮಗನಿಗೆ ಮದುವೆ ಆಗಿರಲಿಲ್ಲ. ಪ್ರಧಾನಿ ತನ್ನ ಕಿರಿಮಗನಿಗೆ ಚಿನ್ನ ಮತ್ತು ಮುತ್ತನ್ನು ಕೊಟ್ಟು ಒಂದು ಮುತ್ತಿನ ಚೆಂಡನ್ನು ಮಾಡಿಸಿ ಕೊಟ್ಟಿದ್ದನು. ಪ್ರಧಾನಿಗೆ ತುಂಬಾ ವಯಸ್ಸಾಗಿತ್ತು. ಪ್ರಧಾನಿ ಸತ್ತು ಹೋದನು. ಅವರೆಲ್ಲ ಸೇರಿ ಅವನ ತಿಥಿಯನ್ನು ಮಾಡಿದರು. ಮೂರು ತಿಂಗಳು ಕಳೆಯಿತು. ಕಿರಿಮಗ ಪ್ರತಿ ದಿನ ಮಲಗುವಾಗ ಆ ಮುತ್ತಿನ ಚೆಂಡನ್ನು ತನ್ನ ಬಳಿಯಲ್ಲಿ ಇಟ್ಟುಕೊಂಡು ಮಲಗುತ್ತಿದ್ದನು. ಒಂದು ದಿನ ಅವನ ಅತ್ತಿಗೆಯರು ಅವನ ಮುತ್ತಿನ ಚೆಂಡನ್ನು ತೆಗೆದುಕೊಂಡುಬಿಟ್ಟರು. ಅವನು ಅತ್ತಿಗೆಯರ ಹತ್ತಿರ ಕೇಳಿದನು. ಅವರು ನಮಗೆ ಗೊತ್ತಿಲ್ಲ ಎಂದು ಬಿಟ್ಟರು. ಅವನ ಅಣ್ಣಂದಿರು ಮನೆಯಲ್ಲಿ ಇರಲಿಲ್ಲವಾಗಿದ್ದರು. ನಂತರ ಅವರು ಮನೆಗೆ ಬಂದರು. ಆಗ ಅವನು ಅಣ್ಣಂದಿರ ಹತ್ತಿರ ಹೇಳಿದನು. ಆಗ ಅವರು ತಮ್ಮ ಹೆಂಡತಿಯರ ಹತ್ತಿರ ಕೇಳಿದರು. ಅವರು ನಾವು ನೋಡಿಲ್ಲ ಎಂದರು. ಅವನ ಅತ್ತಿಗೆಯರು ಬೆದ್ರ ಚದ್ರೆ ತಂದರೆ ನಾವು ನಿನಗೆ ಮುತ್ತಿನ ಚೆಂಡನ್ನು ಕೊಡುತ್ತೇವೆ ಎಂದರು. ಒಂದು ಸಿದ್ದೆ ಅಕ್ಕಿಯನ್ನು ತೆಗೆದುಕೊಂಡು ಹೊರಟನು. ಅವನಿಗೆ ಒಂದು ಅಜ್ಜಿಯ ಮನೆ ಸಿಕ್ಕಿತು. ಅಜ್ಜಿಯ ಹತ್ತಿರ ನನಗೆ ಅನ್ನ ಹಾಕುತ್ತೀಯಾ ಎಂದು ಕೇಳಿದನು. ಆಗ ಅಜ್ಜಿ ನಾನೆ ಬೇಡಿಕೊಂಡು ಬರುತ್ತೇನೆ ನಿನಗೆ ಎಲ್ಲಿಂದ ಅನ್ನವನ್ನು ಹಾಕಲಿ ಎಂದು ಹೇಳಿದಳು. ಆಗ ಅವನು ಅಜ್ಜಿ "ನಾನು ಒಂದು ಸಿದ್ದಿ ಅಕ್ಕಿ, ಕಾಯಿ ತಂದಿದ್ದೇನೆ ಅದನ್ನೇ ಮಾಡಿ ನನಗೆ ಅನ್ನವನ್ನು ಹಾಕು" ಎಂದನು. ನಂತರ ಊಟಕ್ಕೆ ಕುಳಿತಾಗ ಅಜ್ಜಿ ಅವನ ಹತ್ತಿರ ಕೇಳಿದಳು "ತಮ್ಮಾ ತಮ್ಮಾ ಎಲ್ಲಿಗೆ ಹೋಗುತ್ತೀಯಾ? ಎಂದು ಕೇಳಿದಳು. ಆಗ ಅವನು "ನನ್ನ ಅತ್ತಿಗೆಯರು ನನ್ನ ಮುತ್ತಿನ ಚೆಂಡನ್ನು ಇಟ್ಟುಕೊಂಡಿದ್ದಾರೆ. ನಾನು ಅವರಿಗೆ ಬೆದ್ರ ಚದ್ರೆ ತಂದುಕೊಟ್ಟರೆ ಮಾತ್ರ ಅದನ್ನು ನನಗೆ ಕೊಡುತ್ತಾರೆ. ಅದಕ್ಕಾಗಿ ನಾನು ಅದನ್ನು ತರಲು ಹೋಗುತ್ತಿದ್ದೇನೆ" ಎಂದನು. ಆಗ ಅಜ್ಜಿ ಹೇಳಿದಳು ವಿಅಲ್ಲಿ ತುಂಬಾ ಜನರು ಸತ್ತು ಹೋಗಿದ್ದಾರೆ. ನಿನ್ನ ಹತ್ತಿರ ಆಗುವುದಿಲ್ಲ?" ಎಂದಳು. ಮಧ್ಯಾಹ್ನದ ಹೊತ್ತಿನಲ್ಲಿ ಹೋಗು. ಅವಳು ಮಲಗಿಕೊಂಡಿರುತ್ತಾಳೆ. ಅವಳ ಕೂದಲನ್ನು

ಹಿಡಿದು ಎಳೆಯಬೇಕು. ಅವಳು ಇಡೀ ಮೈಗೆ ಗಾಯವನ್ನು ಮಾಡುತ್ತಾಳೆ. ನೀನೇ ಗಂಡ ನಾನೇ ಹೆಂಡತಿ ಎಂದು ಹೇಳುವವರೆಗೂ ಬಿಡುವುದಿಲ್ಲ' ಎಂದು ಹೇಳಿದಳು. ಇವನು ಊಟ ಮಾಡಿಕೊಂಡು ಬೆದ್ರ ಚದ್ರೆ ತರಲು ಹೋದನು. ಅವಳ ಕೂದಲನ್ನು ಹಿಡಿದು ಎಳೆದನು. ಆಗ ಅವಳು 'ನೀನೆ ಗಂಡ ನಾನೇ ಹೆಂಡತಿ' ಎಂದಳು. ಆಗ ಅವನು ಅವಳನ್ನು ಅಲ್ಲಿ ಬಿಟ್ಟು ಊರಿಗೆ ಬಂದು ತೋಟದಲ್ಲಿ ಮಲಗಿಕೊಂಡನು. ಮಲಗಿದ ಕೂಡಲೇ ಬೆದ್ರ ಚದ್ರೆ ಅವನ ಹತ್ತಿರ ಬಂದು ಕುಳಿತುಕೊಂಡಳು. ಅವನು ಮನೆ ಆಳಿನ ಹತ್ತಿರ "ನೀನು ಉಟ್ಟ ಸೀರೆಯನ್ನು ಅವಳಿಗೆ ಉಡಿಸು. ಅವಳ ಸೀರೆ ಚಿನ್ನವನ್ನು ನೀನು ಹಾಕಿಕೊಂಡು ಬೆದ್ರ ಚದ್ರೆಯನ್ನು ಕೆರೆಯಲ್ಲಿ ದೂಡಿ ಹಾಕಿ ಬಾ" ಎಂದನು. ಆಳು ಬೆದ್ರ ಚದ್ರೆಯ ಹತ್ತಿರ ಹೋದಳು. "ಯಾರು ಸುಂದರವಾಗಿದ್ದಾರೆ ಎಂದು ನೋಡೋಣ ನನ್ನ ಸೀರೆಯನ್ನು ನೀನು ಉಟ್ಟಿಕೊ, ನಿನ್ನ ಸೀರೆ ಚಿನ್ನವನ್ನು ನಾನು ಹಾಕಿಕೊಳ್ಳುತ್ತೇನೆ" ಎಂದಳು. ಬೆದ್ರ ಚದ್ರೆ ಸೀರೆ ಚಿನ್ನವನ್ನು ಕೊಟ್ಟಳು. ಆಳು ಬೆದ್ರ ಚದ್ರೆಯನ್ನು ಕೆರೆಯಲ್ಲಿ ದೂಡಿ ಹಾಕಿದಳು. ಕಿರಿಮಗನು ಆಳನ್ನು ಕರೆದುಕೊಂಡು ಬಂದು ಅತ್ತಿಗೆಯರ ಹತ್ತಿರ "ಬೆದ್ರ ಚದ್ರಯನ್ನು ಕರೆದುಕೊಂಡು ಬಂದಿದ್ದೇನೆ, ನನ್ನ ಮುತ್ತಿನ ಚೆಂಡನ್ನು ಕೊಡಿ ಎಂದನು. ಆಗ ಅವರು ನಗಲು ಸುರುಮಾಡಿದರು. ಕೆಲಸದವಳಿಗೆ ಸೀರೆ ಉಡಿಸಿ ಚಿನ್ನವನ್ನು ಹಾಕಿ ಕರೆದುಕೊಂಡು ಬಂದು ಬೆದ್ರ ಚದ್ರೆ ಎಂದು ಹೇಳುತ್ತೀಯಾ" ಎಂದರು. ಅವನು ಊಟ ಮಾಡದೇ ಮುಚ್ಚಿ ಹಾಕಿಕೊಂಡು ಮಲಗಿದನು. ಬೆಳಗಾಗುವ ಹೊತ್ತಿಗೆ ಕೆರೆಯಲ್ಲಿ ತಾವರೆ ಹೂವಾಯಿತು. ಕಡೆಗೆ ಅವನ ಅತ್ತಿಗೆಯರು ನೋಡಿದರು. ಎಷ್ಟೆ ಪ್ರಯತ್ನಪಟ್ಟರೂ ಕೊಯ್ಯಲು ಸಾಧ್ಯವಾಗಲಿಲ್ಲ. ಅವರ ಗಂಡಂದಿರ ಹತ್ತಿರ ಕೊಯ್ದು ಕೊಡಿ ಎಂದರು. ಅವರ ಹತ್ತಿರವೂ ಕೊಯ್ಯಲು ಆಗಲಿಲ್ಲ. ಎರಡು ಮೂರು ದಿನದ ನಂತರ ಬೆದ್ರ ಚದ್ರೆಯ ಗಂಡ ಬಂದನು. ಅವನು ಕೊಯ್ದನು. ಒಳ್ಳೆಯ ಹೂವನ್ನು ಯಾಕೆ ಹಾಳು ಮಾಡುತ್ತೀರಾ?" ಎಂದು ಹೇಳಿ ಹೂವನ್ನು ನಾಗವಂದಿಗೆಯ ಮೇಲೆ ಇಟ್ಟನು. ಆಗ ಅವನ ಅತ್ತಿಗೆಯರು ಆ ಹೂವನ್ನು ಕೈಯಲ್ಲಿ ಹಿಸುಕಿ ಅದನ್ನು ಬಚ್ಚಲ ಮನೆಯ ಕಲ್ಲಿನ ಅಡಿಯಲ್ಲಿ ಹಾಕಿ ಇಟ್ಟರು. ಸ್ವಲ್ಪ ದಿನದ ನಂತರ ಅಲ್ಲಿ ಒಂದು ಕಂಚಿ ಹೂವಿನ ಗಿಡ ಆಯಿತು. ನಂತರ ಅದಕ್ಕೆ ಒಂದು ದೊಡ್ಡ ಕಂಚಿನ ಕಾಯಿ ಆಯಿತು. ಸ್ನಾನಕ್ಕೆ ಹೋದಾಗ ಕೈಯನ್ನು ಚಾಚಿದನು. ಕಂಚಿ ಕಾಯಿ ಅವನ ಕೈಯಿಗೆ ಸಿಕ್ಕಿತು. ಯಾರಿಗೂ ತೋರಿಸದೇ ಒಂದು ಪಾತ್ರೆಯಲ್ಲಿ ಹಾಕಿ ಇಟ್ಟನು. ಅದು ರಾತ್ರಿ ಆಗಿ ಬೆಳಗಾಗುವ ಹೊತ್ತಿಗೆ ಬೆದ್ರ ಚದ್ರೆ ಆಯಿತು. ಬೆದ್ರ ಚದ್ರೆಯನ್ನು ತೆಗೆದುಕೊಂಡು ಬಂದು ಅತ್ತಿಗೆಯಥ ಹತ್ತಿರ ಬೆದ್ರ ಚದ್ರೆಯನ್ನು ತಂದಿದ್ದೇನೆ. ಈಗಲಾದರೂ ಮುತ್ತಿನ ಚೆಂಡನ್ನು ಕೊಡಿ ಎಂದನು. ಅವರು ಅವನಿಗೆ ಮುತ್ತಿನ ಚೆಂಡನ್ನು ಕೊಟ್ಟರು. ನಂತರ ಎಲ್ಲರೂ ಸುಖವಾಗಿ ಉಳಿದರು.

□□

೬೩

ರಾಕ್ಷಸನ ಕತೆ

ಒಂದಾನೊಂದು ಊರಿನಲ್ಲಿ ಒಬ್ಬನಿಗೆ ಏಳು ಜನ ಮಕ್ಕಳಿದ್ದರು. ಆರು ಜನರು ಗಂಡು ಮಕ್ಕಳು, ಒಬ್ಬಳು ಹುಡುಗಿಯಾಗಿದ್ದಳು. ಅವರ ಅಪ್ಪ ಸತ್ತು ಹೋಗಿದ್ದನು. ಆ ಅಣ್ಣ-ತಮ್ಮಂದಿರು ತಮ್ಮ ಊರಿನ ಸಾಮಾನನ್ನು ತೆಗೆದುಕೊಂಡು ವ್ಯಾಪಾರಕ್ಕೆಂದು ಗುತ್ತಿಗೆ ಹೋಗುತ್ತಿದ್ದರು. ಹಾಗೆ ಒಂದು ದಿನ ಅವರು ಗುತ್ತಿಗೆ ಹೋದರು. ಅವರ ಮನೆಗೆ ಏಳು ಬಾಗಿಲು ಇದ್ದವು. ಅವರು ಗುತ್ತಿಗೆ ಹೋಗುವಾಗ ತಂಗಿಯನ್ನು ಒಳಗೆ ಬಿಟ್ಟು ಅವಳಿಗೆ ಬೇಕಾದ ಸಾಮಾನನ್ನು ಕೊಟ್ಟು ಏಳು ಬಾಗಿಲನ್ನು ಹಾಕಿ ಅದರ ಮುಂದೆ ಎರಡು ಬಾಳೆಯನ್ನು ನೆಟ್ಟು ಹೋದರು. ಅವರ ಮನೆಯಲ್ಲಿ ಒಂದು ಬೆಕ್ಕಿನ ಮರಿ ಇತ್ತು. ತಂಗಿ ಆ ಬೆಂಕಿಗೆ ಅನ್ನ ಹಾಕಿದ ಹೊರತು ತಾನು ಊಟ ಮಾಡುತ್ತಿರಲಿಲ್ಲ.

ಒಂದು ದಿನ ರಾತ್ರಿ ಬೆಕ್ಕನ್ನು ಎಷ್ಟು ಕರೆದರೂ ಬರಲಿಲ್ಲ. ಆಗ ತಂಗಿ ತಾನು ಊಟ ಮಾಡಿಕೊಂಡು ಮಲಗಿದಳು. ತಂಗಿ ಮಲಗಿದನ್ನು ನೋಡಿದ ಬೆಕ್ಕು ತನಗೆ ಅನ್ನ ಇಲ್ಲ ಎಂದು ತಿಳಿದು ಒಲೆಯ ಮೇಲೆ ಮೂತ್ರ ಮಾಡಿ ಬೆಂಕಿಯನ್ನು ನಂದಿಸಿ ಬಿಟ್ಟಿತು. ಬೆಳಿಗ್ಗೆ ಎದ್ದು ನೋಡಿದರೆ ಬೆಂಕಿ ನಂದಿಹೋಗಿತ್ತು. ಆಗ ಬೆಂಕಿಯನ್ನು ಹುಡುಕುತ್ತಾ ನಡೆದಳು. ಅಲ್ಲಿ ಒಂದು ಮನೆ ಇತ್ತು. ಅದು ರಾಕ್ಷಸನ ಮನೆ ಆಗಿತ್ತು. ರಾಕ್ಷಸನು ಗದ್ದೆಗೆ ಹೋಗಿದ್ದನು. ಅವನ ಅಮ್ಮ ನರಮನುಷ್ಯರ ರೂಪದಲ್ಲಿ ಇದ್ದಳು. ಈ ತಂಗಿಯು ಅವಳ ಹತ್ತಿರ "ನನಗೆ ಬೆಂಕಿ ಕೊಡು" ಎಂದಳು. ಆಗ ರಾಕ್ಷಸನ ಅಮ್ಮ ಹೇಳಿದಳು "ಗದ್ದೆಯಲ್ಲಿ ನನ್ನ ಮಗ ಇದ್ದಾನೆ ಅವನಿಗೆ ನಾನು ತಿನ್ನಲು ಕೊಡುತ್ತೇನೆ ಅದನ್ನು ಅವನಿಗೆ ಕೊಟ್ಟು ಬಾ" ಎಂದಳು. ಆ ತಂಗಿ "ನನಗೆ ಹೋಗಲು ಹೆದರಿಕೆ" ಎಂದಳು. ಆಗ ರಾಕ್ಷಸನ ಅಮ್ಮ "ನಮ್ಮ ಮನೆಯ ನಾಯಿಯನ್ನು ಕರೆದುಕೊಂಡು ಹೋಗು" ಎಂದಳು. ಆಯಿತು ಎಂದಳು. ಅವಳು ಮಗನಿಗೆ ಎರಡು ದೋಸೆಯನ್ನು ಕೊಟ್ಟಳು. ಅವಳು ಆ ನಾಯಿಯನ್ನು ಕರೆದುಕೊಂಡು ಹೋದಳು. ಹೋಗುವಾಗ ಆ ನಾಯಿ ಅವಳ ಹತ್ತಿರ "ಇವಳ ಮಗ ಅಂದರೆ ಗದ್ದೆಯಲ್ಲಿ ಇರುವವನು ರಾಕ್ಷಸ. ಗದ್ದೆಗೆ ಹೋದರೆ ನಮ್ಮನ್ನು ನುಂಗುತ್ತಾನೆ. ನಾವು

ಆ ದೋಸೆಯನ್ನು ತಿಂದುಕೊಂಡು ಹೋಗೋಣ. ಅವನ ಅಮ್ಮನ ಹತ್ತಿರ ಕೊಟ್ಟು ಬಂದಿದ್ದೇವೆ, ಎಂದ್ಮು ಹೇಳಿದರೆ ಆಯಿತು" ಎಂದಿತು. ಆ ತಂಗಿಯು ಅಮ್ಮನ "ಹತ್ತಿರ ದೋಸೆ ಕೊಟ್ಟು ಬಂದಿದ್ದೇವೆ ನನಗೆ ಬೆಂಕಿ ಕೊಡು" ಎಂದಿತು. ಆಗ ಅಮ್ಮ "ನಾನು ಬೆಂಕಿ ಕೊಡುತ್ತೇನೆ ಆದರೆ ನಾನು ಕೊಟ್ಟ ಹೊದ್ದಲನ್ನು ನೀನು ಹೋಗುವ ದಾರಿಯಲ್ಲಿ ಚೆಲುತ್ತಾ ಹೋಗಬೇಕು"ಎಂದಳು. ತಂಗಿಯು ಆಯಿತು ಎಂದು ಹಾಗೆಯೆ ಮಾಡಿದಳು.

ರಾಕ್ಷಸನು ಮನೆಗೆ ಬಂದನು. "ತಾಯಿಯ ಹತ್ತಿರ ನನಗೆ ಯಾಕೆ ತಿನ್ನಲು ಕೊಟ್ಟು ಕಳುಹಿಸಲಿಲ್ಲ" ಎಂದನು. ಆಗ ಅಮ್ಮ "ತಮ್ಮಾ, ನಮ್ಮ ಮನೆಯ ನಾಯಿಯ ಜೊತೆಯಲ್ಲಿ ಒಂದು ಹುಡುಗಿಯ ಹತ್ತಿರ ದೋಸೆಯನ್ನು ಕಳುಹಿಸಿದ್ದೆ ಅವಳು ನೀನು ಇರುವಲ್ಲಿಗೆ ಹೋಗಲಿಲ್ಲವೇನು" ಎಂದು ಕೇಳಿದಳು. ಅವನು ಇಲ್ಲ ಎಂದನು. ಆಗ ಅಮ್ಮ ನೀನು ಹೊದ್ದಲು ಬೀರಿದ ದಾರಿಯಲ್ಲಿಯೇ ಹೋಗು. ಅಲ್ಲಿ ನಿನಗೆ ಒಂದು ಮನೆ ಸಿಗುತ್ತದೆ ಎಂದಳು. ಅವನು ಹಾಗೆಯೇ ಮಾಡಿದನು. ಒಂದು ಮನೆ ಸಿಕ್ಕಿತು. ಮನೆ ಬಾಗಿಲಿಗೆ ಹೋಗಿ ನಿಂತುಕೊಂಡು "ಗುತ್ತಿಗೆ ಹೋದ ಅಣ್ಣ ಬಂದಿದ್ದಾನೆ ಬಾಗಿಲನ್ನು ತೆಗಿಯೇ" ಎಂದನು. ಆಗ ಬಾಳೆಗಿಡ "ಗುತ್ತಿಗೆ ಹೋದ ಅಣ್ಣಾ ಬರಲಿಲ್ಲ ಬಾಗಿಲನ್ನು ತೆಗೆಯಬೇಡ" ಎಂದಿತು. ರಾಕ್ಷಸನು ಆ ಬಾಳೆ ಗಿಡದ ಹತ್ತಿರ ಆ ಕಡೆ ಹೋಗು ಎಂದನು. ಆಗ ಬಾಳೆಗಿಡ ರಾಕ್ಷಸನ ಹತ್ತಿರ ನೀನೆ ಹೋಗು ಎಂದಿತು. ಆಗ ರಾಕ್ಷಸನಿಗೆ ಸಿಟ್ಟು ಬಂದು ಅದನ್ನು ತುಂಡು ಮಾಡಿದನು. ರಾಕ್ಷಸನು "ಗುತ್ತಿಗೆ ಹೋದ ಅಣ್ಣ ಬಂದಿದ್ದಾನೆ ಬಾಗಿಲನ್ನು ತೆಗಿಯೇ ತಂಗಿ" ಎಂದನು. ಆಗ ಬಾಳೆಮರದ ತುಂಡುಗಳು "ಗುತ್ತಿಗೆ ಹೋದ ಅಣ್ಣ ಬರಲಿಲ್ಲ ತಂಗಿ ಬಾಗಿಲನ್ನು ತೆಗಿಯಬೇಡ" ಎಂದಿತು. ಆಗ ರಾಕ್ಷಸನಿಗೆ ಸಿಟ್ಟು ಬಂದು ತನ್ನ ಒಂದು ಹಲ್ಲನ್ನು ತೆಗೆದು ಬಾಗಿಲಿಗೆ ಹೊಡೆದು ಹೋದನು.

ಗುತ್ತಿಗೆ ಹೋದ ಅಣ್ಣಂದಿರು ಬಂದರು. "ಗುತ್ತಿಗೆ ಹೋದ ಅಣ್ಣಂದಿರು ಬಂದರು ಬಾಗಿಲನ್ನು ತೆಗಿಯೇ ತಂಗಿ" ಎಂದು ಬಾಳೆ ತುಂಡುಗಳು ಕರೆದವು. ಆಗ ತಂಗಿ ಅಣ್ಣಂದಿರ ಕಾಲಿಗೆ ನೀರನ್ನು ಹಾಕಲು ನೀರನ್ನು ತೆಗೆದುಕೊಂಡು ಬಂದಳು. ಏಳನೇ ಬಾಗಿಲು ತೆಗೆಯುವಾಗ ರಾಕ್ಷಸನ ಹಲ್ಲು ಅವಳ ಹೊಟ್ಟೆಗೆ ತಾಗಿ ಸತ್ತು ಹೋದಳು. ಅಣ್ಣಂದಿರು ತುಂಬಾ ಅಳುತ್ತಿದ್ದರು. ಅವಳ ಹೆಣವನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿ ಇಟ್ಟರು. ಸುಮಾರು ವರ್ಷದ ಮೇಲೆ ಪೆಟ್ಟಿಗೆಯನ್ನು ತೆಗೆದರು. ಅದು ಚಿನ್ನದ ರಾಶಿಯಾಗಿತ್ತು. ಅವರು ಸುಖವಾಗಿ ಉಳಿದರು.

□□

ಅನುಬಂಧ

ಹಿಟ್ಟುಂಬೆ(೧ನೇ ಕತೆ ಹವ್ಯಕ ಭಾಷೆಯಲ್ಲಿ)

ವಂದೂರಿಲಿ ವಂದಬ್ಬೆ ಮಗಾಯಿದ್ದಿದ್ದೊ. ಅದ್ರ ಅಬ್ಬೆ ಮನೆಲಿ ಬಡ್ವರಾಗಿದ್ದೊ. ವಂದಿನಾ ಅಬ್ಬೆ "ತಮಾ ಅಜ್ನ ಮನೆಲಿ ಕರುಯಿಲ್ಲೆ. ವಂದನಿ ಮಜ್ಗೆ ನೀರ್ಕೊಡ್ತೆ ಕೊಟ್ಟಿಕ್ಕಿ ಬಾ" ಅಂತು. ಅಂವಾ ಮಜ್ಗೆ ನೀರ್ತೆಕ್ಕಂಡೋಗಿ ವಂದ್ಗದ್ದೆ ಬಯ್ಲಲಿಟ್ಕಂಡಿ ಉಚ್ಚಿ ಹೊಯ್ಯಲಕ್ಕುಂತ್ಕಳ್ತಿದ್ದಾ. ಆಗಾ ಹತ್ತಿಪ್ಪತ್ ಹಿಟ್ಟುಂಬೆ ಆಯ್ಕಂಡಿ ಬತ್ತೊ. ಬಂದ್ಕಂಡಿ ಅವ್ನ ಮಜ್ಗೆ ನೀರೆಲ್ಲಾ ಕೊಂಡ್ಬಿಡ್ತೊ. ಬರಿತಟ್ಟೆ ಮನೆಗ್ತೆಕ್ಕಂಡೋಗ್ತಿದ್ದಾ. ವಂದಿನಾ ಕಳತ್ತು. ಯೆರಡ್ದಿನಾ ಕಳತ್ತು. ಮೂರ್ದಿನಾ ಕಳತ್ತು. ವಂದಿನಾ ಅಂವಾ "ಅಬ್ಬೆ, ಗೆದ್ದೆ ಬಯ್ಲಲ್ಲಿ ತಟ್ಟೆಯಿಟ್ಕಂಡು ಉಚ್ಚಿ ಹೊಯ್ಯುಲೆ ಕುತ್ಗತ್ತೆ. ಅದೆಂತಾ ಕೊಂಡ್ಬಿಡ್ತೊ. ಮಜ್ಗೆ ನೀರೆ ಯಿರ್ತಿಲ್ಲೆ" ಅಂತಾ. ಆಗಾ ಅಬ್ಬೆವಿನಾಳಂಗ್ನೋಡು. ಯಾರ್ಬತ್ತೊ ನೋಡು.ಅಂತು

ಮರ್ದಿನಾ ಮಾಣಿ ಮಜ್ಗೆ ನೀರ್ತೆಕ್ಕಂಡೋಗಿ ಗೆದ್ದೆ ಬಯ್ಲಲಿಟ್ಕಂಡಿ ಉಚ್ಚಿ ಹೊಯ್ಯುಲೆಕುಂತ್ಕಂತಾ. "ನೋಡ್ತ್ನೆಯಿರ್ತಾ. ಆಗಾ ವಂದಿಟ್ಟುಂಬೆ ಮುಂದ್ಬಂತು. ಕೊಂಬ್ಲೆ. ಆಗೊಂದ್ಗುದ್ದೊಟ್ಟಾ ಹಿಟ್ಟುಂಬೆಗೆ ಹೆತ್ ಹಿಟ್ಟುಂಬೆ ಸತ್ತ್ಯೊ" ಕೇಳ್ದಾ.

"ಆ ಹಿಟ್ಟುಂಬೆ ಯಂತಾ ಅಂತು ಅಂದ್ರೆ; ಮಜ್ಗೆ ನೀರ್ಕೊಂಡೆ ಬೆನ್ಗುದ್ಸಗಂಡೆ" ಅಂತು. ಆ ಮಾಣಿ ಸಿಟ್ಬಂದಿ ಆ ಹಿಟ್ಟುಂಬೆ ತೆಕ್ಕಂಡೋಗಿ ಬಿಸಿಯೆಣ್ಣೆ ಗೊಜ್ಜುಗ್ಡಸಗಂಡಿ ಅದ್ರಲ್ಲಿ ಹೊತಾಕ್ದಾ. "ಹಿಟ್ಟುಂಬೆ ಹಿಟ್ಟುಂಬೆ ಸತ್ತ್ಯೊ ಕೇಳ್ತಾ" ಆಗಾ ಹಿಟ್ಟುಂಬೆ ಮಜ್ಗೆ ನೀರ್ಕೊಂಡೆ ಬೆನ್ಗುದ್ಸಗ್ಗಂಡೆ ಯಣ್ಣೆ ಕಿಟ್ಸಸ್ಕಂಡೆ" ಅಂತು. ಅಲ್ಲಿಂದ್ತೆಕ್ಕಂಡೋಗಿ ಬಿಸಿ ಬಿಸಿ ಗೊಡ್ಡುಗ್ಟು ನೀರಿಲಿ ಹಾಕ್ದಾ. "ಆಗಾ ಹಿಟ್ಟುಂಬೆ ಮಜ್ಗೆ ನೀರ್ಕೊಂಡೆ ಬೆನ್ಗುದ್ದಸ್ಗಂಡೆ ಯಣ್ಣೆ ಕಿಟ್ಸಸ್ಕಂಡೆ ಮಿಂದ್ಕತ್ತೆ" ಅಂತು. ಅದ್ರ ತೆಕ್ಕಂಡೋಗಿ ಉಪ್ಪಿನ ಕಾಯ್ಪಾತ್ರದಲ್ಲಾಕ್ತಾ.

"ಹಿಟ್ಟುಂಬೆ ಹಿಟ್ಟುಂಬೆ ಸತ್ತ್ಯೊ" ಕೇಳ್ತಾ. ಆಗಾ ಹಿಟ್ಟುಂಬೆ ಮಜ್ಗೆ ನೀರ್ ಕೊಂಡೆ ಬೆನ್ಗುದ್ಸಗಂಡೆ ಯಣ್ಣೆ ಕಿಟ್ಸಸ್ಕಂಡೆ ಮಿಂದ್ಕಂಡೆ ಉಪ್ಪಿನ ಕಾಯ್ತೆಗೆತೆ" ಅಂತು. ಕಡೆಗೆ ಅದರ್ನಾ ತೆಕ್ಕಂಡೋಗಿ ಬಿಸಿ ಬಿಸಿ ಗಂಜೀ ಪಾತ್ರದಲ್ಲಿ ಹಾಕ್ತಾ. "ಹಿಟ್ಟುಂಬೆ ಹಿಟ್ಟುಂಬೆ ಸತ್ತ್ಯೊ" ಕೇಳ್ತಾ. ಹಿಟ್ಟುಂಬೆ ಮಜ್ಗೆ ನೀರ್ಕೊಂಡೆ, ಬೆನ್ಗುದ್ಸಗಂಡೆ ಯಣ್ಣೆ ಕಿಟ್ಸಸ್ಕಂಡೆ, ಮಿಂದ್ಕಂಡೆ, ಉಪ್ಪನಕಾಯ್ತೆಗ್ದೆಗಂಜೀ ಉಣ್ತೆ "ಅಂತು. ಅದರ್ನಾ ತೆಕ್ಕಂಡೋಗಿ ಬೊಂಡೊಯ್ಗೆಲಿ ಹೊತಾಕ್ತಾ. ವಿಹಿಟ್ಟುಂಬೆ ಹಿಟ್ಟುಂಬೆ ಸತ್ತ್ಯೊಕೇಳ್ತಾ" ಹಿಟ್ಟುಂಬೆ ಮಜ್ಗೆ ನೀರ್ಕೊಂಡೆ, ಬೆನ್ಗುದ್ಸಗಂಡೆ, ಯೆಣ್ಣೆಕಿಟ್ಸಕ್ಕಂಡೆ, "ಮಿಂದ್ಕಂಡ್ದೆ ಉಪ್ಪನಕಾಯ್ತೆಗ್ದೆ

ಗಂಜಿ ಉಂಡೆ. ಯೀಗಾ ಹೊಡಿಯಾಟಾ ಆಡ್ತೆ" ಅಂತು. ಹಿಟ್ಟುಂಬೆ ತೆಕ್ಕಂಡೋಗಿ ಸಮುದ್ರದಲ್ಲಿ ಹೊತಾಕ್ತಾ. "ಹೊತಾಯ್ಕಂಡಿ ಹಿಟ್ಟುಂಬೆ ಹಿಟ್ಟುಂಬೆ ಸತ್ಯೊ" ಕೇಳ್ತಾ. ಮಜ್ಜೆ ನೀರ್ ಕೊಂಡೆ ಬೆಸ್ಗುದ್ಸಗಂಡೆ ಯೆಣ್ಣೆ ಕಿಟ್ಸಗಂಡೆ, ಮಿಂದ್ಕಂಡೆ. ಉಪ್ಪಿನ ಕಾಯ್ತೆಗ್ದೆ. ಗಂಜೀ ಉಂಡೆ ಹೊಡಿಯಾಟಾ ಆಡ್ದೆ. "ಯೀಗಾ ಸಮುದ್ರಾ ಮೀಯ್ತೆ ಅಂಬು" ಅದರ್‍ನಾ ತೆಕ್ಕಂಡೋಗಿ ಬೆಂಕಿಲಾಕ್ತಾ. ಹಿಟ್ಟುಂಬೆ ಹಿಟ್ಟುಂಬೆ ಸತ್ಯೊ" ಕೇಳ್ತಾ. ಮಜ್ಜೆ ನೀರ್ಕೊಂಡೆ, ಬೆಸ್ಗುದ್ಸಗಂಡೆ ಯೆಣ್ಣೆ ಕಿಟ್ಸಕಂಡೆ ಮಿಂದ್ಕಂಡೆ ಉಪ್ಪನಕಾಯ್ತೆಗ್ದೆ, "ಗಂಜೀ ಉಂಡೆ ಹೊಡಿಯಾಟಾ ಆಡ್ದೆ ಸಮುದ್ರಾ ಮಿಂದೆ ಬೆಂಕಿಲ್ಬಿದ್ಸತ್ತೆ" ಅಂಬು. ಹಾಂಗ್ಬಾ ಯೀಗ್ಸತ್ಯೊ" ಹೇಳಿಕ್ಕಿ ಕಡೆಗೆ ದಿನಾವಾ ಅಜ್ಜಿ ಮನ್ಗೋಗಿ ಮಜ್ಜೆ ನೀರ್ ಕೊಟ್ಟಿಕ್ಕಿಯಾ ಬರ್ತಿದ್ದಾ.

ಚಿತ್ರಾಟೆ ಕಾಳಣ್ಣ(ಇನೇ ಕತೆ ಹವ್ಯಕ ಭಾಷೆಯಲ್ಲಿ)

ವಂದೂರ್‍ನಲ್ಲಿ ವಂದ್ ಗವ್ಡಾಯಿದ್ದಿದ್ದಾ. ಅಂವ್ನ ಹತ್ರಾ ವಂದ್ ಯತ್ನ ಜೋಡಿದ್ದಿತ್ತು. ಯಾರೂ ನೇಗ್ಲ ಹಿಡ್ದೇಗದ್ದೆಯಾ ಆ ಯೆತ್ತು ಗೆದ್ದೆ ಹೂಡ್ತಿತ್ತು. ಅಂವಂಗೆ ಚಲೋ ಆಗ್ತಿತ್ತು. ವಂದಿನಾ ಅಂವಾ ಯೆತ್ ತೆಕ್ಕಂಡಿ ಗದ್ದೆಗೋದಾ. ಹೂಡೂಲ್ ಬಿಟ್ಟಿಕ್ಕಿ ಮನೆಗ್ ಬಂದಾ. ಅದೇ ಹೊತ್ತಿಗೆ ಅರ್‍ಸಾ ಪ್ರದಾನಿ ಅಲ್ಲಿಗೆ ತಿರ್‍ಗಾಡತ್ನ ಬಂದಿದ್ದೊ. ಅವ್ಕೊಕೆ ಆಶ್ಯಾತು. ಸುಮ್ಮಂಗೆ ಯೆತ್ ಹೊಡ್ಕೊಂಡ್ ನೆಡದ್ದೊ. ಗವ್ಡಾ ಸುಮಾರ್ ಹೊತ್ನಮೇಲೆ ಬಂದ್ ನೋಡ್ತಾ. "ಯೆತ್ತೆ ಇಲ್ಲೆ. ಅದ್ಯಾರೋವಾ ಅಂದೊ. ಯೀಗ್ ಮಾತ್ರಾ ಅರ್‍ಸಾ ಹೊಡ್ಕಂಡ್ ಹೋಯ್ದಾ". ಹೇಳಿ. ಅಂವಂಗೆ ಬಾಳ್ ಬೇಜಾರಾತು. ರಾತ್ರಿಡಿ ವರ್‍ಕ್ವೇ ಬಂದಿಲ್ಲೆ. ಅವಂಗೆ ಕಯ್ ಮುರ್‍ದಾಂಗಾತು.

"ಚಿತ್ರಾಟೆ ಕಾಳಣ್ಣಾ ವಂದ್ ಮುಕೆಲಿ ಹೊಕ್ಕಂಡಿ ವಿಗವ್ಡಾ ಗವ್ಡಾ ಯೆಂತಾ ಆತು?" ಕೇಳ್ತು. ಅಂವಾ ತಾ ಗೆದ್ದೆಲಿ ತನ್ ಯೆತ್ ಬಿಟ್ಟಿಕ್ಕಿ ಬಂದಿದ್ದೆ. ಅರ್‍ಸಾ ಪ್ರದಾನಿ ಬಂದಿದ್ವಡಾ. ಅವ್ಕೊ ಯೆತ್ನ ಜೋಡಿ ಹೊಡ್ಕಂಡ ನೆಡದ್ವಡಾ. ಹೇಳ್ತಾ. ಆಗಾ ಚಿತ್ರಾಟೆ ಕಾಳಣ್ಣಾ ಕೇಳ್ತು. "ಹೀಂಗಾತಾ? ನಾ ತತ್ತೆ ನಿನ್ ಎತ್ನಾ ಅಂತು" "ಆಂ! ನಿನ್ನತ್ರಂತೂ ಆಗ್ತು"! ಅಂದಾ ಗೌಡ. "ನೋಡು ನಾಡ್ದೀಗ್ ಬೆಳಗಪ್ಪಲ್ಲಿವರೆಗೆ ನಿನ್ ಯೆತ್ತು ಕೊಟ್ಗೆಲಿದ್ದು ಹೇಳ್ ತೆಳ್ಕೊ" ಅಂತು ಚಿತ್ರಾಟೆ ಕಾಳಣ್ಣಾ.

ಮರ್‍ದಿನಾ ರಾತ್ರೆ ಚಿತ್ರಾಟೆ ಕಾಳಣ್ಣಾ ಅರ್‍ಸ್ನ ಮನೆಗೆ ಹೊರ್‍ಟ್ತು. ದಾರಿಮೆಲ್ ಕೆಪ್ಯಣ್ಣಾ ಶಿಕ್ತು.

"ಚಿತ್ರಾಟೆ ಕಾಳಣ್ಣಾ ಚಿತ್ರಾಟೆ ಕಾಳಣ್ಣಾಯೆಲ್ಲೀಗ್ ಹೋಗ್ತೇ ಕೇಳ್ತು.

ಅರ್‍ಸ್ನ ಮನೆಗೆ ಹೋಗ್ತೇ ಗವ್ಡ್ನ ಯೆತ್ ತತ್ತೇ" ಅಂತು.

"ನಾನೂ ಬರ್‍ಲೋ" ಕೇಳ್ತು ಕೆಪ್ಯಣ್ಣಾ

"ಹೂ ನೀನೂ ಬಾ" ಅಂತು. ಚಿತ್ರಾಟೆ ಕಾಳಣಾ

ಚಿತ್ರಾಟೆ ಕಾಳಣ್ಣಾ ಕೆಪ್ಯಣ್ಣಾ ಮುಂದೋಗ್ತೊ.

ಹಿಂಗೇ ಮುಂದೋಗ್ತಿರಾಕಾರೆ ದೊಣ್ಯಣ್ಣಾ ಶಿಕ್ತು.

"ಚಿತ್ರಾಟೆ ಕಾಳಣ್ಣಾ, ಕೆಪ್ಯಣ್ಣಾ ಯೆಲ್ಲಾ ಯೆಲ್ಲೀಗ್ ಹೋಗ್ತ್ರೇ" ಕೇಳ್ತು. ದೊಣ್ಯಣ್ಣಾ

"ಅರ್ಸ್ನ ಮನೆಗೆ ಹೋಗ್ತೊ ಗವ್ನ ಯೆತ್ ತತ್ತೊ" ಅಂತು ಚಿತ್ರಾಟೆ ಕಾಳಣ್ಣಾ

"ನಾನೂ ಬರ್ಲೋ" ಕೇಳ್ತು ದೊಣ್ಣಣ್ಣಾ

"ಹೂ ನೀನೂ ಬಾ" ಅಂತು ಚಿತ್ರಾಟೆ ಕಾಳಣಾ

ಚಿತ್ರಾಟೆ ಕಾಳಣ್ಣಾ ಕೆಪ್ಯಣ್ಣಾ ದೊಣ್ಯಣ್ಣಾ ಮುಂದೋಗ್ತೊ.

ಮುಂದೋಗ್ತಿರಾಕಾರೆ ಹಾವಣ್ಣಾ ಶಿಕ್ತು.

"ಚಿತ್ರಾಟೆ ಕಾಳಣ್ಣಾ, ಕೆಪ್ಯಣ್ಣಾ ದೊಣ್ಯಣ್ಣಾ ಯೆಲ್ಲಾ ಯೆಲ್ಲೀಗ್ ಹೋಗ್ತ್ರೇ" ಕೇಳ್ತ. ಹಾವಣ್ಣಾ

"ಅರ್ಸ್ನ ಮನೆಗೆ ಹೋಗ್ತೊ ಗವ್ನ್ನ ಯೆತ್ ತತ್ತೊ" ಅಂತು ಚಿತ್ರಾಟೆ ಕಾಳಣ್ಣಾ

"ನಾನೂ ಬರ್ಲೋ" ಕೇಳ್ತು ಹಾವಣ್ಣಾ

"ಹೂ ನೀನೂ ಬಾ"ಅಂತು.

ಚಿತ್ರಾಟೆ ಕಾಳಣಾ

ಚಿತ್ರಾಟೆ ಕಾಳಣ್ಣಾ ಕೆಪ್ಯಣಾ ದೊಣ್ಯಣ್ಣಾ ಹಾವಣಾ ಮುಂದೋಗ್ತೊ.

ಹಿಂಗೇ ಮುಂದೋಗ್ತಿರಾಕಾರೆ ಹಾಂತೆಯಣ್ಣಾ ಶಿಕ್ತು.

"ಚಿತ್ರಾಟೆ ಕಾಳಣ್ಣಾ, ಕೆಪ್ಯಣ್ಣಾ ದೊಣ್ಯಣ್ಣಾ ಹಾವಣಾ ಯೆಲ್ಲಾ ಯೆಲ್ಲೀಗ್ ಹೋಗ್ತ್ರೇ" ಕೇಳ್ತು ಹಾಂತೆಯಣ್ಣಾ

"ಅರ್ಸ್ನ ಮನೆಗೆ ಹೋಗ್ತೊ ಗವ್ನ ಯೆತ್ ತತ್ತೊ" ಅಂತು ಚಿತ್ರಾಟೆ ಕಾಳಣ್ಣಾ

"ನಾನೂ ಬರ್ಲೋ" ಕೇಳ್ತು ಹಾಂತೆಯಣ್ಣಾ

"ಹೂ ನೀನೂ ಬಾ" ಅಂತು ಚಿತ್ರಾಟೆ ಕಾಳಣಾ

ಚಿತ್ರಾಟೆ ಕಾಳಣ್ಣಾ ಕೆಪ್ಯಣ್ಣಾ ದೊಣ್ಯಣ್ಣಾ ಹಾವಣಾ ಹಾಂತೆಯಣ್ಣಾ ಯೆಲ್ಲಾ ಮುಂದೋಗ್ತೊ.

"ಮುಂದೋಗ್ತಿರಾಕಾರೆ ಕಟ್ಟೆರ್ನ ಸಾರಿ ಶಿಕ್ತು. ಚಿತ್ರಾಟೆ ಕಾಳಣ್ಣಾ ಕೆಪ್ಯಣ್ಣಾ ದೊಣ್ಯಣ್ಣಾ ಹಾಂತೆಯಣ್ಣಾಯೆಲ್ಲಾ ಯೆಲ್ಲೀಗ್ ಹೋಗ್ತ್ರೇ?" ಕೇಳ್ತು ಕಟ್ಟೆರ್ನಸಾರಿ "ಅರ್ಸ್ನ ಮನೆಗೆ ಹೋಗ್ತೊ ಗವ್ನ ಯೆತ್ ತತ್ತೊ ಅಂತು ಚಿತ್ರಾಟೆಕಾಳಣ್ಣ ತಂಗೋವು ಬತ್ತೊ" ಅಂತು ಕಟ್ಟೆರ್ನ ಸಾರಿ. "ಹೂ ಬನ್ನಿ" ಅಂತು ಚಿತ್ರಾಟೆ ಕಾಳಣ್ಣಾ.. ಹೀಂಗೆಯಾ ಚಿತ್ರಾಟೆ ಕಾಳಣ್ಣಾ ಕೆಪ್ಯಣ್ಣಾ ದೊಣ್ಯಣ್ಣಾ ಹಾಂತೆಯಣ್ಣಾ ಕಟ್ಟೆರ್ನ ಸಾರಿ ಯೆಲ್ಲಾ ವಟ್‌ಗೂಡ್ಕಂಡಿ ಅರ್ಸ್ನ ಮನೆಗ್ ಹೋದ್ರೊ.

ದೊಣ್ಯಣ್ಣಾ ಕದ್ನ ಮುಕೆಲಿ, ಹೊಕ್ಕಣ್ತು. ಕೆಪ್ಯಣ್ಣಾ ವಲೆಬೂದಿಲಿ ಹೊಕ್ಕಣ್ತು. ಹಾಂತೆ ದೀಪ್ದ ಗುಡ್ನ ದ್ ಕೆಳ್ಗೆ ಕೂತ್ಗಣ್ತು.

ಕಟ್ಟೆರ್ನ ಸಾರಿ ತೆಂಗ್ನ ಮರದ್ ಕೆಳ್ಗೆ ಇದ್ಗಣ್ತು. ಚಿತ್ರಾಟೆ ಕಾಳಣ್ಣ ಅವ್ಕೊ ಗೆಲ್ಲಾವಾ ಮೊದ್ಲೇ ಯೆಂತೆಂತಾ ಮಾಡೊ ಯೆಲ್ಲಾವಾ ಹೇಳ್ಕೊಟ್ಟಿಕ್ಕಿತ್ತು.

ಅರ್ಸ್ನ ಹೆಣ್ತಿ ಕದಾ ಹಾಕೂಲೆ ಹೇಳಿ ಬಂತು. ಬಂದದ್ದೆ ತಡಾ 'ದೊಣ್ಯಣ್ಣಾ ಬಡಾ ಬಡಾ ಬಡಾ ಬಡಾ' ಬಡ್ಕತ್ತು. ಅದು ಯಿಲ್ಲಿ ಯಾರೋ ಬಂದಿಕಿದೊ. ಹೇಳಿ ದೀಪಾ ದೊಡ್ಡಾ ಮಾಡೂಲೋತು ಹಾಂತೆ ಪಟಕ್‌ನೆ ದೀಪಾ ನಂದ್ಸಾಕ್ತು. ಹಾಂಗೆಯಾ ಅರ್ಸಾ ಮಂಚ್‌ದಿಂದಾ ಕೆಳಗಿಳ್ಯೊ ನೋಡ್ದಾ.

ಕಾಲ್ ಕೆಳ್ಗೆ ಯಿಟ್ಟಿದ್ದೇ ತಡಾ. ಹಾವಣ್ಣಾ ಕಾಲ್‌ಸುತ್ತಾಯ್ಕಂಬುಡ್ತು. ಅಂವಾ ಅಯ್ಯಯ್ಯೋ ಹೇಳಿ ಕೂಗ್ದಾ. ಅಂವ್ನ ಹೆಣ್ತಿ ದೀಪಾ ಹಚ್ದಾಂಗೆ ಹಾತೆ ನಂದ್ಸ್ ನಂದ್ಸ್ ಹಾಕ್ತು. ಅಂತೂವಾ ಹೆಂಗೋ ಮಾಡ್‌ಅಂವಾ ಕಾಲಿಂದಾ ಹಾವ್ ಬಿಡಸ್ಕಂಡಾ. ಮನಿಕಂಡಾ.

ಮದ್ರಾತ್ರ್ ಗೆಟ್ಟ್ ಅಂವಂಗೆ ಉಚ್ ಹೊಯ್ಯ್ಯಾಲ್ ಬಂತು. ಯೆದ್ದಿ ಹೆರಂಗೋದಾ. ಕಟ್ಟೆರ್ನಸಾರಿಯೆಲ್ಲಾ ವಟ್‌ಗೂಡ್ಕಂಡಿ ಕಾಲ್ ಕಚ್ ಕಚ್ ತೆಗೆದ್ಬುಡ್ತು. ಹಾಂಗೆ ಕುಡಿಕತ್ತೇ ಅರ್ಸು ವಳಂಗೆ ವ್ಹೋಡ್ತ್ನೆ ಬಂದಾ. ಬಾಗ್ಲಲ್ಲಿ ದೊಣ್ಯಣ್ಣಾ ಅವ್ನ ತಲ್ ತಲೆಮೆಲ್ ಕೊಡ್ತು. ಅಂತೂ ಮಂಚಕ್ಕೋದಾ.

ಅಸ್ಟೊತ್ತಿಗೆ ಬೆಳಗುಂಜಾಮಾಗತ್ನಾ ಬಂದಿತ್ತು. ಅರ್ಸ್ನ ಹೆಣ್ತಿ ಬೆಂಕಿ ವಟ್ಟೂಲೆ ಹೇಳಿ ವಲೆ ಬಳಿಗೋತು. ಬೂದಿ ಮೊಗುಲೆ ಹೇಳಿ; ಮೊಕಾ ಕೆಳ್ಗ್ ಮಾಡ್ಕಂಡಿ ವಲೆಗ್ ಕಯ್ ಹಾಕ್ತು. ಕೆಪ್ಯಣ್ಣಾ ತಡಾ ಮಾಡಿದ್ದೇ, ಯಿಲ್ಲೆ ಬುಸಕ್ ಬುಸಕ್ನೆ ಬೂದಿ ಮೊಕಕ್ಕೆ ತೋಕ್ತು. ಕಣ್ಣೀಗೆಲ್ಲಾ ಬೂದಿ ಮುಚ್ಚಿ ಕಣ್ ವಡೂಲೆ ಆಯ್ದಿಲ್ಲೆ. ಆಗಾ ರಾಜಾವಿಯೆಂತಕ್ಕೆ ಹಿಂಗೆಲ್ಲಾ ಆಪ್ಲೆ ಹಣ್ಕೋತನೊ? "ಹಿಂಗೆಲ್ಲಾ ಮಾಡ್ಡೋರು ಯಾರು"? ಹೇಳಿ ಹಲಬುಲ್ ಹಣಕ್ ಬುಟ್ಟಾ. ಆಗಾ ಚಿತ್ರಾಟೆ ಕಾಳಣ್ಣಾ ಮುಕೆಲಿದ್ದದ್ದು ದೊಡ್ಡಕ್ಕೆ ಅರ್ಸಾ ಅರ್ಸಾ ಗವ್ಡ್ನ ಮನೆಯೆತ್ತು ಬೇಕೋ? "ಈಗ ಸಾಕೋ" ಹೇಳಿ ಕೇಳ್ತು. ಆಗಾ ಅರ್ಸು ಮಾರಾಯ್ರಾ ಯೆತ್ತೂ ಬೆಡಾ ಗಿತ್ತೂ ಬೆಡಾ ಜೀಂವಾ ವಂದ್ ಯಿರ್ಸ್ ಕಂಡಿ ಯೆತ್ನ ಸಂಗ್ತಿಗೆ ನಮ್ ಕೊಟ್ಗೆದ್ ಮತ್ ನಾಕ್ ಜೋಡಿ ಬೇಕಾದ್ರೂ ಕೊಡ್ತೆ. ತೆಕಂಡೋಗಿ. "ಯಿನ್ ಮಾತ್ರ ಗವಡ್ನ ಯೆತ್ನ ಸುದ್ದೀಗ್ ಬತ್ನಿಲ್ಯ್‌ಫಾ" ಅಂದಾ. ಕೊಟ್ಗೆಗ್ ಹೋಗಿ ತನ್ ಕೊಟ್ಗೆಲಿದ್ ನಾಲ್ಕ್ ಯೆತ್ನ ಜೋಡಿ ಗವ್ಡ್ನ ಮನೆ ಯೆತ್ತು ಯೆಲ್ಲಾ ಬಿಟ್ಟಾಕ್ದಾ. ಚಿತ್ರಾಟೆ ಕಾಳಣ್ಣಾ ತನ್ ಪಂಗ್ಡಾಯೆಲ್ಲಾ ಕಟ್ಗಂಡಿ ಯೆತ್ ಹೊಡ್ಕಂಡಿ ಗವ್ಡ್ನ ಮನೆ ಕೊಟ್ಗೆಗೋತು. ಕಟ್ಟಾಕ್ತು. ಬೆಳ್ಗಾದ್ಕೂಡ್ಲೆಯಾ ಗವ್ಡ್ನ ಹೆಣ್ತಿ. "ಅತೊ ಯೆತ್ತೆಲ್ಲಾ ಬಂದಿಕಿದಕು ಹುಲ್ಲಾಕ್ರೋ" ಅಂತು. ಗವ್ಡಾ ವ್ಹೋಡೋಗ್ ನೋಡ್ತಾ. ಹವ್ದ್ ಸಂಗ್ತಿಗೆ ಚಲೋ ಚಲೋ ಮತ್ ನಾಲ್ಕು ಯತ್ನ ಜೋಡಿದ್ದು. ಅಂವಂಗೆ ಸಂತೋಶಾತು. ಯಾರಾಯಿಕ್ಕು ಯೀ ಕೆಲ್ಸಾ ಮಾಡ್ಡೋರು? ಹೇಳೀ ಹೇಳ್ತ್ನೆಯಿರಾಕಾರೆ ಚಿತ್ರಾಟೆ ಕಾಳಣ್ನ ಪಂಗ್ಡಾ ಬಂತು. ಗವ್ಡ್ಂಗೆ ಚಿತ್ರಾಟೆ ಕಾಳಣ್ನ ಕೆಲ್ಸಾ ಇದು ಹೇಳಿ ತೆಳತ್ತು. "ನಾಳೆಗ್ ನಮ್ಮನೆಗೆ ಊಟಕ್ ಬನ್ನಿ ಪಾಯ್ಸಾ ಮಾಡ್ ಬಡಸ್ತೆ" ಹೇಳ್ದಾ. ಮರ್ದಿನಾ ಯೆಲ್ಲಾ ಊಟಕ್ ಬಂದೊ.ಪಾಯ್ಸಾ ಉಂಡ್ಕಂಡಿ ಸಂತೋಶ್ದಿಂದಾ ಮನೆಗೊದೊ.

ಉಪ್ಪಿನಕಾಯಿ ಕತೆ (೪೯ನೇ ಕತೆ ಹವ್ಯಕ ಭಾಷೆಯಲ್ಲಿ)

ವಂದಲ್ಲಾ ವಂದೂರಿಲಿ ಅಬ್ಬೆ, ಮಗಾ, ಸೊಸೆಯಿದ್ದಿದ್ವಡಾ. ಆ ಅತ್ತೆ ಹೇಳೂದು ಸೊಸೆಗೆ ಹೊಡೂದು ಬಡೊದು ಬಯ್ಯೊದು ಮಾಡ್ತಿತ್ತಡಾ. ಅದ್ಕೆ ಸಮ್ನಾಗಿ ಅನ್ನಾ ಹಾಕ್ತಿಲ್ಯಡಾ. ವಂದಿನಾ ಅತ್ತೆ ಉಪ್ಪಿನ್ಕಾಯ್ ಮಾಡ್ತಡಾ. ತಾನು ತನ್ಮಗಾ ಇಬ್ರೇಯಾ ತಿಂದ್ವಡಾ. ಸೊಸೆಗೆ ವಂದ್ಚೂರುವಾ ಕೊಟ್ಟಿದ್ದಿಲ್ಯಡಾ. ವಂದಿನಾ ಸೊಸೆ ವಂದ್ ಹನಿ ಉಪ್ಪಿನ್ಕಾಯಿ ಬಾಳೆ ಮೆಲ್ ಹಾಯ್ಕಂಡಿತ್ತಡಾ. ಅತ್ತೆ ಹೇಳುದು ನೋಡ್ಕಂಡಿ ಮಗ್ನಕೆಲಿ "ಈಗಾ ನಿನ್ನೆಂಡ್ತಿಯಾ ಜೀವಂತ್ ಸುಟ್ಕಂಡಿ ಬಾ" ಹೇಳಿ ಹೇಳ್ತಡಾ. ತಾನೂ ಬತ್ತೆ ಅಂತಡಾ. ಸೊಸೆ ಸುಡುಲೆ ಸವ್ದೆ ರಾಶಿ ವಟ್ ಮಾಡ್ತಡಾ. ಸೊಸೆನಾ ಗೋಣೀ ಚೀಲ್ದಲ್ ಕಟ್ಟಿ ಸವ್ದೀರಾಶಿ ಮೇಲೆ ಮನಿಸ್ದ್ವಡಾ. ಅದ್ರೆ ಬೆಂಕಿ ಮಾಡೂಲೆ ಬೆಂಕಿ ಬಿಟ್ಟಿಕಿಯಾ ಹೋಯ್ದಾ. ಹಾಗೆಯಾ ಬೆಂಕಿ ತಪ್ಲೆ ಯಿಬ್ರೂವಾ ಹೋದ್ವಡಾ. ಆಗ ಸೊಸೆ ಎದ್ಕಂಡಿ ಗೋಣೀ ಚೀಲಾ ಬಿಡಸ್ಕಂಡಿ ಅದ್ರಲ್ಲಿ ಕಲ್ಲುಮಣ್ಣು ತುಂಬಿಕ್ಕಿಯಾ ಹೊರ್ಬಿದ್ದಿ ವೋಡ್ ನೆಡತ್ತಡಾ. ಅಲ್ಲಿ ವಂದ್ ಕಾಳಿಕಾದೇವಿ ಮನೆ ಇದ್ದಿತ್ತಡಾ. ಅದ್ರ ಹಿಂತಟಿಗೆ ಅಡಿ ಕಂಡ್ತಡಾ.

ಇಲ್ಲಿ ಅಬ್ಬೆ ಮಗಾ ಬೆಂಕಿ ತಂದಿ ಬೆಂಕಿ ಮಾಡದ್ವಡಾ. ಬೆಂಕಿ ಕೊಟ್ ಕೂಡ್ಲೆಯಾ ಪಟ್ ಪಟ್ ಹೇಳಿ ಶಬ್ದಾತಡಾ. ಆಗ ಅತ್ತೆ "ಸತ್ಯಾಸತ್ಯಾ" ಹೇಳಿ ಮತ್ತೊಂದಿಶ್ಟಾ ಬಯತ್ತಡಾ. ಕಡೆಗೆ ಅವ್ಕೊ ಮನೆಗೋದ್ವಡಾ. ಇಲ್ಲಿ ಸೊಸೆ ನಿತ್ಕಂಡಿದ್ ದೆವ್ರ ಮನೆಗೆ ನಾಕಯ್ದ್ ಜನಾ ಕಳ್ರು ಬಂದ್ವಡಾ. ಅವ್ರು ಕಾಳಿಕಾದೇವಿ ಹತ್ರಾ "ನಮ್ಗೆ ರಾಶಿ ಚಿನ್ನಾ ಸಿಕ್ಕಿದ್ದು ನಾಳೆನೂವಾ ಹೀಂಗೆ ರಾಶಿ ಸಿಕ್‌ಲಿ ನಿಂಗೆ ಸಮಾ ಪಾಲು ಕೊಡ್ತೊ" ಅಂದ್ವಡಾ. ಆಗಾ ಹಿಂತಟಗಿದ್ ಸೊಸೆ "ತತಾಸ್ತು" ಅಂತಡ. ಆಗ ಕಳ್ಳನ್‌ದಿಕ್ಕೊ ಅರ್ದಾಸಂಪತ್ತೆಲ್ಲಾವಾ ಕಾಳಿಕಾದೇವಿ ಮುಂತಟಗಿಟ್ಟಿಕ್ಕಿಯಾ ಹೋದ್ವಡಾ. ಬೆಳ್ಗಾದ್ಕೂಡ್ಲೆಯಾ ಈ ಎಲ್ಲಾ ಚಿನ್ನಾನೂವಾ ಹಾಯ್ಕಂಡಿ ಮನೆಗ್ಬಂದಿ "ಅತ್ತೆ ಅತ್ತೆ ಬಾಗ್ಲಾ ತೆಗಿ ಅಂತಡ" ಅತ್ತೆ ಬಾಗ್ಲಾ ತೆಗೆತ್ತಡಾ. ಸೊಸೆ ರಾಶಿ ಚಿನ್ನಾ ಹಾಯ್ಕಂಡಿ ಬಂದದ್ನೋಡಿ ಸಂತೋಷಾತಡ. ಹೆಗ್ತಂದೆ ಹೇಳಿ ಅತ್ತೆ ಕೇಳ್ತಡಾ. "ನಂಗೆ ದೇವ್ರು ಕೊಟ್ಟಾ" ಹೇಳಿ ಇದಂತಡ. ಅತ್ತೆಗೆ ಆಸೆ ಆಯ್ಕಂಡಿ ಮಗ್ನ ಕಯ್ಲಿ ತನ್ನೂ ಸುಟ್ಟಿಕ್ಕಿ ಬಾ ಅಂತಡ. ಹಾಗೆಯಾ ಗಂಡಾ ಹೆಂಡ್ತಿ ಕೂಡಿ ಸವ್ದೆ ವಟ್ ಹಾಕಿ ಅಬ್ಬೆ ಮನಸಿದ್ವಡಾ. ಈ ಸರ್ತಿ ಬೆಂಕಿ ತೆಂಕಡೋಪ್ಲೆ ಮರ್ತಿದ್ದಿಲ್ಯಡಾ. ನಂತ್ರಾ ಬೆಂಕಿ ಕೊಟ್ಟಿ ಅಬ್ಬೆ ಸುಟ್ಟಿಕ್ಕಿಯಾ ಮನೆಗ್ಬಂದ್ವಡಾ. ಅಬ್ಬೆ ಸತ್ತೋದ್ಮೆಲೆ ಗಂಡಾ ಹೆಂಡ್ತಿ ಸುಕ್ವಾಗಿದ್ವಡಾ.

ಮಲ್ಮಗ್ಳು (೫೦ನೇ ಕತೆ ಹವ್ಯಕ ಭಾಷೆಯಲ್ಲಿ)

ವಂದೂರಿಲಿ ವಂದ್ ಕೂಸು ಇದ್ದಿತ್ತು. ಅದ್ಕೆ ಅಪ್ಪ ಅಬ್ಬೆ ಯಾರೂ ಇದ್ದಿದ್ವಿಲ್ಲೆ. ವಂದ್ ಚಿಕ್ಕಿ ಮಾತ್ರ ಇದ್ದಿತ್ತು. ಆ ಚಿಕ್ಕಿಗೆ ವಂದ್ ಮಗಳು ಇದ್ದಿತ್ತು. ಚಿಕ್ಕಿಗೆ ಈ ಕೂಸ್ನ ಕಂಡ್ರೆ ಆಗ್ತಿತ್ತಿಲ್ಲೆ. ಅದ್ರ ಹತ್ರನೆಯಾ ಎಲ್ಲಾ ಕೆಲ್ಸಾ ಮಾಡ್ಸ್ತಿತ್ತು. ವಂದಿವ್ಸಾ ಆ ಕೂಸು ಹತ್ತಿ ವಣಗಸ್ತಾ ಕೂತಿತ್ತು. ಆಗಾ ಗಾಳಿ ಬಂತು.ಎಲ್ಲಾ ಹತ್ತಿನೂವಾ ಗಾಳಿಲಿ ಹಾರೋತು.ಈ ಕೂಸು "ಗಾಳಿ ಗಾಳಿ ನನ್ನ ಹತ್ತಿ ಕೊಡು. ಇಲ್ಲಗಿದ್ರೆ ನನ್ನ ಚಿಕ್ಕಿ ನನ್ನ

ಕೊಂದಾಕ್ಬುಡ್ತು." ಹೇಳ್ಕತ್ನೆ ಗಾಳಿ ಹಿಂದೆಯಾ ಹೋತು. ದಾರಿಲಿ ವಂದ್ ಬೂರಲತ್ತಿ ಮರ ಸಿಕ್ತು. ಅದು ಆ ಕೂಸ್ನ ಹತ್ರಾ ಬಗೇಲಿ "ನನ್ನ ಬುಡದಲ್ಲಿರುವ ಕಲ್ಲು ಮುಳ್ಳು ತೆಗೆತ್ಯಾ" ಕೇಳ್ತು. ಕೂಸು ಕಲ್ಲುಮುಳ್ಳು ಎಲ್ಲಾ ತೆಗೆದ್ದಾಕಿ ಮುಂದೋತು. ದಾರಿಲಿ ವಂದ್ ಕೊಟ್ಗೆ ಸಿಕ್ತು. ಆ ಕೊಟ್ಗೆಲಿ ವಂದ್ ದನಾ ಇದ್ದಿತ್ತು.ಆ ದನಾ ಇದರತ್ರ "ಬಗೆಲಿ ನನ್ನ ಕೊಟ್ಗೆಯಾ ಸಗ್ಣಿ ತೆಗೆತ್ಯಾ" ಕೇಳ್ತು. ಇದು "ಅಡ್ಡಿಲ್ಲೆ" ಹೇಳಿ ಸಗ್ಣಿ ಎಲ್ಲಾವಾ ತೆಗತ್ತು. ಮತ್ತೂ ಮುಂದೋದ್ಮೇಲೆ ವಂದ್ ಮನೆ ಸಿಕ್ತು. ಆ ಮನೆ ಅಂಗ್ಳದಲ್ಲಿ ವಂದ್ ಅಜ್ಜಿ ಮುದ್ಕಿ ಕೂತ್ಗಂಡಿ ನುಗ್ಲ ತೆಗೆತೇ ಇತ್ತು. ಇದ್ರ ನೋಡಿ "ಮಗಾ ಬಗೇಲಿ ನಂಗೆ ಸಹಾಯ ಮಾಡು" ಅಂತು. ಅಡ್ಡಿಲ್ಲೆ ಹೇಳಿ ಈ ಕೂಸು ಅಜ್ಜಿಗೆ ನುಗ್ಲ ತೆಗುಲ್ ಕೊಡಗದ್ದೆ ತಾನೇ ತೆಗೆತ್ತು. ಅಜ್ಜಿಗೆ ಸಂತೋಶಾತು. ಅದು "ಆ ಕೋಣೆಗ್ ಹೋಗಿ ಅಲ್ಲಿರು ಸೀರಿಲಿ ಯಾವ ಸೀರೆ ಬೇಕಾದ್ರೂ ತಕಂಡೋಗಿ ಆ ಕೊಳ್ದಲ್ಲಿ ಮಿ" ಅಂತು. ಮತ್ತೆ ವಂದ್ ಕೋಣೆ ತೋರ್ಸ್ತು. ಆ ಕೂಸು ಆ ಕೋಣೆಗೋಗಿ ಅಲ್ಲಿರು ವಂದ್ ನುಗ್ಲ್ ಸೀರೆ ತಕಂಡೋಗಿ ಕೊಳ್ದಲ್ಲಿ ಮಿಯ್ತು. ಅದು ಕೊಳ್ದಲ್ಲಿ ವಂದ್ಸಲ ಮುಳ್ಗಿ ಎದ್ದದೇ ತಡ ಅದು ರಾಶಿ ಸುಂದರ್ಯಾಗೋತು. ಅದ್ಕೆ ಮಿಂದಾದ್ಮೇಲೆ ಅಜ್ಜಿ ಅದ್ರ ವಂದ್ ಕೋಣೆಗೆ ಕರ್ಕಂಡೋಗಿ ಅಲ್ಲಿರು ಪೆಟ್ಗೆ ಎಲ್ಲಾ ತೋರ್ಸಿ ಇದ್ರಲ್ಲಿ ನಿಂಗೆ ಬೇಕಾದ ಪೆಟ್ಗೆ ತಕಂಡೋಗು ಅಂತು. ಅದು ವಂದ್ಸಣ್ಣ ಪೆಟ್ಗೆ ತಕಂಡಿ ಮನೆಗೆ ಹೊರಡ್ತು. ದಾರೀಲಿ ಆಕಳು ಅದ್ಕೆ ಕೊಡಪಾನಗಟ್ಲೆ ತುಪ್ಪಾ ಕೊಡ್ತು. ಬೂರಲತ್ತಿ ಮರಾ ರಾಶಿ ಹತ್ತಿ ಕೊಡ್ತೊ. ಇದು ಎಲ್ಲಾ ತೆಕಂಡಿ ಮನೆಗ್ ಬಂತು. ಮನೆಲಿ ಪೆಟ್ಗೆ ತೆಗತ್ತು. ಪೆಟ್ಗೆಯೊಳ್ಗಿಂದಾ ವಂದ್ರಾಜ್ಕುಮಾರ್ ಬಂದಿ ಅವಳ ಮದ್ವೆ ಆಗಿ ಕರ್ಕಂಡೋದ. ಅದ್ರೆಲ್ಲಾ ನೋಡಿ ಚಿಕ್ಕಿಗೆ ರಾಶಿ ಹೊಟ್ಟೆಕಿಚ್ಚು ಬಂತು. ತನ್ನ ಮಗ್ಳೂ ಕಳ್ಸ್ತು. ದಾರಿಲಿ ಬೂರಲತ್ತಿ ಮರ ಸಿಕ್ತು. ಮೊದಲ್ನೆ ಕೂಸಿಗೆ ಹೇಳ್ದಾಗೆಯಾ ಇದ್ಕೂ ಹೇಳ್ತು. ಇದು ನನ್ಕಯ್ಲಾಗ್ತಿಲ್ಲೆ ಹೇಳಿಕ್ಕಿ ಮುಂದೋತು. ಕೊಟ್ಗೆ ಸಿಗ್ತು. ಅಲ್ಲಿ ದನಾನೂ ಮೊದಲ್ನೆ ಕೂಸಿಗೆ ಹೇಳ್ದಾಗೇ ಹೇಳ್ತು. ಇದು ನನ್ಕಯ್ಲಾಗ್ತಿಲ್ಲೆ ಹೇಳಿಕ್ಕಿಯಾ ಮುಂದೋತು. ಅಜ್ಜಿ ಮುದ್ಕಿ ಸಿಕ್ತು. ಅದ್ರತ್ರ ಹೋಗಿ ನಂಗೆ ವಂದ್ ಪೆಟ್ಗೆಕೊಡು ಅಂತು. ಅಜ್ಜಿ ಮುದ್ಕಿ ಮೊದ್ಲು ಮಿಂದ್ಕಂಡ್ಬಾ ಕಡೆಗ್ ಕೊಡ್ತೆ ಅಂತು. ಇದು ವಂದ್ ಪೆಟ್ಗೆ ತೆಕಂಡೋಗಿಕೊಳ್ದಲ್ಲಿ ಮುಳ್ಗ್ತು. ಎದ್ದದ್ದೇಯಾ ಅದು ಕುರೂಪ್ಯಾಗೋತು. ಪಟ್ಟೆ ಉಟ್ಕಂಡಿ ಅಜ್ಜಿ ಹತ್ರ ಬಂದಿ ನಂಗೆ ಪೆಟ್ಗೆ ಕೊಡು ಅಂತು. ಅಜ್ಜಿ ಪೆಟ್ಗೆ ಕೊಡ್ತು. ವಂದೊಡ್ಡ ಪೆಟ್ಗೆ ತಕಂಡಿ ಮನೆಗೆ ಹೊರಡ್ತು. ದಾರಿಮೇಲೆ ದನಾ ತವರ್ಕಂಬತ್ತು. ಬೂರಲತ್ತಿ ಗಿಡ ತನ್ನ ಕೊಂಬೆಲಿ ಪಟಪಟ ಇದ್ಕೆ ಹೊಡತ್ತು. ಮನೆಗ್ ಬಂದು ಪೆಟ್ಗೆ ತೆಗತ್ತು. ಅದ್ರೊಳಿಂದವಾ ಹಾವು, ಚೇಳು ಎಲ್ಲಾ ಹೆರಗ್ಬಂದಿ ಅಬ್ಬೆ,ಮಗ್ಳು ಇಬ್ರಿಗೂ ಕಚ್ದೊ. ಇಬ್ರೂವಾ ಸತ್ತೋದೊ.

□□

ವಕ್ತೃಗಳು

೧. ಹಿಟ್ಟುಂಬೆ - ವಿನೋದಿನಿ ರಾಮಚಂದ್ರ ಭಟ್ಟ, ಕರ್ಕಿ
೨. ಸೂಜ್ಯಯಕ್ಕ - ವಿಘ್ನೇಶ್ವರ ಗಣಪತಿ ಭಟ್ಟ, ಕರ್ಕಿ
೩. ಚಿತ್ರಾಟೆ ಕಾಳಣ್ಣ - ಗೌರಿ, ಕರ್ಕಿ
೪. ಹೇನು - ಮಂಗಲಾ ಭಟ್ಟ, ಕರ್ಕಿ
೫. ಕಾಕಣ್ಣ ಗುಬ್ಬಣ್ಣ ೧ - ಗಣೇಶ ಹೆಗಡೆ, ವರ್ನಕೇರಿ
೬. ಕಾಕಣ್ಣ ಗುಬ್ಬಣ್ಣ ೨
೭. ಕಾಕ್ಯಪ್ನ ಪ್ರಸ್ತಾ - ಸೀತೆ ವೆಂಕಟ್ರಮಣ ಭಟ್ಟ, ನಗ್ರೆ ತಾರೀಕೇರಿ
೮. ಬಾಳೆಹಣ್ ಹಕ್ಕಿ - ಮಹಾಬಲೇಶ್ವರ ಭಾಗ್ವತ, ಕರ್ಕಿ
೯. ಅವ್ಲಕ್ಕಿ ಹೆಟ್ಟೆ - ವಿನೋದಿನಿ, ಕರ್ಕಿ
೧೦. ಯಮನ ಶಾಪ - ನಯನಾ ಹೆಗಡೆ, ಕವಲಕ್ಕಿ
೧೧. ಇಣಚಿ
೧೨. ನೂರಾವೊಂದು ದನ - ಅನಿತಾ ಕೃಷ್ಣ ಹೆಗಡೆ, ಕರ್ಕಿ
೧೩. ಕೊಕ್ರ ಮೀಸೆ ಕೊರ್ಲಿಗವ್ವ - ಮಾದೇವಿ ಸುಬ್ರಾಯ್ ಹೆಗಡೆ, ತನ್ಮಡಿಗಿ
೧೪. ಬೊದ್ ನರಿ - ಗಂಗೆ ರಾಮ ಹೆಗಡೆ, ಹಡಿನಬಾಳ
೧೫. ಹುಲಿ ಮುಕ್ಳಿ ಸುಟ್ಟುಕೊಂಡದ್ದು - ಮಂಗಲಾ ಭಟ್ಟ, ತೆಂಗಿನ ಕಟ್ಟೆ
೧೬. ಕುನ್ನಿಯ ಮಕ್ಕಳು ೧ - ರಾಮ ಹೆಗಡೆ ಕವಲಕ್ಕಿ
೧೭. ಕುನ್ನಿಯ ಮಕ್ಕಳು ೨ - ಮಾದೇವಿ ಸುಬ್ರಾಯ ಹೆಗಡೆ, ತನ್ಮಡಿಗೆ
೧೮. ಸಣ್ಣ ಮೊಃಳಾ ದೊಡ್ಡ ಮೊಃಳಾ
೧೯. ಸುಕ್ಕಿನುಂಡೆ - ಪ್ರೇಮಾ ಸುಬ್ರಾಯ ಹೆಗಡೆ, ದುಗ್ಗೂರು
೨೦. ಜಾಣ ಭಟ್ಟನ ಕತೆ - ಸುಬ್ರಾಯ ಹೆಗಡೆ, ವರ್ನಕೇರಿ ಭಾಸ್ಕೇರಿ
೨೧. ಗೊವೆರಾಮ ಭಟ್ಟನ ಕತೆ - ಜಯಾ ಹೆಗಡೆ, ಕವಲಕ್ಕಿ
೨೨. ಏಕಾದಶಿ ಭಟ್ಟ - ಅನಿತಾ ಕೃಷ್ಣ ಹೆಗಡೆ, ಕರ್ಕಿ
೨೩. ಬೋಳ್ಕೆತ್ತಿ ಒಡೆ ಮಾಡಿದ್ದು - ಸುಬ್ರಾಯ ರಾಮ ಹೆಗಡೆ, ಆರೊಳ್ಳಿ
೨೪. ಕುಂಟ್ ತಮನ ಕತೆ - ಪರಮೇಶ್ವರ ಗಣಪತಿ ಹೆಗಡೆ, ಆರೊಳ್ಳಿ
೨೫. ಕುಂಟ ಅಣ್ಣನ ಕತೆ - ಗುರುಮೂರ್ತಿ ಅವಧಾನಿ, ಕರ್ಕಿ

೨೬. ಗೊಂಡೆಯ ಗಿಡ - ಕುಮಾರ್ ಎಸ್.ಪಿ. ಹೆಗಡೆ, ವರ್ನಕೇರಿ
೨೭. ಸಿರಿಯಕ್ಕನ ಕತೆ - ನಯನಾ ಹೆಗ್ಡೆ, ಕವಲಕ್ಕಿ
೨೮. ಕುಡಕೆ - ಕುಮಾರ್ ಎಸ್.ಪಿ. ಹೆಗಡೆ, ವರ್ನಕೇರಿ
೨೯. ಕಟ್ಟಗ್ಗ ಹೊಯ್ದೆಣ್ಣೆ ಕೋಲು - ಗುರುಮೂರ್ತಿ ಅವಧಾನಿ, ಕರ್ಕಿ
೩೦. ಸುಟ್ಟೇವಿನ ಮರ ೧ - ಕುಮಾರ್ ಎಸ್.ಪಿ. ಹೆಗಡೆ, ವರ್ನಕೇರಿ
೩೧. ಸುಟ್ಟೇವಿನ ಮರ ೨ - ಗಣೇಶ ಹೆಗಡೆ, ವರ್ನಕೇರಿ
೩೨. ನಡೆ ಕುಂಬಳವೇ ಟರ್ರಾ ಪುರ್ರಾ - ಗುರುಮೂರ್ತಿ ಅವಧಾನಿ, ಕರ್ಕಿ
೩೩. ಅತಿ ಆಸೆ - ಗಣೇಶ ಹೆಗಡೆ, ವರ್ನಕೇರಿ
೩೪. ಹಿರಿರಾಣಿ - ಕಾವೇರಿ ಹೆಗಡೆ, ಆರೊಳ್ಳಿ
೩೫. ನುಚ್ಚಕ್ಕಿ ನುರಿಯಕ್ಕಿ - ನಯನಾ ಹೆಗಡೆ, ಕವಲಕ್ಕಿ
೩೬. ಕೆಸವಿನ ಸಪ್ಪಿನ ಕೂಸು - ನಯನಾ ಹೆಗಡೆ, ಕವಲಕ್ಕಿ
೩೭. ಕೆಸವಿನ ಸೊಪ್ಪು - ಗಣಪತಿ ವಿಷ್ಣು ಹೆಗಡೆ, ವರ್ನಕೇರಿ
೩೮. ಮಲಮಗಳು - ಗಣಪತಿ ವಿಷ್ಣು ಹೆಗಡೆ, ವರ್ನಕೇರಿ
೩೯. ಹಿರಿ ಹೆಂಡತಿಯ ಕೂಸು - ಪ್ರೇಮಾ ಸುಬ್ರಾಯ ಹೆಗಡೆ, ವಾಸ ಹೆಗ್ಡೆಮನೆ
೪೦. ಚಿನ್ನದ ಕುಂಕುಮದ ಹುಡುಗಿ - ಪ್ರೇಮಾ ಸುಬ್ರಾಯ ಹೆಗಡೆ, ವಾಸ ಹೆಗ್ಡೆಮನೆ
೪೧. ದನ ಕಾಯುವವಳ ಕತೆ - ಕುಮಾರ್ ಎಸ್.ಆರ್. ಭಟ್ಟ, ಕವಲಕ್ಕಿ
೪೨. ಏಳು ಜನ ಹೆಣ್ಣುಮಕ್ಕಳು - ಸುಬ್ರಹ್ಮಣ್ಯ ವೆಂ. ಭಟ್ಟ, ಕವಲಕ್ಕಿ
೪೩. ಸುಂಟೀಕೊಂಬೀನ ಆಟ - ನಯನಾ ಹೆಗಡೆ, ಕವಲಕ್ಕಿ
೪೪. ಆಮೆ - ಗಣಪತಿ ವಿಷ್ಣು ಹೆಗಡೆ, ವರ್ನಕೇರಿ
೪೫. ನೂರಾಒಂದು ತಲೆ ಬೊಂಡ - ಗಣಪತಿ ವಿಷ್ಣು ಹೆಗಡೆ, ವರ್ನಕೇರಿ
೪೬. ಮಾತನಾಡುವ ಗಿಳಿ ಚಿನ್ನದಬಾವಿ - ಸೀತೆ ವೆಂಕಟ್ರಮಣ ಹೆಗಡೆ, ನಗ್ರೆ
೪೭. ಅತ್ತೆ ಸೊಸೆ ೧ - ಸೀತೆ ವೆಂಕಟ್ರಮಣ ಹೆಗಡೆ, ನಗ್ರೆ
೪೮. ಅತ್ತೆ ಸೊಸೆ ೨ - ಮಂಗಲಾ ಭಟ್ಟ, ಕರ್ಕಿ
೪೯. ಉಪ್ಪಿನಕಾಯಿಯ ಕತೆ - ಸುಬ್ರಹ್ಮಣ್ಯ ವೆಂ. ಭಟ್ಟ, ಕವಲಕ್ಕಿ
೫೦. ಅತ್ತೆಯ ಕಾಟ - ಪ್ರೇಮಾ ಪರಮೇಶ್ವರ ಭಟ್ಟ, ಕವಲಕ್ಕಿ
೫೧. ದಡ್ಡ ಪಂಡಿತ - ರಾಧಾ ವೆಂಕಟ್ರಮಣ ಹೆಗಡೆ
೫೨. ಮಂತ್ರ ಕಲಿಯುವ ಮಾಣಿ ೧ - ಗುರುಮೂರ್ತಿ ಅವಧಾನಿ, ಕರ್ಕಿ
೫೩. ಮಂತ್ರ ಕಲಿಯುವ ಮಾಣಿ ೨ - ಸುಬ್ರಹ್ಮಣ್ಯ ವೆಂ. ಭಟ್ಟ ಕವಲಕ್ಕಿ
೫೪. ಜೋಳದ ಕಾಳಿನ ಕತೆ - ಸುಬ್ರಹ್ಮಣ್ಯ ಕರ್ಕಿ
೫೫. ರಾಜನ ಮಗ ಪ್ರಧಾನಿಯ ಮಗ - ಯಶೋಧಾ, ಕರ್ಕಿ

೫೬. ಗಂಡು ಭೇರುಂಡ ಹೆಣ್ಣು ಭೇರುಂಡ - ಸುಬ್ರಹ್ಮಣ್ಯ ರಾಮಭಟ್ಟ, ಕವಲಕ್ಕಿ
೫೭. ಹತ್ತುಂಡೆ ಬಿತ್ತುಂಡೆ - ಸುಬ್ರಹ್ಮಣ್ಯ ವೆಂ. ಭಟ್ಟ
೫೮. ಪಂಚವರ್ಣದ ಗಿಳಿ - ಗಣೇಶ ಹೆಗಡೆ, ಕವಲಕ್ಕಿ
೫೯. ಕೆಂಪು ಹರಿಗೆ ಸೊಪ್ಪು - ಗಣಪತಿ ವಿಷ್ಣು ಹೆಗಡೆ, ವರ್ನಕೇರಿ
೬೦. ಅಚ್ಚ ಮುತ್ತಯ್ದೆ - ಗಣಪಿ, ಹೆಗಡೆ
೬೧. ಸನ್ಯಾಸಿ - ಮಂಗಲಾ ಸತ್ಯನಾರಾಯಣ ಹೆಗಡೆ, ಕವಲಕ್ಕಿ
೬೨. ಬಿದಿರ ಚದುರೆ - ಕುಮಾರ್ ಎಸ್.ಆರ್. ಭಟ್ಟ, ಆರೊಳ್ಳಿ
೬೩. ರಾಕ್ಷಸನ ಕತೆ - ಗಣಪತಿ ಹೆಗಡೆ, ಸಾಲಕೋಡ

□□

ಕನ್ನಡ ನಾಡು ಜನಪದ ಸಂಸ್ಕೃತಿಯ ತವರೂರು. ಪ್ರತಿಯೊಂದು ಪ್ರದೇಶಕ್ಕೂ ತನ್ನದೇ ಆದ ಪ್ರಾದೇಶಿಕ ಅನನ್ಯತೆ, ಅಸ್ಮಿತೆಗಳು ಇದ್ದೇ ಇರುತ್ತವೆ. ಅಲ್ಲಿ ವಾಸಿಸುವ ಪ್ರತಿಯೊಂದು ಸಮುದಾಯವು ವಿಶಿಷ್ಟ ಜೀವನ ಕ್ರಮಗಳನ್ನು ರೂಢಿಸಿಕೊಂಡಿರುತ್ತದೆ. ವಿವಿಧ ಬಗೆಯ ಆಹಾರ–ಪಾನೀಯ, ಉಡುಗೆ–ತೊಡುಗೆ, ಕ್ರೀಡೆ, ನಂಬಿಕೆ, ರೂಢಿ–ಆಚರಣೆ, ಸಂಪ್ರದಾಯಗಳು ಅಸ್ತಿತ್ವದಲ್ಲಿರುತ್ತವೆ. ಜೊತೆಗೆ ಆ ಸಮುದಾಯಜ್ಞಾನ ಪರಂಪರೆಯು ಕ್ರಿಯಾ ರೂಪದಲ್ಲಿ ಮತ್ತು ಮೌಖಿಕ ರೂಪದಲ್ಲಿ ಜಾರಿಯಲ್ಲಿರುತ್ತವೆ. ಅವುಗಳನ್ನು ಶೋಧಿಸುವ ಕಾರ್ಯ ನಡೆಯಬೇಕಾಗುತ್ತದೆ. ಅಲ್ಲದೆ, ಪರಂಪರಾಜ್ಞಾನಗಳಲ್ಲಿ ಇಂದಿನ ವರ್ತಮಾನಕ್ಕೆ ಬೇಕಾದ ಮೂಲ ಆಕರಗಳು ಅಡಕವಾಗಿರುತ್ತವೆ. ಅವನ್ನು ಗುರುತಿಸುವುದು ಮತ್ತು ಸಂವರ್ಧಿಸುವುದು ಮುಖ್ಯವಾಗಿ ಆಗಬೇಕಾದ ಕೆಲಸವೇ ಆಗಿದೆ. ಈ ಹಿನ್ನೆಲೆಯಲ್ಲಿ ಜನಪದ ಕತೆಗಳು ಬದುಕಿನ ಮೌಲ್ಯಗಳನ್ನು, ಆದರ್ಶಗಳನ್ನು ಸ್ಥಳೀಯ ಸಂಸ್ಕೃತಿಯ ಮೂಲಕ ವ್ಯಕ್ತಗೊಳ್ಳುವ ಅಮೂಲ್ಯ ಸರಕೇ ಎನಿಸುತ್ತವೆ. ಈ ನಿಟ್ಟಿನಲ್ಲಿ ಅಪರೂಪವೆನಿಸುವ 'ಉತ್ತರ ಕನ್ನಡ ಕರಾವಳಿಯ ಜನಪದ ಕತೆಗಳು' ಕೃತಿಯಲ್ಲಿ ಹೊನ್ನಾವರ ಪರಿಸರದಲ್ಲಿರುವ ಹವ್ಯಕರ ಮಕ್ಕಳಿಂದ ಕತೆಗಳು ಸಂಗ್ರಹಗೊಂಡಿದ್ದು ಗಮನಾರ್ಹ. ಸಾಮಾಜಿಕ ಉಪಭಾಷೆಯೊಂದರಲ್ಲಿ ಅಭಿವ್ಯಕ್ತಗೊಂಡ ಇಲ್ಲಿನ ಬಹುತೇಕ ಕತೆಗಳು ಭಾಷಿಕ ಅಧ್ಯಯನಕ್ಕೆ ಆಕರವಾಗಬಲ್ಲವು. ಇಂಥ ಅಮೂಲ್ಯವಾದ ಕೃತಿಯನ್ನು ರೂಪಿಸಿಕೊಟ್ಟ ಶಾಂತಿ ನಾಯಕ ಅವರಿಗೆ ವಿಶ್ವವಿದ್ಯಾಲಯದ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಅಂಬಳಿಕೆ ಹಿರಿಯಣ್ಣ
ಕುಲಪತಿ

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ISBN 978-93-83149-18-6
9 789383 149186

₹ : ೧೨೦/-

Printed at : Raja Printers, Bangalore-560 027, Ph.: 22234066